ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಮಾರ್ಚ್ 19, 2008 ರೂ. 12/-



- ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್
- ಯು.ಆರ್. ಅನಂತಮೂರ್ತಿ
- ರಹಮತ್ ತರೀಕೆರೆ
- ಬಿ.ಎಂ. ಬಷೀರ್
- ಎಂ.ಎಸ್. ಆಶಾದೇವಿ
- ಸುಕನ್ಯಾ ಕನಾರಳ್ಳಿ
- ಎಚ್.ಎಲ್. ಕೇಶವಮೂರ್ತಿ
- ಬಿ. ಚಂದ್ರೇಗೌಡ
- ವಿಕ್ರಮ್ ಸಾಜಿ

ವಿಶೇಷಾಂಕ

ಹೊಸ ಬರಹಗಾರರ ತುಡಿತ......

ಕೇವಲ ಅರೇಳು ವರ್ಷಗಳಲ್ಲಿ ಕನ್ನಡ ಸಾಹಿತ್ಯದೊಳಗೆ ಆದ ಬದಲಾವಣೆಗಳನ್ನು ಕಂಡರೆ ಅಚ್ಚರಿಯಾಗುತ್ತದೆ. ಅದರಲ್ಲೂ ಹೊಸಬರ ಬರಹಗಳಿಗೆ. ಈ ಹೊಸಬರು ಯಾವ ಪಂಥದ ತೆಕ್ಕೆಗೂ ಒಗ್ಗದವರು. ಆದರೆ ಎಲ್ಲಾ ಪಂಥಗಳಿಂದ ತನಗೆ ಬೇಕಾದದ್ದನ್ನು ಪಡೆಯುವ ಮನೋಭಾವದವರು. ಹಾಗೆ ಪಡೆದದ್ದನ್ನು ಬೇರೆ ಬೇರೆ ಕ್ರಮಗಳಲ್ಲಿ ಮುಂದುವರೆಸುವ ಸೂಕ್ಷ್ಮಜ್ಞರು ಕೂಡ. ಪೂರ್ವನಿರ್ಧಾರಿತ ಚೌಕಟ್ಟುಗಳ ಬಗ್ಗೆ ಗಾಢ ಅನುಮಾನ ಇರುವುದರಿಂದಲೇ ಇವರ ಬರಹಕ್ಕೆ ಅದರದೇ ಆದ ಚೈತನ್ಯ ಒದಗಿದೆ. ಸೀಮಿತವಾಗಿದ್ದರೂ ತಮ್ಮ ಅನುಭವಗಳ ದಾರಿಯಲ್ಲಿ ಒಬ್ಬಂಟಿ ಸಾಗುವ ಅಥವಾ ಕಾಲೂರಿ ನಿಲ್ಲುವ ಛಲ ಇವರಿಗಿದೆ. ತಮ್ಮನ್ನು ಕಾಡುತ್ತಿರುವ ಅನುಭವಗಳನ್ನು ಅರಿಯುತ್ತ, ಗೊಂದಲಗೊಳ್ಳುತ್ತ, ಮುರಿಯುತ್ತ ಇದಿರುಗೊಳ್ಳುತ್ತಿದ್ದಾರೆ. ಇದನ್ನು ಕೊಂಚ ಸ್ಪಷ್ಟವಾಗಿ ಹೇಳಲು ಯತ್ನಿಸುವೆ; ಒಂದು ವೈಚಾರಿಕ ನಿಲುವಿನಲ್ಲಿ ನಿಂತು ಬರೆಯಬೇಕೆಂಬ ಹಟ ಹೊಸಬರಿಗಿಲ್ಲ. ಆದಷ್ಟು ಮುಕ್ತವಾಗಿ ಇರಲು ಬಯಸುವ ಹಾಗೂ ಎಲ್ಲಾ ನಿಲುವುಗಳನ್ನು ಮೀರಿ ಸಾಗುವ ಬದುಕಿನ ಚೆರಗಿಗೆ ಇವರು ಬದ್ಧ.

ತಕ್ಷಣಕ್ಕೆ ನೆನಪಿಸಿಕೊಳ್ಳುವುದಾದರೆ, ಟಿ.ಎಸ್. ಗೊರವರ್ "ಭ್ರಮೆ" ಎಂಬ ಕಥಾಸಂಕಲನ ಪ್ರಕಟಿಸಿದ್ದಾರೆ. ಅದರಲ್ಲಿ ಚೌರಿ ಮಾರುವ ಹೆಣ್ಣಿನ ಸಂಕಟವನ್ನು ಹೇಳುವ ಕಥೆಯಿದೆ. ಇಂಥದೊಂದು ಹೊಸ ಬಗೆಯ ಪಾತ್ರವನ್ನು ಕೊಂಚ ಧೈರ್ಯ, ಕೊಂಚ ಅಳುಕಿನಿಂದ ಕಟ್ಟಿಕೊಡುವ ಕಥೆಗಾರ ಮಿತವಾದ ಭಾಷೆಯನ್ನು ಇದಕ್ಕಾಗಿ ರೂಪಿಕೊಂಡಿದ್ದಾರೆ. ಚೇತನಾ ತೀರ್ಥಹಳ್ಳಿಯವರ "ಉಘೇಟ್" ಕವನ ಸಂಕಲನವನ್ನು ಉಲ್ಲೇಖಿಸಬೇಕು. ಕುಟುಂಬದ ಒಳಗೆ ನಿಂತುಕೊಂಡು ಈಕೆ ಎತ್ತುತ್ತಿರುವ ಪ್ರಶ್ನೆ, ಮೂಡುತ್ತಿರುವ ಸ್ವಗತಗಳು ಅಚ್ಚರಿಗೊಳಿಸುವಷ್ಟು ಸತ್ವಪೂರ್ಣವಾಗಿವೆ. "ಚೇತನಾ ತನಗೆ ಗೊತ್ತಿಲ್ಲದೆಯೇ ಕನ್ನಡದೊಳಗೆ ಸ್ತ್ರೀವಾದದ ಹೊಸ ನೋಟಗಳನ್ನು ಕಾಣಿಸುತ್ತಿದ್ದಾರೆ" ಎಂದ ನಟರಾಜ್ ಹುಳಿಯಾರ್ ಅವರ ಮಾತು ನಿಜ. ದಿಕ್ಕು ದೆಸೆಯಿಲ್ಲದ ಚಲನೆಗಳನ್ನು ನಂಬುವ ಮತ್ತು ಈ ದಿಕ್ಕುಗೇಡಿ ಚಲನೆಯಲ್ಲೇ ಬದುಕಿನ ಸೆಲೆಗಳನ್ನು ಗುರುತಿಸುವ ವಿಚಿತ್ರ ಶಕ್ತಿ ರವಿ ದ್ರಾವಿಡರ ಕವಿತೆಗಳಲ್ಲಿದೆ. ವಿಶೇಷವೆಂದರೆ ಹೊಸಬರು ಯಾವ ಭಾರವನ್ನೂ ಹೇರಿಕೊಳ್ಳದೇ ಸಹಜ ಸ್ಥಿತಿಯಲ್ಲಿ ಬರಹವನ್ನು ಸೃಷ್ಟಿಸುತ್ತಿದ್ದಾರೆ. ಎದುರಿನವರನ್ನು ಅನಗತ್ಯವಾಗಿ ಬೆಚ್ಚಿಬೀಳಿಸುವ ತಂತ್ರಗಾರಿಕೆ ಬಳಸದೆ ಸಹಜ, ಮುಗ್ಧ ಪ್ರಾಮಾಣಿಕ ನೋಟಗಳ ಒಡಲಾಳದ ಬರಹಗಳು ಮೈತಾಳುತ್ತಿವೆ.

ಸಮಾಜ ಸೃಷ್ಟಿಸಿದ ಜನಪ್ರಿಯ ಸಭ್ಯತೆಯನ್ನು ಉಡಾಯಿಸುವ ಹಾಗೂ ಮನುಷ್ಯನ ಇಂದ್ರಿಯ ನಿಷ್ಠ ಜೀವನದ ರೋಮಾಂಚನ ಮತ್ತು ವಕ್ರತೆಯನ್ನು ಕಾಣಿಸುವ ಉಮೇದು ಕೆಲವರ ಬರವಣಿಗೆಯಲ್ಲಿದೆ. ಇಂತಹ ಬರವಣಿಗೆಯ ಪ್ರಾತಿನಿಧಿಕ ರೂಪವಾಗಿ ವಿ.ಎಂ.ಮಂಜುನಾಥರ ಬರಹವನ್ನು ನೆನಪಿಸಿಕೊಳ್ಳಬಹುದು. ಮಂಜುನಾಥ್ "ಕ್ರಿಮಿ" ಎಂಬ ನಾಟಕ ಬರೆದಿದ್ದಾರೆ. ಮನುಷ್ಯನ ಮನೋಲೋಕದ ಲೈಂಗಿಕತೆಯನ್ನು ಅನೇಕ ಬಗೆಗಳಲ್ಲಿ ಕಾಣುತ್ತ ಈ ಲೈಂಗಿಕತೆಯಿಂದಾಗಿ ಇಲ್ಲಿನ ಸಭ್ಯತೆ ತಿರುವುಮುರುವಾಗುವ, ನೈತಿಕತೆ ತೋಪೆದ್ದುಹೋಗುವ ಅಂಶಗಳು ನಾಟಕದಲ್ಲಿವೆ.

ಖಾಸಗಿ ಬದುಕಿನ ಅನುಭವಗಳಿಂದ ಹಿಡಿದು ರಾಜಕೀಯ ಪಲ್ಲಟಗಳವರೆಗೆ ಎಲ್ಲವನ್ನೂ ಕಲೆಯ ಜಾಡಿಗೆ ಎಳೆಯುವ ಉತ್ಸಾಹದಲ್ಲಿ ಹೊಸಬರಿದ್ದಾರೆ. ಆದರೆ ಮುಖ್ಯವಾಗಿ ಪ್ರೇಮದ ಬಿರುಗಾಳಿಗೆ ಒಡ್ಡಿಕೊಂಡ ಮನಸ್ಸು, ಬದುಕಿನಲ್ಲಿ ಧುತ್ತನೆ ಎದುರಾದ ಆತಂಕಗಳು, ತನ್ನ ಗ್ರಾಮೀಣ ಸಮುದಾಯದ ಸ್ಮೃತಿಚಿತ್ರಗಳು ಹಾಗೂ ಕಣ್ಣೆದುರಿನ ರಾಜಕೀಯ ಬರಹದ ಕೇಂದ್ರಕ್ಕೆ ಹೆಚ್ಚಾಗಿ ಒಳಗಾಗಿವೆ. ಬಹುತೇಕರು ಕೋಮುವಾದವನ್ನು ಆಳದಲ್ಲಿ ತಿರಸ್ಕರಿಸುತ್ತಿರುವುದು ಕೂಡ ಮಹತ್ವದ ಸಂಗತಿ.

ಹೊಸಬರ ಬರವಣಿಗೆಯಲ್ಲಿ ಆತ್ಮಚರಿತ್ರಾತ್ಮಕ ಶೈಲಿ ಹೆಚ್ಚು ಮುನ್ನೆಲೆಗೆ ಬಂದಂತಿದೆ. ಕೆಲವೊಮ್ಮೆ ಉತ್ಪ್ರೇಕ್ಷಿತವೆನಿಸಿದರೂ ಅದಕ್ಕೇನೊ ವಿಚಿತ್ರ ಸೆಳೆತವಿದೆ. ತನ್ನ ಬದುಕಿನ ಭಾಗವಾಗಿದ್ದುದನ್ನು ಮಾತ್ರ ಬರೆಯಬೇಕೆಂಬ ತೀವ್ರ ಎಚ್ಚರವೂ ಇದಕ್ಕೆ ಕಾರಣವಾಗಿರಬಹುದು. ಆದರೆ ಇದರ ಅರಾಜಕತೆ ಮತ್ತು ಆಕರ್ಷಣೆ ಅಪರೂಪದ್ದು.

ಹೊಸಬರ ಬರವಣಿಗೆಯಲ್ಲಿನ ನೈತಿಕ ಶಕ್ತಿ ಸಣ್ಣ ಪ್ರಮಾಣದಲ್ಲಿದ್ದರೂ ಸದೃಢವಾಗಿದೆ. ಆತ್ಮವಂಚನೆಗೆ ಒಳಗಾಗದ ಮತ್ತು ನಿಜವಾದ ಬದುಕಿನ ಎಳೆಗಳಿಗೆ ಸಂಪೂರ್ಣ ಸೋತುಹೋಗುವ ಗುಣ ಹೊಸ ಲೇಖಕರ ಬರಹದ ಚೈತನ್ಯವನ್ನು ಕಾಪಾಡಿದೆ. ಈಗ ಬರೆಯುತ್ತಿರುವವರ ಸೃಜನಶೀಲ ಮೂಲಗಳು ಎಲ್ಲೆಲ್ಲೊ ಇವೆ. ಬೋದಿಲೇರ್, ಅಂಬೇಡ್ಕರ್, ಗಾಂಧಿ, ಅಕ್ಕ, ಅಲ್ಲಮ, ಬುದ್ಧ-ಹೀಗೆ ಇವರೆಲ್ಲರನ್ನು ಯಾವ್ಯಾವುದೋ ರೀತಿಯಲ್ಲಿ ಸ್ವೀಕರಿಸುತ್ತಿರುವ, ಕಂಡುಕೊಳ್ಳುತ್ತಿರುವ ರೀತಿ ಕೂಡ ಕುತೂಹಲಕಾರಿಯಾದದ್ದು. ಮುಖ್ಯವಾಗಿ ಲಂಕೇಶರ ಬರಹಗಳು ಅನೇಕರಲ್ಲಿ ನಿರಂತರ ಪುಳಕವನ್ನು ಹುಟ್ಟಿಸುತ್ತ ಬರಹದ ಹೊಸ ದಿಕ್ಕುಗಳನ್ನು ತೋರಿಸುತ್ತಿರುವುದಂತೂ ನಿಜ.



■ ವಿಕ್ರಮ ವಿಸಾಜಿ

ಕನ್ನಡದಲ್ಲಿ ಈ ಹಿಂದೆ "ಸಾಮಾಜಿಕತೆ" ಎನ್ನುವುದು ಒಮ್ಮೆ ಅತಿಯಾಗಿ, ಇನ್ನೊಮ್ಮೆ ನಿರ್ಲಕ್ಷ್ಯಕ್ಕೊಳಗಾಗಿ ಏನೇನೊ ರೂಪ ವಿರೂಪಗಳನ್ನು ಪಡೆದುಕೊಂಡಿತ್ತು. ತಮ್ಮ ಬರಹಗಳಲ್ಲಿ ಸಮಾಜದ ಒಳಗನ್ನು ಮುಟ್ಟಲು ಸಾಧ್ಯವಾಗದ ಲೇಖಕರು ತಮ್ಮ ವೈಯಕ್ತಿಕ ದೌರ್ಬಲ್ಯವನ್ನೇ ದೃಷ್ಟಿಕೋನದ ದೌರ್ಬಲ್ಯವೆಂದು ಭಾವಿಸುವ ಅಪಾಯವಿರುತ್ತದೆ. ಹಾಗೆಯೇ ಸಾಮಾಜಿಕತೆಯು ಬರಹದಲ್ಲಿ ಹೀಗೇ ಬರಬೇಕೆಂದು ಕೂಡ ತಿಳಿಯಬೇಕಾಗಿಲ್ಲ. ಇದನ್ನು ಅತಿಮಾಡುವುದು ಹಾಗೂ ಇದರ ಅಗತ್ಯವನ್ನು ಅಲ್ಲಗಳೆಯುವುದು ಎರಡೂ ಒಳ್ಳೆಯದಲ್ಲವೇನೊ. ಬರಹಗಾರನ "ಒಳಕೋಣೆಗೆ" ಹೊರಗಿನ ಗಾಳಿ ಬೀಸದಿದ್ದರೆ, ಹೊರಗಿನ ಗಾಳಿಗೆ ಒಳಕೋಣೆಯ ಉಸಿರು ತಟ್ಟದಿದ್ದರೆ ಎರಡೂ ಕೊಳೆತುಹೋಗುವ ದುಸ್ಥಿತಿಗೆ ಈಡಾಗಬಹುದು. ಇದೆಲ್ಲಾ ಯಾಕೆ ಹೇಳಿದೆನೆಂದರೆ ಹೊಸ ಬರವಣಿಗೆಯಲ್ಲಿ ಇವೆರಡೂ ಕಲೆತುಹೋದ ಸ್ಥಿತಿಯಿದೆ. ಇದನ್ನು ವಿಶೇಷ ಗುಣವೆಂದೇ ಭಾವಿಸಬೇಕು. ಯಾಕೆಂದರೆ ಇದು ಬರೀ ಕಲೆಗಾರಿಕೆಗೆ ಸಂಬಂಧಿಸಿದ ಪ್ರಶ್ನೆಯಲ್ಲ. ಹೊಸ ಲೇಖಕರು ಬದುಕನ್ನು ಸ್ವೀಕರಿಸುತ್ತಿರುವ ವಿಧಾನಕ್ಕೆ ಸಂಬಂಧಿಸಿದ ಅಂಶ ಕೂಡ ಹೌದು.

ಹಾಗೆ ನೋಡಿದರೆ ಯಾವುದೇ ಒಂದು ಅಂಶ ಬರಹಗಾರನನ್ನು ರೂಪಿಸುವುದಿಲ್ಲ. ಅವನ ಹೊರಗಿನ ಮತ್ತು ಒಳಗಿನ ವೈರುದ್ಧ್ಯಗಳು ಸೇರಿ ಲೇಖಕನ ವ್ಯಕ್ತಿತ್ವವನ್ನು ಕಡೆಯುತ್ತಿರುತ್ತವೆ. ತನ್ನೊಳಗಿನ ತುಡಿತಗಳಿಗೆ ಬದ್ಧನಾದ ಲೇಖಕ ಬರೆಯುತ್ತಲೇ ಇರುತ್ತಾನೆ. ಹೊಸಬರಲ್ಲಿ ಇಂತಹ ಪ್ರಾಮಾಣಿಕ ತುಡಿತವಿರುವುದಂತೂ ನಿಜ.

ಜೀವಂತ ಕಾವ್ಯ, ದಟ್ಟ ಅನುಭವಗಳ ಕಥೆ, ವಿಶಾಲ ಹರುಹಿನ ಕಾದಂಬರಿ, ಅರ್ಥಪೂರ್ಣ ಸಾಂಸ್ಕೃತಿಕ ಚರ್ಚೆ, ದೇಸಿ ಸೃಜನಶೀಲ ಅಭಿವ್ಯಕ್ತಿಗಳ ಕುರಿತಾದ ಆಸಕ್ತಿ ಇವೆಲ್ಲಾ ಕಣ್ಣೆದುರು ಘಟಿಸುತ್ತಿವೆ. ಆದ್ದರಿಂದ ಹೊಸ ಲೇಖಕರಿಗೆ ಇದೊಂದು ಉತ್ಸಾಹದ ಕಾಲ. ಅಷ್ಟೇ ಅಲ್ಲ, ಇದೊಂದು ಸವಾಲಿನ ಕಾಲವೂ ಹೌದು. ■

'ಇವ ನಮ್ಮವ' ಎನ್ನುವವರ ನಾಡಿದು



ಕಂಡಹಾಗೆ

■ ಗೌರಿ ಲಂಕೇಶ್

ಒಂದು ವಿಶೇಷ ಸಂಚಿಕೆಯನ್ನು ರೂಪಿಸುವುದು ಷ್ಟಕರ ಕೆಲಸ. ಯಾಕೆಂದರೆ ಅದರಲ್ಲಿ ವಿಶೇಷವಾದ ಜನೆ, ಬೋಧನೆ ಮತ್ತು ಪ್ರಚೋದನೆ ಮಾತ್ರ ಇದ್ದರೆ ಾಲದು. ಅದನ್ನು ಓದಿ ಮುಗಿಸಲು, ಅದರಲ್ಲಿರುವು ನ್ನು ಮೆಲುಕು ಹಾಕಲು ಹಲವು ದಿನಗಳೇ ಬೇಕು ನ್ನುವಂತಿರಬೇಕು. ಹಾಗೆಯೇ ಅದು ಜನರ ಕೈಗೆಟುಕು ಂತೆ ಇರಬೇಕು.

ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಬಾರಿಯ ವಿಶೇಷಾಂಕವನ್ನು ರೂಪಿಸಿದ್ದೇವೆ. ತಳುಕು ಳುಕನ್ನು ಕಡಿಮೆ ಮಾಡಿ, ಪ್ರತಿ ಪುಟ ಸಮೃದ್ಧತೆಯಿಂದ ೂಡಿರುವಂತೆ ಎಚ್ಚರ ವಹಿಸಿದ್ದೇವೆ. ಈ ಸಂಚಿಕೆಯಲ್ಲಿ ಮಾಜ, ಸಾಹಿತ್ಯ, ಮಾಧ್ಯಮ, ಮಹಿಳೆ, ಹಿಂದುಳಿದ ರು, ಅಲ್ಪಸಂಖ್ಯಾತರು... ಹೀಗೆ ಇವತ್ತು ಕರ್ನಾಟಕದ ಲ್ಲಾ ವಲಯಗಳು ಮತ್ತು ಸಮುದಾಯಗಳು ಕ್ರಮಣ ಕಾಲವನ್ನು ಎದುರಿಸುತ್ತಿರುವಾಗ, ಅವೆಲ್ಲವೂ ೀಗೆ ಎಲ್ಲಾ ಸಂಕಷ್ಟಗಳನ್ನು ಮೀರಿ ನಿಲ್ಲುವಂತಾಗಬೇಕು, ೀಗೆ ಹೊಸ ಆಶಯಗಳ ಚಿಗುರುಗಳನ್ನೊಡೆದು ಹೊಸ ುಟ್ಟು ಪಡೆಯಬೇಕು ಎಂಬ ಚಿಂತನೆ, ತವಕ, ುಡುಕಾಟ ಈ ವಿಶೇಷಾಂಕದಲ್ಲಿನ ಲೇಖನ, ಕತೆ, ಾವ್ಯ ಪ್ರಬಂಧ ಗಳು ಹೊಂದಿವೆ. (ಈ 'ಭೂರಿ ೋಜನ'ದಲ್ಲಿ ಈ ಬಾರಿ 'ಉಪ್ಪಿನ ಕಾಯಿ' ಪ್ರಿಯರಿಗೆ ಪ್ಪು ದೋಖಾ ಆಗಿದೆ ಎನಿಸಿದರೆ, ಕ್ಷಮೆ ಇರಲಿ ಂದಷ್ಟೇ ಹೇಳಲಿ ಚ್ಛಿಸುತ್ತೇನೆ!)

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಈ ಚಿಕೆ ನಿಮ್ಮ ಈ ಪತ್ರಿಕೆಯ ಸಾಮಾಜಿಕ ಜವಾಬ್ದಾರಿಯ ುಂದುವರಿಕೆಯೇ ಆಗಿದೆ. ಇತ್ತೀಚೆಗೆ ಕನ್ನಡದ ಹಿರಿಯ ೇಖಕ ಎ.ಕೆ. ರಾಮಾನುಜನ್‌ರ 'ಥ್ರೀ ಹಂಡ್ರೆಡ್ ಾಮಾಯಣಾಸ್' ಎಂಬ ಪ್ರಬಂಧದ ಸುತ್ತ ದೆಹಲಿ ಶ್ವವಿದ್ಯಾಲಯದಲ್ಲಿ ನಡೆದ ಗಲಭೆ ಬಗ್ಗೆ ಇವತ್ತಿನವರೆಗೂ ಯಾವುದೇ ಕನ್ನಡ ದಿನಪತ್ರಿಕೆಗಳು ವಿಶೇಷ ಲೇಖನಗಳಿರಲಿ, ವರದಿಯನ್ನೂ ಮಾಡಿಲ್ಲ, ಆದರೆ ಆ ಜವಾಬ್ದಾರಿಯನ್ನು ವಹಿಸಿದ್ದು ನಮ್ಮ ಪತ್ರಿಕೆ ಮಾತ್ರ. ಈ ಕಾರಣಕ್ಕೆ, ಮೊನ್ನೆ ನಮ್ಮ ಹಿರಿಯ ಮಿತ್ರ ಜಿ. ರಾಜಶೇಖರ್‌ರವರು "ಕನ್ನಡದ ಮಾನ ಉಳಿಸಿದ್ದು 'ಲಂಕೇಶ್' ವಾರ ಪತ್ರಿಕೆ" ಎಂದು ಹೇಳಿದಾಗ ಅವರ ದನಿಯಲ್ಲಿ ಪ್ರಸ್ತುತ ಮಾಧ್ಯಮಗಳ ಬಗ್ಗೆ ವಿಷಾದವಿತ್ತು.

ಇವತ್ತು ಅನಂತಮೂರ್ತಿಯವರ 'ಸಂಸ್ಕಾರ' ಮತ್ತು ರಾಮಾನುಜನ್‌ರ 'ಥ್ರೀ ಹಂಡ್ರೆಡ್ ರಾಮಾಯಣಾಸ್' ವಿರುದ್ಧ ಪ್ರತಿಭಟಿಸುತ್ತಿರುವ ಸಂಘಪರಿವಾರಿಗಳು ಇತ್ತೀಚೆಗೆ ಪೆರಿಯಾರರ 'ನಿಜ ರಾಮಾಯಣ'ವನ್ನು ನಿಷೇಧಿಸಬೇಕೆಂದು ಉತ್ತರ ಪ್ರದೇಶದಲ್ಲಿ ತಕರಾರೆತ್ತಿದ್ದರಲ್ಲದೆ, ಬಿಜೆಪಿಯ ಅಧ್ಯಕ್ಷ 'ಪೆರಿಯಾರ್ ಪುಸ್ತಕವನ್ನು ಮಾರಾಟ ಮಾಡುತ್ತಿರುವ ಅಂಗಡಿಗಳಿಗೆ ನುಗ್ಗಿ, ಆ ಪುಸ್ತಕಗಳಿಗೆ ಬೆಂಕಿ ಹಚ್ಚಿ" ಎಂದು ಆದೇಶಿಸಿದ್ದ. ಅಷ್ಟೇ ಅಲ್ಲ, ಇತ್ತೀಚೆಗೆ ಝಾನ್ಸಿರಾಣಿ ಲಕ್ಷ್ಮಿಬಾಯಿ ಕುರಿತಂತೆ ಜಯಶ್ರೀ ಮಿಶ್ರ ಎಂಬಾಕೆ ಬರೆದಿರುವ ಕಾಲ್ಪನಿಕ ಕಾದಂಬರಿ "ಬುಂದೇಲ್ ಖಂಡದ ಜನರ ಮನಸ್ಸಿಗೆ ನೋವುಂಟುಮಾಡಿದೆ" ಎಂದು ಆರೋಪಿಸಿ ಅದನ್ನು ಉತ್ತರ ಪ್ರದೇಶದಲ್ಲಿ ನಿಷೇಧಿಸಲಾಗಿದೆ. ಈ ಹಿಂದೆ ಛತ್ರಪತಿ ಶಿವಾಜಿಗೆ ಪುಸ್ತಕವೊಂದರಲ್ಲಿ ಅವಮಾನ ಮಾಡಲಾಗಿದೆ ಎಂದು ಆರೋಪಿಸಿ ಇದೇ ಸಂಘ ಪರಿವಾರದ ಪುಂಡರು ಪುಣೆಯಲ್ಲಿನ ಗ್ರಂಥಾಲಯಕ್ಕೆ ಬೆಂಕಿ ಇಟ್ಟು ಹಲವಾರು ಐತಿಹಾಸಿಕ ದಾಖಲೆಗಳನ್ನೇ ಭಸ್ಮ ಮಾಡಿದ್ದರು.

ಈ ಹಿಂದೂತ್ವ ಫ್ಯಾಸಿಸ್ಟರ ಅಟ್ಟಹಾಸ ಕೇವಲ ಪುಸ್ತಕಗಳಿಗೆ ಸೀಮಿತವಾಗಿಲ್ಲ. ಭಿನ್ನಾಭಿಪ್ರಾಯವನ್ನು ಸಹಿಸದವರು ಭಿನ್ನ ಮತೀಯರನ್ನು ಸಹಿಸುತ್ತಾರೆಯೇ? ಅಂದಹಾಗೆ ಭಿನ್ನಮತೀಯರೆಂದರೆ ಬರೀ ಮುಸಲ್ಮಾನರಲ್ಲ, ಕ್ರಿಶ್ಚಿಯನ್ನರೂ ಅಲ್ಲ. ಹಿಂದೂತ್ವ ಫ್ಯಾಸಿಸ್ಟರ ಪ್ರಕಾರ ಶೂದ್ರರು, ಹಿಂದುಳಿದವರು, ದಲಿತರು ಮತ್ತು ಮಹಿಳೆಯರೂ ಭಿನ್ನಮತೀಯರೇ. ಇದನ್ನು ಸ್ಪಷ್ಟಗೊಳಿಸುವ ದಾರುಣ ಪ್ರಕರಣವೊಂದು ಮೊನ್ನೆ ಚಿಕ್ಕಮಗಳೂರಿನಲ್ಲಿ ನಡೆದಿದೆ. ದನದಮಾಂಸ ಮಾರುತ್ತಿದ್ದರೆಂದು ಆರೋಪಿಸಿ ಬಾಳೆ ಹೊನ್ನೂರಿನ ಸಮೀಪ ಇಬ್ಬರು ಮುಸಲ್ಮಾನರು ಮತ್ತು ಓರ್ವ ದಲಿತನನ್ನು ಅರೆಬೆತ್ತಲೆ ಮಾಡಿ, ಅವರನ್ನೆಲ್ಲ ಥಳಿಸಿ, ಮಾಂಸವನ್ನು ಅವರ ಕೊರಳಿಗೆ ಸುತ್ತಿ ಮೆರವಣಿಗೆ ಮಾಡಿದ್ದಾರೆ ಭಜರಂಗದಳವೆಂಬ ದುಷ್ಟರ ಗುಂಪು.

ಸಂಘಪರಿವಾರದ "ಹಿಂದೂಗಳೆಲ್ಲ ಒಂದು" ಎಂಬ ಘೋಷಣೆ ಬರೀ ಬೊಗಳೆ ಎಂಬುದನ್ನು ಆ ದುಷ್ಟರ ಹತ್ಯಾರುಗಳಾಗಿರುವ ದಲಿತ ಯುವಕರು ಅರಿಯಬೇಕಿದೆ. ಮೊನ್ನೆ ಆದಿ ಉಡುಪಿಯಲ್ಲಿ ಮುಸಲ್ಮಾನರನ್ನು ನಗ್ನಗೊಳಿಸಿದ ಚೆಡ್ಡಿಗಳು ನಿನ್ನೆ ಬಾಳೆಹೊನ್ನೂರಿನಲ್ಲಿ ದಲಿತ ಯುವಕನನ್ನು ಬೆತ್ತಲೆಗೊಳಿಸಿದ್ದಾರೆ. ಇದು ಹೀಗೇ ಮುಂದುವರೆಯಲು ಬಿಟ್ಟರೆ ನಾಳೆ ಲಿಂಗಾಯತರೂ



ಬಲಿಯಾಗುವುದು ಖಂಡಿತ. ಹೇಳಿಕೇಳಿ 'ಪುರಾಣವೆಂಬುದು ಪುಂಡರ ಗೋಷ್ಠಿ, ಶಾಸ್ತ್ರವೆಂಬುದು ಓದಿನ ಮಾತು, ವೇದವೆಂಬುದು ತೊಗರ ಹೊರಟೆ' ಎಂದಿದ್ದ ಬಸವಣ್ಣನ ಪಂಥಕ್ಕೆ ಸೇರಿದವರಲ್ಲವೇ ಲಿಂಗಾಯತರು? ಆತನು ದೀಕ್ಷೆಯಾಗಿ ನೀಡಿದ್ದ ಲಿಂಗವನ್ನು ಧರಿಸುವವರಲ್ಲವೇ ಅವರು. ಆದ್ದರಿಂದ ಅವನೂ ಭಿನ್ನ ಮತೀಯರಲ್ಲವೇ? ಅವರಿಗೂ ಯಾಕೆ ನಾಲ್ಕು ಗೂಸಾ ಬೀಳಬಾರದು? ಇದು ಹಿಂದೂತ್ವ ಫ್ಯಾಸಿಸ್ಟರ ಅಸಲಿ ಸಿದ್ಧಾಂತ.

ಇದೆಲ್ಲ ಬೂಕನಕೆರೆ ಪೆದ್ದಪ್ಪನಿಗೆ ಅರ್ಥವಾಗುವುದಿಲ್ಲ, ಆದರೆ ಆತ ಅಧಿಕಾರದಾಸೆಯಿಂದಾಗಿ ಮತ್ತೆ ಮತ್ತೆ ಮುಖಭಂಗಕ್ಕೆ ಈಡಾಗಿದ್ದನ್ನೇ ಲಿಂಗಾಯತರಿಗೆ ಮಾಡಿದ ಅವಮಾನ ಎಂದು ಭಾವಿಸುವ ಆ ಸಮುದಾಯದವರು ಆತನಷ್ಟು ಪೆದ್ದರಲ್ಲ ಎಂದು ಆಶಿಸಬಹುದೇ?

ನಿನ್ನೆ ದಲಿತನಿಗೆ ಬಿದ್ದ ನಾಳೆ ಲಿಂಗಾಯತನಿಗೆ ಬೀಳುವ ಗೂಸ, ನಾಡಿದ್ದು ಒಕ್ಕಲಿಗರನ್ನೂ ಬಿಟ್ಟರಲಾರದು. ಸೀಮೆಎಣ್ಣೆ ರವಿ ಮತ್ತು ಹಲ್ಮುಖಿ ಗೌಡರಂತಹ ಒಕ್ಕಲಿಗ-ಬಂಟರಿಗೆ ತಾವು ತಮ್ಮ ಸಮುದಾಯಗಳಿಗೆ ಎಂತಹ ಆಪತ್ತನ್ನು ತರುತ್ತಿದ್ದೇವೆ ಎಂದು ಗೊತ್ತಿಲ್ಲ, ಆದರೆ ಅದೃಷ್ಟವಶಾತ್ ಹಿಂದೊಮ್ಮೆ 'ಮಧ್ಯಾಹ್ನ ಬ್ರಾಹ್ಮಣ'ರಾಗುವುದರಲ್ಲಿ ತೃಪ್ತಿ ಕಾಣುತ್ತಿದ್ದ ಬಾಲ ಗಂಗಾಧರಸ್ವಾಮಿಗಾದರೂ ಇತ್ತೀಚೆಗೆ ಜ್ಞಾನೋದಯವಾಗಿರುವಂತಿದೆ. ಆದ್ದರಿಂದಲೇ ಅವರು ಹಿಂದೂತ್ವ ಫ್ಯಾಸಿಸ್ಟರು ಧರ್ಮದ ಹೆಸರಲ್ಲಿ ಹಣ ಸಂಗ್ರಹಿಸುವ ದಂಧೆ ಶುರು ಹಚ್ಚಿಕೊಂಡಿದ್ದಾರೆ ಎಂದು ಗುಡುಗಿದ್ದಾರೆ.

ಎಲ್ಲ ಬಗೆಯ ಶೋಷಣೆ, ದಮನ ಮತ್ತು ದಬ್ಬಾಳಿಕೆಗಳನ್ನು ವಿರೋಧಿಸುತ್ತಲೇ ಬಂದಿರುವ 'ಲಂಕೇಶ್' ವಾರಪತ್ರಿಕೆ ಇವೆಲ್ಲವನ್ನು ಪ್ರತಿಭಟಿಸುತ್ತದೆ. ಯಾಕೆಂದರೆ ಈ ಭಾರತ, ಈ ಕರ್ನಾಟಕ ಯಾವುದೇ ಪ್ರಜಾಪ್ರಭುತ್ವ ವಿರೋಧಿಗಳದ್ದಲ್ಲ, ಫ್ಯಾಸಿಸ್ಟರದ್ದಲ್ಲ, ಬದಲಾಗಿ ಇದು ಕುವೆಂಪು, ಶಿಶುನಾಳ, ಬಸವಣ್ಣ, ಲಂಕೇಶರ ಕರ್ನಾಟಕ. ಇವರೆಲ್ಲರ ಅನುಯಾಯಿಗಳ ರಾಜ್ಯ. "ಇವನಾರವ, ಇವನಾರವ ಎಂದೆನಿರದಿರಯ್ಯ ಇವ ನಮ್ಮವ, ಇವ ನಮ್ಮವ ಎನಿರಯ್ಯ" ಎಂಬ ಸಹಬಾಳ್ವೆ, ಸಹಮತ, ಸೌಹಾರ್ದವನ್ನು ಬಯಸುವವರ ರಾಜ್ಯವಿದು.

ಸದ್ಯದಲ್ಲೇ ಚುನಾವಣೆಗಳು ನಡೆಯಲಿವೆ. ಅದು ಕೇವಲ ಕಾಂಗ್ರೆಸ್, ಜನತಾದಳ ಮತ್ತು ಬಿಜೆಪಿ ಪಕ್ಷಗಳಿಗೆ ಸಂಬಂಧಪಟ್ಟ ಪ್ರಕ್ರಿಯೆಯಲ್ಲ, ಬದಲಾಗಿ ನಾಳೆ ನಮ್ಮೆಲ್ಲರ ಬದುಕಿನ ದಿಕ್ಕನ್ನು ನಿರ್ಧರಿಸುವ ಪ್ರಕ್ರಿಯೆ. ಆದ್ದರಿಂದ ಫ್ಯಾಸಿಸ್ಟರ ಪಕ್ಷವಾದ ಬಿಜೆಪಿಯನ್ನು ಸೋಲಿಸಲು ನಮ್ಮ ಕೈಲಾದಷ್ಟು ಪ್ರಯತ್ನಿಸಬೇಕಿದೆ.

ಆ ಪ್ರಯತ್ನದಲ್ಲಿ ನೀವೂ ಸೇರಿರುತ್ತೀರಿ ಎಂಬ ಆಶೆಯದೊಂದಿಗೆ... ■

ಪರಿವಿಡಿ

ಲೇಖನಗಳು

ಕತೆ

ವಿಡಂಬನೆ

ಕಾವ್ಯ

ಸಿನಿಮಾ

ವಿಮರ್ಶೆ

ಹೊಸ ಬರಹಗಾರರ ತುಡಿತ......

ಕಳೆದ ಆರೇಳು ವರ್ಷಗಳಲ್ಲಿ ಕನ್ನಡ ಸಾಹಿತ್ಯದೊಳಗೆ ಆದ ಬದಲಾವಣೆಗಳನ್ನು ಕಂಡರೆ ಅಚ್ಚರಿಯಾಗುತ್ತದೆ. ಅದರಲ್ಲೂ ಹೊಸಬರ ಬರವಣಿಗೆ. ಈ ಹೊಸಬರು ಯಾವ ಪಂಥದ ತೆಕ್ಕೆಗೂ ಒಗ್ಗದವರು. ಆದರೆ ಎಲ್ಲಾ ಪಂಥಗಳಿಂದ ತನಗೆ ಬೇಕಾದದ್ದನ್ನು ಪಡೆಯುವ ಮನೋಭಾವದವರು. ಹಾಗೆ ಪಡೆದದ್ದನ್ನು ಬೇರೆ ಬೇರೆ ಕ್ರಮಗಳಲ್ಲಿ ಮುಂದುವರೆಸುವ ಸೂಕ್ಷ್ಮಜ್ಞರು ಕೂಡ. ಪೂರ್ವನಿರ್ಧಾರಿತ ಚೌಕಟ್ಟುಗಳ ಬಗ್ಗೆ ಗಾಢ ಅನುಮಾನ ಇರುವುದರಿಂದಲೇ ಇವರ ಬರಹಕ್ಕೆ ಅದರದೇ ಆದ ಚೈತನ್ಯ ಒದಗಿದೆ. ಸೀಮಿತವಾಗಿದ್ದರೂ ತಮ್ಮ ಅನುಭವಗಳ ದಾರಿಯಲ್ಲಿ ಒಬ್ಬಂಟಿ ಸಾಗುವ ಅಥವಾ ಕಾಲೂರಿ ನಿಲ್ಲುವ ಛಲ ಇವರಿಗಿದೆ. ತಮ್ಮನ್ನು ಕಾಡುತ್ತಿರುವ ಅನುಭವಗಳನ್ನು ಅರಿಯುತ್ತ, ಗೊಂದಲಗೊಳ್ಳುತ್ತ, ಮುರಿಯುತ್ತ ಇದಿರುಗೊಳ್ಳುತ್ತಿದ್ದಾರೆ. ಇದನ್ನು ಕೊಂಚ ಸ್ಪಷ್ಟವಾಗಿ ಹೇಳಲು ಯತ್ನಿಸುವೆ; ಒಂದು ವೈಚಾರಿಕ ನಿಲುವಿನಲ್ಲಿ ನಿಂತು ಬರೆಯಬೇಕೆಂಬ ಹಟ ಹೊಸಬರಿಗಿಲ್ಲ. ಆದಷ್ಟು ಮುಕ್ತವಾಗಿ ಇರಲು ಬಯಸುವ ಹಾಗೂ ಎಲ್ಲಾ ನಿಲುವುಗಳನ್ನು ಮೀರಿ ಸಾಗುವ ಬದುಕಿನ ಬೆರಗಿಗೆ ಇವರು ಬದ್ಧ.

ತಕ್ಷಣಕ್ಕೆ ನೆನಪಿಸಿಕೊಳ್ಳುವುದಾದರೆ, ಟಿ.ಎಸ್. ಗೊರವರ್ "ಭ್ರಮೆ" ಎಂಬ ಕಥಾಸಂಕಲನ ಪ್ರಕಟಿಸಿದ್ದಾರೆ. ಅದರಲ್ಲಿ ಚೌರಿ ಮಾರುವ ಹೆಣ್ಣಿನ ಸಂಕಟವನ್ನು ಹೇಳುವ ಕಥೆಯಿದೆ. ಇಂಥದೊಂದು ಹೊಸ ಬಗೆಯ ಪಾತ್ರವನ್ನು ಕೊಂಚ ಧೈರ್ಯ, ಕೊಂಚ ಅಳುಕಿನಿಂದ ಕಟ್ಟಿಕೊಡುವ ಕಥೆಗಾರ ಮಿತವಾದ ಭಾಷೆಯನ್ನು ಇದಕ್ಕಾಗಿ ರೂಪಿಸಿಕೊಂಡಿದ್ದಾರೆ. ಚೇತನಾ ತೀರ್ಥಹಳ್ಳಿಯವರ "ಉಪೀಟ್" ಕವನ ಸಂಕಲನವನ್ನು ಉಲ್ಲೇಖಿಸಬೇಕು. ಕುಟುಂಬದ ಒಳಗೆ ನಿಂತುಕೊಂಡು ಈಕೆ ಎತ್ತುತ್ತಿರುವ ಪ್ರಶ್ನೆ, ಮಾಡುತ್ತಿರುವ ಸ್ವಗತಗಳು ಅಚ್ಚರಿಗೊಳಿಸುವಷ್ಟು ಸತ್ವಪೂರ್ಣವಾಗಿವೆ. 'ಚೇತನಾ ತನಗೆ ಗೊತ್ತಿಲ್ಲದೆಯೇ ಕನ್ನಡದೊಳಗೆ ಸ್ತ್ರೀವಾದದ ಹೊಸ ನೋಟಗಳನ್ನು ಕಾಣಿಸುತ್ತಿದ್ದಾರೆ" ಎಂದ ನಟರಾಜ್ ಹುಳಿಯಾರ್ ಅವರ ಮಾತು ನಿಜ. ದಿಕ್ಕು ದೆಸೆಯಿಲ್ಲದ ಚಲನೆಗಳನ್ನು ನಂಬುವ ಮತ್ತು ಈ ದಿಕ್ಕುಗೇಡಿ ಚಲನೆಯಲ್ಲೇ ಬದುಕಿನ ಸೆಲೆಗಳನ್ನು ಗುರುತಿಸುವ ವಿಚಿತ್ರ ಶಕ್ತಿ ರವಿ ದ್ರಾವಿಡರ ಕವಿತೆಗಳಲ್ಲಿದೆ. ವಿಶೇಷವೆಂದರೆ ಹೊಸಬರು ಯಾವ ಭಾರವನ್ನೂ ಹೇರಿಕೊಳ್ಳದೇ ಸಹಜ ಸ್ಥಿತಿಯಲ್ಲಿ ಬರಹವನ್ನು ಸೃಷ್ಟಿಸುತ್ತಿದ್ದಾರೆ. ಎದುರಿನವರನ್ನು ಅನಗತ್ಯವಾಗಿ ಬೆಚ್ಚಿಬೀಳಿಸುವ ತಂತ್ರಗಾರಿಕೆ ಬಳಸದೆ ಸಹಜ, ಮುಗ್ಧ ಪ್ರಾಮಾಣಿಕ ನೋಟಗಳ ಒಡಲಾಳದ ಬರಹಗಳು ಮೈತಾಳುತ್ತಿವೆ.

ಸಮಾಜ ಸೃಷ್ಟಿಸಿದ ಜನಪ್ರಿಯ ಸಭ್ಯತೆಯನ್ನು ಉಡಾಯಿಸುವ ಹಾಗೂ ಮನುಷ್ಯನ ಇಂದ್ರಿಯ ನಿಷ್ಠ ಜೀವನದ ರೋಮಾಂಚನ ಮತ್ತು ವಕ್ರತೆಯನ್ನು ಕಾಣಿಸುವ ಉಮೇದು ಕೆಲವರ ಬರವಣಿಗೆಯಲ್ಲಿದೆ. ಇಂತಹ ಬರವಣಿಗೆಯ ಪ್ರಾತಿನಿಧಿಕ ರೂಪವಾಗಿ ವಿ.ಎಂ.ಮಂಜುನಾಥರ ಬರಹವನ್ನು ನೆನಪಿಸಿಕೊಳ್ಳಬಹುದು. ಮಂಜುನಾಥ್ "ಕ್ರಿಮಿ" ಎಂಬ ನಾಟಕ ಬರೆದಿದ್ದಾರೆ. ಮನುಷ್ಯನ ಮನೋಲೋಕದ ಲೈಂಗಿಕತೆಯನ್ನು ಅನೇಕ ಬಗೆಗಳಲ್ಲಿ ಕಾಣುತ್ತ ಈ ಲೈಂಗಿಕತೆಯಿಂದಾಗಿ ಇಲ್ಲಿನ ಸಭ್ಯತೆ ತಿರುವುಮುರುವಾಗುವ, ನೈತಿಕತೆ ತೋಪೆದ್ದುಹೋಗುವ ಅಂಶಗಳು ನಾಟಕದಲ್ಲಿವೆ.

ಖಾಸಗಿ ಬದುಕಿನ ಅನುಭವಗಳಿಂದ ಹಿಡಿದು ರಾಜಕೀಯ ಪಲ್ಲಟಗಳವರೆಗೆ ಎಲ್ಲವನ್ನೂ ಕಲೆಯ ಜಾಡಿಗೆ ಎಳೆಯುವ ಉತ್ಸಾಹದಲ್ಲಿ ಹೊಸಬರಿದ್ದಾರೆ. ಆದರೆ ಮುಖ್ಯವಾಗಿ ಪ್ರೇಮದ ಬರುಗಾಳಿಗೆ ಒಡ್ಡಿಕೊಂಡ ಮನಸ್ಸು, ಬದುಕಿನಲ್ಲಿ ಧುತ್ತನೆ ಎದುರಾದ ಆತಂಕಗಳು, ತನ್ನ ಗ್ರಾಮೀಣ ಸಮುದಾಯದ ಸ್ಮೃತಿಚಿತ್ರಗಳು ಹಾಗೂ ಕಣ್ಣೆದುರಿನ ರಾಜಕೀಯ ಬರಹದ ಕೇಂದ್ರಕ್ಕೆ ಹೆಚ್ಚಾಗಿ ಒಳಗಾಗಿವೆ. ಬಹುತೇಕರು ಕೋಮುವಾದವನ್ನು ಆಳದಲ್ಲಿ ತಿರಸ್ಕರಿಸುತ್ತಿರುವುದು ಕೂಡ ಮಹತ್ವದ ಸಂಗತಿ.

ಹೊಸಬರ ಬರವಣಿಗೆಯಲ್ಲಿ ಆತ್ಮಚರಿತ್ರಾತ್ಮಕ ಶೈಲಿ ಹೆಚ್ಚು ಮುನ್ನೆಲೆಗೆ ಬಂದಂತಿದೆ. ಕೆಲವೊಮ್ಮೆ ಉತ್ಪ್ರೇಕ್ಷಿತವೆನಿಸಿದರೂ ಅದಕ್ಕೇನೊ ವಿಚಿತ್ರ ಸೆಳೆತವಿದೆ. ತನ್ನ ಬದುಕಿನ ಭಾಗವಾಗಿದ್ದುದನ್ನು ಮಾತ್ರ ಬರೆಯಬೇಕೆಂಬ ತೀವ್ರ ಎಚ್ಚರವೂ ಇದಕ್ಕೆ ಕಾರಣವಾಗಿರಬಹುದು. ಆದರೆ ಇದರ ಅರಾಜಕತೆ ಮತ್ತು ಆಕರ್ಷಣೆ ಅಪರೂಪದ್ದು.

ಹೊಸಬರ ಬರವಣಿಗೆಯಲ್ಲಿನ ನೈತಿಕ ಶಕ್ತಿ ಸಣ್ಣ ಪ್ರಮಾಣದಲ್ಲಿದ್ದರೂ ಸದೃಢವಾಗಿದೆ. ಆತ್ಮವಂಚನೆಗೆ ಒಳಗಾಗದ ಮತ್ತು ನಿಜವಾದ ಬದುಕಿನ ಎಳೆಗಳಿಗೆ ಸಂಪೂರ್ಣ ಸೋತುಹೋಗುವ ಗುಣ ಹೊಸ ಲೇಖಕರ ಬರಹದ ಚೈತನ್ಯವನ್ನು ಕಾಪಾಡಿದೆ. ಈಗ ಬರೆಯುತ್ತಿರುವವರ ಸೃಜನಶೀಲ ಮೂಲಗಳು ಎಲ್ಲೆಲ್ಲೊ ಇವೆ. ಬೋದಿಲೇರ್, ಅಂಬೇಡ್ಕರ್, ಗಾಂಧಿ, ಅಕ್ಕ, ಅಲ್ಲಮ, ಬುದ್ಧ-ಹೀಗೆ ಇವರೆಲ್ಲರನ್ನು ಯಾವ್ಯಾವುದೋ ರೀತಿಯಲ್ಲಿ ಸ್ವೀಕರಿಸುತ್ತಿರುವ, ಕಂಡುಕೊಳ್ಳುತ್ತಿರುವ ರೀತಿ ಕೂಡ ಕುತೂಹಲಕಾರಿಯಾದದ್ದು. ಮುಖ್ಯವಾಗಿ ಲಂಕೇಶರ ಬರಹಗಳು ಅನೇಕರಲ್ಲಿ ನಿರಂತರ ಪುಳಕವನ್ನು ಹುಟ್ಟಿಸುತ್ತ ಬರಹದ ಹೊಸ ದಿಕ್ಕುಗಳನ್ನು ತೋರಿಸುತ್ತಿರುವುದಂತೂ ನಿಜ.



■ ವಿಕ್ರಮ ವಿಸಾಜಿ

ಕನ್ನಡದಲ್ಲಿ ಈ ಹಿಂದೆ "ಸಾಮಾಜಿಕತೆ" ಎನ್ನುವುದು ಒಮ್ಮೆ ಅತಿಯಾಗಿ, ಇನ್ನೊಮ್ಮೆ ನಿರ್ಲಕ್ಷ್ಯಕ್ಕೊಳಗಾಗಿ ಏನೇನೊ ರೂಪ ವಿರೂಪಗಳನ್ನು ಪಡೆದುಕೊಂಡಿತ್ತು. ತಮ್ಮ ಬರಹಗಳಲ್ಲಿ ಸಮಾಜದ ಒಳಗನ್ನು ಮುಟ್ಟಲು ಸಾಧ್ಯವಾಗದ ಲೇಖಕರು ತಮ್ಮ ವೈಯಕ್ತಿಕ ದೌರ್ಬಲ್ಯವನ್ನೇ ದೃಷ್ಟಿಕೋನದ ದೌರ್ಬಲ್ಯವೆಂದು ಭಾವಿಸುವ ಅಪಾಯವಿರುತ್ತದೆ. ಹಾಗೆಯೇ ಸಾಮಾಜಿಕತೆಯು ಬರಹದಲ್ಲಿ ಹೀಗೇ ಬರಬೇಕೆಂದು ಕೂಡ ತಿಳಿಯಬೇಕಾಗಿಲ್ಲ. ಇದನ್ನು ಅತಿಮಾಡುವುದು ಹಾಗೂ ಇದರ ಅಗತ್ಯವನ್ನು ಅಲ್ಲಗಳೆಯುವುದು ಎರಡೂ ಒಳ್ಳೆಯದಲ್ಲವೇನೊ. ಬರಹಗಾರನ "ಒಳಕೋಣೆಗೆ" ಹೊರಗಿನ ಗಾಳಿ ಬೀಸದಿದ್ದರೆ, ಹೊರಗಿನ ಗಾಳಿಗೆ ಒಳಕೋಣೆಯ ಉಸಿರು ತಟ್ಟದಿದ್ದರೆ ಎರಡೂ ಕೊಳೆತುಹೋಗುವ ದುಸ್ಥಿತಿಗೆ ಈಡಾಗಬಹುದು. ಇದೆಲ್ಲಾ ಯಾಕೆ ಹೇಳಿದೆನೆಂದರೆ ಹೊಸ ಬರವಣಿಗೆಯಲ್ಲಿ ಇವೆರಡೂ ಕಲೆತುಹೋದ ಸ್ಥಿತಿಯಿದೆ. ಇದನ್ನು ವಿಶೇಷ ಗುಣವೆಂದೇ ಭಾವಿಸಬೇಕು. ಯಾಕೆಂದರೆ ಇದು ಬರೀ ಕಲೆಗಾರಿಕೆಗೆ ಸಂಬಂಧಿಸಿದ ಪ್ರಶ್ನೆಯಲ್ಲ. ಹೊಸ ಲೇಖಕರು ಬದುಕನ್ನು ಸ್ವೀಕರಿಸುತ್ತಿರುವ ವಿಧಾನಕ್ಕೆ ಸಂಬಂಧಿಸಿದ ಅಂಶ ಕೂಡ ಹೌದು.

ಹಾಗೆ ನೋಡಿದರೆ ಯಾವುದೇ ಒಂದು ಅಂಶ ಬರಹಗಾರನನ್ನು ರೂಪಿಸುವುದಿಲ್ಲ. ಅವನ ಹೊರಗಿನ ಮತ್ತು ಒಳಗಿನ ವೈರುಧ್ಯಗಳು ಸೇರಿ ಲೇಖಕನ ವ್ಯಕ್ತಿತ್ವವನ್ನು ಕಡೆಯುತ್ತಿರುತ್ತವೆ. ತನ್ನೊಳಗಿನ ತುಡಿತಗಳಿಗೆ ಬದ್ಧನಾದ ಲೇಖಕ ಬರೆಯುತ್ತಲೇ ಇರುತ್ತಾನೆ. ಹೊಸಬರಲ್ಲಿ ಇಂತಹ ಪ್ರಾಮಾಣಿಕ ತುಡಿತವಿರುವುದಂತೂ ನಿಜ.

ಜೀವಂತ ಕಾವ್ಯ, ದಟ್ಟ ಅನುಭವಗಳ ಕಥೆ, ವಿಶಾಲ ಹರುಹಿನ ಕಾದಂಬರಿ, ಅರ್ಥಪೂರ್ಣ ಸಾಂಸ್ಕೃತಿಕ ಚರ್ಚೆ, ದೇಸಿ ಸೃಜನಶೀಲ ಅಭಿವ್ಯಕ್ತಿಗಳ ಕುರಿತಾದ ಆಸಕ್ತಿ ಇವೆಲ್ಲಾ ಕಣ್ಣೆದುರು ಘಟಿಸುತ್ತಿವೆ. ಆದ್ದರಿಂದ ಹೊಸ ಲೇಖಕರಿಗೆ ಇದೊಂದು ಉತ್ಸಾಹದ ಕಾಲ. ಅಷ್ಟೇ ಅಲ್ಲ, ಇದೊಂದು ಸವಾಲಿನ ಕಾಲವೂ ಹೌದು. ■

‘ಇವ ನಮ್ಮವ’ ಎನ್ನುವವರ ನಾಡಿದು



ಕಂಡಹಾಗೆ

■ ಗೌರಿ ಲಂಕೇಶ್

ಒಂದು ವಿಶೇಷ ಸಂಚಿಕೆಯನ್ನು ರೂಪಿಸುವುದು ಷ್ಟಕರ ಕೆಲಸ. ಯಾಕೆಂದರೆ ಅದರಲ್ಲಿ ವಿಶೇಷವಾದ ಂಜನೆ, ಬೋಧನೆ ಮತ್ತು ಪ್ರಚೋದನೆ ಮಾತ್ರ ಇದ್ದರೆ ಲದು. ಅದನ್ನು ಓದಿ ಮುಗಿಸಲು, ಅದರಲ್ಲಿರುವು ನ್ನು ಮೆಲುಕು ಹಾಕಲು ಹಲವು ದಿನಗಳೇ ಬೇಕು ನ್ನುವಂತಿರಬೇಕು. ಹಾಗೆಯೇ ಅದು ಜನರ ಕೈಗೆಟುಕು ಂತೆ ಇರಬೇಕು.

ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಬಾರಿಯ ವಿಶೇಷಾಂಕವನ್ನು ರೂಪಿಸಿದ್ದೇವೆ. ತಳುಕು ಳುಕನ್ನು ಕಡಿಮೆ ಮಾಡಿ, ಪ್ರತಿ ಪುಟ ಸಮೃದ್ಧತೆಯಿಂದ ಾಡಿರುವಂತೆ ಎಚ್ಚರ ವಹಿಸಿದ್ದೇವೆ. ಈ ಸಂಚಿಕೆಯಲ್ಲಿ ಮಾಜ, ಸಾಹಿತ್ಯ, ಮಾಧ್ಯಮ, ಮಹಿಳೆ, ಹಿಂದುಳಿದ ರು, ಅಲ್ಪಸಂಖ್ಯಾತರು... ಹೀಗೆ ಇವತ್ತು ಕರ್ನಾಟಕದ ಲ್ಲಾ ವಲಯಗಳು ಮತ್ತು ಸಮುದಾಯಗಳು ಂಕ್ರಮಣ ಕಾಲವನ್ನು ಎದುರಿಸುತ್ತಿರುವಾಗ, ಅವೆಲ್ಲವೂ ೀಗೆ ಎಲ್ಲಾ ಸಂಕಷ್ಟಗಳನ್ನು ಮೀರಿ ನಿಲ್ಲುವಂತಾಗಬೇಕು, ೀಗೆ ಹೊಸ ಆಶಯಗಳ ಚಿಗುರುಗಳನ್ನೊಡೆದು ಹೊಸ ುಟ್ಟು ಪಡೆಯಬೇಕು ಎಂಬ ಚಿಂತನೆ, ತವಕ, ುಡುಕಾಟ ಈ ವಿಶೇಷಾಂಕದಲ್ಲಿನ ಲೇಖನ, ಕತೆ, ಾವ್ಯ ಪ್ರಬಂಧ ಗಳು ಹೊಂದಿವೆ. (ಈ ‘ಭೂರಿ ೋಜನ’ದಲ್ಲಿ ಈ ಬಾರಿ ‘ಉಪ್ಪಿನ ಕಾಯಿ’ ಪ್ರಿಯರಿಗೆ ಲ್ಪ ದೋಖಾ ಆಗಿದೆ ಎನಿಸಿದರೆ, ಕ್ಷಮೆ ಇರಲಿ ಂದಷ್ಟೇ ಹೇಳಲಿ ಚ್ಛಿಸುತ್ತೇನೆ!)

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಈ ಂಚಿಕೆ ನಿಮ್ಮ ಈ ಪತ್ರಿಕೆಯ ಸಾಮಾಜಿಕ ಜವಾಬ್ದಾರಿಯ ಮುಂದುವರಿಕೆಯೇ ಆಗಿದೆ. ಇತ್ತೀಚೆಗೆ ಕನ್ನಡದ ಹಿರಿಯ ಲೇಖಕ ಎ.ಕೆ. ರಾಮಾನುಜನ್‌ರ ‘ಥ್ರೀ ಹಂಡ್ರೆಡ್ ರಾಮಾಯಣಾಸ್’ ಎಂಬ ಪ್ರಬಂಧದ ಸುತ್ತ ದೆಹಲಿ ವಿಶ್ವವಿದ್ಯಾಲಯದಲ್ಲಿ ನಡೆದ ಗಲಭೆ ಬಗ್ಗೆ ಇವತ್ತಿನವರೆಗೂ ಯಾವುದೇ ಕನ್ನಡ ದಿನಪತ್ರಿಕೆಗಳು ವಿಶೇಷ ಲೇಖನಗಳಿರಲಿ, ವರದಿಯನ್ನೂ ಮಾಡಿಲ್ಲ, ಆದರೆ ಆ ಜವಾಬ್ದಾರಿಯನ್ನು ವಹಿಸಿದ್ದು ನಮ್ಮ ಪತ್ರಿಕೆ ಮಾತ್ರ. ಈ ಕಾರಣಕ್ಕೆ ಮೊನ್ನೆ ನಮ್ಮ ಹಿರಿಯ ಮಿತ್ರ ಜಿ. ರಾಜಶೇಖರ್‌ರವರು “ಕನ್ನಡದ ಮಾನ ಉಳಿಸಿದ್ದು ‘ಲಂಕೇಶ್’ ವಾರ ಪತ್ರಿಕೆ” ಎಂದು ಹೇಳಿದಾಗ ಅವರ ದನಿಯಲ್ಲಿ ಪ್ರಸ್ತುತ ಮಾಧ್ಯಮಗಳ ಬಗ್ಗೆ ವಿಷಾದವಿತ್ತು.

ಇವತ್ತು ಅನಂತಮೂರ್ತಿಯವರ ‘ಸಂಸ್ಕಾರ’ ಮತ್ತು ರಾಮಾನುಜನ್‌ರ ‘ಥ್ರೀ ಹಂಡ್ರೆಡ್ ರಾಮಾಯಣಾಸ್’ ವಿರುದ್ಧ ಪ್ರತಿಭಟಿಸುತ್ತಿರುವ ಸಂಘಪರಿವಾರಿಗಳು ಇತ್ತೀಚೆಗೆ ಪೆರಿಯಾರರ ‘ನಿಜ ರಾಮಾಯಣ’ವನ್ನು ನಿಷೇಧಿಸಬೇಕೆಂದು ಉತ್ತರ ಪ್ರದೇಶದಲ್ಲಿ ತಕರಾರೆತ್ತಿದ್ದರಲ್ಲದೆ, ಬಿಜೆಪಿಯ ಅಧ್ಯಕ್ಷ ‘ಪೆರಿಯಾರ್ ಪುಸ್ತಕವನ್ನು ಮಾರಾಟ ಮಾಡುತ್ತಿರುವ ಅಂಗಡಿಗಳಿಗೆ ನುಗ್ಗಿ, ಆ ಪುಸ್ತಕಗಳಿಗೆ ಬೆಂಕಿ ಹಚ್ಚಿ” ಎಂದು ಆದೇಶಿಸಿದ್ದ. ಅಷ್ಟೇ ಅಲ್ಲ, ಇತ್ತೀಚೆಗೆ ಝಾನ್ಸಿರಾಣಿ ಲಕ್ಷ್ಮಿಬಾಯಿ ಕುರಿತಂತೆ ಜಯಶ್ರೀ ಮಿಶ್ರ ಎಂಬಾಕೆ ಬರೆದಿರುವ ಕಾಲ್ಪನಿಕ ಕಾದಂಬರಿ “ಬುಂದೇಲ್ ಖಂಡದ ಜನರ ಮನಸ್ಸಿಗೆ ನೋವುಂಟುಮಾಡಿದೆ” ಎಂದು ಆರೋಪಿಸಿ ಅದನ್ನು ಉತ್ತರ ಪ್ರದೇಶದಲ್ಲಿ ನಿಷೇಧಿಸಲಾಗಿದೆ. ಈ ಹಿಂದೆ ಛತ್ರಪತಿ ಶಿವಾಜಿಗೆ ಪುಸ್ತಕವೊಂದರಲ್ಲಿ ಅವಮಾನ ಮಾಡಲಾಗಿದೆ ಎಂದು ಆರೋಪಿಸಿ ಇದೇ ಸಂಘ ಪರಿವಾರದ ಪುಂಡರು ಪುಣೆಯಲ್ಲಿನ ಗ್ರಂಥಾಲಯಕ್ಕೆ ಬೆಂಕಿ ಇಟ್ಟು ಹಲವಾರು ಐತಿಹಾಸಿಕ ದಾಖಲೆಗಳನ್ನೇ ಭಸ್ಮ ಮಾಡಿದ್ದರು.

ಈ ಹಿಂದೂತ್ವ ಫ್ಯಾಸಿಸ್ಟರ ಅಟ್ಟಹಾಸ ಕೇವಲ ಪುಸ್ತಕಗಳಿಗೆ ಸೀಮಿತವಾಗಿಲ್ಲ. ಭಿನ್ನಾಭಿಪ್ರಾಯವನ್ನು ಸಹಿಸದವರು ಭಿನ್ನ ಮತೀಯರನ್ನು ಸಹಿಸುತ್ತಾರೆಯೇ? ಅಂದಹಾಗೆ ಭಿನ್ನಮತೀಯರೆಂದರೆ ಬರೀ ಮುಸಲ್ಮಾನರಲ್ಲ, ಕ್ರಿಶ್ಚಿಯನ್ನರೂ ಅಲ್ಲ. ಹಿಂದೂತ್ವ ಫ್ಯಾಸಿಸ್ಟರ ಪ್ರಕಾರ ಶೂದ್ರರು, ಹಿಂದುಳಿದವರು, ದಲಿತರು ಮತ್ತು ಮಹಿಳೆಯರೂ ಭಿನ್ನಮತೀಯರೇ. ಇದನ್ನು ಸ್ಪಷ್ಟಗೊಳಿಸುವ ದಾರುಣ ಪ್ರಕರಣವೊಂದು ಮೊನ್ನೆ ಚಿಕ್ಕಮಗಳೂರಿನಲ್ಲಿ ನಡೆದಿದೆ. ದನದಮಾಂಸ ಮಾರುತ್ತಿದ್ದರೆಂದು ಆರೋಪಿಸಿ ಬಾಳೆಹೊನ್ನೂರಿನ ಸಮೀಪ ಇಬ್ಬರು ಮುಸಲ್ಮಾನರು ಮತ್ತು ಓರ್ವ ದಲಿತನನ್ನು ಅರೆಬೆತ್ತಲೆ ಮಾಡಿ, ಅವರನ್ನೆಲ್ಲ ಥಳಿಸಿ, ಮಾಂಸವನ್ನು ಅವರ ಕೊರಳಿಗೆ ಸುತ್ತಿ ಮೆರವಣಿಗೆ ಮಾಡಿದ್ದಾರೆ ಭಜರಂಗದಳವೆಂಬ ದುಷ್ಟರ ಗುಂಪು.

ಸಂಘಪರಿವಾರದ “ಹಿಂದೂಗಳೆಲ್ಲ ಒಂದು” ಎಂಬ ಘೋಷಣೆ ಬರೀ ಬೊಗಳೆ ಎಂಬುದನ್ನು ಆ ದುಷ್ಟರ ಹತ್ಯಾರುಗಳಾಗಿರುವ ದಲಿತ ಯುವಕರು ಅರಿಯಬೇಕಿದೆ. ಮೊನ್ನೆ ಆದಿ ಉಡುಪಿಯಲ್ಲಿ ಮುಸಲ್ಮಾನರನ್ನು ನಗ್ನಗೊಳಿಸಿದ ಚೆಡ್ಡಿಗಳು ನಿನ್ನೆ ಬಾಳೆಹೊನ್ನೂರಿನಲ್ಲಿ ದಲಿತ ಯುವಕನನ್ನು ಬೆತ್ತಲೆಗೊಳಿಸಿದ್ದಾರೆ. ಇದು ಹೀಗೇ ಮುಂದುವರೆಯಲು ಬಿಟ್ಟರೆ ನಾಳೆ ಲಿಂಗಾಯತರೂ ಬಲಿಯಾಗುವುದು ಖಂಡಿತ. ಹೇಳಿಕೇಳಿ ‘ಪುರಾಣವೆಂಬುದು ಪುಂಡರ ಗೋಷ್ಠಿ, ಶಾಸ್ತ್ರವೆಂಬುದು ಓದಿನ ಮಾತು, ವೇದವೆಂಬುದು ತೊಗರ ಹೊರಟೆ’ ಎಂದಿದ್ದ ಬಸವಣ್ಣನ ಪಂಥಕ್ಕೆ ಸೇರಿದವರಲ್ಲವೇ ಲಿಂಗಾಯತರು? ಆತನು ದೀಕ್ಷೆಯಾಗಿ ನೀಡಿದ್ದ ಲಿಂಗವನ್ನು ಧರಿಸುವವರಲ್ಲವೇ ಅವರು. ಆದ್ದರಿಂದ ಅವನೂ ಭಿನ್ನ ಮತೀಯರಲ್ಲವೇ? ಅವರಿಗೂ ಯಾಕೆ ನಾಲ್ಕು ಗೂಸಾ ಬೀಳಬಾರದು? ಇದು ಹಿಂದೂತ್ವ ಫ್ಯಾಸಿಸ್ಟರ ಅಸಲಿ ಸಿದ್ಧಾಂತ.

ಇದೆಲ್ಲ ಬೂಕನಕೆರೆ ಹೆಡ್ಡಪ್ಪನಿಗೆ ಅರ್ಥವಾಗುವುದಿಲ್ಲ, ಆದರೆ ಆತ ಅಧಿಕಾರದಾಸೆಯಿಂದಾಗಿ ಮತ್ತೆ ಮತ್ತೆ ಮುಖಭಂಗಕ್ಕೆ ಈಡಾಗಿದ್ದನ್ನೇ ಲಿಂಗಾಯತರಿಗೆ ಮಾಡಿದ ಅವಮಾನ ಎಂದು ಭಾವಿಸುವ ಆ ಸಮುದಾಯದವರು ಆತನಷ್ಟು ಹೆಡ್ಡರಲ್ಲ ಎಂದು ಆಶಿಸಬಹುದೇ?

ನಿನ್ನೆ ದಲಿತನಿಗೆ ಬಿದ್ದ ನಾಳೆ ಲಿಂಗಾಯತನಿಗೆ ಬೀಳುವ ಗೂಸ, ನಾಡಿದ್ದು ಒಕ್ಕಲಿಗರನ್ನೂ ಬಿಟ್ಟರಲಾರದು. ಸೀಟಿಎಗ್ಗೆ ರವಿ ಮತ್ತು ಹಲ್ಲುಖಿ ಗೌಡರಂತಹ ಒಕ್ಕಲಿಗ-ಬಂಟರಿಗೆ ತಾವು ತಮ್ಮ ಸಮುದಾಯಗಳಿಗೆ ಎಂತಹ ಆಪತ್ತನ್ನು ತರುತ್ತಿದ್ದೇವೆ ಎಂದು ಗೊತ್ತಿಲ್ಲ, ಆದರೆ ಅದೃಷ್ಟವಶಾತ್ ಹಿಂದೊಮ್ಮೆ ‘ಮಧ್ಯಾಹ್ನ ಬ್ರಾಹ್ಮಣ’ರಾಗುವುದರಲ್ಲಿ ತೃಪ್ತಿ ಕಾಣುತ್ತಿದ್ದ ಬಾಲಗಂಗಾಧರಸ್ವಾಮಿಗಾದರೂ ಇತ್ತೀಚೆಗೆ ಜ್ಞಾನೋದಯವಾಗಿರುವಂತಿದೆ. ಆದ್ದರಿಂದಲೇ ಅವರು ಹಿಂದೂತ್ವ ಫ್ಯಾಸಿಸ್ಟರು ಧರ್ಮದ ಹೆಸರಲ್ಲಿ ಹಣ ಸಂಗ್ರಹಿಸುವ ದಂಧೆ ಶುರು ಹಚ್ಚಿಕೊಂಡಿದ್ದಾರೆ ಎಂದು ಗುಡುಗಿದ್ದಾರೆ.

ಎಲ್ಲ ಬಗೆಯ ಶೋಷಣೆ, ದಮನ ಮತ್ತು ದಬ್ಬಾಳಿಕೆಗಳನ್ನು ವಿರೋಧಿಸುತ್ತಲೇ ಬಂದಿರುವ ‘ಲಂಕೇಶ್’ ವಾರಪತ್ರಿಕೆ ಇವೆಲ್ಲವನ್ನು ಪ್ರತಿಭಟಿಸುತ್ತದೆ. ಯಾಕೆಂದರೆ ಈ ಭಾರತ, ಈ ಕರ್ನಾಟಕ ಯಾವುದೇ ಪ್ರಜಾಪ್ರಭುತ್ವ ವಿರೋಧಿಗಳದ್ದಲ್ಲ, ಫ್ಯಾಸಿಸ್ಟರದ್ದಲ್ಲ. ಬದಲಾಗಿ ಇದು ಕುವೆಂಪು, ಶಿಶುನಾಳ, ಬಸವಣ್ಣ, ಲಂಕೇಶರ ಕರ್ನಾಟಕ. ಇವರೆಲ್ಲರ ಅನುಯಾಯಿಗಳ ರಾಜ್ಯ. “ಇವನಾರವ, ಇವನಾರವ ಎಂದೆನಿಸದಿರಯ್ಯ ಇವ ನಮ್ಮವ, ಇವ ನಮ್ಮವ ಎನಿಸಯ್ಯ” ಎಂಬ ಸಹಬಾಳ್ವೆ, ಸಹಮತ, ಸೌಹಾರ್ದವನ್ನು ಬಯಸುವವರ ರಾಜ್ಯವಿದು.

ಸದ್ಯದಲ್ಲೇ ಚುನಾವಣೆಗಳು ನಡೆಯಲಿವೆ. ಅದು ಕೇವಲ ಕಾಂಗ್ರೆಸ್, ಜನತಾದಳ ಮತ್ತು ಬಿಜೆಪಿ ಪಕ್ಷಗಳಿಗೆ ಸಂಬಂಧಪಟ್ಟ ಪ್ರಕ್ರಿಯೆಯಲ್ಲ, ಬದಲಾಗಿ ನಾಳೆ ನಮ್ಮೆಲ್ಲರ ಬದುಕಿನ ದಿಕ್ಕನ್ನು ನಿರ್ಧರಿಸುವ ಪ್ರಕ್ರಿಯೆ. ಆದ್ದರಿಂದ ಫ್ಯಾಸಿಸ್ಟರ ಪಕ್ಷವಾದ ಬಿಜೆಪಿಯನ್ನು ಸೋಲಿಸಲು ನಮ್ಮ ಕೈಲಾದಷ್ಟು ಪ್ರಯತ್ನಿಸಬೇಕಿದೆ.

ಆ ಪ್ರಯತ್ನದಲ್ಲಿ ನೀವೂ ಸೇರಿರುತ್ತೀರಿ ಎಂಬ ಆಶೆಯದೊಂದಿಗೆ... ■



ಪರಿವಿಡಿ

ಲೇಖನಗಳು

ಕತೆ

ವಿಡಂಬನೆ

ಕಾವ್ಯ

ಸಿನಿಮಾ

ವಿಮರ್ಶೆ

ಬೆಂಗಳೂರಿನ ಬಡ ಮುಸ್ಲಿಮರ ಶನಿ
ಕ್ವೆಸ್ಟ್ ಡಾಟ್‌ನೆಟ್ ಹಗಲು ದರೋಡೆ

ಡೆಬ್ಬಿಂಗ್ ರಾಣಿಯರಾದ ಅನಿತಾ, ವಿಶ್ವಭಾರತಿ, ವಿನಿವಿಂಕ್ ಶಾಸ್ತ್ರಿ, ಐಶ್ವರ್ಯಾ ಫೈನಾನ್ಸ್, ಜಿವಿಎಸ್ ನಿಧಿ ಇತ್ಯಾದಿಯಾಗಿ ಬೆಂಗಳೂರಿಗೆ ಟೋಪಿ ಹಾಕಿ ಮಾಯವಾದ ಬ್ಲೇಡ್ ಕಂಪನಿಗಳು ಒಂದಾ ಎರಡಾ?

ಇಷ್ಟಾಗ್ಯೂ, ಕ್ವೆಸ್ಟ್‌ಡಾಟ್ ನೆಟ್ ಹಾಡುಹಗಲೇ ಸಹಸ್ರಾರು ಬಡ ಬೆಂಗಳೂರಿಗರಿಗೆ ನಾಮ ತಿಕ್ಕುತ್ತದೆಯೆಂದರೆ ಏನರ್ಥ? ಆಯಾ ಪೊಲೀಸ್ ಠಾಣೆಗಳಲ್ಲೇ ಈ ಥರದ ವಂಚನೆಯ ಮೇಲೆ ಕಣ್ಣಿಡುವುದಕ್ಕೆಂದು ಪ್ರತ್ಯೇಕ ವಿಭಾಗಗಳಿವೆ. ಸಿಒಡಿಯಲ್ಲೇ ವಿಶೇಷ ಫ್ರಾಡ್ ಸ್ಕ್ವಾಡ್ ಇದೆ. ಇನ್ನು ಸಿಸಿಬಿಯ ಫ್ರಾಡ್ ಸೆಕ್ಷನ್ ಈ ಥರದ ವಂಚಕ ಜಾಲಗಳ ಮೇಲೆ ನಿಗಾ ಇಡುವುದಕ್ಕೆಂದೇ ಸೃಷ್ಟಿಯಾದ ಸಂಸ್ಥೆ. ಇಷ್ಟೆಲ್ಲ ಪೊಲೀಸ್ ವಿಭಾಗಗಳಿದ್ದೂ ಕ್ವೆಸ್ಟ್ ಡಾಟ್ ನೆಟ್‌ನ ವಂಚನೆ ಮಾತ್ರ ಏಕೆ ಗೊತ್ತಾಗಲಿಲ್ಲ?

ಇರಾನ್, ಅಫಘಾನಿಸ್ತಾನದಲ್ಲೂ ವಂಚಿಸಿ

ಕ್ವೆಸ್ಟ್ ಡಾಟ್ ನೆಟ್ ಕೇವಲ ಬೆಂಗಳೂರಿನಲ್ಲಷ್ಟೇ ಮುಂಡಾಯಿಸಿಕೊಂಡಿದ್ದ ಕಂಪೆನಿಯೇನಲ್ಲ. ಇದರ ಹೆಡ್ಡಾಫೀಸೇ ಹಾಂಕಾಂಗ್ ನಲ್ಲಿದೆಯಂತೆ. ವಿಜಯ ಈಶ್ವರನ್ ಎಂಬ ಮಲೇಷಿಯನ್ ಮೂಲದ ಎಲ್‌ಟಿಟಿಇ ಬೆಂಬಲಿಗನೊಬ್ಬ ಇಲ್ಲಿಗೆ ನಾಲ್ಕು ವರ್ಷದ ಹಿಂದೆ ಇದನ್ನು ಹುಟ್ಟಿ ಹಾಕಿ ಮಲೇಷಿಯನ್ ಪೊಲೀಸರಿಂದ ಅರೆಸ್ಟಾಗಿದ್ದ. ಆನಂತರ ಚೀನಾ, ಸಿಂಗಾಪುರ, ಜರ್ಮನಿಯಲ್ಲೂ ಈ ಥರದ ಕಾಯಿನ್ ಪೋಟೋ ತೋರಿಸಿ ಮನಸ್ಸೀಂ ಹೆಸರಲ್ಲಿ ದುಡ್ಡೆತ್ತಲು ಹೋಗಿ ಪೊಲೀಸ್ ವಿಚಾರಣೆಗೀಡಾಗಿದ್ದ. ಆನಂತರ ವ್ಯಾಟಿಕನ್‌ಗೆ ಹೋಗಿ ಪೋಪ್ ಬೆನೆಡಿಕ್ಟ್‌ರ ಕಾಯಿನ್ ಮಾಡುತ್ತೇನೆಂದ. ಫುಟ್‌ಬಾಲ್ ಸ್ಟಾರ್ ರೋನಾಲ್ಡಿನೋ ಚಿತ್ರವಿದ್ದ ಕಾಯಿನ್ ಕೂಡ ಮಾಡಿದ್ದ. ಪೋಪ್, ರೋನಾಲ್ಡಿನೋ ಜೊತೆ ನಿಂತು ಪೋಟೋ ಕೂಡ ತೆಗೆಸಿಕೊಂಡ. ಇದನ್ನೇ ಬಂಡವಾಳವಾಗಿಟ್ಟುಕೊಂಡು ಮುಂದೆ ಅಪಘಾನಿಸ್ತಾನಕ್ಕೆ ಕಾಲಿಟ್ಟ ವಿಜಯ್ ಈಶ್ವರನ್ ಅಲ್ಲಿ ಮೆಕ್ಕಾದ 'ಕಾಬಾ' ಮುದ್ರೆಯ ಪೋಟೋ ತೋರಿಸಿಯೇ ಸಾವಿರಾರು ಜನ ಅಪಘನ್ನರಿಗೆ ಟೋಪಿಯಿಟ್ಟ. ಯಾವತ್ತು ಅಪಘನ್ ಪೊಲೀಸರು ಬೆನ್ನಿಗೆ ಬಿದ್ದರೋ ಮುಂದೆ ನೇಪಾಳಕ್ಕೆ ಬಂದ. ಆನಂತರ ಭೂತಾನ್, ಶ್ರೀಲಂಕಾ, ಇರಾನ್, ಫಿಲಿಫೈನ್ಸ್ ಮತ್ತು ಯುಎಇನಂಥ ದೇಶಗಳಲ್ಲೂ ಕಾಬಾ ಮುದ್ರೆ, ಬುದ್ಧನ ನಾಣ್ಯ, ಡೈಮಂಡ್ ರಿಂಗ್‌ಗಳ ಪೋಟೋ ತೋರಿಸಿಯೇ ಸಹಸ್ರಾರು ಜನರನ್ನು ಮುಂಡಾಯಿಸಿ ನಾಪತ್ತೆಯಾದ.

ಆಯಾ ದೇಶಕ್ಕೆ ತಕ್ಕಂತೆ ಚಿನ್ನದ ನಾಣ್ಯಗಳನ್ನು ಮಾಡಿ ಅಲ್ಲಿನ ಪ್ರಭಾವಿಗಳನ್ನೇ ತನ್ನ ಏಜೆಂಟರನ್ನಾಗಿ ಮಾಡಿಕೊಂಡು ದೋಚುವುದು ವಿಜಯ್ ಈಶ್ವರನ್‌ನ ಹುಟ್ಟುಗುಣ. ಚೆನ್ನೈನ ಪುಷ್ಪಂ ಅಪ್ಪಲನಾಯ್ಡು ಈತನ ದಕ್ಷಿಣ ಭಾರತದ ಏಜೆಂಟ್. ಒಂದಾನೊಂದು ಕಾಲಕ್ಕೆ ಈಕೆ ಮಾಡೆಲಿಂಗ್ ನಲ್ಲಿದ್ದು ಕ್ರಮೇಣ ಸಿಂಗಾಪುರ, ಮಲೇಷಿಯಾ ಸುತ್ತಾಟಕ್ಕೆ ಇಳಿದವಳು. ಈಕೆಯೇ ಹೈದ್ರಾಬಾದಿನ ಪದ್ಮಾ ಎಂಬ ಮತ್ತೊಬ್ಬ ಮಾಜಿ ಮಾಡೆಲ್ ಕಂ ಬ್ಯೂಟಿಷಿಯನ್‌ಳನ್ನು ಹಿಡಿದು ಹಾಕಿ ಆಕೆಯನ್ನು ಆಂಧ್ರದ ಏಜೆಂಟ್ ಮಾಡಿದ್ದಾಳೆ. ಹಾಗೇ ಕುಲ್ಸುಂ ನಾಝುರ್‌ಳನ್ನು ಪುಷ್ಪಂ ನಾಯ್ಡುಗೆ ಪರಿಚಯಿಸಿದ್ದು ಕೂಡ ಓರ್ವ ಹಳೇ ಮಾಡೆಲ್. ಹಿಂದೊಮ್ಮೆ ದಿ ಕ್ಲಬ್‌ನಲ್ಲಿ ಮಾಡೆಲಿಂಗ್ ಟ್ರೈನಿಂಗ್ ನಡೆಸಿಕೊಂಡಿದ್ದ ಕುಲ್ಸುಂ ನಾಝುರ್ ಬಳಿ ತರಬೇತಿಗೆ ಬಂದಿದ್ದ ಮಾಡೆಲ್ ಹುಡುಗಿಯೊಬ್ಬಳು ಪುಷ್ಪಂ ಅಪ್ಪಲನಾಯ್ಡುವನ್ನು ಪರಿಚಯಿಸಿದ್ದೇ ತಡ ಕುಲ್ಸುಮ್ ಬೆಂಗಳೂರಿನಲ್ಲಿ ಕ್ವೆಸ್ಟ್ ನೆಟ್ ದಂಧೆ ಶುರು ಹಚ್ಚಿಕೊಂಡಿದ್ದಾಳೆ. ಈಕೆಯ ಗಂಡ ಮಹಮ್ಮದ್ ಜಾನ್ ಕೂಡ ಪತ್ನಿಯ ವಂಚನೆಗೆ ಕೈಜೋಡಿಸಿದ್ದಾನೆ. ಬಹಿರಂಗವಾಗೇ ರಾಜ್ ನಾಣ್ಯ, ಬಸವಣ್ಣನ ಕಾಯಿನ್ ಮಾರಿಕೊಂಡಾಗಲೂ, ಅನೇಕ ಪೊಲೀಸ್ ಅಧಿಕಾರಿಗಳೇ ದುಡ್ಡು ಹಾಕಿದ ಮೇಲೂ ಇದೊಂದು ಮೋಸದ ಜಾಲವೆಂಬುದು ಸರ್ಕಾರಕ್ಕಾಗಲಿ ಪೊಲೀಸರಿಗಾಗಲಿ ಗೊತ್ತೇ ಆಗಿಲ್ಲ ಎಂದರೆ ಏನರ್ಥ? ಕನಿಷ್ಠ ಇರಾನ್, ಅಪಘಾನಿಸ್ತಾನದ ಪೊಲೀಸ್ ವಾಂಟೆಡ್ ಲಿಸ್ಟ್ ನೋಡಿಬಿಟ್ಟರೇನೇ ಹಣೆಬರಹ ಗೊತ್ತಾಗುತ್ತಿತ್ತು.

ಸಿಸಿಬಿ, ಸಿಒಡಿಯ ಫ್ರಾಡ್ ಸ್ಕ್ವಾಡುಗಳೆಲ್ಲ ಯಾವ ಪುರುಷಾರ್ಥಕ್ಕೆ? ವಿನಿವಿಂಕ್ ವಂಚನೆಯ ನಂತರವೂ ಸರ್ಕಾರಕ್ಕೆ ಬುದ್ಧಿ ಬಂದಿಲ್ಲವೆಂದರೆ ಯಾರೋ ಐಟಿ ಉದ್ಯೋಗಿಯೊಬ್ಬ ಕನ್ನಡಿಗರನ್ನು ಗುಗ್ಗುಗಳು ಎಂದಿದ್ದರಲ್ಲಿ ತಪ್ಪೇನಿದೆ? ರಾತ್ರಿ ಕಂಡ ಬಾವಿಯಲ್ಲಿ ಹಗಲಿಗೆ ಬೀಳೋದು ಅಂದರೆ ಇದೇನಾ?


ವಿಜಯ್ ಈಶ್ವರನ್

ವಿನಿವಿಂಕ್‌ನಷ್ಟು ಅಗಾಧವಲ್ಲದಿದ್ದರೂ ಬೆಂಗಳೂರಿನ ಮಟ್ಟಿಗಿದ್ದು ಮಹಾ ವಂಚನೆಯೇ!

ಬಲಿಬಿದ್ದವರ ಪೈಕಿ ಬಹುಸಂಖ್ಯಾತರು ಮುಸ್ಲಿಮರು. ಅದೂ ತಳ್ಳುಗಾಡಿಯಲ್ಲಿ ವ್ಯಾಪಾರ ಮಾಡಿಯೋ, ಹೊಟ್ಟೆಬಟ್ಟೆ ಕಟ್ಟಿಯೋ, ಜೀವನಪರ್ಯಂತ ಕೂಡಿಟ್ಟಿದ್ದನ್ನೋ ತಂದು ಕುಲ್ಸುಮ್ ನಾಜರ್ ಎಂಬಾಕೆಯ ಮಡಿಲಿಗಿಟ್ಟ ಐದು ಸಾವಿರಕ್ಕೂ ಹೆಚ್ಚು ಬೆಂಗಳೂರಿನ ಬಡ ಮುಸ್ಲಿಮರಿಂದು ಹೈಗ್ರೌಂಡ್ಸ್ ಪೊಲೀಸ್ ಠಾಣೆಯ ಮುಂದೆ ನಿಂತು ಎದೆ ಬಡಿದುಕೊಳ್ಳುತ್ತಿದ್ದಾರೆ!

ಕಳೆಕೊಂಡ ದುಡ್ಡು ಒಂದೋ ಎರಡೋ ಸಾವಿರವಾಗಿದ್ದರೆ ಆ ಮಾತು ಬೇರೆ. ಐದೋ ಹತ್ತೋ ಸಾವಿರವಾಗಿದ್ದರೂ ತಾಳಿಕೊಳ್ಳುತ್ತಿದ್ದರೇನೊ.

ಹೀಗೆ ಪ್ರತೀ ಬಡ ಮುಸ್ಲಿಮನ ತಲೆಗೆ ಎಳೆದ ಚಪ್ಪಡಿಕಲ್ಲಿನ ಮೊತ್ತವೇ ಮೂವತ್ತು ಸಾವಿರ!

ಅವಳ ಹೆಸರು ಕುಲ್ಸುಮ್ ನಾಜರ್! ಮೈಸೂರು ರಸ್ತೆಯ 'ದಿ ಕ್ಲಬ್' ಯಾರಿಗೆ ಗೊತ್ತಿಲ್ಲ? ಈ ಕುಲ್ಸುಮ್ ನಾಜರ್ ಬೇರೆ ಯಾರೂ ಅಲ್ಲ; ದಿ ಕ್ಲಬ್‌ನ ಧಣಿ ನಾಜರ್‌ನ ಏಕೈಕ ಪುತ್ರಿ!

ಕಟ್ಟುತ್ತಾ ಹೋದರೆ ಸರಣಿಯ ಮೊದಲ ವ್ಯಕ್ತಿಯ ಖಾತೆಗೆ ವಾರಕ್ಕೆ 11,500 ರೂಪಾಯಿ ಸಿಗುತ್ತದೆ!

ಜೊತೆಗೆ ನಾಲ್ಕು ತಿಂಗಳಾದ ಮೇಲೆ ಕ್ವೆಸ್ಟ್‌ನೆಟ್ ಕಂಪೆನಿ ಮೊದಲ ವ್ಯಕ್ತಿಗೆ ಮೆಕ್ಕಾದ 'ಕಾಬಾ' ಮುದ್ರೆಯುಳ್ಳ ಚಿನ್ನದ ನಾಣ್ಯವನ್ನು ಉಚಿತವಾಗಿ ಕೊಡುತ್ತದೆ. ಮೆಕ್ಕಾದ 'ಕಾಬಾ' ಲಾಂಛನದ ಗೋಲ್ಡ್ ಕಾಯಿನ್ ಮಾತ್ರವಲ್ಲದೇ ವಜ್ರದ ಉಂಗುರ, ವರನಟ ರಾಜ್‌ಕುಮಾರ್ ಮುಖಚಿತ್ರವುಳ್ಳ ಚಿನ್ನದ ನಾಣ್ಯ ಅಥವಾ ಕ್ರಾಂತಿಯೋಗಿ ಬಸವಣ್ಣನ ಅಚ್ಚೊತ್ತುಳ್ಳ ಚಿನ್ನದ ಬಿಲ್ಲೆ; ಹೀಗೆ ಯಾವುದು ಇಷ್ಟವೋ ಅದನ್ನು ಭಕ್ಷೀಸಾಗಿ ಪಡೆಯಬಹುದು ಮತ್ತು ಅಂಥ ಚಿನ್ನದ ನಾಣ್ಯದ ಬೆಲೆಯೇ 17 ಲಕ್ಷ ರೂಪಾಯಿ!

ಇದ್ಯಾವುದೂ ಬೇಡವೆಂದರೆ ಚಿನ್ನದ ವಾಚ್ ಕೂಡ ಲಭ್ಯ. ವಾರಕ್ಕೆ ಖಾತೆಗೆ ಬಂದು ಬೀಳುವ ಹನ್ನೊಂದೂವರೆ ಸಾವಿರ ರೂಪಾಯಿಯ ದುಡ್ಡು ಜೊತೆಗೆ ನಾಲ್ಕು ತಿಂಗಳಾದ ಮೇಲೆ 17 ಲಕ್ಷದ ಅತ್ಯಮೂಲ್ಯ ಗಿಫ್ಟು; ಯಾರಿಗುಂಟು ಯಾರಿಗಿಲ್ಲ?

ನಂಬಿದವರೆಲ್ಲ ಸಾಲ ಎತ್ತೋ, ಗಿರಿವಿಗಿಟ್ಟೋ ತಂದೂತಂದೂ ಕುಲ್ಸುಮ್ ಉಡಿಗೆ ಸುರಿದಿದ್ದಾರೆ. ಸಾಲದ್ದಕ್ಕೆ ತಮ್ಮ ಸ್ನೇಹಿತರು ಸಂಬಂಧಿಕರನ್ನೆಲ್ಲ ಕಾಡಿಬೇಡಿ ದುಡ್ಡು



ಬೆಂಗಳೂರಿನ ಐದು ಸಾವಿರಕ್ಕೂ ಅಧಿಕ ಮುಸ್ಲಿಮರಿಗೆ ತಲಾ ಮೂವತ್ತು ಸಾವಿರದಂತೆ ನಾಮ ಎಳೆದ ಈಕೆಯನ್ನು ಸದ್ಯ ಹೈಗ್ರೌಂಡ್ಸ್, ಭಾರತಿನಗರ ಮತ್ತು ಸಿಸಿಬಿಯ ಪೊಲೀಸರು ಅಹೋರಾತ್ರಿ ಹುಡುಕುತ್ತಿದ್ದಾರೆ. ಕುಲ್ಸುಮ್‌ಳನ್ನು ಹುಡುಕಿಕೊಂಡು ಹೈಗ್ರೌಂಡ್ಸ್ ಇನ್ಸ್‌ಪೆಕ್ಟರ್ ಮೋಕೇಶ್ವರ್ ಚೆನ್ನೈಗೆ ಹೋಗಿದ್ದಾರೆ. ಬಹುಶಃ ಆಕೆ ಸಿಗಲಿಕ್ಕಿಲ್ಲ, ಆಕೆಯ ಬಾಸ್ ಪುಷ್ಪಂ ಅಪ್ಪಲ ನಾಯ್ಡು ಎಂಬಾಕೆ ಈಗಾಗಲೇ ಸಿಂಗಾಪೂರ್ ಸೇರಿಕೊಂಡಾಗಿದೆ. ಚೆನ್ನೈ, ಹೈದ್ರಾಬಾದ್‌ನ ಮಾತು ಒತ್ತಟ್ಟಿಗಿರಲಿ; ಬೆಂಗಳೂರೊಂದರಲ್ಲೇ quest.net (ಕ್ವೆಸ್ಟ್ ಡಾಟ್ ನೆಟ್) ಎಂಬ ವಂಚಕ ಕಂಪೆನಿ ಇಪ್ಪತ್ತು ಕೋಟಿಗೂ ದೊಡ್ಡ ಮೊತ್ತದ ಹಗಲುದರೋಡೆ ನಡೆಸಿ ಕಂಬಿಕಿತ್ತಿದೆ.

ಈ ಥರದ ವಂಚನೆ ಬೆಂಗಳೂರಿಗೆ ಹೊಸದೇನಲ್ಲ, ಎಂತೆಂಥದೋ ಮನಿ ಚೈನು, ನೆಟ್‌ವರ್ಕ್ ಮಾರ್ಕೆಟಿಂಗು, ಮನಿ ಡಬ್ಲಿಂಗು ಇತ್ಯಾದಿಗಳ ಹೆಸರಲ್ಲಿ ಬೆಂಗಳೂರನ್ನು ದೋಚಿ ಪರಾರಿಯಾದ ಖದೀಮರ ದೊಡ್ಡ ಪಟ್ಟಿಯೇ ಇದೆ. ಆದರೆ ಇದೆಲ್ಲ ಬೆಂಗಳೂರಿನ ಮುಸ್ಲಿಮರಿಗೆಲ್ಲಿ ಗೊತ್ತಾಗಬೇಕು?

ಇದನ್ನೇ ಲಾಭ ಮಾಡಿಕೊಂಡವಳು ಕುಲ್ಸುಮ್ ನಾಜರ್. ಈ ಹಿಂದೆ 'ದಿ ಕ್ಲಬ್'ನಲ್ಲಿ ಡಿಸ್ಕೋ ಡ್ಯಾನ್ಸ್, ರೇನ್ ಡ್ಯಾನ್ಸ್, ಫ್ಯಾಷನ್ ಷೋ ಇತ್ಯಾದಿ ಮಾಡಿಕೊಂಡಿದ್ದ ಕುಲ್ಸುಮ್‌ಗೆ ಬೆಂಗಳೂರಿನ ಶ್ರೀಮಂತ ಮುಸ್ಲಿಂ ಹುಡುಗರ ಲಿಂಕಂತೂ ಇದ್ದೇ ಇತ್ತು, ಈ ಹಂತದಲ್ಲೇ ಆಕೆಗೆ ಚೆನ್ನೈನ ಪುಷ್ಪಂ ಅಪ್ಪಲ ನಾಯ್ಡು ಎಂಬ ವಂಚಕಿ ಗಂಟುಬಿದ್ದು ಕ್ವೆಸ್ಟ್ ಡಾಟ್‌ನೆಟ್‌ನ ಐಡಿಯಾ ಕೊಟ್ಟಿದ್ದಾಳೆ.

ಈ ಕ್ವೆಸ್ಟ್ ಡಾಟ್ ನೆಟ್ ಎಂಬುದೇ ಭೋಗಸ್ ಕಂಪೆನಿ. ಕನ್ನಿಂಗ್‌ಹ್ಯಾಂ ರಸ್ತೆಯ ಪ್ರತಿಷ್ಠಿತ ಪ್ರೆಸ್ಟೀಜ್ ಸೆಂಟರ್ ಪಾಯಿಂಟ್ ಕಾಂಪ್ಲೆಕ್ಸ್‌ನಲ್ಲಿ ಇಲ್ಲಿಗೆ ವರ್ಷದ ಹಿಂದೆ ಕ್ವೆಸ್ಟ್‌ಡಾಟ್ ನೆಟ್‌ನ ಕಚೇರಿ ಅದ್ಧೂರಿಯಾಗೇ ಶುರುವಾಗಿದೆ. ಆವತ್ತು ಒಂದಷ್ಟು ಮಾಡೆಲ್ ಹುಡುಗಿಯರನ್ನು ಕರೆಸಿ ಫ್ಯಾಷನ್ ಷೋ ಮಾಡಿಸಿದ್ದಾಳೆ ಕುಲ್ಸುಮ್. ದಂಧೆಯ ತಿರುಳಿಷ್ಟೆ-ಇದಕ್ಕೆ ಸದಸ್ಯನಾಗುವವನು ಮೊದಲು ಮೂವತ್ತು ಸಾವಿರ ಕಟ್ಟಬೇಕು. ಜೊತೆಗೆ ಇನ್ನಿಬ್ಬರಿಂದಲೂ ಇದೇ ರೀತಿ ಮೂವತ್ತು ಸಾವಿರಕ್ಕೆ ಮೆಂಬರ್ ಮಾಡಿಸಬೇಕು. ಆ ಇಬ್ಬರೂ ತಲಾ ಇನ್ನಿಬ್ಬರಂತೆ, ಈ ನಾಲ್ವರೂ ತಲಾ ಇನ್ನಿಬ್ಬರಂತೆ; ಹೀಗೆ ಹನ್ನೊಂದನೇ ಮೆಟ್ಟಲಿನ ತನಕ ಸಾವಿರದ ಇಪ್ಪತ್ನಾಲ್ಕು ಮಂದಿ ತಲಾ ಮೂವತ್ತು ಸಾವಿರದಂತೆ ನಿರಂತರವಾಗಿ ಕ್ವೆಸ್ಟ್‌ನೆಟ್ ಕಂಪೆನಿಗೆ ದುಡ್ಡು ಹಾಕಿಸಿದ್ದಾರೆ. ಹೀಗೆ ವ್ಯಕ್ತಿಯೊಬ್ಬ ಹನ್ನೊಂದು ಹಂತದಲ್ಲಿ ಸಾವಿರದ ಇಪ್ಪತ್ನಾಲ್ಕು ಮಂದಿಯಿಂದ ತಲಾ ಮೂವತ್ತು ಸಾವಿರದಂತೆ ಒಟ್ಟು ಮೂರು ಕೋಟಿ ಏಳು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಯ ಬೃಹತ್ ಮೊತ್ತವನ್ನು ಕ್ವೆಸ್ಟ್ ನೆಟ್ ಕಂಪೆನಿಗೆ ಸಂಗ್ರಹಿಸಿಕೊಟ್ಟರೆ ಆತನಿಗೆ ವಾರಕ್ಕೆ ಹನ್ನೊಂದೂವರೆ ಸಾವಿರ ಕೊಡುವುದು ಯಾವ ಮಹಾ? ಜೊತೆಗೆ 17 ಲಕ್ಷದ ಭಕ್ಷೀಸು ಕೊಡುವುದು ಯಾವ ಕಷ್ಟ?


ಶ್ರೀಕಾಂತ್

ಆದರೆ ಕುಲ್ಸುಮ್ ಎಂಥಾ ಪಾಖಂಡಿ ಹೆಂಗಸೆಂದರೆ ಯಾರೆಲ್ಲ ಈ ರೀತಿ ದುಡ್ಡು ತರಿಸಿ ಸುರಿದಿದ್ದರೋ ಅವರ್‍ಯಾರಿಗೂ ನಾಲ್ಕು ತಿಂಗಳ ನಂತರವೂ ಕೊಡಬೇಕಿದ್ದ ಕಮಿಷನ್ ಕೊಡಲಿಲ್ಲ, ಇನ್ನೂ ಡೈಮಂಡ್ ರಿಂಗ್, ಗೋಲ್ಡ್ ಕಾಯಿನ್, ಚಿನ್ನದ ಕೈಗಡಿಯಾರದ ಕತೆಯಿತ್ತಲ್ಲ ಅದಿನ್ನೆಂಥಾ ಮೋಸವೆಂದರೆ; ಆ ಥರದ ಚಿನ್ನದ ವಾಚ್ ಅನ್ನು ಕಂಪ್ಯೂಟರ್‌ನಲ್ಲಷ್ಟೇ ತೋರಿಸುತ್ತಾಳೆ. ಅದಕ್ಕೊಂದು ನಂಬರ್ ಕೂಡ ಕೊಡುತ್ತಾಳೆ. ಅದನ್ನು ಇಂಟರ್‌ನೆಟ್‌ನಲ್ಲಿ ಯಾರಿಗೆ ಬೇಕಾದರೂ ಇಂಟರ್‌ನೆಟ್‌ನಲ್ಲೇ ಮಾರಿಕೊಳ್ಳಬೇಕಂತೆ. ದುಡ್ಡು ಕೂಡ ನಗದಾಗಿ ಸಿಕ್ಕುವುದಿಲ್ಲ, ಬದಲಾಗಿ ಮಾರಿದಾತನ ಕಂಪ್ಯೂಟರ್ ಅಕೌಂಟಗೆ ಬಂದು ಬೀಳುತ್ತದೆ!

ಅಂದರೆ ಕಂಪ್ಯೂಟರ್‌ನಲ್ಲಿ ನೋಡಿದ ಡೈಮಂಡ್ ರಿಂಗ್‌ನ ಫೋಟೋ ಅನ್ನು ಇಂಟರ್‌ನೆಟ್‌ನಲ್ಲೇ ಇನ್ನಾರಿಗೋ ಮಾರಿ ದುಡ್ಡನ್ನೂ ಅರ್ಥಾತ್ ಆ ಮೊತ್ತದ ಅಂಕಿಗಳನ್ನು ಇಂಟರ್‌ನೆಟ್ ಮೂಲಕ ತನ್ನ ಅಕೌಂಟಗೆ ಜಮೆ ಮಾಡಿಕೊಳ್ಳುವುದು!


ಪುಷ್ಪಂ ನಾಯ್ಡು

ಇಲ್ಲಿ ಗಳಿಸಿದ ದುಡ್ಡು ಇಂಟರ್‌ನೆಟ್‌ನ ಕ್ವೆಸ್ಟ್‌ನೆಟ್‌ನ ಅಕೌಂಟನಲ್ಲಿರುತ್ತದೆಯೇ ಹೊರತು ಭೌತಿಕವಾಗಿ ಕೈಗೆಟುಕುವುದಿಲ್ಲ, ಹಾಗೊಮ್ಮೆ ದುಡ್ಡು ಬೇಡ ಗಿಫ್ಟೇ ಬೇಕು ಅಂತ ಹಠ ಹಿಡಿದರೆನ್ನಿ; ಕೇಳಿದಾತನ ಮನೆ ವಿಳಾಸಕ್ಕೊಂದು ಪಾರ್ಸಲ್ ಬಾಕ್ಸ್ ಬರುತ್ತದೆ. ಅದರಲ್ಲಿ ಚಿನ್ನದ ಬಣ್ಣದ ವಾಚೋ ಅಥವಾ ವಜ್ರದಂತೆ ಕಾಣುವ ಉಂಗುರವೋ ಖಂಡಿತ ಇರುತ್ತದೆ. ಅದನ್ನೇನಾದರೂ ಗಿರವಿ ಅಂಗಡಿಗೋ ಮಾರ್ವಾಡಿ ಅಂಗಡಿಗೋ ಒಯ್ದು ಹದಿನೇಳು ಲಕ್ಷ ರೂಪಾಯಿ ಕೊಡು ಎಂದರೆ ಮಾರ್ವಾಡಿ ಅದನ್ನು ಮುಖಕ್ಕೆಸೆದು ಕ್ಯಾಕರಿಸಿ ಉಗಿಯುತ್ತಾನೆ. 'ಹೆಚ್ಚೆಂದರೆ ಸಾವಿರದೈನೂರು ರೂಪಾಯಿ ಕೊಡ್ತೀನಿ ಬೇಕಿದ್ದರೆ ತಗೊಂಡು ಹೋಗು' ಎನ್ನುತ್ತಾನೆ ಮಾರ್ವಾಡಿ!

ಅಲ್ಲಿಗೆ ತಾನೆಂಥ ಹಳ್ಳಕ್ಕೆ ಬಿದ್ದೆನೆಂಬುದು ಕ್ವೆಸ್ಟ್ ನೆಟ್ ಗಿರಾಕಿಗೆ ಗೊತ್ತಾಗಿರುತ್ತದೆ. ಕೇಳಲು ಹೋದರೆ ಕುಲ್ಸುಮ್ ಚೆನ್ನೈನ ಪುಷ್ಪಂ ನಾಯ್ಡು ಎಂಬಾಕೆಯ ಅಡ್ರೆಸ್ ಕೊಡುತ್ತಾಳೆ. ಈಕೆ ಕ್ವೆಸ್ಟ್‌ನೆಟ್‌ನ ಎಂಡಿಯಂತೆ. ಚೆನ್ನೈನ ಚೆಟ್‌ಪೇಟೆ ಏರಿಯಾದ ನಿಕೋಲಾಸ್ ರಸ್ತೆಯ 'ದಿ ರೈನ್ ಟ್ರೀ ಪ್ಲೇಸ್' ಎಂಬ ಅದ್ಧೂರಿಯ ಕಾಂಪ್ಲೆಕ್ಸ್‌ನಲ್ಲಿ ಈಕೆಯ ಆಫೀಸಿದೆ. ಅದಕ್ಕೂ ಕ್ವೆಸ್ಟ್ ನೆಟ್ ಎಂಬ ಬೋರ್ಡಿದೆ ನಿಜ. ಆದರೆ ಪುಷ್ಪಂ ನಾಯ್ಡು ಮಾತ್ರ ನಾಪತ್ತೆ. ಕೇಳಿದರೆ ಮಲೇಷಿಯಾದಲ್ಲಿದ್ದಾಳೆಂದು ಕಚೇರಿಯ ಬೌನ್ಸರ್‌ಗಳು ಗದರುತ್ತಾರೆ.

ಇನ್ನು ಬೆಂಗಳೂರಿಗೆ ವಾಪಸ್ಸು ಬಂದು ಕುಲ್ಸುಮ್‌ಳನ್ನು ಕೇಳಿದರೆ ಆಕೆ ಶ್ರೀಕಾಂತ್ ಎಂಬಾತನನ್ನು ತೋರಿಸಿ ಈತನೇ ಕಂಪೆನಿಯ ಬೆಂಗಳೂರು ಚೀಫ್ ಎನ್ನುತ್ತಾಳೆ. ಸತೀಶ್‌ಚಂದ್ರ ಮತ್ತು ಫರ್ನಾಂಡಿಸ್ ಎಂಬ ಇನ್ನಿಬ್ಬರು ಹರಾಮಿಗಳು ಬೆಂಗಳೂರಿನ ಬಡ ಮುಸ್ಲಿಮರಿಂದ ಕೋಟಿಗಟ್ಟಲೇ ದುಡ್ಡೆತ್ತಿದ್ದಾರೆ. ಈ ಪೈಕಿ ಶ್ರೀಕಾಂತ್ ಆಂಧ್ರದ ಚಿತ್ತೂರಿನ ವಂಚಕನಾದರೆ ಫರ್ನಾಂಡಿಸ್ ಕೇರಳದ ಖದೀಮ. ಸದ್ಯ ಹೈಗ್ರೌಂಡ್ಸ್ ಪೊಲೀಸರು ಶ್ರೀಕಾಂತ್ ಮತ್ತು ಫರ್ನಾಂಡಿಸ್‌ರನ್ನು ಹಿಡಿದು ಲಾಕಪ್ಪಿಗೆ ಹಾಕಿದ್ದಾರೆ. ಆದರೆ ಅವರಿಬ್ಬರೂ ಕೈ ತೋರಿಸುವುದು ಕುಲ್ಸುಮ್ ನಾಜರ್‌ಳತ್ತ!

ಹಾಗಂತ ಕುಲ್ಸುವ್ ಸಿಗಬೇಕಲ್ಲ, ಹೈಗ್ರೌಂಡ್ಸ್ ಇನ್ಸ್‌ಪೆಕ್ಟರ್ ಲೋಕೇಶ್ವರ್ ಆಕೆಯ ಮೊಬೈಲಿಗೆ ಫೋನ್ ಮಾಡಿದ್ದೇ ಕೊನೆ. ತಾನು ಚೆನ್ನೈನಲ್ಲಿದ್ದೇನೆ ಎಂದವಳು ಆನಂತರ ಏನಾದಳು, ಎಲ್ಲಿಗೆ ಹೋದಳೆಂಬುದೇ ನಿಗೂಢ. ಒಂದು ಮೂಲದ ಪ್ರಕಾರ ಆಕೆ ಕೂಡ ಮಲೇಷಿಯಾಕ್ಕೆ ಹಾರಿದ್ದಾಳೆ. ಇನ್ನೂ ಮೋಸವೆಂದರೆ ಕಟ್ಟಿದ ಮೂವತ್ತು ಸಾವಿರಕ್ಕೆ ಷೇರ್ ಹಣವೆಂದು ರಶೀದಿ ಕೊಡುವ ಬದಲು ಕುಲ್ಸುಮ್ ತನ್ನಿಂದ ಖರೀದಿಸಿದ ವಸ್ತುವಿಗೆಂದು ಕಳ್ಳ ರಶೀದಿ ಕೊಟ್ಟಿದ್ದಾಳೆ. ಅಂಥ ರಶೀದಿ ಹಿಡಿದು ಪೊಲೀಸರಿಗೆ ದೂರು ಕೊಡುವಂತಿಲ್ಲ, ಕೋರ್ಟಿಗೂ ಹೋಗುವಂತಿಲ್ಲ.

ಹೈಗ್ರೌಂಡ್ಸ್ ಠಾಣೆಯ ಮುಂದೆ ನಿಂತು ಎದೆಬಡಿದು ಕೊಳ್ಳುವುದು ಬಿಟ್ಟರೆ ಬೆಂಗಳೂರಿನ ಬಡ ಮುಸ್ಲಿಮರಿಗೆ ಸದ್ಯ ಬೇರೆ ದಾರಿಯೇ ಇಲ್ಲ. ಬಲಿಯಾದವರೆಲ್ಲ ನಿರ್ಗತಿಕ ಮುಸ್ಲಿಮರು. ಇಂಗ್ಲಿಷ್ ಗೊತ್ತಿಲ್ಲದವರು. ವಿನಿವಿಂಕ್ ಶಾಸ್ತ್ರಿಯನ್ನು ಜೈಲಿಗೆ ಹಾಕಬಹುದಾದರೆ ಚೆನ್ನೈನ ಪುಷ್ಪಂ ನಾಯ್ಡು ಮತ್ತು ಕುಲ್ಸುಮ್‌ಳನ್ನು ಜೈಲಿಗೆ ದಬ್ಬುವುದು ಯಾವ ಲೆಕ್ಕ? ಪೊಲೀಸರು ಮನಸ್ಸು ಮಾಡಬೇಕಷ್ಟೆ.

■ ರಾ. ಸೋಮನಾಥ್




ಅಣ್ಣಾವ್ರ ನಾಣ್ಯ ಮತ್ತು ಬಸವಣ್ಣನ ಕಾಯ್ನು

ಅಸಲಿಗೆ ಈ ಕ್ವೆಸ್ಟ್ ನೆಟ್ ಎಂಬುದೇ ದಗಲುಬಾಜಿ ದುಷ್ಟ ಕೂಟ. ಇಲ್ಲಿಗೆ ವರ್ಷದ ಹಿಂದೆ ಕೋರಮಂಗಲ ಸ್ಟೇಡಿಯಂನಲ್ಲಿ ವರನಟ ರಾಜ್ ಮುದ್ರೆಯುಳ್ಳ ಚಿನ್ನದ ನಾಣ್ಯವನ್ನು ಬಿಡುಗಡೆ ಮಾಡಿದ ಕ್ವೆಸ್ಟ್ ನೆಟ್ ಅದಕ್ಕೆಂದು ಪಾರ್ವತಮ್ಮ ರಾಜ್‌ಕುಮಾರ್, ಶಿವಣ್ಣ, ರಾಘವೇಂದ್ರ ಮತ್ತು ಪುನೀತ್‌ರನ್ನು ಬಳಸಿಕೊಂಡು ಭಾರೀ ಪ್ರಚಾರ ಗಿಟ್ಟಿಸಿತು. ತಲಾ ಮೂವತ್ತು ಸಾವಿರದಂತೆ ನೂರಾರು 'ರಾಜ್' ಮುದ್ರೆಗಳನ್ನು ಕೇವಲ ಅರ್ಧ ಗಂಟೆಯಲ್ಲಿ ಮಾರಿ ಹಾಕಿದ ಕುಲ್ಸುಮ್ ಅದೊಂದೇ ಬಾಬ್ತಿನಿಂದ ಮೂರು ಕೋಟಿ ಗಳಿಸಿದ್ದಳು.

ಆನಂತರ ಪ್ಯಾಲೇಸ್ ಗ್ರೌಂಡಿನಲ್ಲಿ ಬಸವಣ್ಣನ ಮುದ್ರೆಯುಳ್ಳ ಸಾವಿರಕ್ಕೂ ಅಧಿಕ ಚಿನ್ನದ ನಾಣ್ಯಗಳನ್ನು ಇದೇ ಕುಲ್ಸುಮ್ ಗ್ಯಾಂಗ್ ನಿಂತು ಮಾರಿತ್ತು. ಮುಗಿಬಿದ್ದ ಲಿಂಗಾಯತರು ಬಸವಣ್ಣನ ಮುದ್ರೆಗಳನ್ನು ಬ್ಲಾಕ್‌ನಲ್ಲಿ ಖರೀದಿಸಿದ್ದರು. ಇದು ಕ್ವೆಸ್ಟ್‌ನೆಟ್ ಖದೀಮರ ತಂತ್ರವಷ್ಟೇ. ಆನಂತರ ಪವಿತ್ರ ಮೆಕ್ಕಾದ 'ಕಾಬಾ' ಚಿತ್ರವುಳ್ಳ ನಾಣ್ಯವನ್ನು ಮುಂದಿಟ್ಟುಕೊಂಡು ಬಡ ಮುಸ್ಲಿಮರ ಜೋಳಿಗೆಗೆ ಕೈಹಾಕಿದ್ದಾರೆ. ಈ ಬಾರಿ ನಾಣ್ಯದ ಬದಲಿಗೆ ಅದರ ಫೋಟೋ ತೋರಿಸಿ ಅದಕ್ಕೊಂದು ನಂಬರ್ ಕೊಟ್ಟು ಅದನ್ನು ಇಂಟರ್‌ನೆಟ್‌ನಲ್ಲೇ ಮಾರಿದಂತೆ ಮಾಡಿ ವಂಚಿಸುವುದು ವಂಚಕಿ ಕುಲ್ಸುಮ್‌ಳ ಹುನ್ನಾರವಾಗಿತ್ತು, ಬುಟ್ಟಿಗೆ ಬಿದ್ದ ಬಡಪಾಯಿ ಮುಸ್ಲಿಮರಿಗೆ ಎದೆಬಡಿದುಕೊಳ್ಳುವುದು ಬಿಟ್ಟರೆ ಬೇರೇನಿದೆ?

ಒಳ್ಳೆಯ ಸೇನಾಧಿಪತಿ ಇಲ್ಲದೆ ಕಂಗೆಟ್ಟಿದ್ದಂತೆ ಕಾಣು
ನ್ನ ಕರ್ನಾಟಕ ಕಾಂಗ್ರೆಸ್ ಸೇನೆಗೀಗ ಕೊಂಚ ನಿರಾಳ.

ಅಷ್ಟೇನೂ ಒಳ್ಳೆಯವನಲ್ಲದ ಆದರೆ ನಾಯ ...ಕ್ತಿ ನೀಡಬಲ್ಲ ಚಾಲಾಕಿ ಎಸ್.ಎಂ. ಕೃಷ್ಣ ...ರ್ನಾಟಕಕ್ಕೆ ಮರಳಿ ಬಂದಿದ್ದಾರೆ.



ಕಾಂಗ್ರೆಸ್ ಹೈಕಮಾಂಡಿನ ...ಂಭಕರ್ಣ ನಿದ್ದೆ ಕೊನೆಗೂ ...ಮುಗಿದಿದೆ. ಕರ್ನಾಟಕ ...ಧಾನಸಭಾ ಚುನಾವಣೆ ...ನ್ನಾರು ತಿಂಗಳು ...ಮುಂದಕ್ಕೆ ...ಹೋಗುವುದೆಂಬ ...ರೀಕ್ಷೆಯಲ್ಲಿ ಇನ್ನೊಂದು ...ತ್ತಿನ ದೀರ್ಘನಿದ್ರೆಗೆ ...ಯಾರಾಗುತ್ತಿದ್ದ ...ೈಕಮಾಂಡ್‌ಗೆ ಚಾಪಾಳ

ಕೃಷ್ಣ ಆಗಮನ

ಬಿಜೆಪಿ ಕೌರವರು ಕಂಗಾಲು

ಬಹಳ ಕಷ್ಟ. ಕೃಷ್ಣರ ತಂದೆ ಸೋಮನಹಳ್ಳಿ ಮಲ್ಲಯ್ಯ ಅಂದಿನ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮೆಂಬರ್ ಆಗಿದ್ದಾಗಿನಿಂದ ಲೆಕ್ಕ ಹಾಕಿದರೆ ಅವರ ಕುಟುಂಬ ಕಳೆದ ಒಂದು ನೂರು ವರ್ಷದಿಂದ ಒಂದಲ್ಲಾ ಒಂದು ಅಧಿಕಾರ ಅನುಭವಿಸಿಕೊಂಡೇ ಬಂದಿರುವುದು ಕಾಣುತ್ತದೆ.

ಕೃಷ್ಣರ ರಾಜಕೀಯ ಅಧಿಕಾರದ ಪರಂಪರೆ ಹೀಗಿರುವಾಗ ರಾಜ್ಯದಲ್ಲಿ ಕಾಂಗ್ರೆಸ್ ಸೋತರೂ ಕೃಷ್ಣ ಸೋಲಲಿಲ್ಲ. ಅವರು 2004 ರ ಅದೇ ವರ್ಷದ ಡಿಸೆಂಬರ್‌ನಲ್ಲಿ ಮಹಾರಾಷ್ಟ್ರ ರಾಜ್ಯಪಾಲರಾಗಿ ನಿರ್ಗಮಿಸಿದರು.

ಇದರ ಹಿಂದೆ ದೇವೇಗೌಡರ ಚಿತಾವಣೆ ಇದ್ದಿದ್ದೂ ಅಷ್ಟೇ ನಿಜ. ಆಗ ಜೆಡಿಎಸ್ ಕಾಂಗ್ರೆಸ್‌ನ ಸಮ್ಮಿಶ್ರ ಸರ್ಕಾರ ಸುಸೂತ್ರವಾಗಿ ನಡೆಯಬೇಕಿದ್ದರೆ ಕೃಷ್ಣ 'ಸೀನ್'ನಲ್ಲಿ ಇರಕೂಡದಿತ್ತು. ಪರಸ್ಪರ ತಲೆ ಕಂಡರಾಗದಂತಿದ್ದ ಕೃಷ್ಣ ದೇವೇಗೌಡರ ಅವತ್ತಿನ ಜಗ್ಗಾಟದಲ್ಲಿ ಕೃಷ್ಣರಿಗಾದ ತಾತ್ಕಾಲಿಕ ಹಿನ್ನಡೆ ಅದು. ಕೊನೆಗೆ ಧರಂಸಿಂಗ್ ಸಿಎಂ ಆಗಿ ಸಮ್ಮಿಶ್ರ ಸರ್ಕಾರ ರಚನೆಯಾದಾಗ ಕೃಷ್ಣರ ಭಂಟರಂತಿದ್ದ ಡಿ.ಕೆ. ಶಿವಕುಮಾರ್, ದೇಶಪಾಂಡೆಯವರನ್ನು ಗೌಡರು ಸರ್ಕಾರದಿಂದ ಹೊರಗಟ್ಟಿದ್ದರು.




ಆದರೆ ಕದನ ಕುತೂಹಲ ಕೃಷ್ಣ ಸುಮ್ಮನಿರಬೇಕಲ್ಲ.


ಮಹಾರಾಷ್ಟ್ರ ಗೌವರ್ನರ್ ಆಗಿದ್ದಾಗಲೂ ಸಣ್ಣಪುಟ್ಟ ನೆಪ ಸಿಕ್ಕರೂ ಬೆಂಗಳೂರಿಗೆ ಓಡಿಬರುತ್ತಿದ್ದ ಕೃಷ್ಣ ಅವತ್ತಿನ ಮೈತ್ರಿ ಸರ್ಕಾರವನ್ನು ಸದಾ ಆತಂಕದಲ್ಲಿಟ್ಟೇ ಇದ್ದರು. ಕಾಂಗ್ರೆ ಭಿನ್ನಮತೀಯರು ಕಿತಾಪತಿ ನಡೆಸುವುದು, ಅಂಥವರ ವಿರುದ್ಧ ಗೌಡ ಗುಟುರು ಹಾಕುವುದು ನಡೆದುಕೊಂಡೇ ಬಂದಿತ್ತು. ಕೊನೆಗೆ ಜೆಡಿಎಸ್‌ನೊಳಗೇ ಕ್ಷಿಪ್ರ ಕ್ರಾಂತಿಯಾಗಿ ಸಿದ್ಧರಾಮಯ್ಯ-ಸಿಂಧ್ಯಾರನ್ನು ಹೊರತಳ್ಳಿದ ಗೌಡರು ಬಿಜೆಪಿಯೊಂದಿಗೆ ಮೈತ್ರಿ ಸಾಧಿಸಿ ತಮ್ಮ ಕೌಟುಂಬಿಕ ಸರ್ಕಾರ ರಚಿಸಿಕೊಂಡರು.

ಗೌಡರು ಇದನ್ನು ಕೃಷ್ಣರಿಂದ ಆದ ತೊಂದರೆ ಎಂದು ಬಿಂಬಿಸಿದರಾದರೂ ಕಾಂಗ್ರೆಸ್ ಹೈಕಮಾಂಡಿಗೆ ಅರ್ಥವಾಗಿದ್ದೇ ಬೇರೆ ರೀತಿ. ಅದೇನೆಂದರೆ ಗೌಡರ ಜೊತೆಗಿನ ಮೈತ್ರಿಯನ್ನು ಮೊದಲಿನಿಂದಲೂ ವಿರೋಧಿಸಿಕೊಂಡೇ ಬಂದಿದ್ದ ಕೃಷ್ಣ 'ಆತನನ್ನು ನಂಬಬೇಡಿ' ಎಂದೇ ಸೋನಿಯಾಗೆ ಹೇಳಿಕೊಂಡು ಬಂದಿದ್ದರು. ಕೊನೆಗೆ ಅದೂ ನಿಜವಾಗಿ ಹೋಯಿತು. ಆದರೆ ಅದೇ ವೇಳೆಯಲ್ಲಿ ಈ ಖರ್ಗೆ-ಧರಂಸಿಂಗ್ ಸಿಕ್ಕ ಅಧಿಕಾರ ಅನುಭವಿಸುತ್ತಾ ಕಾಂಗ್ರೆಸ್ ಪಕ್ಷದ ಬಗ್ಗೆ ಯೋಚಿಸುವುದನ್ನೇ ಮರೆತಿದ್ದರು.

ಕಾಂಗ್ರೆಸ್ ಹೈಕಮಾಂಡಿನಲ್ಲಿ ಖರ್ಗೆ-ಧರಂಸಿಂಗ್‌ರ ಮಾತಿಗಿಂತ ಕೃಷ್ಣ ಮಾತಿಗೆ ಹೆಚ್ಚು ಬೆಲೆ ಸಿಗಲು ಇದೂ ಒಂದು ಕಾರಣವಾಗಿದೆ.



ಜೆಡಿಎಸ್-ಬಿಜೆಪಿ ಜಂಟಿ ಸರ್ಕಾರ ರಚನೆಯಾದ ಮೇಲೂ ಕೃಷ್ಣ ಮುಂಬೈನಿಂದ ಬೆಂಗಳೂರಿಗೆ ಕನಿಷ್ಠ ಐವತ್ತು ಸಲ ಬಂದುಹೋಗಿದ್ದರು. ಇಲ್ಲೇ ಮೊಳೆ ಹೊಡೆದುಕೊಂಡಿದ್ದ ಖರ್ಗೆ-ಧರಂಸಿಂಗ್‌ರ ಜೋಡಿಗಿಂತ ದೂರದಲ್ಲಿದ್ದ ಕೃಷ್ಣರ ಭೇಟಿ ರಾಜ್ಯ ಸರ್ಕಾರವನ್ನು ಅಲ್ಲಾಡಿಸುತ್ತಿತ್ತು ಎಂಬುದು ವಾಸ್ತವ. ಕೃಷ್ಣ ಈಗ ಕರ್ನಾಟಕಕ್ಕೆ ವಾಪಸ್ ಬರುತ್ತಿರುವ ಹಿನ್ನೆಲೆಯಲ್ಲಿ ಇವೆಲ್ಲಾ ಅಂಶಗಳಿವೆ.



ಮಾತ್ರ ಕೊಟ್ಟಿದ್ದು ಚೀಫ್ ಎಲೆಕ್ಷನ್ ಕಮೀಷನರ್ ಗೋಪಾಲಸ್ವಾಮಿ.

ಈ ಕೃಷ್ಣಗೆ ರಾಜ್ಯಾದ್ಯಂತ ಜನಬೆಂಬಲ ಇಲ್ಲದಿರಬಹುದು, ಆದರೆ ನಾಡಿನ ಪ್ರತಿ ಮೂಲೆಯಲ್ಲೂ ಇರುವ ಕಾರ್ಯಕರ್ತರನ್ನು ಚುನಾವಣೆಗೆ ರೆಡಿ ಮಾಡಬಲ್ಲ ಛಾತಿಯಂತೂ ಇದೆ. ಖರ್ಗೆ-ಧರಂಸಿಂಗ್ ...ನ್ನು ಮುಂದಿಟ್ಟುಕೊಂಡು ಈಗಿದ್ದ ಸ್ಥಿತಿಯಲ್ಲೇ ಕಾಂಗ್ರೆಸ್ ...ನಾದರೂ ಎಲೆಕ್ಷನ್‌ಗೆ ಹೋಗಿದಿದ್ದರೆ ನಾಳಿನ ಫಲಿತಾಂಶ ...ವನ್ನು ಇವತ್ತೇ ಹೇಳಿಬಿಡಬಹುದೆಂಬಂತಿತ್ತು ರಾಜ್ಯ ...ಂಗ್ರೆಸ್‌ನ ಸ್ಥಿತಿ. ಆದರೆ ಇನ್ನು ಮುಂದೆ ಹಾಗಿರುವುದಿಲ್ಲ ...ಎಂಬುದನ್ನಂತೂ ಯಾವುದೇ ಮುಲಾಜಿಲ್ಲದೆ ಹೇಳ...ಹುದು.

'ಕೃಷ್ಣ ರಾಜ್ಯ ರಾಜಕೀಯಕ್ಕೆ ವಾಪಸ್' ಎಂಬ ...ಚಾರಕ್ಕೆ ಟಿವಿ ಹಾಗೂ ದಿನಪತ್ರಿಕೆಗಳು ನೀಡಿರುವ ...ಮಹತ್ವವೇ ಕೃಷ್ಣಗಿರುವ ಇಮೇಜು, ಮೀಡಿಯಾ ...ಸಂಪರ್ಕಗಳನ್ನು ಹಾಗೂ ರಾಜ್ಯ ಕಾಂಗ್ರೆಸ್‌ಗೆ ಕೃಷ್ಣಾಗಮನ ...ಷ್ಟು ಅನಿವಾರ್ಯವಾಗುತ್ತೆಂಬುದನ್ನು ತೋರಿಸಿದೆ. ...ಷ್ಟೇ ಅಲ್ಲ, ಕೃಷ್ಣ ಪುನರಾಗಮನದ ಬಗ್ಗೆ ಬಿಜೆಪಿ ...ಮತ್ತು ಜೆಡಿಎಸ್ ನೀಡಿರುವ ಪ್ರತಿಕ್ರಿಯೆಗಳೂ ಆ ...ಪಕ್ಷಗಳಲ್ಲಿ ಉಂಟಾಗಿರುವ ...ಳಮಳವನ್ನು ತೋರಿಸುತ್ತಿದೆ.

...ದನ ಕುತೂಹಲಿ ಕೃಷ್ಣ

2004 ರ ಅಸೆಂಬ್ಲಿ ...ಲೆಕ್ಷನ್‌ನಲ್ಲಿ ಕಾಂಗ್ರೆಸ್ ...ಸೋತಾಗ ಅದಕ್ಕೆ ಕೃಷ್ಣರ ...ಸ್ಟೈಲ್ ಆಡಳಿತದ ಕಾರಣವೂ ...ಪ್ರಮುಖ ಅಂಶವಾಗಿತ್ತು. ...ಕೃಷ್ಣಸಂಭವರಿಗೆ ಅಧಿಕಾರ ...ಲ್ಲದ ದಿನ ಕಳೆಯುವುದು



ಹೈಕಮಾಂಡ್ ಲೆಕ್ಕಾಚಾರ

ರಾಜಕೀಯವಾಗಿ ಒಂದು ರೀತಿಯಲ್ಲಿ spent force ಆಗೇಹೋದರು ಎಂಬಂತಿದ್ದ ಕೃಷ್ಣರೇ ಕರ್ನಾಟಕ ಕಾಂಗ್ರೆಸ್‌ಗೆ ಮತ್ತೆ ಬೇಕಾದರೇಕೆ ಎಂಬ ಪ್ರಶ್ನೆ ಹಾಕಿಕೊಂಡರೆ ಅದರಲ್ಲಿ ಹಾಲಿ ರಾಜ್ಯ ನಾಯಕರ ಜಡತ್ವವೇ ಎದ್ದು ಕಾಣುವ ಅಂಶ.


ಕೋ-ಜಾ ಸರ್ಕಾರದ ನಾಯಕರುಗಳಾದ ಕುಮಾರಸ್ವಾಮಿ ಹಾಗೂ ಯಡಿಯೂರಪ್ಪನವರ ದುರಾಡಳಿತವನ್ನು ರಾಜ್ಯ ಕಾಂಗ್ರೆಸ್ ಪ್ರತಿರೋಧಿಸಿ ದನಿ ಎತ್ತಿದ ದಾಖಲೆಗಳೇ ಸಿಗುವುದಿಲ್ಲ. ಅದರಲ್ಲೂ, ಬಿಜೆಪಿಯ ದೇಶಪ್ರೇಮಿ ನಾಯಕ ಯಡಿಯೂರಪ್ಪ, ಈಶ್ವರಪ್ಪ, ಅಶೋಕ್, ಕಟ್ಟಾನಾಯ್ಡು ಇಡೀ ರಾಜ್ಯವನ್ನೇ ಲೂಟಿ ಹೊಡೆಯುತ್ತಾ ಎಲ್ಲೆಡೆ ಕೋಮುದ್ವೇಷದ ಬೆಂಕಿ ಹಚ್ಚುತ್ತಾ ಮೆರೆಯುತ್ತಿರುವಾಗಲೂ ವಿರೋಧ ಪಕ್ಷ ಕಾಂಗ್ರೆಸ್ ಜವಾಬ್ದಾರಿಯುತವಾಗಿ ವರ್ತಿಸಿರಲಿಲ್ಲ. ಜನರಿಗೆ ಕಾಂಗ್ರೆಸ್ ಎಂಬ ಪರ್ಯಾಯ ಆಯ್ಕೆ ನಮಗಿದೆಯೆಂಬ ಭರವಸೆಯೇ ಹುಟ್ಟಿರಲಿಲ್ಲ.

ಆದರೀಗ ಪರಿಸ್ಥಿತಿ ಖಂಡಿತ ಕೊಂಚ ಮಟ್ಟಿಗಾದರೂ ಬದಲಾಗಲಿದೆ.

ಸಂಪೂರ್ಣ ಕರಗಿ ಹೋಗುತ್ತಿರುವ ಜೆಡಿಎಸ್ ಹಾಗೂ ಭ್ರಷ್ಟಾಚಾರ-ಒಳಜಗಳಗಳಿಂದ ಸುಸ್ತಾಗಿರುವ ಬಿಜೆಪಿಗೆ ಕಾಂಗ್ರೆಸ್ ಸೆಡ್ಡು ಹೊಡೆಯುವ ಶಕ್ತಿ ಗಳಿಸಿಕೊಳ್ಳಲಿದೆ.

ಕರ್ನಾಟಕ ರಾಜಕೀಯ ರಣರಂಗದಲ್ಲಿ ಕೃಷ್ಣ ಕಾಣಿಸಿಕೊಂಡರೆ ಅವರ ಜೊತೆಗೆ ಸಿದ್ದರಾಮಯ್ಯ ಇರುತ್ತಾರೆ. ವಾಸ್ತವವಾಗಿ ಹಳೇ ಮೈಸೂರಿನ ಒಕ್ಕಲಿಗರ ಬೆಲ್ಟ್‌ನಲ್ಲಿ ಕಾಂಗ್ರೆಸ್‌ಗೆ ಸರಿಯಾದ ನಾಯಕರಿರಲಿಲ್ಲ. ಬಿಜೆಪಿಗೆ ಮುಂದೆಂದೂ ಅಂಥ ನಾಯಕ ಸಿಗುವುದೂ ಇಲ್ಲ.

ಇನ್ನು ದಳದ ಗೌಡರಿಗೆ ಹಿಂದಿನ ಚರಿಷ್ಮಾ ಇಲ್ಲ. ಕುಮಾರಸ್ವಾಮಿಗೆ ಅಷ್ಟು ತೂಕವಿಲ್ಲ. ಹಾಗಾಗಿ ಒಕ್ಕಲಿಗರ ಓಟ್‌ಬ್ಯಾಂಕ್ ಅನ್ನು ಕೊಂಚ ಮಟ್ಟಿಗಾದರೂ ಕೃಷ್ಣ ಬಿಗಿ ಮಾಡಿ ಕಾಂಗ್ರೆಸ್ ಕಡೆಗೆ ತರಬಲ್ಲರು. ಕೃಷ್ಣ ಸಾರಥ್ಯ ವಹಿಸಿ ನಿಂತರೆ ಅವರ ಬೆನ್ನಿಗೆ ಡಿಕೆ, ರಾಮಲಿಂಗಾರೆಡ್ಡಿ, ಪರಮೇಶ್ವರ್ ಮುಂತಾದವರೆಲ್ಲಾ ಅತ್ಯುತ್ಸಾಹದಿಂದ ರೆಡಿಯಾಗುತ್ತಾರೆ. ಇಷ್ಟವಿರಲಿ, ಇಲ್ಲದಿರಲಿ ಖರ್ಗೆ, ಪೂಜಾರಿ, ಕೆ.ಎಚ್. ಮುನಿಯಪ್ಪ, ಜಾಫರ್ ಶರೀಫ್, ಎಚ್.ಕೆ. ಪಾಟೀಲ್ ಹಿಂಬಾಲಿಸಲೇಬೇಕಾಗುತ್ತದೆ. ಕಾರ್ಯಕರ್ತರು ತೋಳೇರಿಸಿಕೊಂಡು ರೆಡಿಯಾಗುತ್ತಾರೆ. ಚುನಾವಣಾ ಖರ್ಚಿಗೆ ಹಣ ಹರಿದು ಬರಲಾರಂಭಿಸುತ್ತದೆ. ಅಭ್ಯರ್ಥಿಗಳಿಗೂ ಆತ್ಮವಿಶ್ವಾಸ ಚಿಗುರುತ್ತದೆ. ಬಹಳ ಮುಖ್ಯವಾಗಿ ತಾವೀಗಾಗಲೇ ಎಲೆಕ್ಷನ್ ಗೆದ್ದೇ ಬಿಟ್ಟಿರುವುದಾಗಿ ನಂಬಿಕೊಂಡಿರುವ ಬಿಜೆಪಿಗಳಿಗೆ ಚುನಾವಣೆಯಲ್ಲಿ ಗೆದ್ದು ಬರುವುದು ಕಷ್ಟ ಎಷ್ಟೆಂಬುದು ಗೊತ್ತಾಗುತ್ತವೆ.



ಮತ್ತೊಂದೆಡೆ ದೇವೇಗೌಡರಿಗಿದ್ದ ಅಲ್ಪಸ್ವಲ್ಪ ಅವಕಾಶಗಳೂ ಕೃಷ್ಣಾಗಮನದಿಂದ ಮುರುಟಿ ಹೋಗಲಿದೆ. ರಾಜ್ಯ ಒಕ್ಕಲಿಗರಿಗೀಗ ದೇವೇಗೌಡ ಒಬ್ಬರೇ ಏಕೈಕ ಲೀಡರ್ ಆಗಿರಲ್ಲ. ಅಲ್ಲೀಗ ಕೃಷ್ಣರೂ ಇರುತ್ತಾರೆ.


ಒಟ್ಟಾರೆಯಾಗಿ ಕೃಷ್ಣ ಆಗಮನ ಕಾಂಗ್ರೆಸ್‌ಗಂತೂ ಆಕ್ಸಿಜನ್ ಸಿಕ್ಕಂತಾಗಿದೆ. ಹಳೇ ಪುರಾತನ ಪಕ್ಷವಾಗಿರುವ ಕಾಂಗ್ರೆಸ್ ಅಷ್ಟು ಸುಲಭವಾಗಿ ಗಾಳಿಗೆ ತೂರಿಹೋಗುವ ಪಕ್ಷವೂ ಅಲ್ಲ. ಹಣಬಲ, ಕಾರ್ಯಕರ್ತರ ಪಡೆ, ವ್ಯಾಪಕ ಜನಬೆಂಬಲವಿರುವ ಈ ಪಾರ್ಟಿಗೆ ಸೋನಿಯಾ ಗಾಂಧಿ ಕೃಷ್ಣರ ಬಲ ತುಂಬುವ ಮೂಲಕ ತಾವು ಎಲೆಕ್ಷನ್‌ಗೆ ಸಿದ್ಧ ಎಂದು ಘೋಷಿಸಿದ್ದಾರೆ.

ಆದರೆ ಕಾಂಗ್ರೆಸ್ ಪಾರ್ಟಿ ಕೇವಲ ಕೃಷ್ಣರ ಮೇಲೆ ಡಿಪೆಂಡ್ ಆಗದೆ ಜನರ ವಿಶ್ವಾಸ ಗೆಲ್ಲುವ ಕೆಲಸ ಮಾಡಬೇಕಿದೆ.

-ಈಶ

ಅಸಲಿ ಶಕ್ತಿ ಸಿದ್ದರಾಮಯ್ಯ!

ಇವತ್ತು ಕರ್ನಾಟಕ ಕಾಂಗ್ರೆಸ್‌ನ ನಿಜವಾದ ಶಕ್ತಿ ಇರುವುದು ಸಿದ್ದರಾಮಯ್ಯನವರಲ್ಲಿ. ಹಿಂದುಳಿದ ಜಾತಿ ವರ್ಗಗಳ ಪ್ರಶ್ನಾತೀತ ನಾಯಕರಾಗಿ ಎಮರ್ಜ್ ಆಗಿರುವ ಸಿದ್ದರಾಮಯ್ಯನವರ ಇನ್ನೊಂದು ಪ್ಲಸ್ ಪಾಯಿಂಟ್ ಏನೆಂದರೆ ಅವರ ಹಿಂದೆ consolidate ಆಗಿರುವ ಈ ಸಾಮಾಜಿಕ ಶಕ್ತಿ ಇದುವರೆಗೂ ಖರ್ಚಾಗಿಲ್ಲ ಎಂಬುದು. ಆ ದೃಷ್ಟಿಯಿಂದ ಸಿದ್ದು ಇನ್ನು spent force ಆಗಿಲ್ಲ. ಆ ಅಷ್ಟೂ ಬೆಂಬಲದ ಬಲವನ್ನು ಕಾಂಗ್ರೆಸ್ ಕಡೆಗೆ ತರುವ ಶಕ್ತಿಯೂ ಅವರಿಗಿದೆ.



ಯಾವುದೇ ಹಗರಣಗಳಿರದ, ಒಳ್ಳೆಯ ಭಾಷಣಕಾರರೂ ಆಗಿರುವ ಸಿದ್ದರಾಮಯ್ಯ ನಿರ್ದಿಷ್ಟವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಅಪಾರ ಪ್ರಭಾವ ಬೀರಬಲ್ಲಂತವರು. ಪಟ್ಟಣ ಪ್ರದೇಶಗಳ ಎಚ್ಚೆತ್ತ ಮತದಾರರಿಗೂ ಸಿದ್ದರಾಮಯ್ಯ ಅಪ್ರಿಯರೇನಲ್ಲ. ರಾಜ್ಯದ ಮೂರನೇ ಅತೀ ದೊಡ್ಡ ಜನಾಂಗವಾಗಿರುವ ಕುರುಬ ಜನಾಂಗದಲ್ಲಂತೂ ಸಿದ್ದರಾಮಯ್ಯನವರಿಗಿರುವ ವರ್ಚಸ್ಸು ಬೇರೆ ಯಾರಿಗೂ ಇಲ್ಲ. ಬಿಜೆಪಿಯ ಈಶ್ವರಪ್ಪ, ದಳದ ಕಾಂಜೀಪಿಂಜಿ ಕುರುಬ ನಾಯಕರು ಸಿದ್ದು ಕಾಲಬುಡಕ್ಕೂ ಬರುವುದಿಲ್ಲ.


ಇಂಥ ನಾಯಕನನ್ನು ಕಳೆದ ಒಂದೂವರೆ ವರ್ಷಗಳಿಂದ ಕಾಂಗ್ರೆಸ್ ಸರಿಯಾಗಿ ಬಳಸಿಕೊಂಡಿರಲಿಲ್ಲ. ಕನಿಷ್ಠ ಈಗಲಾದರೂ ಸಿದ್ದರಾಮಯ್ಯನವರು ನಿರ್ವಹಿಸಬಹುದಾದ ಪಾತ್ರವನ್ನು ಕಾಂಗ್ರೆಸ್ ಅರ್ಥಮಾಡಿಕೊಂಡರೆ ಉತ್ತಮ.

ಬಿಜೆಪಿಯ ಕೋಮುವಾದಿ, ಬ್ರಾಹ್ಮಣಶಾಹಿ ಅಜೆಂಡಾವನ್ನು ಬಯಲುಗೊಳಿಸಲು ಸಿದ್ದರಾಮಯ್ಯನವರೇ ಸರಿ.

ಎಲ್ಲರನ್ನೂ ಒಗ್ಗೂಡಿಸಬಲ್ಲ ಕೃಷ್ಣ, ಜನರೆಲ್ಲರ ಬೆಂಬಲವನ್ನು ತರಬಲ್ಲ ಸಿದ್ದರಾಮಯ್ಯ ಜೊತೆಗೆ ದಲಿತ ಮತದಾರರ ವಿಶ್ವಾಸವನ್ನು ಖರ್ಗೆ ಗಳಿಸಲು ಸಾಧ್ಯವಾದರೆ ಕಾಂಗ್ರೆಸ್‌ಗೆ ಅದು ನಿರ್ಣಾಯಕವಾಗಲಿದೆ. ಈಗ ಅರೆಬರೆ ಚೆಡ್ಡಿಗಳಂತಾಗಿ ಹೋಗಿರುವ ಕಾಂಗ್ರೆಸ್ ನಾಯಕರು ಇನ್ನು ಮುಂದಾದರೂ ಬಿಜೆಪಿಯ ಕೋಮುವಾದಿ ಅಜೆಂಡಾವನ್ನು ವಿರೋಧಿಸದಿದ್ದರೆ ಮುಸ್ಲಿಮರು ಕಾಂಗ್ರೆಸ್ ಅನ್ನು ನಂಬುವುದಿಲ್ಲ ಎಂಬುದಂತೂ ಖಚಿತ.

ಕೃಷ್ಣ ಚುನಾವಣೆಗೆ ನಿಲ್ಲಲ್ಲ

ಕಾಂಗ್ರೆಸ್ ಹೈಕಮಾಂಡಿನ ಆಪ್ತ ವಲಯಗಳು ಹೇಳುತ್ತಿರುವ ಪ್ರಕಾರ ಮುಂದಿನ ಎಲೆಕ್ಷನ್‌ನಲ್ಲಿ ಕೃಷ್ಣ ಸ್ಪರ್ಧಿಸುವುದಿಲ್ಲ. ಬದಲಾಗಿ ಚುನಾವಣಾ ಸಮನ್ವಯ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿರುವ ಕೃಷ್ಣ ಇಡೀ ರಾಜ್ಯದ ಅಭ್ಯರ್ಥಿಗಳ ಆಯ್ಕೆ, ಪ್ರಚಾರತಂತ್ರ, ಫಂಡ್ ಸಂಗ್ರಹ ಹಾಗೂ ವಿತರಣೆ ಇನ್ನಿತ್ಯಾದಿಯ ಹೊಣೆ ನಿಭಾಯಿಸುತ್ತಾರೆ. ಇಷ್ಟು ಜವಾಬ್ದಾರಿಗಳಿರುವ ರಾಜಕಾರಣಿ ತಾನೇ ಒಂದೆಡೆ ಎಲೆಕ್ಷನ್‌ಗೆ ನಿಂತರೆ ಯಾವುದಕ್ಕೂ ಸರಿಯಾಗಿ ನೀಡಲಾಗದೆಂಬ ತರ್ಕದಲ್ಲಿ ಹೈಕಮಾಂಡ್ ಹೀಗೆ ಸೂಚಿಸಿದೆ ಎನ್ನಲಾಗಿದೆ. ಖರ್ಗೆಗಂತೂ ಇದು ಖುಷಿ ತಂದಿದೆ.



ಯು.ಆರ್. ಅನಂತಮೂರ್ತಿ

ಅಭಿವೃದ್ಧಿ ಯೋಜನೆ-ಪ್ರಭುತ್ವದ ಆಲೋಚನೆ

ದಿಲ್ಲಿ ವಿಶ್ವವಿದ್ಯಾಲಯದ ಇತಿಹಾಸದ ಆನರ್ಸ್ ವಿದ್ಯಾರ್ಥಿಗಳಿಗೆ ಶಿಫಾರಸು ಮಾಡಲಾಗಿರುವ ಪಠ್ಯಗಳಲ್ಲಿ ಎ.ಕೆ.ರಾಮಾನುಜನ್ ಬರೆದಿರುವ 'ತ್ರೀ ಹಂಡ್ರೆಡ್ ರಾಮಾಯಣಾಸ್-ಫೈವ್ ಎಗ್ಸಾಂಪಲ್ಸ್ ಅಂಡ್ ತ್ರೀ ಥಾಟ್ಸ್ ಆನ್ ಟ್ರಾನ್ಸ್‌ಲೇಷನ್' ಎಂಬ ಪ್ರಬಂಧವೂ ಒಂದು. ಇದು ಇತಿಹಾಸ ಪಠ್ಯದಲ್ಲಿ ಇರಕೂಡದು ಎಂದು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರು ವಿಶ್ವವಿದ್ಯಾಲಯದಲ್ಲಿ ಗದ್ದಲವೆಬ್ಬಿಸಿದರು. ವಿಭಾಗ ಮುಖ್ಯಸ್ಥರನ್ನು ಎಳೆದಾಡಿದರು. ಪುಸ್ತಕವನ್ನು ಹರಿದು ಹಾಕಿದರು. ಇದಕ್ಕೆ ಕನ್ನಡ ಸಾಹಿತ್ಯಿಕ ಲೋಕದಿಂದ ಬಂದ ಪ್ರತಿಕ್ರಿಯೆ ಬಹುತೇಕ ಶೂನ್ಯ. ರಾಮಾನುಜನ್ ನಮ್ಮವರು, ಕನ್ನಡದವರು ಎಂಬ ಕಾರಣಕ್ಕಾದರೂ ಅವರ ಪುಸ್ತಕವನ್ನು ಹರಿದುದಕ್ಕೆ ಕನ್ನಡಾಭಿಮಾನಿಗಳಿಗೆ ಸಿಟ್ಟು ಬರಬೇಕಿತ್ತು. ಅದೂ ಸಂಭವಿಸಲಿಲ್ಲ. ಇದೇಕೆ ಹೀಗಾಯಿತು? ಬಹುಶಃ ನಾವು ಇಂಥ ವರ್ತನೆಗಳಿಗೆ ಒಪ್ಪಿಗೆ ಕೊಡಲು ಆರಂಭಿಸಿದ್ದೇವೆ ಅನ್ನಿಸುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂಥದ್ದು ತುಂಬಾ ನಡೆಯುತ್ತಿದೆ. ರಾಜಶೇಖರ್, ಫಣಿರಾಜ್, ಪಟ್ಟಾಭಿಯಂಥ ಕೆಲವರು ಇಂಥದ್ದನ್ನು ವಿರೋಧಿಸುತ್ತಿದ್ದಾರೆ ಮತ್ತು ಕೆಲವೇ ಕೆಲವು ಸಂಘಟನೆಗಳು ಇವರನ್ನು ಬೆಂಬಲಿಸುತ್ತಿವೆ. ಈ ಬಗೆಯ ಹೋರಾಟಗಳೆಲ್ಲಾ ಹಾಸ್ಯಾಸ್ಪದವಾಗಿ ಕಾಣಿಸುವಂಥ ಒಂದು ಕಾಲವೂ ಹತ್ತಿರದಲ್ಲೇ ಇರಬಹುದೇನೋ ಎಂಬ ಭಯ ನನ್ನನ್ನು ಆವರಿಸುತ್ತಿದೆ. ಕಾಫ್ಕಾನ ಬರಹದಲ್ಲಿ ಒಬ್ಬ ಹಂಗರ್ ಆರ್ಟಿಸ್ಟ್ ಇದ್ದಾನೆ. ಊರಿಗೆ ಬಂದವರೆಲ್ಲಾ ಅವನನ್ನು ಹೋಗಿ ನೋಡಿ ಬರುತ್ತಿರುತ್ತಾರೆ. ಅಂದರೆ ಅವನೊಬ್ಬ ಪ್ರೇಕ್ಷಣೀಯ ವ್ಯಕ್ತಿ ಆಗಿಬಿಟ್ಟಿರುತ್ತಾನೆ. ನಮ್ಮ ಹೋರಾಟಗಳಿಗೆ, ಹೋರಾಟಗಾರರಿಗೆ ಈ 'ಪ್ರೇಕ್ಷಣೀಯ ಸ್ಥಿತಿ' ಬರಬಾರದು ಎಂಬುದು ಲಂಕೇಶ್ ಹುಟ್ಟಿದ ದಿನ ನಾವು ಆಡಲೇಬೇಕಾದ ಮಾತು. ಇದನ್ನೇ ಹಿನ್ನೆಲೆಯಾಗಿಟ್ಟುಕೊಂಡು ರಾಜಕೀಯಕ್ಕೆ ಸಂಬಂಧಿಸಿದ ಕೆಲವು ಟಿಪ್ಪಣಿಗಳನ್ನು ಮುಂದಿಡುತ್ತಿದ್ದೇನೆ..

* * * * *

ವರ್ತಮಾನದ ರಾಜಕೀಯವನ್ನು ವಿಶ್ಲೇಷಿಸಿದರೆ ಎರಡು ಮುಖ್ಯ ಸಂಗತಿಗಳು ಕಾಣಿಸುತ್ತವೆ. ಮೊದಲನೆಯದ್ದು ಎಲ್ಲ ರಾಜಕೀಯ ಪಕ್ಷಗಳೂ 'ಅಭಿವೃದ್ಧಿ'ಯಲ್ಲಿ ನಂಬಿಕೆ ಇಟ್ಟಿವೆ. ಎಷ್ಟರಮಟ್ಟಿಗೆಂದರೆ ಇದು ಅನಿವಾರ್ಯವಾದ ಪ್ರಾಪಂಚಿಕ ಸ್ಥಿತಿ ಎಂದು ಅವು ಭಾವಿಸಿವೆ. ಸ್ವಲ್ಪ ಎಚ್ಚರ ತಪ್ಪಿದರೆ ಎಲ್ಲರಿಗೂ ಹೀಗೆ ಅನ್ನಿಸುವುದಕ್ಕೆ ಶುರುವಾಗುತ್ತದೆ. ಆದರೆ ಬುದ್ಧಿ ಸ್ವತಂತ್ರವಾಗಿ ಕೆಲಸ ಮಾಡುವಾಗ ಮಾತ್ರ ಅನಿವಾರ್ಯವಾಗಿರುವುದಕ್ಕೂ ಒಂದು ಪರ್ಯಾಯ ಇರಬಹುದು ಎನ್ನುವ ಚಿಂತನೆ ಸಾಧ್ಯವಾಗುತ್ತದೆ.

ಅಭಿವೃದ್ಧಿ ಅನಿವಾರ್ಯವಾಗಿರುವುದರಿಂದ ಅದನ್ನು ಸಾಧಿಸುವುದಕ್ಕೆ ಒಂದು ಮಟ್ಟದ ಇಂಪೀರಿಯಲಿಸಂ ಕೂಡಾ ಬೇಕು ಎಂಬುದು ವರ್ತಮಾನದ ರಾಜಕಾರಣದ ಮತ್ತೊಂದು ನಂಬಿಕೆ. ಹೀಗೆ ಇಂಪೀರಿಯಲಿಸಂ ಪ್ರಗತಿಗೆ ಅತ್ಯಂತ ಅಗತ್ಯ ಎಂಬ ನಂಬಿಕೆ ಬಹಳ ಹಳೆಯದು. ವ್ಯಕ್ತಿಯ ಸ್ವಾತಂತ್ರ್ಯವನ್ನು ಪ್ರಬಲವಾಗಿ ಪ್ರತಿಪಾದಿಸಿದ ಇಂಗ್ಲೆಂಡಿನ ಜಾನ್ ಸ್ಟುವರ್ಟ್ ಮಿಲ್ ಕೂಡಾ ಭಾರತದಂಥ ದೇಶವನ್ನು ಇಂಗ್ಲೆಂಡ್‌ನಂತಹ ಒಂದು ದೇಶ ಕೆಲವು ಕಾಲದವರೆಗೆ ಆಳಿ ಅಭಿವೃದ್ಧಿಪಡಿಸಬೇಕೆಂದು ಭಾವಿಸಿದ್ದ. ನಮ್ಮ ಸ್ವಾತಂತ್ರ್ಯ ಹೋರಾಟದ ಆರಂಭದ ಕಾಲಘಟ್ಟವನ್ನು ನೋಡಿದರೆ ಇದು ಅರ್ಥವಾಗುತ್ತದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ಬಿಡುಗಡೆ ಪಡೆಯಬೇಕು ಎನ್ನುತ್ತಿದ್ದವರೂ 'ಬ್ರಿಟಿಷರು ಇರಲಿ ಆದರೆ ನಮಗೆ ಇನ್ನಷ್ಟು ಸ್ವಾತಂತ್ರ್ಯ ಕೊಡಲಿ' ಎಂದು ಭಾವಿಸಿದ್ದರು. ಸಂಪೂರ್ಣ ಸ್ವಾತಂತ್ರ್ಯವನ್ನು ಕೇಳುವುದು ಈ ಹಳಬರ ಮನಸ್ಸಿಗೆ ಅಪ್ರಾಯೋಗಿಕ ಅನ್ನಿಸುತ್ತಿತ್ತು. ಇಂಥಾ ಹೊತ್ತಿನಲ್ಲಿ ಪ್ರಗತಿಗೆ ಇಂಪೀರಿಯಲಿಸಂನ ಅಗತ್ಯವಿಲ್ಲ ಎಂದು ಮೊದಲು ಹೊಳೆದದ್ದು



ಗಾಂಧೀಜಿಗೆ. ಹೀಗೆ ಪ್ರಾಯೋಗಿಕವಲ್ಲದ್ದನ್ನೂ ಆಲೋಚಿಸುವುದಕ್ಕೆ ಸಾಧ್ಯವಿದ್ದಾಗ ಮಾತ್ರ ಪರ್ಯಾಯಗಳು ಹುಟ್ಟಿಕೊಳ್ಳುತ್ತವೆ. ವಿಚಾರ ಜೀವಂತವಾಗಿರುತ್ತದೆ.

ಆದರೆ ಈಗ ನಮ್ಮಲ್ಲಿ ಅಭಿವೃದ್ಧಿಗೆ ಸಂಬಂಧಪಟ್ಟ ವಿಚಾರವಂತಿಕೆ ಕನಿಷ್ಠ ಮಟ್ಟದಲ್ಲಿದೆ. ಕಮ್ಯುನಿಸ್ಟರೂ ಕೂಡಾ ವಿಶೇಷ ಆರ್ಥಿಕ ವಲಯಗಳನ್ನು (ಎಸ್‌ಇಝಡ್) ಸೃಷ್ಟಿಸಲು ಹೊರಟಿದ್ದಾರೆ. ಅಂದರೆ ಎಸ್‌ಇಝಡ್ ಮಾದರಿ ಅಭಿವೃದ್ಧಿಯ ವಿಷಯದಲ್ಲಿ ಈಗ ಪಕ್ಷ ಭೇದವೇ ಇಲ್ಲ. ಕಮ್ಯುನಿಸಂ ಅನ್ನು ಟೀಕಿಸುವ ಬಜೆಪಿ ಕೂಡಾ ಚೀನಾದ ಹಾದಿಯನ್ನು ತುಳಿಯುವುದಕ್ಕೆ ಸಿದ್ಧವಾಗಿಬಿಟ್ಟಿದೆ. ಇನ್ನು ಕಾಂಗ್ರೆಸ್ ಬಗ್ಗೆ ವಿಶೇಷವಾಗಿ ಹೇಳುವ ಅಗತ್ಯವೇ ಇಲ್ಲ.

ಮತ್ತೊಂದು ಕಮ್ಯುನಿಸ್ಟ್ ಕ್ರಾಂತಿ ಕೂಡಾ ಸದ್ದುಗದ್ದಲವಿಲ್ಲದೆಯೇ ಬಹಳ ಸುಲಭವಾಗಿ ಬಂಡವಾಳಶಾಹಿ ದಾರಿಗೆ ತಿರುಗಿಕೊಳ್ಳುತ್ತಿದೆ. ಇದು ಯಾಕಾಯಿತು ಎಂಬುದರ ಬಗ್ಗೆ ನಮ್ಮ ಕಮ್ಯುನಿಸ್ಟರು ಸಂಕಟದಿಂದ ಚರ್ಚಿಸಿ ತೀರ್ಮಾನಕ್ಕೆ ಬಂದೇ ಇಲ್ಲ. ರಷ್ಯಾದಲ್ಲಿ ಆದುದನ್ನು ಅಮೆರಿಕನ್ನರ ಹುನ್ನಾರದಿಂದ ಆಯಿತು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಅಥವಾ ಚೀನಾದಲ್ಲಿ ಆಗುತ್ತಿರುವುದಕ್ಕೆ ಮುಂದೊಂದು ದಿನ ಅಂಥದ್ದೇ ಉತ್ತರ ಕಂಡುಕೊಳ್ಳುವುದೂ ಅರ್ಥಹೀನವೇ. ರಷ್ಯಾದ ಜನರೂ ಕೂಡಾ ಈಗ ಆಗಿರುವ ಬದಲಾವಣೆಯನ್ನು ಬಯಸಿದ್ದರು ಎಂಬ ಅಂಶವನ್ನು ಮರೆತು ಈ ಬದಲಾವಣೆಯನ್ನು ಚರ್ಚಿಸಬೇಕು.

ಲೆನಿನ್‌ನ ಪ್ರತಿಪಾದಿಸಿದ ತತ್ವಗಳಲ್ಲಿ ಮುಖ್ಯವಾದುದು 'ವ್ಯಾನ್‌ಗಾರ್ಡ್ ಆಫ್ ಪ್ರೊಲಿಟೇರಿಯಟ್' ಎಂಬುದು. ಕಮ್ಯುನಿಸ್ಟ್ ಪಕ್ಷವು ಕಾರ್ಮಿಕ ವರ್ಗದ ಮುಂಚೂಣಿಯಲ್ಲಿರುವ ಪಕ್ಷವಾಗಿರಬೇಕು. ಹೀಗೆ ಮುಂಚೂಣಿಯಲ್ಲಿರುವವರು ಮ್ಯಾನೇಜರ್‌ಗಳಾಗಿ ಬಿಡುತ್ತಾರೆ ಎಂಬುದು ನಮಗೆ ಮತ್ತೆ ಗೊತ್ತಾಯಿತು. ರಷ್ಯಾದಲ್ಲಿ ಆದದ್ದು ಇದೇ. ಈಗ ಚೀನಾದಲ್ಲಿ ಆಗಿರುವುದು ಇದೇ. ಹೀಗೆ ಆಗದೇ ಇರುವುದಕ್ಕೆ ಏನು ಮಾಡಬೇಕು ಎಂಬುದರ ಬಗ್ಗೆ ಮಾರ್ಕ್ಸ್‌ವಾದಿಗಳು ಯೋಚನೆ ಮಾಡದೇ ಇರುವುದರಿಂದ ಅವರಿಗೆ ಪರ್ಯಾಯ ಚಿಂತನೆ ಸಾಧ್ಯವಾಗಿಲ್ಲ.

ವರ್ತಮಾನದ ಯಾವ ರಾಜಕೀಯ ಪಕ್ಷವೂ ನಾವು ಇಂದು ಎದುರಿಸುತ್ತಿರುವ ಸಮಸ್ಯೆಗಳಿಗೆ ಸಂಪೂರ್ಣ ಪರ್ಯಾಯವಲ್ಲ. ಒಂದು ವೇಳೆ ಕಮ್ಯುನಿಸ್ಟರು ಅಧಿಕಾರಕ್ಕೆ ಬಂದರೆ ಕೋಮುವಾದ ಇರುವುದಿಲ್ಲ ಎಂದು ನಾನು ನಂಬುತ್ತೇನೆ. ಆದ್ದರಿಂದಲೇ ನಾನು ಮತ ಚಲಾಯಿಸುವ ಕ್ಷೇತ್ರದಲ್ಲಿ ಒಬ್ಬ ಕಮ್ಯುನಿಸ್ಟ್ ಅಭ್ಯರ್ಥಿ ಇದ್ದರೆ ನಾನು ಅವನಿಗೇ ಓಟ್ ಮಾಡುತ್ತೇನೆ. ಇಲ್ಲದಿದ್ದರೆ ಕಾಂಗ್ರೆಸ್‌ಗೆ ಓಟ್ ಮಾಡುತ್ತೇನೆ. ಯಾಕೆಂದರೆ ಕಾಂಗ್ರೆಸ್ ನಾಚಿಕೆಯನ್ನು ಬಿಟ್ಟು ಕೋಮುವಾದಿಯಾಗುವಷ್ಟು ಹಾಳಾಗಿಲ್ಲ. ಇದರರ್ಥ ಕಾಂಗ್ರೆಸ್ಸಿಗರು ಕೋಮುವಾದಿಗಳಾಗುವುದಿಲ್ಲ ಅಥವಾ ಕೋಮುವಾದಿಗಳಾಗಿರಲಿಲ್ಲ ಎಂದಲ್ಲ. ಕೋಮುವಾದಿಯಾಗುವುದಕ್ಕೆ ಒಂದು ಪಕ್ಷವಾಗಿ ಕಾಂಗ್ರೆಸ್‌ಗೆ ನಾಚಿಕೆಯಾಗುತ್ತದೆ ಎಂದಷ್ಟೇ.

ಒಂದು ಕಾಲದಲ್ಲಿ ಬಜೆಪಿಗೂ ಇಂಥ ನಾಚಿಕೆಗಳಿದ್ದವು. ಅಯೋಧ್ಯೆಯಲ್ಲಿ ಮಸೀದಿ ಉರುಳಿದಾಗ ಅಡ್ವಾಣಿ ಹೇಳಿದ ಮೊದಲ ಮಾತು 'ಐ ಫೀಲ್ ಅಶೇಮ್ಡ್ ಆಫ್ ಇಟ್' ಎಂದು. ಈ ಮಾತನ್ನು ನಾವು ನಿಜ ಎಂದೇ ಅರ್ಥ ಮಾಡಿಕೊಳ್ಳಬೇಕು. ಅವರಿಗೆ ಕನಿಷ್ಠ ಹೀಗೊಂದು ಮಾತು ಹೇಳಬೇಕು ಎಂದಾದರೂ ಅನ್ನಿಸಿತ್ತು.

ಗುಜರಾತ್‌ನಲ್ಲಿ ಸಾವಿರಾರು ಜನರನ್ನು ಕೊಂದ ನರಮೇಧ ನಡೆವಾಗ ಅಧಿಕಾರದಲ್ಲಿ ಇದ್ದ ನರೇಂದ್ರ ಮೋದಿ ಇಂದಿನವರೆಗೂ 'ಐ ಫೀಲ್ ಅಶೇಮ್ಡ್ ಆಫ್ ಇಟ್' ಎಂಬರ್ಥದ ಮಾತನ್ನಾಡಿಲ್ಲ. ಆದರೂ ಮೋದಿಯನ್ನು ಜನರು ಮತ್ತೆ ಮತ್ತೆ ಆಯ್ಕೆ ಮಾಡಿ ಅಧಿಕಾರಕ್ಕೆ ತಂದಿದ್ದಾರೆ. ಇದು ಬಜೆಪಿಯೊಳಗೇ ಒಂದು ಬದಲಾವಣೆಯನ್ನು ತಂದಿದೆ. ಮಸೀದಿಯನ್ನು ಒಡೆದದ್ದು ನಾಚಿಕೆಯ ವಿಷಯ, ಅವಮಾನದ ವಿಷಯ ಎಂದು ಒಮ್ಮೆಯಾದರೂ ಹೇಳಿದ್ದ, ಜಿನ್ನಾನನ್ನೂ ಮೆಚ್ಚಿಕೊಳ್ಳುವ ಧೈರ್ಯ ಮಾಡಿದ್ದ, ಬೆನಜೀರ್ ಭುಟ್ಟೋ ಜತೆಗೆ ಸಿಂಧಿ ಭಾಷೆಯಲ್ಲೇ ಮಾತನಾಡುವಷ್ಟು ಸಿಂಧಿ ಭಾಷೆಯ ಮೇಲೆ ಪ್ರೀತಿಯನ್ನಿಟ್ಟುಕೊಂಡಿದ್ದ ಅಡ್ವಾಣಿ ಕಾಣೆಯಾಗಿ ನರಮೇಧದ ಬಗ್ಗೆಯೂ ನಾಚಿಕೆ ಪಟ್ಟುಕೊಳ್ಳದ ಮೋದಿ ಬಜೆಪಿಗೆ ಮುಖ್ಯವಾಗುತ್ತಿದ್ದಾನೆ.

* * * * *


ಕಮ್ಯುನಿಸ್ಟರಿಗೂ ಕೆಲವು ನಂಬಿಕೆಗಳಿದ್ದವು. ಅದಕ್ಕೆ ವಿರುದ್ಧವಾದುದನ್ನು ಹೇಳುವುದಕ್ಕೆ ಅವರೂ ನಾಚಿಕೊಳ್ಳುತ್ತಿದ್ದರು. ಉದಾಹರಣೆಗೆ ಕೆಲವು ಕ್ಷೇತ್ರಗಳು ಸಾರ್ವಜನಿಕ ಸ್ವಾಮ್ಯದಲ್ಲೇ ಇರಬೇಕು ಎಂಬುದು ಅದರಲ್ಲೊಂದು. ಆದರೆ ಈಗ ಕಮ್ಯುನಿಸ್ಟರೇ ಎಸ್‌ಇಝಡ್ ಮಾಡಲು ಹೊರಟಿದ್ದಾರೆ. ಇವತ್ತು ಇಡೀ ದೇಶದಲ್ಲಿ ಅಭಿವೃದ್ಧಿಯ ವಿಷಯ ಮಾತನಾಡದೇ ಇರುವ ಒಬ್ಬ ಮುಖ್ಯಮಂತ್ರಿ ಅಂದರೆ ಕೇರಳ ಮುಖ್ಯಮಂತ್ರಿಯಾಗಿರುವ ವಿ.ಎಸ್.ಅಚ್ಯುತಾನಂದನ್ ಮಾತ್ರ. ಆದರೆ ಈತನನ್ನು ಕಂಡರೆ ಅವರ ಪಕ್ಷದ ಯಾರಿಗೂ ಆಗುವುದಿಲ್ಲ. ಆದರೆ ಆತ ಓಟುಗಳನ್ನು ಗಳಿಸಿಕೊಡುವುದರಿಂದ ಇನ್ನೂ ಅಧಿಕಾರದಲ್ಲಿ ಇರಲು ಸಾಧ್ಯವಾಗಿದೆ.

ಇಂಥ ಒಂದು ನಿರಾಶಾದಾಯಕ ರಾಜಕೀಯ ಪರಿಸ್ಥಿತಿಯಲ್ಲಿ ಚುನಾವಣೆ ಬಂದಿದೆ. ಇಲ್ಲಿ ಆಯ್ಕೆಗಳು ಬಹಳ ಪರಿಮಿತವಾದುವು. ಆದ್ದರಿಂದ ನಮ್ಮ ಆಯ್ಕೆ ಆರ್ಥಿಕತೆಯಲ್ಲ, ಇಡೀ ದೇಶವನ್ನು ಮತೀಯವಾದಿಯನ್ನಾಗಿ ಮಾಡುವ ಹುನ್ನಾರವನ್ನು ಇಟ್ಟುಕೊಂಡಿರುವ ಪಕ್ಷವನ್ನು ಅಧಿಕಾರಕ್ಕೆ ತರದೇ ಇರುವುದು.

ಮತೀಯವಾದಿ ಪಕ್ಷವನ್ನು ಅಧಿಕಾರಕ್ಕೆ ತರದೇ ಇರುವುದು ಎಂದಾಕ್ಷಣ ಉಳಿದವರ ಬಗೆಗಿನ ನಮ್ಮ ಭಿನ್ನಮತಗಳೆಲ್ಲಾ ಇಲ್ಲವಾದವು ಎಂದುಕೊಳ್ಳಕೂಡದು. ಲಂಕೇಶ್ ತಳೆದ ಒಂದು ರಾಜಕೀಯ ನಿಲುವಿನ ಮೂಲಕವೇ ಇದನ್ನು ವಿವರಿಸಲು ಪ್ರಯತ್ನಿಸುತ್ತೇನೆ. ಒಂದು ಚುನಾವಣೆಯಲ್ಲಿ ಲಂಕೇಶ್ ತಮ್ಮ ಪತ್ರಿಕೆಯ ಮೂಲಕ ಸೋನಿಯಾರನ್ನು ಬೆಂಬಲಿಸಿದರು. ಆಗ ನನಗೆ ಲಂಕೇಶರ ಈ ನಿರ್ಧಾರದ ಬಗ್ಗೆ ಗೊಂದಲವಿತ್ತು. ಆದರೆ ಈಗ ರಾಜಕೀಯವಾಗಿ ಸರಿಯಾದ ಆಲೋಚನೆ ಲಂಕೇಶರದ್ದಾಗಿತ್ತು ಅನ್ನಿಸುತ್ತದೆ. ಆ ರೀತಿಯ ಧೈರ್ಯವನ್ನು ಇವತ್ತು ಪತ್ರಿಕೆಗಳು ಮತ್ತು ಪಬ್ಲಿಕ್ ಇಂಟಲೆಕ್ಚುವಲ್‌ಗಳು ಮಾಡಬೇಕಾಗಿದೆ. ಹೀಗೊಂದು ನಿರ್ಧಾರ ತೆಗೆದುಕೊಂಡಾಗಲೂ ನಮ್ಮ ಭಿನ್ನಮತಗಳನ್ನು ಉಳಿಸಿಕೊಂಡಿರಲು ಸಾಧ್ಯವಿದೆ. ಇದನ್ನು ಲಂಕೇಶ್ ತೋರಿಸಿಕೊಟ್ಟಿದ್ದರು.


* * * * *

ರಾಜ್ಯಶಾಸ್ತ್ರದ ಅಧ್ಯಾಪಕರೊಬ್ಬರು ಚೀನಾದ ಬಗ್ಗೆ ಹೇಳುತ್ತಾ 'ಅಲ್ಲಿ ಆಡಳಿತಗಾರರ ಕಾಳಜಿಯೆಲ್ಲಾ ಒಂದೇ ವಿಷಯದ ಬಗ್ಗೆ. ಅದು 'ಹಾರ್ಮನಿ' ಅಥವಾ ಸೌಹಾರ್ದ. ಸೌಹಾರ್ದಕ್ಕಾಗಿ ಅವರು ನಡೆಸುವ ಒದ್ದಾಟ ಬಹಳ'. ಈ ಸೌಹಾರ್ದವನ್ನು ಹಿಂಸೆಯ ಮುಖಾಂತರವೂ ಸೃಷ್ಟಿಸಲು ಸಾಧ್ಯ. ಜನರಲ್ಲಿ ಭಯವನ್ನು ಹುಟ್ಟಿಸಿದರೂ ಸೌಹಾರ್ದ ಸ್ಥಾಪನೆಯಾಗುತ್ತದೆ. ಆಗ ಆಡಳಿತ ಯಂತ್ರ ಬಹಳ ದಕ್ಷವಾಗಿಯೂ ಸುಲಲಿತವಾಗಿಯೂ ನಡೆಯುತ್ತಿರುವಂತೆ ಕಾಣಿಸತೊಡಗುತ್ತದೆ. ತುರ್ತು ಪರಿಸ್ಥಿತಿಯ ಕಾಲದಲ್ಲಿ ಭಾರತದಲ್ಲಿ ರೈಲುಗಳೆಲ್ಲಾ ಸಮಯಕ್ಕೆ ಸರಿಯಾಗಿ ಓಡಾಡುತ್ತಿದ್ದವು.



ಅಧಿಕಾರಿಗಳೆಲ್ಲಾ ಸರಿಯಾದ ಸಮಯಕ್ಕೆ ಆಫೀಸುಗಳಲ್ಲಿ ಇರುತ್ತಿದ್ದರು. ಇಂಥದ್ದು ಮಧ್ಯಮ ವರ್ಗದಲ್ಲಿ ಎಲ್ಲವೂ ಸರಿಯಾಗಿಬಿಟ್ಟಿದೆಯಲ್ಲಾ ಎಂಬ ಭ್ರಮೆಯನ್ನು ಸೃಷ್ಟಿಸುತ್ತದೆ. ಗುಜರಾತ್‌ನಲ್ಲೂ ಇಂಥದ್ದೊಂದು 'ಸೌಹಾರ್ದ' ಕಾಣಿಸುತ್ತಿದೆ. ಅಲ್ಲಿರುವ ಮುಸ್ಲಿಮರೂ ಕೂಡಾ ಇಲ್ಲಿ ಸಾಕಷ್ಟು ಸೌಹಾರ್ದ ಇದೆ, ಈಗಿರುವುದಕ್ಕೆ ಎದುರಾಡದೇ ಸುಮ್ಮನಿರುವುದೇ ಒಳ್ಳೆಯದು ಎಂದು ಭಾವಿಸುತ್ತಿದ್ದರೂ ನಾವು ಆಶ್ಚರ್ಯಪಡಬೇಕಾಗಿಲ್ಲ.

ಇವತ್ತು 'ಸೌಹಾರ್ದ' ಎಂಬುದು ಅತ್ಯುತ್ಕೃಷ್ಟ ಗುಣಮಟ್ಟದಲ್ಲಿ ದೊರೆಯುವುದು ಸಿಂಗಾಪೂರ್‌ನಲ್ಲಿ. ಆದರೆ ಅಲ್ಲಿ ಜೀವಂತಿಕೆಯೇ ಇಲ್ಲ. ಅಲ್ಲಿ ಒಂದು ಚರ್ಚೆಯೂ ನಡೆಯುವುದಿಲ್ಲ. ಅಲ್ಲಿ ಮಾನಸಿಕ ಉತ್ಕೃಷ್ಟತೆ ಅಗತ್ಯವಿರುವ ಯಾವ ಕೆಲಸವೂ ನಡೆಯುವುದಿಲ್ಲ. ಹಿಂದೆ ಪಶ್ಚಿಮ ಬಂಗಾಳದಲ್ಲಿ ಇದು ನಡೆದಿತ್ತು. 'ರೆಡ್ ಟೆರರ್'ನ ವಿರುದ್ಧ ಒಂದು 'ವೈಟ್ ಟೆರರ್' ಇರಬೇಕೆಂದು ಅಲ್ಲಿನ ಸರಕಾರ ನಿರ್ಧರಿಸಿತ್ತು. ಈ ಚಿಂತನೆ ಈಗ ಇಡೀ ದೇಶಕ್ಕೆ ವ್ಯಾಪಿಸುತ್ತಿದೆ. ಈ ಬಗೆಯ ಪ್ರಭುತ್ವ ಪ್ರಾಯೋಜಿತ ಭಯೋತ್ಪಾದನೆಯ ಮೂಲಕ 'ಸೌಹಾರ್ದ'ವನ್ನು ಸ್ಥಾಪಿಸಲು ಸರಕಾರಗಳು ಹೊರಡುತ್ತಿವೆ. ಯಾವ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದರೂ ಇದನ್ನು ಮಾಡಬಹುದು. ಇದನ್ನು ನಾಚಿಕೆಯೇ ಇಲ್ಲದೆ ಮಾಡಬಹುದಾದ ರಾಜಕೀಯ



ಷ್ಟವೆಂದರೆ ಅದು ಮೋದಿ ಮಾದರಿಯ ಬಿಜೆಪಿ. ವರ ಬಗ್ಗೆ ನಾವು ಗಾಢವಾಗಿ ಚಿಂತಿಸದೇ ಇದ್ದರೆ ಸ್ವಾತಂತ್ರ್ಯ ಪ್ರಭುತ್ವ ಭಯೋತ್ಪಾದನೆಯ ಮುಖಾಂತರ ಸ್ಸರನ್ನೂ ತಣ್ಣಗಾಗಿಸಿ 'ಸೌಹಾರ್ದ'ವನ್ನು ಖಚಿತ ಪಡಿಸುವ ಒಂದು ವ್ಯವಸ್ಥೆ ಆಗಬಹುದು. ಹೀಗಾದಾಗ ಭಾರತ ಈ ತನಕ ಎಷ್ಟು ಸೃಜನಶೀಲವಾಗಿತ್ತೋ ಅಷ್ಟು ಜನಶೀಲವಾಗಿ ಉಳಿಯುವುದಿಲ್ಲ.

* * * * *

ಇತ್ತೀಚೆಗೆ ಮಾಧ್ಯಮಗಳಂತೂ ಪ್ರಭುತ್ವದ ಹಿಂಸೆಗೆ ಬೇಕಿರುವ ಒಮ್ಮತವನ್ನು ಮೂಡಿಸುವುದಕ್ಕೆ ಬೇಕಾದ ವಾತಾವರಣವನ್ನು ಸೃಷ್ಟಿ ಮಾಡುತ್ತಿವೆ. ಒಂದು ಕಾಲದಲ್ಲಿ ಎಲ್ಲಾದರೂ ಒಂದು ಮತೀಯ ಗಲಭೆ ಆದರೆ ಯಾವ ಎರಡು ಕೋಮುಗಳ ಮಧ್ಯೆ ಈ ಗಲಭೆ ಸಂಭವಿಸಿತು ಎಂಬುದನ್ನು ಪತ್ರಿಕೆಗಳು ವರದಿ ಮಾಡುತ್ತಿರಲಿಲ್ಲ. ಈ ವರದಿಗಾರಿಕೆಯ ಮಿತಿಗಳೇನೇ ಇದ್ದರೂ ಅದರ ಲ್ಲೊಂದು ಸಾಮಾಜಿಕ ಜವಾಬ್ದಾರಿಯ ಅಂಶವಿತ್ತು.

ಒಮ್ಮೆ ಶರದ್ ಪವಾರ್ ಮುಂಬೈ ಸ್ಫೋಟಕ್ಕೆ ಸಂಬಂಧಿಸಿದಂತೆ ತಾನು ಸುಳ್ಳಾಡಿದ್ದೆ ಎಂದು ತಪ್ಪೊಪ್ಪಿ ಕೊಂಡರು. ಸ್ಫೋಟವಾಗಿದ್ದ ಸ್ಥಳಗಳ ಪಟ್ಟಿಗೆ ಮುಸ್ಲಿಮರೇ ಹೆಚ್ಚಾಗಿರುವ ಒಂದು ಸ್ಥಳವನ್ನೂ ಸೇರಿಸಿಕೊಂಡು ಅವರು ಸುಳ್ಳಾ ಹೇಳಿಕೆ ನೀಡಿದ್ದರಂತೆ. ಮುಸ್ಲಿಮರ ವಿರುದ್ಧ ಗಲಭೆಗಳು ಆರಂಭವಾಗಿಬಿಡಬಹುದು ಎಂಬ ಭಯದಿಂದ ಶರದ್ ಪವಾರ್ ಈ ಸುಳ್ಳು ಹೇಳಿದ್ದ ರಂತೆ. ಆಡಳಿತ ನಡೆಸುತ್ತಿರುವ ವ್ಯಕ್ತಿಯೊಬ್ಬನಿಗೆ ಇದ್ದ ಸಾಮಾಜಿಕ ಜವಾಬ್ದಾರಿಯನ್ನು ಶರದ್ ಪವಾರ್ ಹೀಗೆ ಪ್ರದರ್ಶಿಸಿದ್ದರು. ಅವರ ಉದ್ದೇಶ ಒಂದೇ ಒಂದು ಗಲಭೆ ಮತ್ತೊಂದು ಗಲಭೆಗೆ ಪ್ರೇರಣೆಯಾಗಬಾರದು ಎಂಬುದಾಗಿತ್ತು. ಗುಜರಾತ್‌ನಲ್ಲಿ ಆಡಳಿತಾರೂಢರ ಕಡೆಯಿಂದ ಇಂಥದ್ದೊಂದು ಪ್ರಯತ್ನವೇ ನಡೆಯಲಿಲ್ಲ. ಬದಲಿಗೆ ಆಡಳಿತ ನಡೆಸುತ್ತಿದ್ದವರೇ ಒಂದು ಟೆರರ್ ಸೃಷ್ಟಿಸಿ ಜನರು ಬಾಯಿಮುಚ್ಚಿಕೊಂಡಿರುವಂತೆ ಮಾಡಿತು. ಅದಕ್ಕೆ ಸರ್ವವ್ಯಾಪಿಯಾಗಿ ಒಪ್ಪಿಗೆಯೂ ದೊರೆಯಿತು. ಬಹುಶಃ ಹೀಗೆ ಒಪ್ಪಿಗೆ ನೀಡುವವರ ಮನಸ್ಸಿನಲ್ಲಿ ರಾಷ್ಟ್ರ ಭದ್ರವಾಗ ಬೇಕಾದರೆ ಇಂಥ ಪ್ರಭುತ್ವ ಭಯೋತ್ಪಾದನೆ ಅಗತ್ಯ ಎಂಬ ಭಾವನೆ ಇರಬೇಕು.

* * * * *

ನಾನು ಚಿಕ್ಕವನಾಗಿದ್ದಾಗ ನಡೆದ ಘಟನೆಯೊಂದು ನೆನಪಾಗುತ್ತಿದೆ. ಯಾರೋ ರಾಷ್ಟ್ರಧ್ವಜವನ್ನು ಸುಟ್ಟು ಹಾಕಿದ್ದ ಸುದ್ದಿ ಅದು. ಇದಕ್ಕೆ ಪ್ರಧಾನಿ ಜವಹರಲಾಲ್ ನೆಹರು ಬಹಳ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದರು. ಹೀಗೆ ರಾಷ್ಟ್ರ ಧ್ವಜ ಸುಟ್ಟವರನ್ನು ನಾವು ಸುಡಬೇಕಾಗುತ್ತದೆ ಎಂಬ ಅರ್ಥದ ಮಾತುಗಳನ್ನು ಅವರು ಆಡಿದ್ದರೆನಿಸುತ್ತದೆ. ಅದಕ್ಕೆ ಪ್ರತಿಕ್ರಿಯಿಸಿದ್ದ ಜಯಪ್ರಕಾಶ್ ನಾರಾಯಣ್ ಬಾವುಟವೂ ಒಂದು ಬಟ್ಟೆ ಎಂಬುದನ್ನು ನೆನಪಿಟ್ಟು ಕೊಳ್ಳಿ. ಮನುಷ್ಯ ಜೀವ ಅದಕ್ಕಿಂತ ಬೆಲೆಯುಳ್ಳದ್ದು' ಎಂದಿದ್ದರು. ಯಾವ ರಾಷ್ಟ್ರದಲ್ಲೇ ಆಗಲಿ ಈ ರೀತಿಯ ಮನಸ್ಸಿನ ಸಮತೂಕ ಇರುವವರು ಬೇಕು. ಈ ಸಮತೂಕ ಇಲ್ಲದೇ ಇದ್ದರೆ ಈ ರಾಷ್ಟ್ರಪ್ರೇಮ ಎನ್ನು ವುದೂ ಕೂಡಾ ಭಯದಿಂದ ಹುಟ್ಟಿದ ರಾಷ್ಟ್ರಪ್ರೇಮ ವಾಗುತ್ತದೆ.

ರಾಷ್ಟ್ರ ಪ್ರೇಮ ಎನ್ನುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಇಂಗ್ಲೆಂಡ್‌ನಲ್ಲಿ ಓದುತ್ತಿದ್ದಾಗ ಅಲ್ಲಿದ್ದ ಅನೇಕ ಜನ ಪಾಕಿಸ್ತಾನಿ ಸ್ನೇಹಿತರು ನನಗೆ ಬೆಂಗಳೂರು ಈಗ ಹೇಗಿದೆ, ಎಲ್ಲೆಲ್ಲಿ ಏನೇನಿದೆ ಎಂಬುದನ್ನು ಕೇಳಿ ತಿಳಿಯುತ್ತಿದ್ದರು. ಅವರಿಗೆ ಪ್ರೀತಿ ಇದ್ದದ್ದು ಬೆಂಗಳೂರಿನ ಮೇಲೆ. ರಾಷ್ಟ್ರ ಪ್ರೇಮ ಅನ್ನುವುದಕ್ಕಿಂತ ದೇಶ ಪ್ರೇಮ ಎಂದು ಗುರುತಿಸಬಹುದಾದ ಮನಸ್ಥಿತಿ ಇದು. ಈ ದೇಶ ಪ್ರೇಮ ಅಮೂರ್ತವಾದ ರಾಷ್ಟ್ರವನ್ನು ಆಧಾರವಾಗಿ ಟ್ಟುಕೊಂಡಿರುವುದಿಲ್ಲ. ಇದು ಜೀವನದ ಭಾಗವೇ ಆಗಿರುವ ಒಂದು ಸ್ಥಳ ಮತ್ತು ಅಲ್ಲಿನ ಜೀವನ ಕ್ರಮದ ಮೇಲಿನ ಪ್ರೀತಿಯ ಅಭಿವ್ಯಕ್ತಿಯಾಗಿರುತ್ತದೆ. ಹಾಗೆಯೇ ಭಾರತದಲ್ಲಿ ಇವತ್ತಿಗೂ ಎಷ್ಟೋ ಜನ ಲಾಹೋರ್ ಎಂದರೆ ಪ್ರಾಣ ಬಿಡುವವರಿದ್ದಾರೆ. ಲಾಹೋರ್‌ನಲ್ಲಿ ದಿಲ್ಲಿಯನ್ನು ಬಹಳ ಪ್ರೀತಿಸುವವರಿದ್ದಾರೆ.

* * * * *

ಟರ್ಕಿಯಲ್ಲಿ ಕುರಾನ್ ಅನ್ನು ಆಧುನಿಕ ಕಾಲಕ್ಕೆ ಅನುಗುಣವಾಗಿ ಪುನರ್ ವ್ಯಾಖ್ಯಾನಿಸುವ ಪ್ರಯತ್ನ ನಡೆಯುತ್ತಿದೆ. ಹಾಗೆಯೇ ಪಾಕಿಸ್ತಾನದ ಚುನಾವಣೆಯಲ್ಲಿ ಮುಲ್ಲಾಗಳ ಒಂದು ವಿಜಯವೇ ಆಗಲಿಲ್ಲ. ಪಾಕಿಸ್ತಾನದ ಜನ ತಣ್ಣಗೆ ಒಬ್ಬ ಸರ್ವಾಧಿಕಾರಿಯ ವಿರುದ್ಧ ಮತ ಚಲಾಯಿಸಿ ಪ್ರಜಾಪ್ರಭುತ್ವವನ್ನು ಮರಳಿ ತಂದರು. ಹಾಗೆ ನೋಡಿದರೆ ಪಾಕಿಸ್ತಾನದ ಸರ್ವಾಧಿಕಾರಿ ಮುಷರಫ್ ಕೂಡಾ ತನ್ನ ದೇಶದಲ್ಲಿ ಒಂದು ಬಗೆಯ 'ಸೌಹಾರ್ದ'ವನ್ನು ಸೃಷ್ಟಿಸಿದ್ದ. ಪಾಕಿಸ್ತಾನದ ಜನ ಈ ಭಯವನ್ನು ಕಳಚಿಕೊಂಡು ಸೃಜನಶೀಲರಾಗಲು ನಿರ್ಧರಿಸಿದರು.

ಮೂಲಭೂತವಾದವನ್ನು ವಿರೋಧಿಸುವ ಸಮಗ್ರ

(23ನೇ ಪುಟಕ್ಕೆ) ⇨



■ ಎಂ. ಎಸ್. ಆಶಾದೇವಿ

> ಚಳವಳಿಯ ಬಗ್ಗೆ ಅಥವಾ ಮುಂದಣ ಹೆಜ್ಜೆಯ ಬಗ್ಗೆ ಪ್ರಶ್ನೆಗಳು ಎದ್ದಾಗ, ಅವುಗಳನ್ನು ದಾರಿ ಬಿಟ್ಟ ನಿಲುವುಗಳಾಗಿಯೋ, ಭಿನ್ನ ದಾರಿಗಳಾಗಿಯೋ ಗ್ರಹಿಸಲಾಗುತ್ತದೆ. ಈ ಸಂಗತಿಗಳು ಸಮಕಾಲೀನ ಚರ್ಚೆಗಳಲ್ಲಿ ಸ್ಪಷ್ಟವಾಗುವುದೂ ಕಷ್ಟವೇ.

ಇದು ಆತ್ಮ ಘನತೆಯ ಪ್ರಶ್ನೆ

ಎಲ್ಲ ಚಳವಳಿಗಳಲ್ಲೂ ಕೆಲವು ಅಂಶಗಳು ಸಾಮಾನ್ಯವಾಗಿರುತ್ತವೆ. ಕೆಲವು ಸಂಗತಿಗಳಂತೂ ಚಳವಳಿಗಳ ವಿಧಿಯೆನ್ನುವಂತೆ ಅನಿವಾರ್ಯವಾಗಿ ಘಟಿಸುತ್ತವೆ ಮತ್ತು ಪುನರಾವರ್ತನೆಯಾಗುತ್ತವೆ. ಇವುಗಳಲ್ಲಿ ಒಂದು ಮುಖ್ಯವಾದ ಅಂಶವೆಂದರೆ, ಚಳವಳಿಗಳ ಆರಂಭದಲ್ಲಿ ಅದರ 'ಗಮ್ಯ'ವನ್ನು ಮಾತ್ರವಲ್ಲದೆ 'ಗತಿ'ಯನ್ನೂ (course) ಸ್ಥೂಲವಾಗಿ ನಿರ್ಧರಿಸಲಾಗಿರುತ್ತದೆ. ನಡೆಯಬೇಕಾದ ಆ ದಾರಿಯ ಬಗ್ಗೆ ಅದಮ್ಯವೆನ್ನಬಹುದಾದ ಅಥವಾ ಸ್ವಲ್ಪ ಅತಿ ಎನ್ನಬಹುದಾದ ನಂಬಿಕೆಯೂ ಪ್ರಬಲವಾಗಿರುತ್ತದೆ. ಆದರೆ ಬಹುತೇಕ ಸಂದರ್ಭಗಳಲ್ಲಿ ಚಳವಳಿಗಳ ಗತಿಯನ್ನು ನಿರ್ಧರಿಸುವುದು ಆಯಾ ಕಾಲಘಟ್ಟವೇ ಆಗಿರುತ್ತದೆ. ಹೀಗಿದ್ದೂ ಚಳವಳಿಯು 'ನಡೆದು ಬಂದ ದಾರಿ'ಯ ಬಗ್ಗೆ ಅಥವಾ ಮುಂದಣ ಹೆಜ್ಜೆಯ ಬಗ್ಗೆ ಪ್ರಶ್ನೆಗಳು ಎದ್ದಾಗ, ಭಿನ್ನ ದಾರಿಗಳ ಹುಡುಕಾಟಗಳು ಆರಂಭವಾದಾಗ ಅವುಗಳನ್ನು ದಾರಿ ಬಿಟ್ಟ ನಿಲುವುಗಳಾಗಿಯೋ, ಭಿನ್ನ ದಾರಿಗಳಾಗಿಯೋ ಗ್ರಹಿಸಲಾಗುತ್ತದೆ. ಆದರೆ ವಾಸ್ತವದಲ್ಲಿ ಚಳಿವಳಿಯ ತಾತ್ವಿಕತೆಯು ಕಾಲದ ತುರ್ತಿನ ಪ್ರಶ್ನೆಗಳೊಂದಿಗೆ ನಡೆಸಬೇಕಾದ ಅನುಸಂಧಾನವೇ ಆಗಿರುತ್ತದೆ. ಈ ಅನುಸಂಧಾನದಿಂದಾಗಿ ಚಳವಳಿಯ ತಾತ್ವಿಕತೆಯು ಅನಿವಾರ್ಯವಾಗಿ ತನ್ನ ವಿನ್ಯಾಸದಲ್ಲಿಯೂ ಬದಲಾಗಬೇಕಾಗುತ್ತದೆ. ಈ ಪರಿವರ್ತನೆಯು ಅನೇಕ ಸಂದರ್ಭಗಳಲ್ಲಿ ಮೂಲ ತಾತ್ವಿಕತೆಯ ಪಲ್ಲಟವೆಂಬಂತೆ ಕಂಡರೂ ಅವು ಮೂಲ ತಾತ್ವಿಕತೆಯ ವಿಸ್ತಾರವಾಗಿರುವ ಸಂದರ್ಭಗಳೇ ಹೆಚ್ಚು. ಆದರೆ ಈ ಸಂಗತಿಗಳು ಸಮಕಾಲೀನ ಚರ್ಚೆಗಳಲ್ಲಿ ಸ್ಪಷ್ಟವಾಗುವುದೂ ಕಷ್ಟವೇ. ಜನಪರ ಚಳುವಳಿಗಳು ಎದುರಿಸುವ ಮೂಲಭೂತ ಸವಾಲುಗಳಲ್ಲಿ ಇದೊಂದು. ತಾತ್ವಿಕತೆ ಗಮ್ಯ ಗತಿ ಇವುಗಳ ಸಾವಯವ ಸಂಬಂಧದ ಜೊತೆ ಅಷ್ಟೇ ಚಲನಶೀಲವಾದ ಸಂಬಂಧ ಏರ್ಪಡದಿದ್ದರೆ ಚಳವಳಿಗಳು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ಸಮಸ್ಯೆಗಳನ್ನು ಬಿಡಿಸಿಕೊಳ್ಳಲಾಗದೆ ಅನೇಕ ಚಳವಳಿಗಳು ಅಪೂರ್ಣವಾಗಿರುವುದಕ್ಕೆ ಇತಿಹಾಸದಲ್ಲಿ ಅನೇಕ ಉದಾಹರಣೆಗಳಿವೆ.

ಮಹಿಳಾ ಚಳವಳಿಯು ಇಂದು ಎದುರಿಸುತ್ತಿರುವ ಸವಾಲುಗಳನ್ನು ಸ್ಪಷ್ಟಪಡಿಸಿಕೊಳ್ಳುವ ದೃಷ್ಟಿಯಿಂದ ಈ ಹಿನ್ನೆಲೆಯನ್ನು ಕಟ್ಟಿಕೊಳ್ಳಬೇಕಾಯಿತು. ಮಹಿಳಾ ಚಳವಳಿಯು ತನ್ನ ಮೊದಲ ಘಟ್ಟದಲ್ಲಿ ಹೆಣ್ಣಿನ ಸಮಸ್ಯೆಗಳಿಗೆ ದೇಶಾತೀತ ಕಾಲಾತೀತವಾದ ಸಾರ್ವತ್ರಿಕ ಸ್ವರೂಪವೊಂದು ಇದೆ ಮತ್ತು ಅವುಗಳನ್ನು ಮುಖಾಮುಖಿಯಾಗುವ ಕ್ರಮದಲ್ಲಿಯೂ ಏಕರೂಪತೆ ಅಥವಾ ಸಾರ್ವತ್ರಿಕ ಸ್ವರೂಪವೊಂದು ಇರುವುದು ಸಾಧ್ಯವೆಂದೇ ತಿಳಿದಿತ್ತು. ಆದರೆ ಹೆಣ್ಣಿನ ಸಮಸ್ಯೆಗಳಿಗೆ ಸಾರ್ವತ್ರಿಕ ಸ್ವರೂಪವೊಂದು ಇರುವಂತೆಯೇ ಕಾಲ-ಪರಿಸರ ಬದ್ಧವಾದ ಸಮಸ್ಯೆಗಳಿಗೂ ಅಷ್ಟೇ ಆಳವಾಗಿವೆ ಎನ್ನುವ ಸತ್ಯವು ಮಹಿಳಾ ಚಳವಳಿಯು ಅನಿವಾರ್ಯವಾಗಿ ಬದಲಿಸಿಕೊಳ್ಳಬೇಕಾದ 'ಗತಿ'ಯನ್ನು ಸೂಚಿಸಿತು.

ಸಂಸ್ಕೃತಿ ನಿಷ್ಠವಾದ ಮತ್ತು ಪರಿಸರಬದ್ಧವಾದ ಹೋರಾಟಕ್ಕೆ ಮಹಿಳಾ ಚಳವಳಿಯು ಹೆಚ್ಚಿನ ಒತ್ತು ಕೊಟ್ಟಿತು. ಈ ಒತ್ತು ಒಂದು ರೀತಿಯಲ್ಲಿ ಮಹಿಳಾ ಚಳುವಳಿಯ ಹೋರಾಟದ ಗತಿಯಲ್ಲಿನ ಮುಖ್ಯ ಬದಲಾವಣೆ. ಈ ಗತಿಯನ್ನು ಭಿನ್ನ ಧಾರೆ ಎಂದು ಗುರುತಿಸುವುದಕ್ಕಿಂತ ಪೂರಕಧಾರೆ ಎಂದು ಗುರುತಿಸುವುದೇ ಹೆಚ್ಚು ಸೂಕ್ತ. ಅಕ್ಷರಶಃ ಬಹುಮುಖಿಯಾದ ಮಹಿಳಾ ಹೋರಾಟದ ಆಯಾಮಗಳನ್ನು ಈ ತಾತ್ವಿಕ ಹಿನ್ನೆಲೆಯಲ್ಲಿ ಚರ್ಚಿಸಿದಾಗ ಮಾತ್ರ ಸಮಗ್ರ ಎನ್ನಬಹುದಾದ ನೆಲೆಯೊಂದು ರೂಪುಗೊಳ್ಳುತ್ತದೆ.

ಎಂದರೆ, ಮಹಿಳಾ ಚಳವಳಿಯು ತನ್ನ ಮೂಲ ತಾತ್ವಿಕತೆಯನ್ನು ಪ್ರಾಯೋಗಿಕವಾಗಿ ಕ್ರಿಯಾಶೀಲಗೊಳಿಸುವ ಹೊತ್ತಿನಲ್ಲಿ ತಾತ್ವಿಕತೆ ಮತ್ತು ಪ್ರಾಯೋಗಿಕತೆಯ ನಡುವೆ ಉದ್ಭವಿಸುವ ಕಂದರ ಒಂದು ಕಡೆಯಾದರೆ, ಮಹಿಳಾ ಚಳವಳಿಯು ದಕ್ಕಿಸಿಕೊಳ್ಳಲು ಹವಣಿಸುತ್ತಿರುವ ಹೊಸ ಚಲನೆಗಳಿಗೆ, ಪ್ರಯತ್ನಗಳಿಗೆ ತಾತ್ವಿಕ ಸ್ವರೂಪವನ್ನು ಕಟ್ಟಿಕೊಳ್ಳುವ ಸವಾಲು ಇನ್ನೊಂದು ಕಡೆ. ಮಹಿಳಾ ಚಳವಳಿಯ ಮೂಲ ಆಶಯವಾದ ಸ್ವಾತಂತ್ರ್ಯ ಮತ್ತು ಸಮಾನತೆಯ ಗ್ರಹಿಕೆಗಳು ಇಂದು 'ಸ್ವಾಯತ್ತತೆ'ಯ ಸಮಗ್ರ, ಸ್ವಯಂಪೂರ್ಣ, ಸ್ವಾವಲಂಬಿ ಎಂದು ಕರೆಯಬಹುದಾದ ಗ್ರಹಿಕೆಯ ಕಡೆಗೆ ಚಲಿಸುತ್ತಿವೆ. ನಮ್ಮ ಗ್ರಹಿಕೆಯಲ್ಲಿ ಸ್ಪಷ್ಟವಿರುವ 'ಸ್ವಾಯತ್ತತೆ'ಯ ತಾತ್ವಿಕ ಮತ್ತು ಪ್ರಾಯೋಗಿಕ ನೆಲೆಗಳನ್ನು ಈಗ ಚರ್ಚಿಸಲಾಗುತ್ತಿದೆ. ಆದರೆ ಸ್ವಾಯತ್ತತೆಯ ಪ್ರಶ್ನೆಯಷ್ಟೇ ಮುಖ್ಯವಾಗಿರುವ ಇನ್ನೂ ಅನೇಕ ಪ್ರಶ್ನೆಗಳನ್ನು ಮಹಿಳಾ ಚಳವಳಿ ಈಗ ಎದುರಿಸುತ್ತಿದೆ.

* * * * *




ಒಮ್ಮೆ ಲೇಖಕಿ ವೈದೇಹಿಯವರ ಜೊತೆ ಮಾತನಾಡುತ್ತಿರುವಾಗ ಅವರು ಹೇಳಿದರು, "ಕಾಲ ಬದಲಾಗಿದೆ ಅಂತೀವಿ, ಕಣೆ, ಎಷ್ಟು ಬದಲಾಗಿದೆ? ಎರಡು ಹೆಜ್ಜೆ ಮುಂದಿದ್ದರೆ, ನಾಲ್ಕು ಹೆಜ್ಜೆ ಹಿಂದೆ ಅನಿಸುತ್ತೆ!" ಅಂತ. ಇದು ಹೆಣ್ಣಿನ ಸಮಕಾಲೀನ ಸ್ಥಿತಿಗತಿಯ ಬಗ್ಗೆ ಸರಳವಾದರೂ ಮುಖ್ಯವಾದ ವ್ಯಾಖ್ಯಾನವೆಂದೇ ಅನಿಸುತ್ತದೆ. ಏಕೆಂದರೆ ಮೇಲ್ಮುಖಿ ಚಲನೆಯಂತೆ ಕಾಣುವ ಅನೇಕ ಸಂದರ್ಭಗಳು ಇನ್ನೊಂದು ದೃಷ್ಟಿಯಿಂದ ನೋಡುವಾಗ ಹಿಮ್ಮುಖಿ ಚಲನೆಯ ಹಾಗೆ ಅಥವಾ ಸ್ಥಾಪಿತ ನಿಲುವುಗಳ ಮುಂದುವರಿಕೆಯಾಗಿಯೇ ಕಾಣಿಸುತ್ತವೆ. ಹೆಣ್ಣಿನ ಸ್ಥಿತಿಗತಿಗಳಲ್ಲಾಗಿರುವ ಬದಲಾವಣೆಗಳನ್ನು ಅವಳ ವ್ಯಕ್ತಿತ್ವಕ್ಕೆ ಅಧಿಕೃತತೆಯನ್ನು ಪಡೆಯುವ ದಿಕ್ಕಿನ ನಡಿಗೆ ಎಂದು ನೋಡಬಹುದಾದ ಸಾಧ್ಯತೆ ಇರುವಂತೆಯೇ ಅದು ಅವಳ ಶೋಷಣೆಯ ಮಾರ್ಗವೂ ಹೌದಲ್ಲವೇ ಎನ್ನುವ ಪ್ರಶ್ನೆಯೂ ಎದುರಾಗುವಂತೆ ಅನೇಕ ಸನ್ನಿವೇಶಗಳು ನಮ್ಮೆದುರಿಗಿವೆ.

ಆದ್ದರಿಂದಲೇ ಹೆಣ್ಣಿನ ಮಟ್ಟಿಗೆ ಇದು ತೀವ್ರ ವೈರುಧ್ಯಗಳ ಕಾಲ. ಈ ವೈರುಧ್ಯಗಳನ್ನು ಸೃಷ್ಟಿಸುತ್ತಿರುವುದು ಬಂಡವಾಳಶಾಹಿ ಮತ್ತು ಜಾಗತೀಕರಣದ ಅಭಿವೃದ್ಧಿ ಮಾದರಿಗಳು. ಅಭಿವೃದ್ಧಿಯ ಈ ಮಾದರಿಗಳು ಹೆಣ್ಣಿಗೆ ಅಪಾಯಕಾರಿ ಎನ್ನುವ ಆತಂಕವನ್ನು ಜಾಗತೀಕರಣದ ಮೊದಲ ಘಟ್ಟದಲ್ಲಿಯೇ ವಂದನಾ ಶಿವರಂತಹ ಚಿಂತಕರು ವ್ಯಕ್ತಪಡಿಸಿದ್ದರು. ಅವರ ಆತಂಕಗಳು ನಿರಾಧಾರವಲ್ಲವೆನ್ನುವುದು ಈಗ ಸ್ಪಷ್ಟವಾಗುತ್ತಿದೆ. ಪಕ್ಷದ ಬಾಬತ್ತೇ ಅಲ್ಲದ ಗ್ಯಾರಂಟಿ ವಸ್ತುವಾಗಿ, ಬಂಡವಾಳವಾಗಿ ಹೆಣ್ಣನ್ನು ಹೂಡುತ್ತಿರುವ ಹತ್ತು ಹಲವು 'ಅಭಿವೃದ್ಧಿ ಮಾದರಿ'ಗಳು ನಮ್ಮೆದುರಿಗೆ ರಾರಾಜಿಸುತ್ತಿವೆ. ದುರಂತವೆಂದರೆ ಇವು ಸ್ವಾವಲಂಬನೆ ಮೊದಲಾದ ಸ್ತ್ರೀವಾದಿ ಪರಿಕಲ್ಪನೆಗಳ ಹೆಸರಿನಲ್ಲಿಯೇ ಬರುತ್ತವೆ ಎನ್ನುವುದು. ಮಾಡೆಲಿಂಗ್ ಇದಕ್ಕೆ ಅತ್ಯುತ್ತಮ ಉದಾಹರಣೆ. ಹೆಣ್ಣಿನ ವ್ಯಕ್ತಿತ್ವದ ಬಗ್ಗೆ ಕವಡೇಕಾಸಿನ ಪರಿಗಣನೆಯೂ ಇಲ್ಲದ ಜಾಹೀರಾತುಗಳು ಹೆಣ್ಣಿನ 'ವಸ್ತು ವಿಶೇಷ'ದ ಸ್ಥಾಪಿತ ದೃಷ್ಟಿಕೋನಗಳನ್ನು ಇನ್ನೂ ಭದ್ರವಾಗಿಸುತ್ತಿವೆ. ವ್ಯಕ್ತಿತ್ವದ 'ಸ್ವಪ್ರಜ್ಞೆ'ಯ, ದೇಹ ಮತ್ತು ಆತ್ಮ ಘನತೆಯ ಅರಿವನ್ನು ಇವರಲ್ಲಿ ಮೂಡಿಸಬೇಕಾಗಿರುವುದು ಮಹಿಳಾ ಚಳವಳಿಯ ಎದುರಿಗಿರುವ ಬಹುಮುಖ್ಯ ಸವಾಲು. ಅನೇಕ ಮಹಿಳಾ ಸಂಘಟನೆಗಳು ಈ ಪ್ರಯತ್ನದಲ್ಲಿ ತೊಡಗಿಕೊಂಡಿವೆ.

ವೈರುಧ್ಯಗಳನ್ನು ಇನ್ನೂ ವಿವರವಾಗಿ ನೋಡುವುದಾದರೆ, ಜಾಗತೀಕರಣದ ಅಭಿವೃದ್ಧಿ ಮಾದರಿಗಳು ನಮ್ಮನ್ನು ಆಕ್ರಮಿಸುವುದಕ್ಕೆ ಮುಂಚೆ ಮಹಿಳಾ ಕಲ್ಯಾಣ ಇಲಾಖೆಯ ಒಂದು ಭಾಗವಾಗಿದ್ದ ಹೆಣ್ಣನ್ನು ಅಧಿಕಾರಶಾಹಿಯ ಕೃಪಾಕಟಾಕ್ಷ ಯೋಜನೆಗಳ ಸುಲಿಗೆಯಿಂದ ಪಾರು ಮಾಡುವ ಪ್ರಶ್ನೆ ನಮ್ಮೆದುರಿಗಿತ್ತು. ಕಲ್ಯಾಣದಿಂದ ಅಭಿವೃದ್ಧಿಯ ಕಡೆಗೆ ಸರ್ಕಾರೀ ಯೋಜನೆಗಳನ್ನು ತರುವ ಪ್ರಯತ್ನದಲ್ಲಿ ಮಹಿಳಾ ಚಳವಳಿ ತೊಡಗಿಸಿಕೊಂಡಿತ್ತು. ಆದರೆ ಈಗ ಅಭಿವೃದ್ಧಿಯ ಅಂಚಿನಲ್ಲಿದ್ದ ಹೆಣ್ಣನ್ನು ಅಭಿವೃದ್ಧಿ ಯೋಜನೆಗಳ ಕೇಂದ್ರಕ್ಕೆ ತರಲು ಇನ್ನಿಲ್ಲದಂತೆ ಶ್ರಮಿಸಿದ ಮಹಿಳಾ ಚಳವಳಿ ಈಗ ಅಭಿವೃದ್ಧಿ ಮಾದರಿಗಳ ಬಗೆಗೆ ವಿಶೇಷವಾಗಿ ಚರ್ಚಿಸಬೇಕಾದ ಅನಿವಾರ್ಯ ಸನ್ನಿವೇಶದಲ್ಲಿದೆ.

ಮಹಿಳಾ ಚಳವಳಿಯ ಎದುರಿಗಿರುವ ಸವಾಲುಗಳನ್ನು ನೋಡಿದ್ದಾದ ಮೇಲೆ ಮಹಿಳಾ ಚಳವಳಿಯ ಸಾಧನೆಗಳನ್ನೂ ನಾವು ಗಮನಿಸಬೇಕು. ಪಂಚಾಯತ್ ಯೋಜನೆಯಲ್ಲಿ ಹೆಣ್ಣುಮಕ್ಕಳು ಇಂದು ಪಡೆಯುತ್ತಿರುವ ಯಶಸ್ಸು ಚಳವಳಿಯ ಬಗೆಗಿನ ನಮ್ಮ ಭರವಸೆಯನ್ನು ಹೆಚ್ಚಿಸುತ್ತದೆ. ರಾಜಕೀಯ ಸಂಕಲ್ಪಬಲ ಇದರ ಹಿಂದಿದೆ ಎನ್ನುವುದು ನಿಜವಾದರೂ ಮಹಿಳೆಯರಲ್ಲಿ ಅವರ ಅಧಿಕಾರ ಮತ್ತು ಜವಾಬ್ದಾರಿಯ ಬಗೆಗೆ ಅರಿವನ್ನು ಮೂಡಿಸುವ ನಿಟ್ಟಿನಲ್ಲಿ ಮಹಿಳಾ ಚಳವಳಿಯ ಪಾತ್ರ ಬಹು ದೊಡ್ಡದು. ಸ್ವಸಹಾಯ ಸಂಘಗಳು ಗ್ರಾಮೀಣ ಮಹಿಳೆಯರಲ್ಲಿ ಮೂಡಿಸುತ್ತಿರುವ ಆತ್ಮವಿಶ್ವಾಸ ಸಣ್ಣದಲ್ಲ (ಚಹಾ ಲೋಟದಲ್ಲಿ ಎದ್ದ ಅಲೆ ಸಣ್ಣದಾದರೂ ಅಲೆ ಹೌದಷ್ಟೇ!). ವಿದ್ಯಾಭ್ಯಾಸ, ಉದ್ಯೋಗ ಮತ್ತು ಆರ್ಥಿಕ ಸ್ವಾವಲಂಬನೆಗಳು ಬದಲಾವಣೆಯ ಹೆಬ್ಬಾಗಿಲುಗಳು ಎಂದು ತಿಳಿಯಲಾಗಿದೆಯಷ್ಟೇ. ಇವು ತರುವ, ತರುತ್ತಿರುವ ಬದಲಾವಣೆಯ ಸ್ವರೂಪಗಳ ಬಗೆಗೆ ಅನೇಕ ಪ್ರಶ್ನೆಗಳನ್ನು ಎತ್ತುವುದು ಸಾಧ್ಯ. ಆದರೆ ಗ್ರಾಮೀಣ ಮತ್ತು ದಮನಿತ ವರ್ಗದ ಮಹಿಳೆಯರಿಗೆ ಅವರ ಕೊನೆಯಿಲ್ಲದ ನಿರ್ಬಂಧಿತ ಬದುಕಿನಿಂದ ಹೊರಬರುವ ಒಂದು ಸಾಧ್ಯತೆಯನ್ನಂತೂ ಇವು ಖಂಡಿತವಾಗಿಯೂ ತೋರಿಸುತ್ತವೆ.

ಕೊನೆಯಲ್ಲಿ ಹೇಳಬಹುದಾದ ಮಾತೆಂದರೆ ಮಹಿಳಾ ಚಳವಳಿಯು ಇಂದು ಅನೇಕ ಸ್ತರಗಳಲ್ಲಿ ಕೆಲಸ ಮಾಡಬೇಕಾಗಿದೆ. ಒಂದು ವರ್ಗದವರಲ್ಲಿ ವಿಮೋಚನೆಯ ಅರಿವನ್ನು, ಇನ್ನೊಂದು ವರ್ಗದವರಲ್ಲಿ ಸ್ವಘನತೆಯ ಪ್ರಜ್ಞೆಯನ್ನು ಮತ್ತು ಒಟ್ಟಾಗಿ ಇಡೀ ಸಮುದಾಯದಲ್ಲಿ ಹೆಣ್ಣಿನ ವ್ಯಕ್ತಿತ್ವಕ್ಕೆ ಅಧಿಕೃತತೆಯನ್ನು ಕೊಡುವ ಮನೋವಿನ್ಯಾಸವನ್ನು ರೂಪಿಸುವ ಬಹು ಕಷ್ಟದ ಸವಾಲುಗಳನ್ನು ಮಹಿಳಾ ಚಳವಳಿಯು ಎದುರಿಸುತ್ತಿದೆ. ■



■ ಸುಕನ್ಯಾ ಕನಾರಳ್ಳಿ

ಅಗ್ನಿ

ಕತೆ

ಮಲೆಯಾಳಂ ಮೂಲ: ಎಸ್. ಸಿತಾರ

ಸೈಕಲ್ ಹೊಡೆಯುವುದು ಪ್ರಿಯಾಳಿಗೇನೂ ಅಚ್ಚುಮೆಚ್ಚಿನ ಹವ್ಯಾಸವಲ್ಲ. ಆದರೂ ಆಫೀಸಿನಲ್ಲಿ ತನ್ನ ಟೈಪಿಂಗ್ ಕೆಲಸವನ್ನೆಲ್ಲ ಮುಗಿಸುವ ಹೊತ್ತಿಗೆ ಕತ್ತಲಾಗಿರುತ್ತಲ್ಲ? ಅಂತಹ ದಿನಗಳಲ್ಲಿ ಸೈಕಲ್ ಸಾಕಷ್ಟು ಉಪಯೋಗಕ್ಕೆ ಬರುತ್ತಿತ್ತು. ಸದ್ಯ ಇದೊಂದು ಇದ್ದಿದ್ದಕ್ಕೆ ಬಚಾವು ಎಂದು ಟಿ.ಪಿ.ನಾಯರ್ ರಸ್ತೆಯನ್ನು ಹಾದು ಮನೆಗೆ ಹೋಗುವಾಗೆಲ್ಲ ಪ್ರಿಯಾ ಅದೆಷ್ಟು ಬಾರಿ ಅಂದುಕೊಳ್ಳುತ್ತಿದ್ದಳೋ.

ಆ ರಸ್ತೆಯಲ್ಲಿ ಪರವಾಗಿಲ್ಲ ಎನ್ನುವಷ್ಟು ಸಂಖ್ಯೆಯಲ್ಲಿ ಜನ ಇರುತ್ತಿದ್ದರೇನೋ ಹೌದು. ಜನ ಓಡಾಡುತ್ತಿದ್ದರೆ ಅವಳಿಗೂ ಸಲೀಸೆನ್ನಿಸುತ್ತಿತ್ತು. ಆದರೆ ಮನೆ ತಲುಪುವ ಹತ್ತು ನಿಮಿಷದ ಮುಂಚಿನ ದಾರಿ ಕಿರಿದಾಗಿದ್ದು ನಿರ್ಜನವಾಗಿರುತ್ತಿತ್ತು. ಅಲ್ಲಿ ಹೋದಾಗೆಲ್ಲ ಎದೆ ಡವಡವ ಅನ್ನುತ್ತಿತ್ತು. ಬೆಳಗಿನ ಹೊತ್ತೂ ಸಹ ಆ ರಸ್ತೆಯಲ್ಲಿ ಹೋಗುವುದನ್ನು ಅವಳು ಇಷ್ಟಪಡುತ್ತಿರಲಿಲ್ಲ. ಗಂಡಸರೇನಾದರೂ ರಸ್ತೆಯನ್ನು ಹಾದುಹೋದರೆ, ಸಂಶಯಾಸ್ಪದ ವ್ಯಕ್ತಿಯಿರಬಹುದೇ ಎಂದು ಕಣ್ಣಂಚಿನಲ್ಲೇ ದುರುಗುಟ್ಟಿಕೊಂಡು ನೋಡುತ್ತಿದ್ದಳು.

ಈಗ ಅದೇ ರಸ್ತೆಯನ್ನು ಹಾದುಹೋಗುವಾಗ, ಸದ್ಯ ಏನೂ ಆಗದಿರಲಿ ಎಂದು ಬೇಡಿಕೊಳ್ಳುತ್ತಾ, ಛೆ! ಯಾಕಿಷ್ಟೊಂದು ಭಯ? ಏನೂ ಆಗುವುದಿಲ್ಲ ಎಂದು ಸಂತೈಸಿಕೊಳ್ಳುತ್ತಾ ಬೇಗ ಬೇಗ ಸೈಕಲ್ ತುಳಿಯಲಾರಂಭಿಸಿದಳು.

ಸುತ್ತಮುತ್ತೆಲ್ಲಾ ಅಡ್ಡಾದಿಡ್ಡಿಯಾಗಿ ಬೆಳೆದಿದ್ದ ಗಿಡಗಳು, ಕಾಲ ಕೆಳಗೆ ಹೆಪ್ಪು ನೆಲ. ಅಲ್ಲೋ ಇಲ್ಲೋ ಇದ್ದ ಮರಗಳು ಗವ್ವೆನ್ನುವ ಕತ್ತಲಿಗೆ ಇನ್ನಷ್ಟು ಕಪ್ಪನ್ನು ರಾಚುತ್ತಿದ್ದವು. ಸ್ವಲ್ಪ ಮುಂದೆ ಹಾದು, ತಿರುವೊಂದನ್ನು ಬಳಸಿದ ಪ್ರಿಯಾ ಗಕ್ಕನೆ ಸೈಕಲ್ ನಿಲ್ಲಿಸಿದಳು. ರಸ್ತೆಯಲ್ಲಿ ಮೂವರು ಗಂಡಸರು ದೆವ್ವಗಳಂತೆ ನಿಂತಿದ್ದರು. ಕತ್ತಲಾಗಿದ್ದರೂ ಅವರ ಮುಖಗಳು ಕಾಣಿಸಬಹುದೇನೋ ಎಂದು ಕಣ್ಣು ಕಿರಿದಾಗಿಸಿ ದಿಟ್ಟಿಸಿದಳು. ಅವರಲ್ಲೊಬ್ಬ ಧಾಂಡಿಗ ತನ್ನ ಆಫೀಸಿನ ಹತ್ತಿರದಲ್ಲಿ ಟೆಲಿಫೋನ್ ಬೂತ್ ಇಟ್ಟುಕೊಂಡಿದ್ದ ಸಂಜೀವ ಎಂದು ತಕ್ಷಣವೇ ಗುರುತಿಸಿದಳು. ಇನ್ನಿಬ್ಬರ ಕಡೆಗೆ ಮೆಲ್ಲನೆ ಕಣ್ಣು ಹಾಯಿಸುವಷ್ಟರಲ್ಲಿ ಅವರಲ್ಲೊಬ್ಬ ಮುಂದೆ ಬಂದು ಸೈಕಲ್ ನೂಕಿ ಅವಳನ್ನು ಬೀಳಿಸಿದ.

ಒರಟಾದ ನೆಲದ ಮೇಲೆ ದೊಪ್ಪನೆ ಅವಳನ್ನು ಎತ್ತಿ ಹಾಕಿದರು. ಅವರ ಪ್ರತಿಯೊಂದು ಹೆಜ್ಜೆಯೂ ಕರಾರುವಕ್ಕಾಗಿತ್ತು. ಒಬ್ಬ ವಿಲಗುಡುತ್ತಿದ್ದ ಅವಳನ್ನು ನೆಲಕ್ಕೆ ಒತ್ತಿ ಹಿಡಿದರೆ, ಇನ್ನೊಬ್ಬ ಅವಳು ಕಿರುಚದಂತೆ ಬಾಯನ್ನು ಬಿಗಿಯಾಗಿ ಅದುಮಿದ. ಮೂರನೆಯವನು ಪರಪರನೆ ಅವಳ ಬಟ್ಟೆಗಳನ್ನು ಎಳೆಯಲಾರಂಭಿಸಿದ. ಎಲ್ಲವೂ ಯಂತ್ರದಂತೆ ಚಕಚಕನೆ ನಡೆಯುತ್ತಿತ್ತು. "ದಯವಿಟ್ಟು ಬಿಟ್ಟುಬಿಡೀ..." ಎಂದು ಕಿರುಚಲು ಪ್ರಯತ್ನಿಸಿದಳು. ಊಹೂಂ. ಯಾವ ಸದ್ದೂ ಹೊರಗೆ ಬರಲಿಲ್ಲ. ವಿಲಗುಡುತ್ತಿದ್ದ ಅವಳ ಶರೀರದ ಮೇಲಿದ್ದ ಕಾಚಾ ಸಹ ಕಿತ್ತೊಗೆದಂತೆ ಎಲ್ಲಿಯೋ ಹೋಗಿ ಬಿತ್ತು. ನಂತರವೂ ಉಳಿದ ಸ್ಯಾನಿಟರಿ ಪ್ಯಾಡ್ ಕಂಡಾಗ ಮಾತ್ರ ಕೈಗಳು ಸ್ವಲ್ಪ ಹಿಂಜರಿದವು. ಮರುಕ್ಷಣವೇ ಅದೂ ರೊಯ್ಯನೆ ಹೋಗಿ ಬಿತ್ತು.

ನನ್ನಂತಹ ದುರ್ದೈವಿ ಹೆಣ್ಣು ಈ ಭೂಮಿಯ ಮೇಲೆ ಇನ್ನೊಬ್ಬಳಿರಲಾರಳು ಎಂದುಕೊಳ್ಳುತ್ತಾ ಪ್ರಿಯಾ ಹತಾಶೆಯಿಂದ ನರಳಿದಳು. ಧಡಿಯ ಸಂಜೀವ ಅವಳ ದೇಹದ ಮೇಲಿದ್ದ. ಅವನ ಮುಖ ಕಾಣಿಸುತ್ತಿರಲಿಲ್ಲ. ಆದರೂ ಅವನ ಪ್ರತಿಯೊಂದೂ ಚಲನವಲನದಲ್ಲಿ ಅಹಂಕಾರ ತುಂಬಿ ತುಳುಕುತ್ತಿತ್ತು.

ಯಾವುದೋ ಒಂದು ಗಳಿಗೆಯಲ್ಲಿ ಅವನ ಮುಖ ಸ್ವಲ್ಪ ವಾರೆಯಾದಾಗ, ಹತ್ತಿರದಲ್ಲಿ ಕೂತು ನೋಡುತ್ತಿದ್ದ ಆ ಇಬ್ಬರ ಮುಖಗಳು ಸ್ಪಷ್ಟವಾಗಿ ಕಂಡವು. ಒಬ್ಬ ಕುಡಿಮೀಸೆಯೂ ಸರಿಯಾಗಿ ಮೂಡದಿದ್ದ ಎಳೆ ನಿಂಬೇಕಾಯಿ. ಇನ್ನೊಬ್ಬನನ್ನು ಎಲ್ಲೋ ನೋಡಿದಂತಿದೆಯಲ್ಲ? ಎಲ್ಲಿ ನೋಡಿದ್ದಿರಬಹುದು ಎಂದು ನೆನಪಿಸಿಕೊಳ್ಳಲು ಪ್ರಯತ್ನಿಸಿದಳು. ಹೌದಲ್ಲ! ಬಸ್ಸಿನಲ್ಲಿ ಪೋಲಿ ಚೇಷ್ಟೆ ಮಾಡುವುದಕ್ಕೆ ಪ್ರಯತ್ನಿಸಿದಾಗ, ತಾನು ರಪ್ಪನೆ ಕೆನ್ನೆಗೆ ಬಾರಿಸಿದವ! ಆಮೇಲೆ ಯಾವಾಗಲೋ ಅವನ ಹೆಸರು ರವಿಯೆಂದೂ, ಕೊಳೆತು ಹೋಗುವಷ್ಟು ಆಸ್ತಿ ಇದೆಯೆಂದೂ, ಪುಂಡುತನ ಅವನ ಹವ್ಯಾಸವಾಗಿದೆಯೆಂದೂ ಯಾರೋ ಹೇಳಿದ್ದರು. ಅಲ್ಲಿ ಇಲ್ಲಿ ಕಂಡಾಗೆಲ್ಲ, ನೆರಳಿನಂತೆ ಸುಳಿದು ಕಣ್ತಪ್ಪಿಸಿ ಮರೆಯಾಗುತ್ತಿದ್ದವ!

ಇಷ್ಟೆಲ್ಲಾ ನೆನಪಿಸಿಕೊಳ್ಳುವ ಹೊತ್ತಿಗೆ ಸಂಜೀವ ಉಡಾಫೆಯಿಂದಲೋ ಎಂಬಂತೆ ಅವಳ ದೇಹದಿಂದ ಜಾರಿ, ಅತ್ತ ಕಡೆಗೆ ಹೊರಳಿದ್ದ. ಮೈಯಿಡೀ ನೋವಿನಿಂದ ರವಗುಡುತ್ತಿತ್ತು. ಅಂತಹ ನೋವಿನಲ್ಲೂ ಏನೇನೋ ಕೆಲಸಕ್ಕೆ ಬಾರದ ಹಾಳೂಮೂಳು ಯೋಚನೆಗಳು! ಥೂ ನಿನ್ನ! ನಿನಗೆ ಮರ್ಯಾದೆಯೇ ಇಲ್ಲ, ನಿನ್ನ ಸಮಸ್ತವೂ ಸೂರೆ ಹೋಗುತ್ತಿರುವಾಗ ಏನೇನೋ ಯೋಚನೆ ಬೇರೆ! ಎಂದು ಮನಸ್ಸು ತಪ್ಪಿತಸ್ಥ ಭಾವನೆಯಿಂದ ಕೊರಗಿತು.

ಮುಂದಿನ ಸರದಿ ರವಿಯದು. ವಿಲಗುಡಲೂ ಶಕ್ತಿಯಿಲ್ಲದೆ ಸೊಪ್ಪಾಗಿ ಬಿದ್ದವಳ ಕೆನ್ನೆಗೆ ಬಲವಾಗಿ ಬಾರಿಸಿದ. "ಕೆನ್ನೆಗೆ ಬಾರಿಸುತ್ತೀಯಾ ಮಾನಗೆಟ್ಟ ಲೌಡಿ? ಗಂಡಸ್ತನ ಕೆಣಕಿದ್ರೆ ಏನಾಗುತ್ತೆ ಗೊತ್ತಾ? ಈಗಲಾದ್ರೂ ಅರ್ಥ ಮಾಡಿಕೋ!" ಎನ್ನುತ್ತಾ ಅವಳ ಮುಖವನ್ನು ಆ ಕಡೆಗೆ ನೂಕಿ ಅವಳನ್ನು ಆಕ್ರಮಿಸಿಕೊಂಡ.

ಭುಸುಗುಡುತ್ತಾ ಅವನ ದೇಹ ಅವಳ ದೇಹದ ಮೇಲೆ ಅತ್ತಿಂದಿತ್ತ ಹೊರಳುವಾಗ ಕೊಂಡಿಗಳೆಲ್ಲ ಒಂದೊಂದಾಗಿ ಕಳಚಿಬೀಳುತ್ತಿದ್ದ ಮರದ ಉಪಕರಣದಂತೆ ಅವಳ ಶರೀರವಿಡೀ ನೋಯಹತ್ತಿತು. ಮಾನ, ಮರ್ಯಾದೆ ಎಲ್ಲವನ್ನೂ ಕಳೆದುಕೊಂಡ ಹತಭಾಗ್ಯೆ ತಾನು ಎಂದೆನ್ನಿಸಿ ನೋವಿನಿಂದ ಕಣ್ಣುಮುಚ್ಚಿಕೊಂಡಳು. ತನ್ನ ಮುಟ್ಟಿನ ರಕ್ತವಾದರೂ ತನ್ನದೇ ಎಂದುಕೊಂಡಿದ್ದಳು. ಇಂದು ಅದನ್ನೂ ಯಾರೋ ಅಪಹರಿಸಿದ್ದರು. ಅವಳ ಸಮಸ್ತ ಒಳಗನ್ನು ಬಟಾಬಯಲು ಮಾಡಿ ನಿಲ್ಲಿಸಿದ್ದರು.



ಒತ್ತರಿಸಿಕೊಂಡು ಬರುತ್ತಿದ್ದ ನೋವನ್ನೂ, ಅಳುವನ್ನೂ ಕಷ್ಟಪಟ್ಟು ತಡೆಹಿಡಿಯಲು ಪ್ರಯತ್ನಿಸುತ್ತಿದ್ದಾಗ, ರವಿ ಅವಳಿಂದ ಹೊರಳಿದ. ಕೋಲು ಮುಖದವನೊಬ್ಬ ಮಾತ್ರ ಬಾಕಿ. ಆ ಎಳಸು ಹುಡುಗ ನಡುಗುತ್ತಾ ಅವಳ ದೇಹವನ್ನು ಮುಟ್ಟಿದಾಗ ಪ್ರಿಯಾ ಕಣ್ಣನ್ನು ಬಲವಾಗಿ ಮುಚ್ಚಿಕೊಂಡಳು. ಕಣ್ಣಿಂದ ಧಾರೆಯಾಗಿ ಹರಿದ ಉಪ್ಪು ನೀರು ತುಟಿಯೊಳಗೆ ಇಳಿದಿತ್ತು.

ಮುಂದಿನ ಸರದಿ ರವಿಯದು. ವಿಲಗುಡಲೂ ಶಕ್ತಿಯಿಲ್ಲದೆ ಸೊಪ್ಪಾಗಿ ಬಿದ್ದವಳ ಕೆನ್ನೆಗೆ ಬಲವಾಗಿ ಬಾರಿಸಿದ. "ಕೆನ್ನೆಗೆ ಬಾರಿಸುತ್ತೀಯಾ ಮಾನಗೆಟ್ಟ ಲೌಡಿ? ಗಂಡಸ್ತನ ಕೆಣಕಿದ್ರೆ ಏನಾಗುತ್ತೆ ಗೊತ್ತಾ? ಈಗಲಾದ್ರೂ ಅರ್ಥ ಮಾಡಿಕೋ!" ಎನ್ನುತ್ತಾ ಅವಳ ಮುಖವನ್ನು ಆ ಕಡೆಗೆ ನೂಕಿ ಅವಳನ್ನು ಆಕ್ರಮಿಸಿಕೊಂಡ.

ಮೂರನೆಯವನ ಪ್ರಯತ್ನ ಅಷ್ಟಾಗಿ ಫಲಿಸದೇ ಅವನೂ ಅತ್ತಕಡೆ ಹೊರಳುವ ಹೊತ್ತಿಗೆ ಪ್ರಿಯಾ ಅರ್ಧ ಎಚ್ಚರದ ಸ್ಥಿತಿಯನ್ನು ತಲುಪಿದ್ದಳು. ಆದರೂ ಆ ಮೂವರು ಅಲ್ಲಿಂದ ತೊಲಗಿ ರಸ್ತೆಯಲ್ಲಿ ನಿಲ್ಲಿಸಿದ್ದ ಮೋಟಾರ್ ಬೈಕನ್ನು ಸ್ಟಾರ್ಟ್ ಮಾಡುವಾಗ ದುಃಸ್ವಪ್ನವೊಂದರ ಸಾಕ್ಷಿಯಂತೆ ನೋಡುತ್ತಲೇ ಇದ್ದಳು.

ಶಕ್ತಿಯನ್ನು ಒಗ್ಗೂಡಿಸಿಕೊಂಡು ಎದ್ದಾಗ ತನ್ನ ಇಡೀ ದೇಹವೇ ಬೆವರು, ಕಣ್ಣೀರು, ಜೊತೆಗೆ ಜಗತ್ತಿನಲ್ಲಿದ್ದ ಕೊಳಕು, ಕಲ್ಮಶಗಳೆಲ್ಲವನ್ನೂ ಹೊತ್ತು ಹರಿಯುತ್ತಿದ್ದ ಚರಂಡಿಯಂತೆನ್ನಿಸಿ ಮನಸ್ಸು ಹೇವರಿಸಿತು. ಅತ್ಯಾಚಾರಕ್ಕೊಳಗಾದ ಹೆಂಗಸರಿಗೆ ಕೆಲವು ಸಲಹೆಗಳನ್ನು ನೀಡುವ ದೂರದರ್ಶನದ ಜಾಹೀರಾತೊಂದು ನೆನಪಿಗೆ ಬಂತು. ಕಲೆಗಳನ್ನು ತೊಳೆಯಬೇಡಿ, ತೊಳೆದರೆ ಸಾಕ್ಷ್ಯಗಳನ್ನು ಅಳಿಸಿಹಾಕಿದಂತೆ ಎಂದು ಹೇಳುತ್ತಾರಲ್ಲ? ಅವರು ಹೇಳುವುದು ನಿಜವಿರಬಹುದೆ? ಏನೋ! ಆದರೆ ಯಾವ ಕಲೆಗಳು ಎಂದು ಅವರು ಹೇಳುವುದಿಲ್ಲವಲ್ಲ?

ಅತೀವ ಕಷ್ಟದಿಂದ ಪ್ರಿಯಾ ಎದ್ದು ನಿಂತಳು. ಬಟ್ಟೆಗಳು ಎಲ್ಲೆಲ್ಲೋ ಬಿದ್ದಿದ್ದವು. ಮೈಯಿಡೀ ನೋವಿನಿಂದ ತತ್ತರಿಸುತ್ತಿತ್ತು. ತುಟಿ ಕಚ್ಚಿ ಕಣ್ಣೀರನ್ನು ತಡೆಹಿಡಿದಳು. ತಲೆಗೂದಲನ್ನು ಹಿಂದಕ್ಕೆ ನೇವರಿಸಿಕೊಂಡು ಬಟ್ಟೆಗಳಿಗೆ ಹುಡುಕಾಡಿದಳು. ಸೈಕಲ್ ರಸ್ತೆ ಬದಿಯಲ್ಲೆಲ್ಲೋ ಬಿದ್ದಿತ್ತು. ಮೇಲೆತ್ತಿ ತಳ್ಳಿಕೊಂಡು ಸ್ವಲ್ಪ ದೂರ ಹೋದಳು. ನೋವನ್ನು ನುಂಗಿಕೊಂಡು, ಸೈಕಲ್ ಹತ್ತಿ ಮನೆಯತ್ತ ತಿರುಗಿದಳು.

ಮನೆಯನ್ನು ತಲುಪಿದಾಗ ದಿನಾ ತಲುಪುತ್ತಿದ್ದ ಹೊತ್ತನ್ನೇನೂ ಮೀರಿರಲಿಲ್ಲ. ಅಮ್ಮ ಅಡುಗೆಮನೆಯಲ್ಲಿದ್ದರು. ತಂಗಿ ಟಿವಿಯ ಎದುರು ಕೂತಿದ್ದಳು. ಅಪ್ಪ ಕೆಲಸದಿಂದ ಬಂದಿದ್ದರು. ತನ್ನ ಕೋಣೆಯನ್ನು ಸೇರಿದ ಪ್ರಿಯಾ ಬಾಗಿಲು ಮುಚ್ಚಿಕೊಂಡಳು.

ರಾತ್ರಿ ಎರಡನೆಯ ಬಾರಿಗೆ ಮೈಯನ್ನು ತಿಕ್ಕಿ ತೊಳೆದು ಸ್ನಾನ ಮಾಡಿದರೂ ಕಣ್ಣಿಗೆ ನಿದ್ದೆ ಮಾತ್ರ ಹತ್ತಲಿಲ್ಲ. ಕಣ್ಣ ಮುಂದೆ ಅದೇ ಮೂವರ ಚಿತ್ರ ಮೂಡುತ್ತಿತ್ತು. ಅವರ ಕಣ್ಣಿನಲ್ಲಿ ಯಾವ ಭಾವವಿದ್ದಿರಬಹುದು? ಕಾಮವೆ? ಯಾವ ನಿರ್ಧಾರಕ್ಕೂ ಬರಲಾಗದೇ ಹೊರಳಾಡಿದಳು. ಭೋ ಎಂದು ಅಳಬೇಕೆನ್ನಿಸಿತು. "ಅಳಬೇಡ! ಅತ್ತು ಏನು ಪ್ರಯೋಜನ?" ಎಂದು ಸ್ವಗತಿಸಿದಳು. "ಅತ್ತರೇನು ತಪ್ಪು?" ಎಂದು ಮನಸ್ಸಿನ ಇನ್ನೊಂದು ಭಾಗ ಸವಾಲೆಸೆಯಿತು. ದಿಕ್ಕುಗೆಟ್ಟವಳಂತೆ ಹೊರಳಾಡಿ, ಕೊನೆಗೂ ನಿದ್ದೆಯ ಆಳಕ್ಕೆ ಇಳಿದಾಗ ಎಷ್ಟು ಸಮಯವಾಗಿತ್ತೋ!

ಮಾರನೆಯ ದಿನ ಎಂದಿನಂತೆ ಪ್ರಿಯಾ ಆಫೀಸಿಗೆ ಹೋದಳು. ಮೆಟ್ಟಿಲ ಹತ್ತಿರವೇ ಸಂಜೀವ ಮತ್ತು ರವಿ ಕಾಯುತ್ತಿದ್ದವರಂತೆ ನಿಂತಿದ್ದರು. ಮೂರನೆಯವನು ಯಾಕೋ ಕಾಣಿಸಲಿಲ್ಲ. ಪ್ರಿಯಾ ಸೈಕಲ್ ಇಳಿಯುತ್ತಿರುವಾಗ ಹತ್ತಿರ ಬರಹತ್ತಿದರು.

"ಬಾಯ್ಮುಚ್ಚಿ ತೆಪ್ಪಗಿದ್ದರೆ ಸರಿ. ಎಲ್ಲಾದರೂ ಬಾಯಿ ಬಿಡುವ ಪ್ರಯತ್ನ ಮಾಡಿದೆಯೋ, ನಿನ್ನೂ ನಿನ್ನ ಮನೆಯವರನ್ನೂ ಒಂದೇ ನಿಮಿಷದಲ್ಲಿ ಖಲಾಸ್ ಮಾಡಿಬಿಡುತ್ತೇವೆ, ಹುಷಾರ್! ತಿಳೀತು ತಾನೆ?"

"ತಿಳೀತು, ಬಿಡು," ಪ್ರಿಯಾ ತಣ್ಣಗೆ ಉತ್ತರಿಸಿದಳು. ಅವಳನ್ನೇ ದಿಟ್ಟಿಸುತ್ತಿದ್ದ ಸಂಜೀವ ಕೆಟ್ಟದಾಗಿ ಬಾಯಿ ಕೊಂಕಿಸಿ ನಕ್ಕು, "ಹೌದೂ... ನಿನ್ನೆ ದೋಸು ಹೇಗಿತ್ತು?" ಎಂದ.

ಮೂರೋ, ನಾಲ್ಕೋ ಗಳಿಗೆಗಳ ಮಟ್ಟಿಗೆ ಪ್ರಿಯಾ ಅವನ ಕಣ್ಣನ್ನೇ ಆರಾಮದಿಂದ ದಿಟ್ಟಿಸಿ, ಸಹಜವಾಗಿ ನಗುವಂತೆ ನಕ್ಕಳು. "ನಿನ್ನ ಮಟ್ಟಿಗೆ ಹೇಳಬೇಕೆಂದರೆ, ಸಾಲದು. ಏನೇನೂ ಸಾಲದು." ಅವನ ಮುಖದ ಮೇಲಿನ ಕೊಂಕುನಗು ಮಾಯವಾಗಿ, ಮೋರೆ ಕಪ್ಪುಗಟ್ಟಿದ್ದನ್ನೇ ನೋಡುತ್ತಾ ಮತ್ತೆ ಸೇರಿಸಿದಳು. "ನಿನ್ನಲ್ಲಿ ದಮ್ಮೇ ಇಲ್ಲ, ಯಾವ ಹೆಣ್ಣನ್ನೂ ನೀನು ತೃಪ್ತಿ ಪಡಿಸುವುದು ಸಾಧ್ಯವೇ ಇಲ್ಲ." ರವಿಯ ಕಡೆಗೆ ತಿರುಗಿ, "ಆದರೆ ನೀನು ಪರವಾಗಿರಲಿಲ್ಲ, ನೋಡು. ಗಂಡೆಂದರೆ ನೀನೇ!" ಅವನ ಕೆನ್ನೆಯನ್ನು ನಿಧಾನವಾಗಿ ಸವರಿ, ದೃಷ್ಟಿಯನ್ನು ಅವನಿಂದ ಇವನಿಗೆ ಹೊರಳಿಸಿ ನೋಡಿ, ನಿಧಾನವಾಗಿ ಮೆಟ್ಟಿಲು ಹತ್ತಿ ಹೋದಳು. ಸಂಶಯ, ಆಘಾತದಲ್ಲಿ, ಎವೆ ಬಡಿಯದೇ ಇಬ್ಬರೂ ಅವಳನ್ನೇ ನೋಡುತ್ತಾ ನಿಂತರು.

ಆ ಸಂಜೆ ಆಫೀಸಿನಿಂದ ಮರಳುವಾಗ, ಸಂಜೀವನ ಟೆಲಿಫೋನ್ ಬೂತಿನ ಮುಂದೆ ಅರೆಗಳಿಗೆ ಸೈಕಲ್ ನಿಲ್ಲಿಸಿದಳು. ರವಿ, ಸಂಜೀವ ಇಬ್ಬರೂ ಅವಳು ಬರುವುದನ್ನೇ ನೋಡುತ್ತಾ ನಿಂತಿದ್ದರು. ಪ್ರಿಯಾ ಸಂಜೀವನ ಕಡೆ ಕತ್ತೆತ್ತಿಯೂ ನೋಡಲಿಲ್ಲ, ರವಿಯ ಕಣ್ಣನ್ನು ಮಾತ್ರ ಅರೆಕ್ಷಣ ದಿಟ್ಟಿಸಿ, ನೋವಿನ ನಗೆಯೊಂದನ್ನು ಬೀರಿ, ಸೈಕಲ್ ಹತ್ತಿ ಹೊರಟು ಹೋದಳು.


ಆ ದಿನ ಕಿರಿದಾದ ರಸ್ತೆಯನ್ನು ಹಾದುಹೋಗುವಾಗ ಅವಳಿಗೆ ಭಯವೆನ್ನಿಸಲಿಲ್ಲ. ತಿರುವನ್ನು ದಾಟಿ, ಕುರುಚಲು ಪ್ರದೇಶವನ್ನು ಹಿಂದೆ ಹಾಕಿ ಸಾಗಿದಾಗ ಭಾರವಾದ ನಿಟ್ಟುಸಿರೊಂದು ಹೊರ ಬಿತ್ತು.

ಮನೆಯನ್ನು ತಲುಪಿದಾಗ ಯಾರೋ ಅವಳಿಗೋಸ್ಕರ ಕಾಯುತ್ತಾ ಕೂತಿದ್ದರು. ಎಳೆ ನಿಂಬೆಕಾಯಿ! ಒಂದೂ ಮಾತಾಡದೆ, ಪ್ರಿಯಾ ಹೋಗಿ ಅವನ ಪಕ್ಕ ಕೂತಳು.

"ನಾನು... ನಾನು..." ಹುಡುಗನ ಧ್ವನಿ ನಡುಗುತ್ತಿತ್ತು. ಅವನ ಕಣ್ಣುಗಳಲ್ಲಿ ನೀರು ತುಂಬಬಂತು. "ನಂಗೆ

(10ನೇ ಪುಟಕ್ಕೆ) ⇨

ಚಿಗವ್ವ



■ ಡಿ. ಚಂದ್ರೇಗೌಡ

...ನ್ನು ಚಿಗವ್ವನನ್ನು ನೋಡಿದರೆ, ಅವರೇ ಸಾಕಿದ್ದ ...ಎಮ್ಮೆ ನೋಡಿದಂತಾಗುತ್ತಿತ್ತು. ಗೊಂಡು ...ಸಾಕು ತನ್ನದೇ ಹೊಲದಲ್ಲಿ ಮೇದು ಬಂದು. ...ಮುಸುರೆ ಹೀರಿ ತಳದಲ್ಲಿದ್ದ ಸೀಕಲು ಮುದ್ದೆ ...ಚೂರನ್ನು ತಿಂದು ಕೆಚ್ಚಲಿಗೆ ಕೈ ಹಾಕಿದರೆ ...ಸುಖಪಡುತ್ತ ಸೊರಬಿಡುವ ಆ ಎಮ್ಮೆ ...ಚಿಗವ್ವ ಒಂದೇ ತಾಯಿಯ ಮಕ್ಕಳಂತಿದ್ದರು. ...ನ ಬಳಿಗೋದರೆ ಒಂದು ರೀತಿಯ ಸಿನುಗುವಾಸನೆ ...ತ್ತಿತ್ತು. ಮಾಸಿದ ಎಲೆಯುದಿಕೆ ಚೀಲ, ಮಾಸಲು ...ಕೈಯಗ್ಗೆ ಮುತ್ತಿದ ತಲೆ, ಎಲೆಯುದಿಕೆ ಕರೆ ...ದ ಹಲ್ಲು, ಅವಳ ಬೆವರು ಇವೆಲ್ಲ ಒಟ್ಟುಸೇರಿ ...ಷ್ಟ ಪ್ರಾಣಿಯ ವಾಸನೆ ಬೀರುತ್ತಿದ್ದಳು. ಅದನ್ನು ...ಣಿಸಿದರೆ ಆಕೆಯ ಮಡಿಲಲ್ಲಿ ತಲೆಕೊಟ್ಟು ...ಬೇಕೆನಿಸುತ್ತಿತ್ತು. ಅದಕ್ಕೇ ಇರಬೇಕು ಚಿಗಪ್ಪ ...ನಾಗಲೂ ಆಕೆಯ ಸನಿಹ ಕೂರುತ್ತಿದ್ದ. "ಅಯ್ಯೋವ್, ...ಕೊತ್ತ ಮಕ್ಳು ಮರಿ ಏನು ತಿಳಕಂಡವ್ರು" ಎಂದು ...ಗದರಿದರೂ ಚಿಗಪ್ಪ ಕಿವಿಯ ಮೇಲೆ ಹಾಕಿ ...ಳ್ಳುತ್ತಿರಲಿಲ್ಲ. ಅವರಿಬ್ಬರ ಜೋಡಿ ನೋಡಿದವರೆಲ್ಲಾ ...ದೇವರೇ ಹಾಕಿರುವ ಜೋಡಿ ಎಂದು ನಗು ...ರು. ಅವರಿಬ್ಬರೂ ಒಂದೇ ಆತ್ಮ ಎರಡು ಜೀವ ...ದ್ದರು.

...ಮ್ಮ ಸುತ್ತಲಿದ್ದ ಯಾರಿಗೂ ತೊಂದರೆ ಕೊಟ್ಟವ ...ಅವರ ಸ್ವತಂತ್ರ ಬದುಕಿನಲ್ಲಿ ಸುತ್ತಲ ಜನ ಇದ್ದರೆಷ್ಟು ...ದ್ದರೆಷ್ಟು ಎಂಬಂತೆ ಬದುಕಿದ್ದವರು. ಅಪ್ಪ ಚಿಗವ್ವನ ...ಬದುಕನ್ನ ಹೊತ್ತು ನೀಸುತ್ತಿದ್ದ. ಇವರಿಗೆ ಅಕ್ಕರೆಯ ...ು ಮಕ್ಕಳಿದ್ದರು. ಒಬ್ಬ ಸ್ವಂತ ಮಗನಾದರೆ ಮತ್ತೊಬ್ಬ ...ರಲ್ಲಿ ಸಿಕ್ಕವನು. ಚಿಗವ್ವನ ಮಗ ಹೈಸ್ಕೂಲಿಗೆಂದು ...ರಿಗೆ ಹೋದಾಗ ಪರಿಚಯವಾದ ಹೈಸ್ಕೂಲ್

ಹೇರಿದಷ್ಟು ಖುಷಿಯಿಂದ ಓದಾಡಿದ ಗೌಸಣ್ಣ ತನ್ನ ಕುಟುಂಬದ ಬಗ್ಗೆಯೇ ಇಷ್ಟು ಕಾಳಜಿ ವಹಿಸಿದ್ದನ್ನು ನಾನು ನೋಡಲೇ ಇಲ್ಲ.

ಚಿಗಪ್ಪ ಈ ಗೌಸಣ್ಣನನ್ನು ಬೆಳ್ಳೂರಣ್ಣ ಎಂದು ಸಂಭೋದಿಸುತ್ತಿದ್ದ. ಚಿಕ್ಕಪ್ಪ ಎಂತಹವನೆಂದರೆ ಇದ್ದ ಮಾವಿನ ಮರವನ್ನೆಲ್ಲಾ ಬೆಳ್ಳೂರಿನ ಸಾಬರಿಗೆ ಮಾರಿ ಒಂದು ಮರವನ್ನು ಮಾತ್ರ ಹಾಗೆ ಬಿಟ್ಟುಕೊಂಡಿದ್ದ. ದಾರಿಹೋಕರು ಮಾವಿನ ಕಾಯಿ ಕೆಡವಲು ಬಂದರೆ "ಯಪ್ಪಾ ಅವುನ್ನಲ್ಲ ಸಾಬರಿಗೆ ಮಾರಿದ್ದೀವಿ ಕಣೊ. ಈ ಮರದಲ್ಲಿ ಕಿತಗಳಿ, ಇದೊಂದು ಮಾತ್ರ ನಮ್ಮದು" ಎನ್ನುತ್ತಿದ್ದ! ಮರ ಮಾರಿದ ಮೇಲೆ ಅದು ಕೊಂಡ ಸಾಬಿಯ ಹಣೆಬರಹ ಎಂದು ಸುಮ್ಮನಾಗುವ ಈ ಕಾಲದಲ್ಲಿ ಈ ಚಿಗಪ್ಪ ಸಾಬಿ ಬಂದು ಮಾವಿನ ಕಾಯಿ ಕೆಡವಿಕೊಂಡು ಹೋಗುವವರೆಗೂ ಆ ಮರಗಳನ್ನು ಕಾಯುತ್ತಿದ್ದ. ಚಿಗಪ್ಪನನ್ನು ನಾವು ಅಪ್ಪಾ ಎಂದೇ ಕರೆಯುತ್ತಿದ್ದೆವು.

ಅಪ್ಪ ನಿಜವನ್ನೇ ನುಡಿಯುತ್ತಿದ್ದ ಕಾರಣಕ್ಕೆ, ಈತನೆದುರು ಯಾರೂ ಹೊಡೆದಾಟ ಮಾಡುತ್ತಿರಲಿಲ್ಲ. ಊರ ನ್ಯಾಯಕ್ಕೇ ಕರೆಯಲಿ, ಕೋರ್ಟಿಗೇ ಕರೆಯಲಿ ತಾನು ಕಂಡದ್ದನ್ನು ಕಂಡಂತೆ ಹೇಳುವ ಈ ಅಪ್ಪ ಊರಲ್ಲಿ ಏಕಾಂಗಿಯಾಗಿ ಬದುಕಿದ್ದ. ಆದರೆ ಕಷ್ಟ ಬಂದಾಗ "ಬೆಳ್ಳೂರಣ್ಣ ಅವುನೆ. ಅವುನಿದ್ದಾಗ ನನ್ನಾಕೇಚನೆ ಮಾಡ್ಲೀ" ಎನ್ನುತ್ತಿದ್ದ. ಈ ಮಾತನ್ನು ಕೇಳಿದ ನನಗೆ ಎದೆತುಂಬಿ ಬಂದು ಕಣ್ಣು ಹನಿಗೂಡಿದ ಸಂದರ್ಭಗಳಿವೆ.

ಅಪ್ಪ ಒಂದು ಸರಳವಾದ ಅಡುಗೆ ಮಾಡುತ್ತಿದ್ದ. ಹೇಗೆಂದರೆ

ಎಷ್ಟೇ ಯಂತ್ರದಂತಿದ್ದ, ನಮ್ಮೆದರ ದೋಷವನ್ನು ಕರಾರುವಕ್ಕಾಗಿ ಗ್ರಹಿಸಿ ಗಾದೆಯೊಂದಿಗೆ ಹೇಳಿಬಿಡುತ್ತಿದ್ದ.

ಯಾವ ಜವಾಬ್ದಾರಿಯೂ ಇಲ್ಲದಂತಿದ್ದ ಚಿಗವ್ವ ದೂರದ ನೆಂಟರನ್ನು ಹುಡುಕಿಕೊಂಡು ಹೋಗಿ ನಾಲ್ಕಾರು ದಿನ ಇದ್ದು ಬರುತ್ತಿದ್ದಳು. ನಾಗಮಂಗಲದವರೆಗೆ ನಾಲಿಗೆಯೇ ದಾರಿ ಎನ್ನುವಂತೆ ತನ್ನವರಿರುವ ಊರ ಬಸ್ಸತ್ತುವ ಮುನ್ನ ಸುತ್ತಮುತ್ತ ಇದ್ದವರತ್ತ ಹಲ್ಲುಗಿಂಜಿ "ಯಪ್ಪಾ ಶಿವಮೊಗ್ಗದ ಕಡೆ ಹೋಗೋ ಬಸ್ಸತ್ಸೊ ಮಗನೆ. ನಿನಿಗೆ ಪುಣ್ಯ ಬರ್ಲಿ. ನನ್ನ ಮಗನಂಗೆ ಇದ್ದಿಯಲ್ಲೋ ಕಂದಾ" ಎಂದು ಬಿಡುತ್ತಿದ್ದಳು. ಬೀದಿ ತಾಯಿಗೆ ಒಂದೆರಡು ನಿಮಿಷ ಮಗನಾಗುವ ಸುಯೋಗಕ್ಕೆ ತುತ್ತಾದವರು ಕರಾರುವಾಕ್ಕಾಗಿ ಬಸ್ಸತ್ತಿಸುತ್ತಿದ್ದರು. ಹೀಗೆ ಚಿಗವ್ವ ಬರಬೇಕಾದಲ್ಲಿಗೆ ಸರಿಯಾಗಿ ಬರುತ್ತಿದ್ದಳು.

ಒಮ್ಮೆ ಜೋಗದಲ್ಲಿರುವ ಆಕೆಯ ತಮ್ಮ ಕೆಂಪಯ್ಯ ಮರಣಶಯ್ಯೆಯಲ್ಲಿ ಮಲಗಿದ್ದಾನೆ, ಏಳಲು ಕಾಲೇ ಬರುತ್ತಿಲ್ಲ ಎಂಬ ಸುದ್ದಿ ಚಿಗವ್ವಳಿಗೆ ಬಂತು. ಬೆಳ್ಳೂರು ಕ್ರಾಸಿನಿಂದ ಜೋಗದವರೆಗೂ ಐದು ಬಸ್ಸು ಬದಲಾಯಿಸುತ್ತಾ ಚಿಗವ್ವ, ತಮ್ಮನ ಮನೆಮುಂದೆ ಪ್ರತ್ಯಕ್ಷಳಾದಳು. ತನ್ನ ತಮ್ಮನ ಸ್ಥಿತಿ ನೋಡಿ ಗೊಳೋ ಎಂದು ಚಿಗವ್ವ ಅಳುತ್ತಾಳೆಂದು ಜನ ಭಾವಿಸಿದ್ದರು. ಆದರೆ ಚಿಗವ್ವ ಶನಿ ಪಾತ್ರಧಾರಿಯ ನಗೆ ನಕ್ಕು "ಲೋ ಕ್ಯಂಪ, ಬೀಡಿ ಸೇದಕ್ಕೆ ಕಾಸು ಕೊಡ್ಲಿಲ್ಲ ಅಂತ ಹೆತ್ತ

ದಾಂಪತ್ಯ ಜೀವನದಲ್ಲೇ ಬರೋಬ್ಬರಿ ಅರವತ್ತು ವರ್ಷ ಕಳೆದಿದ್ದರೂ ಬಾಲ ವಿಧವೆಯಂತೆ [illegible], ಅಪ್ಪನ ಕೈ ಸವರುವುದೇನು, ಆತನ ಕೈ ಹಿಡಿದು [illegible]ಕೊಳ್ಳುವುದೇನು. ಅವನ [illegible] ಸಾಕಾಗಿಹೋಯ್ತು. ಆದರೆ [illegible] ಬಿಟ್ಟ ಮೇಲೆ ಮರುದಿನ ಆರಾಮವಾಗಿ ಅಪ್ಪನ [illegible] ಕೊಂದಾದುತ್ತ, ಇಲ್ಲ ಎದ್ದು ತೋಟದ ಕಡೆ ಹೋಗ್ಯವ್ನೆ ಈಗ ಬತ್ತನೆ ಎನ್ನುವಂತೆ ಮಾತನಾಡಿದಳು.



ತಾಯಿಯ ಕಾಲಲ್ಲಿ ವದ್ದಲ್ಲೋ, ತಾಯಿ ಸಾಪ ಸುಮ್ಮನೆ ಬುಟ್ಟತೇ? ಕಾಲಿಗೆ ತಟ್ಟದೆ ನೋಡು" ಎಂದು ತಮ್ಮನ ವೇದನೆಯನ್ನು ಇನ್ನು ಜಾಸ್ತಿ ಮಾಡಿದಳು. ಮರುದಿನ ಬೆಳಿಗ್ಗೆ ತಮ್ಮ ಸತ್ತ. ಆತ ಕೆಲಸ ಮಾಡುವ ವಿಭಾಗಕ್ಕೆ ಸುದ್ದಿ ಮುಟ್ಟಿಸಿ ರಜೆ ಘೋಷಿಸಲಾಯ್ತು ಮತ್ತು ಡೆತ್‌ಫಂಡ್ ಕೂಡ ಬಿಡುಗಡೆಯಾಯ್ತು. ಕೆಂಪಯ್ಯನ ಸಹೋದ್ಯೋಗಿಯೊಬ್ಬ ರೋದಿಸುತ್ತಲೇ ಬಂದು "ಕೆಂಪಯ್ಯಾ! ಕೆಂಪಯ್ಯಾ!" ಎಂದು ಕೂಗಿದ. ಈ ಆಕ್ರಂದನಕ್ಕೆ ಓಗೊಟ್ಟ ಕೆಂಪಯ್ಯ "ಆ" ಎಂದು ಎದ್ದೇ ಬಿಡುವುದೇ!? ಕೂಡಲೇ ಮಡಚಿದ್ದ ಆತನ ಕಾಲನ್ನ ನೀಡಿ ಜಗಲಿಯಿಂದ ಒಯ್ದು ಒಳಗಡೆ ಮಲಗಿಸಿದರು. ಇದರಿಂದ ಬೇಸರಗೊಂಡ ಚಿಗವ್ವ "ಇನ್ನು ಏನಾಸೆ ಇಟಗಂಡಿದ್ದಿಯಪ್ಪಾ? ಜೀವ ಬುಡು. ನಾನು ಊರಿಗೋಗಬೇಕು. ಯಲ್ಲಾ ಬದುಕುನೂ ಚೆಲ್ಲಾಡಿ ಬಂದಿದ್ದೀನಿ" ಎಂದಳು. ಆದರೂ ಕೆಂಪಯ್ಯ ಒಂದು ವಾರವಿದ್ದು ತೀರಿಕೊಂಡ.

ಸಮಾಧಾನದ ನಿಟ್ಟುಸಿರುಬಿಟ್ಟ ಚಿಗವ್ವ ಸತ್ತವರ ಮನೆಯಲ್ಲಿ ಮುಲಾಜಿಲ್ಲದೆ ಟಿ.ಎ. ವಸೂಲಿ ಮಾಡಿಕೊಂಡು ಬಂದಳು. ಬರುವಾಗ ಬೆಳ್ಳೂರು ಕ್ರಾಸಿನಲ್ಲಿ ರಸ್ತೆ ತಡಾಯಬೇಕಾದರೆ ಲಾರಿಯೊಂದು ಚಿಗವ್ವನಿಗೆ ಗುದ್ದಿಬಿಟ್ಟಿತು. ಲಾರಿ ಬ್ರೇಕ್ ಹೊಡೆಯುವುದಕ್ಕೂ, ಚಿಗವ್ವನ ಎಡಗೈ ಅದರ ಬೆಳಕಿನ ಗಾಜಿಗೆ ಹೊಡೆಯುವುದಕ್ಕೂ, ಸರಿಯಾದ ಕಾಲ ಕೂಡಿ ಬಂದಿದ್ದರಿಂದ, ಗಾಜು ಹೊಡೆದುಹೋಯ್ತು. ಚಿಗವ್ವ ಹಲಸಿನ ಹಣ್ಣು ಎಸೆದಂತೆ ರಸ್ತೆ ಪಕ್ಕಕ್ಕೆ ಬಿದ್ದು, ಬಿದ್ದಷ್ಟೇ ವೇಗವಾಗಿ ಎದ್ದು ಹೊರಟುಬಿಟ್ಟಳು. ಅವಳ ಈ ಗಾಬರಿಗೆ ಕಾರಣವೆಂದರೆ ಲಾರಿ ಗಾಜು ಹೊಡೆದಿರುವ ತನ್ನನ್ನು ಬಿಟ್ಟಾರೆ ಎಂಬುದಾಗಿತ್ತು. ಅಕ್ಕಪಕ್ಕದ ಜನ ಓಡಿಬಂದು "ಅಂಗೆ ಬಿದ್ದಕಂಡು ವದ್ದಾಡೆ ಹುಚ್ಚಮ್ಮ. ದುಡ್ಡು ಕೊಡ್ತಾರೆ" ಎಂದು ಎಷ್ಟೇ ಹೇಳಿದರೂ ಚಿಗವ್ವ ಕೇಳಲಿಲ್ಲ. ಕಡೆಗೆ ತರಚಿದ ಗಾಯದ ಖರ್ಚಿಗೆ ನೂರು ರೂಪಾಯಿ ಈಸಿಕೊಂಡು ಮನೆಗೆ ಬಂದಳು.

ಆದರೂ ಯಾತನೆಯಿಂದ ಸತ್ತ ತಮ್ಮ ಜೊತೆಯಲ್ಲೇ ಬಂದು ಇಂತಹ ಅನಾಹುತಕ್ಕೆ ಕಾರಣನಾಗಿರಬಹುದೇ ಎಂಬ ಗುಮಾನಿ ಆಕೆಯ ತಲೆಯಲ್ಲಿ ದೊಡ್ಡದಾಗಿ ಬೆಳೆಯುತ್ತಲೇ ಹೋಯ್ತು. ಆದ್ದರಿಂದ ಸತ್ತವನ ಹೆಂಡತಿ, ಮಕ್ಕಳಿಗೆ ಫೋನ್ ಮಾಡಿ "ನೀವು ಯಾವುದಕ್ಕೂ ಇಲ್ಲಿ ಬಂದು ಅರಿದಿನಮ್ಮನಿಗೆ ಕುರಿಕುಯ್ದು ಹರಕೆ ತೀರಿಸಿಹೋಗಿ" ಎಂದು ತಾಕೀತು ಮಾಡಿದಳು. ಅದರಂತೆ ಜೋಗದಿಂದ ಅವರೆಲ್ಲಾ ಬಂದು ಸರಿಯಾದ ಟಗರು ಕುಯ್ದು ದಾಡುಬಕ್ಕನನ್ನೆಲ್ಲಾ ಸಂತೃಪ್ತಿಗೊಳಿಸಿ ಹೋದರು.

ಒಮ್ಮೆ ಚಿಗವ್ವ ತೋಟದಿಂದ ಮನೆಗೆ ಬರುತ್ತಿದ್ದಳು. ಮರದ ಮೇಲಿದ್ದ ಕೋತಿಗೆ ಏನನ್ನಿಸಿತೋ ಏನೋ, ಚಿಗವ್ವನ ಭುಜದ ಮೇಲಕ್ಕೆ ನೆಗೆದು ಅವಳ ತಲೆ ಕಿವಿಯನ್ನೆಲ್ಲಾ ಕವರಿಬಿಟ್ಟಿತು. ಚಿಗವ್ವ ಮನುಷ್ಯರಿಗೇ ಬೈಯ್ಯುವಂತೆ "ಅಯ್ಯೋ ನಿನ್ನ ಬಾಯಿಸೇದ. ನಿನಗೇನು ಬತ್ತೋ ಮಲ್ಲಾಗ್ರು ನನ್ನಾಟಗಳ್ನ ಹುಟ್ಟಸಿದ್ದೆ" ಎಂದು ಕೋತಿಯ ಬಾಲ ಹಿಡಿದು ಹೊಗೆದುಬಿಟ್ಟಳು. ಈ ಲಂಕಿಣಿಯ ಆಕ್ರಮಣಕ್ಕೆದರಿದ ಹನುಮ ಮರದ ಮೇಲಕ್ಕೆ ಹೋಗಿ ಅಲ್ಲಿಂದ ಹಲ್ಲುಗಿಂಜಿ ಅಣಕಿಸ ತೊಡಗಿದ. "ಹುಚ್ಚಮ್ಮನಿಗೆ ಕೋತಿ ಕಡಿಯಿತಂತೆ" ಎಂಬ ಸುದ್ದಿ ಜನರಲ್ಲಿ ತಮಾಷೆಯ ನಗೆಯುಕ್ಕಿಸಿತೇ ಹೊರತು, ಯಾರೂ ಲೊಚಗರಿಯಲಿಲ್ಲ. ಆಗಿನ ರಣಗಾಯ ಮಾಯಿಸಿಕೊಂಡು ಚಿಗವ್ವ ಬದುಕಿದ್ದೇ ಹೆಚ್ಚು.

ಬರಲಿರುವ ಪೂರ್ಣಿಮೆ ಪಕ್ಷದಲ್ಲಿ ಮಾಂಸ ಬೇಸಲು ಸೌದೆ ಬೇಕಿತ್ತು. ಚಿಗವ್ವನ ಮಗ ದಿಮ್ಮಿಯೊಂದನ್ನು ಮನೆಯ ಮುಂದೆಯೇ ಉರುಳಿಸಿಕೊಂಡು ಸೌದೆ ಸೀಳುವ ಸಾಹಸ ಮಾಡುತ್ತಿದ್ದ. ಸೌದೆ ಸೀಳ ಬೇಕಾದರೆ ಉಳಿಯಿಂದ ಸೀಳು ಮಾಡಿಕೊಂಡು ನಂತರ ಪಕಳೆಯಾಗಿಸಿಕೊಳ್ಳಬೇಕಿತ್ತು. ಅದಕ್ಕಾಗಿ ಒಣಗಿದ ಮರದ ದಿಮ್ಮಿಯನ್ನು ಸೀಳಲು ಉಳಿ ಇಟ್ಟು ಅದನ್ನು ಚಿಗವ್ವ ಹಿಡಿದುಕೊಳ್ಳುವಂತೆ ಹೇಳಿದ. ಉಳಿ ನಾಟಿಕೊಳ್ಳುವಂತೆ ಗಟ್ಟಿ ತೂಕದಿಂದ ಚಮಟಗೆಯಲ್ಲಿ ಮಗ ಏಟುಹಾಕಿದ. ಆದರೆ ಚಮಟಗೆ ಏಟು ಉಳಿಗೆ ಬಿದ್ದ ಕಲ್ಲು ಬರುವುದರ ಬದಲು, ಹುಸಿಮಣ್ಣಿಗೆ ಹೊಡೆದ ಶಬ್ದ ಬಂತು. ಜೊತೆಗೆ "ಅಯ್ಯೋ ನನ್ನ ಕಂದಾ, ಕೊಂದ್ಯಲ್ಲಾ ನನ್ನಾ, ಹೊಯ್ತಲ್ಲಪ್ಪ ಜೀವ. ಮಗನ ಕೈಲೇ ಮರಣ ಬತ್ತಲ್ಲಾ, ಯಂಥಾ ಪುಣ್ಯವಂತೆನೋ ನಾನೂ" ಎಂದು ಕೂಗಿಕೊಂಡಳು. ಚಿಗವ್ವ ಹೀಗೆ ಕೂಗಲು ಕಾರಣ ಮಗನನ್ನು ಕಂಡರೆ ಅಷ್ಟೊಂದು ಪ್ರೀತಿ. ಆದ್ದರಿಂದ ಮುಂಗೈಗೆ ಮಾರಣಾಂತಿಕ ಹೊಡೆತ ಬಿದ್ದಿದ್ದರೂ ಮಗನನ್ನು ಬೈಯ್ಯಲು ಮನಸು ಬಾರದು. ಆದ್ದರಿಂದ ಮಗ ಎಲ್ಲಿ ಬೇಸರ ಮಾಡಿಕೊಳ್ಳುವನೋ ಎಂಬ ಆತಂಕದಿಂದ ನೋವನ್ನು

(ಮುಂದಿನ ಪುಟಕ್ಕೆ) ⇨

...ಂದು ಗೌಸ್ ಮೊಯಿನುದ್ದೀನನ್ನು ನೋಡಿದ ಚಿಗವ್ವ ...ಸತ್ತು ಹೋದ ಹಿರಿ ಮಗ ಪುನಹ ಹುಟ್ಟಿ ...ಬಂದಿದ್ದಾನೆ. ಆದರೆ ನನ್ನ ದುರಾದೃಷ್ಟ ಸಾಬರ ಜಾತಿಯಲ್ಲಿ ...ಟ್ಟಿದ್ದಾನೆ, ಆದ್ರು ಸಿಕ್ಕಿದನಲ್ಲ ಹೇಳು" ಎನ್ನುತ್ತಿದ್ದಳು. ...ಮಾತನ್ನು ಚಿಗವ್ವ ಆಡಬೇಕಾದರೆ ಗೌಸಣ್ಣ ...ನೂರು ಬಾರಿ ಚಿಗವ್ವ ತೋರುವ ತಾಯಿಪ್ರೀತಿಯಲ್ಲಿ ...ಗಿ ಎದ್ದೇಳಿದ.

...ಗೌಸಣ್ಣ ಮದುವೆಯಾದ, ಬೇಕಾದಷ್ಟು ಮಕ್ಕಳಾ... ಆದರೂ ದಿನಬೆಳಗಾದರೆ ಅಲ್ಲಿ ಅವ್ವನ ಮನೆಕತೆ ...ಯ್ಯೋ ಎಂಬಂತೆ ಬೆಳ್ಳೂರಿನಿಂದ ಚೋಳಸಂದ್ರಕ್ಕೆ ...ತ್ತಿ ಓಡಿಬರುತ್ತಿದ್ದ. ಇಲ್ಲಿ ತಲೆಹೋಗುವಂತದ್ದೇನೂ ...ಬಂದರೆ ಚಿಗವ್ವನ ಜೊತೆ ಚೌಕಾಬಾರ ಆಡುತ್ತಿದ್ದ. ...ರ ಪಾತ್ರೆಗಳ ಕಳ ಎತ್ತುತ್ತಿದ್ದ, ಹರಕಲು ಬಟ್ಟೆಗಳಿಗೆ ...ಹಾಕುತ್ತಿದ್ದ, ಹುಣಸೆ ಹಣ್ಣು ತರದಿಕೊಂಡು ...ತ್ರ, ಚಿಗವ್ವ, ಚಿಗವ್ವನ ಜೊತೆ ಸೀಮೆನಾಡಿನ ...ಮುಚ್ಚೆಲ್ಲಾ ಹರಟುತ್ತಿದ್ದ. ಗೌಸಣ್ಣ ಬಂದಕೂಡಲೇ ...ನ ಕಣ್ಣು ಮಿಂಚಿ ತುಟಿಬಿರಿಯುವುದನ್ನು ನೋಡು... ಬೇಕು.

...ಗೌಸಣ್ಣ ಕ್ರಮೇಣ ಚಿಗಪ್ಪ ಚಿಗವ್ವನ ನಿಜವಾದ ...ಆಗುತ್ತಾ, ಹೋದಂತೆ ಅವರ ನಿಜವಾದ ಮಗ ...ಕರಾಗಿ ಒಂದು ರೀತಿಯಲ್ಲಿ ಆರಾಮವಾಗಿಯೇ ...ಕೊಂಡಿದ್ದ. ಆತನ ಮೂರ್ಛಾಲು, ಹೆಣ್ಣು ಮಕ್ಕಳಿಗೆ ...ದು ಹೋದುವುದರಿಂದ ಓದಿದು ಮದುವೆ ...ಗಳೆಲ್ಲಾ ಗೌಸಣ್ಣನ ಮೇಲೆ ಬಿದ್ದವು. ಆದರೆ ಹೊರೆ

ಒಂದಿಷ್ಟು ಕಾಳು ಬೇಸುತ್ತಿದ್ದ. ಅವರೆ, ಹುರುಳಿ, ತಡ್ಗಿಕಾಳು ಯಾವ ಕಾಳಾದರೂ ಆಗಬಹುದು, ಕಾಳು ಬೆಂದಮೇಲೆ ಆ ಕಾಳಿಗೊಂದಿಷ್ಟು ಉಪ್ಪು, ಮೆಣಸು, ಬೆಳ್ಳುಳ್ಳಿ, ಕಾಯಿ ಚೂರಾಕಿ ಕಾರ ಅರೆದು ಬಿಡುತ್ತಿದ್ದ. ಇತ್ತ ಹಿಟ್ಟನೆಸರು ಕುದಿಯುವಾಗ ಅದಕ್ಕೆ ಎರಡು ಚಿಪ್ಪು ಅಸಿಟ್ಟು ಹಾಕಿ ಬೆಂದಕೂಡಲೇ ಮುದ್ದೆ ಕೋಲೆಟ್ಟು ತಿರುವಿ ನಾಲ್ಕು ಮುದ್ದೆ ಕಟ್ಟಬಿಡುತ್ತಿದ್ದ. ಗಂಡಹೆಂಡತಿ, ಇಬ್ಬರು ಮಕ್ಕಳು ಸಾಲಾಗಿ ಕುಳಿತುಕೊಂಡು ಸಪ್ಪೆ ಸಾರಿಗೆ ಕುರಿಹಿಕ್ಕೆ ಗಾತ್ರದ ಕಾರ ಹಾಕಿ ಕಲಸಿಕೊಂಡು ಉಂಡುಬಿಡುತ್ತಿದ್ದರು. ಬೆಳಿಗ್ಗೆ ತಿಂಡಿ ಮಧ್ಯಾಹ್ನದ ಊಟದ ನಡುವೆ ತಲೆಗಾತ್ರದ ಮುದ್ದೆಯೂಟ ನಡೆದುಹೋದರೆ ಹಸಿವಿಲ್ಲದ ವರ ಪಡೆದ ಅನುಭವವಾಗುತ್ತಿತ್ತು. ರಾತ್ರಿ ಅಡುಗೆಯನ್ನ ಚಿಗಪ್ಪ ಮಾಡುತ್ತಿದ್ದರೂ ನೆಪಮಾತ್ರಕ್ಕೆ ಚಿಗವ್ವ ಒಲೆ ಮುಂದಿರುತ್ತಿದ್ದಳು. ಆಗಲೂ ಅಪ್ಪನದೇ ಭೀಮನ ಅಡುಗೆ.

ಈ ಕುಟುಂಬ ನೋಡಿದಾಗ ನನಗೆ ಬದುಕು ಇಷ್ಟೊಂದು ಸರಳವೇ ಅನ್ನಿಸಿದರೂ ಅವರು ತಮ್ಮ ಸುತ್ತಲೂ ಹರಡಿದ ಪ್ರೀತಿ ನಮ್ಮಿಂದ ಸಾಧ್ಯವಾಗಲೇ ಇಲ್ಲ ಅನ್ನಿಸುತ್ತಿತ್ತು. ನಾನು ಗೌಸಣ್ಣನನ್ನು ಎಷ್ಟೇ ಅಕ್ಕರೆಯಿಂದ ಕರೆದರೂ ಆತ ಬರುತ್ತಿರಲಿಲ್ಲ. ನನ್ನ ಹೆಂಡತಿ ಕರೆದಾಗ "ಮನೆ ಯಜಮಾನ ನಿನ್ನ ಗಂಡ. ಅವ್ರುನು ಕರೀಲಿ ಬತ್ತೀನಿ" ಎನ್ನುತ್ತಿದ್ದ. ನಾನು ಕರೆದರೆ "ಮಾಡಿ ಹಾಕೋಳು ನಿಮ್ಮೆಡ್ತಿ, ಅವ್ರುಳು ಕರೀಲಿ ಬತ್ತೀನಿ" ಎನ್ನುತ್ತಿದ್ದ. ನಾನು ಗಮನಿಸಿದಂತೆ ಅವನೊಬ್ಬ ಅಪರೂಪದ

ಅಗ್ನಿ

(೩ನೇ ಪುಟದಿಂದ)

ಅವರ ಜೊತೆ ಸೇರೋಕೇ ಇಷ್ಟ ಇರಲಿಲ್ಲ. ನನ್ನ ದಯವಿಟ್ಟು ಕ್ಷಮಿಸು..." ಹುಡುಗ ಅಳಲಾರಂಭಿಸಿದ. "ನಿನ್ನ ಹಾಗೆ ಮುಟ್ಟದ ಗಳಿಗೆಯಲ್ಲಿ ನಂಗೆ ಏನೋ ಕಳೆದುಕೊಂಡೆ ಅಂತ ಗೊತ್ತಾಯ್ತು... ನಂಗೆ...ನಂಗೆ..." ಮುಂದುವರೆಸಲಾಗದೆ ಹುಡುಗ ಅಳುತ್ತಲೇ ಕೂತ. ಪ್ರಿಯಾ ಸ್ವಲ್ಪ ಹೊತ್ತು ಏನೂ ಮಾತಾಡಲಿಲ್ಲ. ನಂತರ ಎದ್ದು, ಅವನ ಕೂದಲನ್ನು ನೇವರಿಸಿ, "ಹೋಗು..." ಎಂದಳು. ಅಳುತ್ತಲೇ ನಿಧಾನವಾಗಿ ನಡೆದುಹೋದ ಅವನನ್ನೇ ದಿಟ್ಟಿಸುತ್ತಾ ಕೂದಲಿನಲ್ಲಿದ್ದ ಪಿನ್ನುಗಳನ್ನು ಒಂದೊಂದಾಗಿ ತೆಗೆಯಲಾರಂಭಿಸಿದಳು.

ಮುಂದಿನ ವಾರ ಪ್ರಿಯಾ ಪ್ರತಿದಿನವೂ ಸಂಜೀವನ ಟೆಲಿಫೋನಿನ ಬೂತಿನಿಂದ ಕರೆಗಳನ್ನು ಮಾಡಲಾರಂಭಿಸಿದಳು. ಇದ್ದಬದ್ದ ಸ್ನೇಹಿತರಿಗೆಲ್ಲ ಕರೆಗಳನ್ನು ಮಾಡುತ್ತಾ, ಅವನ ಮುಖವನ್ನೇ ದಿಟ್ಟಿಸುತ್ತಾ ನಿಲ್ಲುತ್ತಿದ್ದಳು. ಕೀಳರಿಮೆಯಲ್ಲಿ ಅವನ ಮುಖ ಕ್ಷಣಕ್ಷಣಕ್ಕೂ ಕಪ್ಪಿಡುವುದನ್ನು ನೋಡಿದಂತೆಲ್ಲಾ ಅವಳಿಗೆ ವಿಚಿತ್ರವಾದ ಸಮಾಧಾನವಾಗುತ್ತಿತ್ತು. ಈ ಸಣ್ಣಪುಟ್ಟ ವಿಜಯ ಗಳಿವೆಯಲ್ಲ, ಅವು ಕೊಡುವ ಸಮಾಧಾನವೇ ಬೇರೆ, ನೆನಪಿರಲಿ ಎಂದು ತನ್ನಲ್ಲೇ ಹೇಳಿಕೊಳ್ಳುತ್ತಿದ್ದಳು.


ರವಿ ಅಲ್ಲಲ್ಲಿ ಸಿಗುತ್ತಿದ್ದ. ಆಫೀಸಿನ ಹತ್ತಿರ, ರಸ್ತೆಯಲ್ಲೆಲ್ಲೋ... ಹೀಗೆಯೇ. ಕಂಡಾಗೆಲ್ಲ ನಗುವೊಂದನ್ನು ಬೀರುತ್ತಿದ್ದಳು. ಅವಳು ನಕ್ಕಷ್ಟೂ ಅವನು ಅಧೀರನಾಗುತ್ತಿದ್ದ.

ಒಂದು ದಿನ ಅವಳು ಸೈಕಲ್ ತೆಗೆದುಕೊಂಡು ಹೋಗಿರಲಿಲ್ಲ. ನಡೆದೇಹೋಗುತ್ತಿದ್ದ ಅವಳ ಜೊತೆ ಅವನೂ ಹೆಜ್ಜೆ ಹಾಕಿದ. "ಒಂದು ನಿಮಿಷ, ನಾನೊಂದು ಮಾತು ಕೇಳಬಹುದಾ?" ಎಂದ. ಏನು ಎಂಬಂತೆ ಪ್ರಿಯಾ ಅವನ ಕಡೆಗೆ ಕಣ್ಣು ತಿರುಗಿಸಿದಳು. "ನನ್ನ ನೋಡಿದಾಗೆಲ್ಲ ನಗು ಬೀರುತ್ತೀಯಲ್ಲ? ಯಾಕೆಂದು ಕೇಳಬಹುದಾ?"

ಪ್ರಿಯಾಳ ಮುಖದ ಮೇಲಿನ ನಗು ಮಾಸಲಿಲ್ಲ. ಅರೆಗಳಿಗೆ ಯೋಚಿಸಿ ನಿಧಾನವಾಗಿ ಹೇಳಿದಳು. "ಯಾಕೆ ಅಂದ್ರೆ? ನೀನು ಅಂದ್ರೆ ನಂಗೆ ಇಷ್ಟ. ಅದಕ್ಕೇ."

ಅವನ ಮುಖ ಇನ್ನಷ್ಟು ಕಪ್ಪಿಟ್ಟಿತು. "ಇಷ್ಟಾನಾ?"

ಮತ್ತರೆಗಳಿಗೆ ತಡೆದ ಪ್ರಿಯಾ ಅದೇ ನಗುಮುಖದಲ್ಲಿ ಮುಂದುವರೆಸಿದಳು. "ಹೌದು. ನಿನ್ನ ಕಂಡರೆ ನಂಗೆ ಇಷ್ಟ. ಯಾರೋ ಒಬ್ಬ ಪ್ರೇಮದ ಕಣ್ಣುಗಳನ್ನು ಹೊತ್ತವ, ಕನಸಿನಲ್ಲಿ ನನ್ನ ಬಂದು ಕಾಡುತ್ತಿದ್ದನಲ್ಲ? ಅದು ನೀನೇ ಅಂತ ನಂಗೆ ಗೊತ್ತಾಯ್ತು. ಆ ದಿನ, ನನ್ನ ದೇಹವನ್ನು ನೀನು ಆಕ್ರಮಿಸಿಕೊಂಡಾಗ ನನಗೆ ಕೋಪ, ಅವಮಾನ, ಎಲ್ಲವೂ ಅನ್ನಿಸಿದ್ದು ನಿಜ. ಆದರೆ ಕ್ರಮೇಣ ನೀನು ತುಂಬ ಇಷ್ಟವಾದೆ. ನಿನಗೆ ಅದರ ಅರಿವಿದೆಯೋ, ಇಲ್ಲವೋ, ನನ್ನ ಪ್ರೀತಿಯಿಂದ ನಿನ್ನನ್ನು ಬಲವಾಗಿ ಆಕ್ರಮಿಸಿಕೊಂಡಿದ್ದು ನಾನು. ಉಳಿದಿಬ್ಬರು ನನ್ನ ದೇಹದ ಮೇಲೆ ಆಕ್ರಮಣ ಮಾಡಿದ್ದಿರಬಹುದು. ಆದರೆ ನೀನು ನನಗೆ ಹತ್ತಿರದವನೆನ್ನಿಸಿದ್ದು, ಆ ಇಬ್ಬರಿಗೆ ಹೋಲಿಸಿದಾಗಲೇ. ಏನೇ ಇರಲಿ, ನನ್ನ ಮಟ್ಟಿಗೆ ನೀನೊಬ್ಬನೇ ನನ್ನ ಪ್ರೇಮಿ. ನನ್ನ ದೇಹ, ಮನಸ್ಸುಗಳಿಗೆ ಹತ್ತಿರವಾದವನು ನೀನೊಬ್ಬನೇ. ನಿನಗೆ ಏನೆನ್ನಿಸಿತೋ ನನಗೆ ಗೊತ್ತಿಲ್ಲ. ಒಂದಂತೂ ನಿಜ. ನಾನೆಷ್ಟೇ ದೂರ ಹೋಗಲಿ, ನನ್ನ ರಕ್ತ, ನನ್ನ ಕಣ್ಣೀರು ನಿನಗಾಗಿ ತಹತಹಿಸುತ್ತಿರುತ್ತವೆ ಎಂಬ ಸತ್ಯವನ್ನು ನೀನು ಮರೆಯದಿದ್ದರೆ ಸಾಕು. ನಿಜವಾದ ಅರ್ಥದಲ್ಲಿ ನೀನೇ ನನ್ನ ಸೆರೆಮನೆ. ನಾನದರಲ್ಲಿ ತಪ್ಪಿಸಿಕೊಳ್ಳಲಾಗದ ಕೈದಿ..."



ರವಿ ಕಕ್ಕಾಬಿಕ್ಕಿಯಾಗಿ ನಿಂತ. ಅವಳು ಹೇಳಿದ್ದು ಪೂರ್ತಿ ಅರ್ಥವಾಗಿಲ್ಲ ಎಂದು ಅವನ ಮುಖವೇ ಹೇಳುತ್ತಿತ್ತು. ಅವನ ತೋಳನ್ನು ಮೆಲ್ಲಗೆ ಮುಟ್ಟಿ "ಬೈ" ಎಂದ ಪ್ರಿಯಾಳ ದನಿಯಲ್ಲಿ ನೋವು ತುಳುಕುತ್ತಿತ್ತು. ಹಿಂದೆ ತಿರುಗಿ ನೋಡದೆ ಬಸ್ಸು ಹಿಡಿಯಲು ಮುಂದೆ ನಡೆದ ಅವಳನ್ನೇ ನೋಡುತ್ತಾ ನಿಂತ ರವಿ.

ಮಾರನೆಯ ಎರಡು ದಿನಗಳೂ ಪ್ರಿಯಾ ಆಫೀಸಿಗೆ ಹೋಗದೆ ಮನೆಯಲ್ಲಿ ಉಳಿದಳು. ಮೊದಲ ದಿನ ನೆಮ್ಮದಿಯಾಗಿ ಕಾದಂಬರಿಯೊಂದನ್ನು ಓದುವುದರಲ್ಲಿ ಕಳೆಯಿತು. ಎರಡನೆಯ ದಿನ ಅಪ್ಪ ಆಫೀಸಿಗೆ ಹೋಗಿ, ತಂಗಿ ಕಾಲೇಜಿಗೆ ಹೋಗಿ, ಅಮ್ಮ ಸಹ ಏನೋ ಕೊಳ್ಳಬೇಕೆಂದು ಮಾರುಕಟ್ಟೆಗೆ ಹೋದಾಗ, ಮನೆಯಲ್ಲಿ ಒಂಟಿಯಾಗಿದ್ದ ಪ್ರಿಯಾಳಿಗೆ ಹುಚ್ಚೇ ಹಿಡಿಯುತ್ತಿದೆಯೆನ್ನಿಸಿತು. ದೆವ್ವ ಹಿಡಿದವಳಂತೆ ಅತ್ತಿಂದಿತ್ತ ತಿರುಗಾಡಿ ವೆರಾಂಡದಲ್ಲಿ ಕುಕ್ಕರಿಸಿದಳು. ಮನಸ್ಸು ಶೂನ್ಯದಲ್ಲೆಲ್ಲೋ ನೆಟ್ಟಿತ್ತು.

ಯಾವುದೋ ಮೋಟರ್ ಬೈಕು ಮನೆ ಮುಂದೆ ಬಂದು ನಿಂತಂತಾಯಿತು. ರವಿ! ಸುಮ್ಮನೇ ನೋಡುತ್ತಾ ಕೂತಳು. ಒಳಗೆ ಬರುವುದೋ, ಬೇಡವೋ ಎಂಬ ದ್ವಂದ್ವದಲ್ಲಿ ಗೇಟಿನ ಬಳಿಯೇ ನಿಂತಿದ್ದ. ಬರುವಂತೆ ಸನ್ನೆ ಮಾಡಿದಳು.

ಅನುಮಾನಿಸುತ್ತಲೇ ರವಿ ವೆರಾಂಡದೊಳಗೆ ಕಾಲಿಟ್ಟ. "ಏನು?" ಎಂದ ಪ್ರಿಯಾ ಅವನನ್ನೇ ದಿಟ್ಟಿಸಿದಳು. ರವಿ ಮಾತಾಡಲಿಲ್ಲ.

"ಯಾಕೆ ಮಾತಾಡುತ್ತಿಲ್ಲ? ನನ್ನನ್ನು ಪ್ರೀತಿಸ ಹತ್ತಿದೆಯೋ ಹೇಗೆ?"

ಅನಿರೀಕ್ಷಿತ ಪ್ರಶ್ನೆಗೆ ಬೆಚ್ಚಿ ಬಿದ್ದಂತೆ ಕಂಡರೂ ಮರುಗಳಿಗೆಯಲ್ಲೇ ಹಗುರವೂ ಆದ. ನೆಲದ ಮೇಲೆ ಕೂತಿದ್ದ ಅವಳ ಪಕ್ಕ ಜರುಗಿ ಕೂತ.

"ಹೌದು ಪ್ರಿಯಾ. ನಿನ್ನ ಕಂಡರೆ ನಂಗೆ ತುಂಬ ಪ್ರೀತಿ ಅಂತ ನನಗೆ ಗೊತ್ತಾಗ್ತಾ ಇದೆ," ತಲೆಯನ್ನು ತಗ್ಗಿಸಿ ಮುಂದೇನು ಹೇಳಲು ತೋಚದೆ ಕೂತ.

"ನಿನ್ನ ಪ್ರೀತಿ ಪ್ರಾರಂಭವಾಗಿದ್ದು ಯಾವಾಗ? ನಾನು ಕೆನ್ನೆಗೆ ಹೊಡೆದ ದಿನದಿಂದಲೆ?"

ರವಿ ಇನ್ನಷ್ಟು ಕಕ್ಕಾಬಿಕ್ಕಿಯಾದ. ಕತ್ತೆತ್ತಿ ಅವಳ ಕಣ್ಣನ್ನು ಸಂಧಿಸಲು ಪ್ರಯತ್ನಿಸಿ, ಅವಳ, ಸೀಳುವ ನೋಟವನ್ನೆದುರಿಸಲಾಗದೇ ತಲೆ ತಗ್ಗಿಸಿದ. "ನನ್ನ ಮೇಲೆ ಸೇಡು ತೀರಿಸಿಕೊಳ್ಳುತ್ತಿದ್ದೀಯಾ ಪ್ರಿಯಾ? ನನಗೆ ಸಹಿಸಿಕೊಳ್ಳುವ ಶಕ್ತಿಯಿಲ್ಲ... ದಯವಿಟ್ಟು ಹಾಗೆ ಮಾಡಬೇಡ. ನೀನು ಎಲ್ಲಿ ಹೋದರೂ ನನ್ನ ಪ್ರೀತಿ ಕಡಿಮೆಯಾಗುವುದಿಲ್ಲ. ಅದರಿಂದ ನನಗೆ ಎಷ್ಟು ನೋವಾದರೂ ಸರಿಯೆ... ನಾನು... ನಾನು..."

ಅವನ ಕಣ್ಣುಗಳಲ್ಲಿ ನೀರು ತುಂಬಿಕೊಳ್ಳುತ್ತಿದ್ದನ್ನು ಪ್ರಿಯಾ ಗಮನಿಸಿದಳು. ರವಿ ಅವಳ ಮುಖದ ಮೇಲಿನ ನಗುವನ್ನೇ ನೋಡುತ್ತಾ ಸ್ವಲ್ಪ ಹೊತ್ತು ಕೂತ. ಕೊನೆಗೊಮ್ಮೆ ತಡೆಯಲಾಗದೇ, ಕೈಗಳಲ್ಲಿ ಮುಖವನ್ನು ಹುದುಗಿಸಿ ಮಗುವಂತೆ ಬಿಕ್ಕಿಬಿಕ್ಕಿ ಅಳಲಾರಂಭಿಸಿದ.

ಕೆಲವಷ್ಟೇ ದಿನಗಳ ಹಿಂದಿನ ಆ ಸಂಜೆಯ ಘಟನೆಗಳು ಅವಳ ಕಣ್ಣೆದುರಿಗೆ ಮತ್ತೆ ಮೂಡಿದವು. ಮೈಗೆ, ಮನಸ್ಸಿಗೆ ಹತ್ತಿದ ಕಲೆಗಳೂ ಸುಳಿದವು. ಅವಳಿಗೂ ಕಟ್ಟೆಯೊಡೆದು, ಅಳು ನುಗ್ಗಿ ಬಂತು. ಅಳುತ್ತಲೇ ಹೇಳಿದಳು, "ಹೌದು, ನನಗೆ ನಿನ್ನ ಮೇಲೆ ಸೇಡು ತೀರಿಸಿಕೊಳ್ಳಬೇಕಿತ್ತು." ಬಿಕ್ಕಳಿಕೆಗಳ ನಡುವೆ, "ನಿನ್ನ ಪ್ರೀತಿಯೇ ನನ್ನ ಸೇಡು" ಎಂದು ಗದ್ಗರಿಸಿದಳು.

ಕತ್ತೆತ್ತಿ ಅವಳ ಕಡೆಗೆ ನೋಡಿದ. ರವಿಯ ಕಣ್ಣಿನಲ್ಲಿ ಆರ್ದ್ರತೆಯಿತ್ತು. ಕೈಚಾಚಿ ಅವಳನ್ನು ಸಂತೈಸಲೆಂದು ಹತ್ತಿರ ಸರಿದ. ಕಣ್ಣೀರ ಕಲೆಗಳಿಂದ ತುಂಬಿದ್ದ ಅವಳ ಕೆನ್ನೆಯನ್ನು ಮೆಲ್ಲಗೆ ನೇವರಿಸಹೋದ.

ಅವಳನ್ನು ಮುಟ್ಟದ್ದೇ ಬೆಚ್ಚಿ ಬಿದ್ದು ಹಿಂದೆ ಸರಿದಿದ್ದು ಅವಳ ಅರಿವಿಗೂ ಬಂದಿತ್ತು. ■

(ಹಿಂದಿನ ಪುಟದಿಂದ)

ನುಂಗಿ "ನಿನ್ನ ಗಾಚಾರ ಸರಿಲ್ಲ ಕಣಪ್ಪ, ಎದ್ದು ಯಾರ ಮಕ ನೋಡಿದ್ದೊ ಕಂದಾ" ಎಂದು ಎರಡೂ ಕೈಯಿಂದ ರಕ್ತ ಚಿಮ್ಮಿಸುತ್ತ ಭಕ್ತ ಕುಂಬಾರನಂತಾಡತೊಡಗಿದಳು.

ಮಗ ಕೂಡಲೇ ಅವ್ವನ ಕೈಗೆ ಬಟ್ಟೆ ಸುತ್ತಿಕೊಂಡು ಗಾಡಿ ಮೇಲೆ ಬೆಳ್ಳೂರಿಗೆ ಕರೆದುಕೊಂಡು ಬಂದ. ಅಷ್ಟರಲ್ಲಾಗಲೇ ಇನ್ನೊಬ್ಬ ಮಗ ಗೌಸಣ್ಣ ತನಗೇ ಏನೋ ಆಗಿರುವವನಂತೆ ಗಾಬರಿಬಿದ್ದು ಓಡಾಡುತ್ತಾ ಅವ್ವನನ್ನು ಸಂತೈಸಿ ಬ್ಯಾಂಡೇಜ್ ಹಾಕಿಸಿದ. ಚಿಗವ್ವನ ಕೈಗಳು ಹುಷಾರಾಗುವವರೆಗೂ ಅಪ್ಪನೇ ಅಡುಗೆ ಮಾಡಿ ತುತ್ತು ಮಾಡಿ ಉಣ್ಣಿಸುತ್ತಿದ್ದ. ಇದನ್ನು ನೋಡಿ ಗೌಸಣ್ಣ "ಹುಚ್ಚಮ್ಮರ ಸುಖ ನೋಡಪ್ಪಾ, ಮೈಸೂರು ಮಾರಾಣಿನೂ ಇಷ್ಟು ಸುಖವಾಗಿರಲಿಲ್ಲ, ಯಾವ ಜಲ್ಮದಲ್ಲಿ ಏನು ಪುಣ್ಯ ಮಾಡಿದ್ದೊ ಕೈಗೊಬ್ಬಳು ಕಾಲಿಗೊಬ್ಬಳು. ಅಂತೂ ಸುಕಪುರುಸಿ ನೀನು" ಎಂದು ಅಣಕಿಸುತ್ತಿದ್ದ. ಚಿಗವ್ವ ನಗುತ್ತಿದ್ದಳು.

ಚಿಗವ್ವ ಚೆನ್ನಾಗಿ ಹುಷಾರಾದ ಮೇಲೆ ಇನ್ನೊಂದು ಕಂಟಕ ಎದುರಿಸಬೇಕಾಯ್ತು. ಆಕೆ ಹೊಲದ ಕಡೆ ಹೋಗಿದ್ದಳು. ಇಳಿಹೊತ್ತು, ಮುಳುಗುವ ಸೂರ್ಯ ತನ್ನ ಹೊಂಗಿರಣ ಬೀರಲಾಗಿ ಆಕೆಯ ಕಿವಿಲಿದ್ದ ಓಲೆ, ಕತ್ತಿನ ಕರಿಮಣಿ ಸಂದಲ್ಲಿದ್ದ ಚಿನ್ನದ ಕೊಳವೆ ಪೀಸು ಹೊಳೆಯುತ್ತಿದ್ದವು. ಇದನ್ನು ನೋಡಿದ ಇಬ್ಬರು ಕಳ್ಳರು ಹಠಾತ್ತನೆ ಚಿಗವ್ವನ ಮೇಲೆ ಎರಗಿದರು. ಆಕೆ ಆ ನರಮನುಷ್ಯರ ಜೊತೆ ಕರಡಿಯಂತೆ ಹೋರಾಡಿ ಸುತ್ತಲ ಹಳ್ಳಿಗಳಿಗೆ ಕೇಳುವಂತೆ ಕೂಗಿಕೊಂಡರೂ ಕತ್ತಿನ ಸರ ಉಳಿಸಿಕೊಳ್ಳಲಾಗಲಿಲ್ಲ. ಆದರೇನು, ಕಿತ್ತು ಹೋದ ಸರದಿಂದ ಕಳಚಿಬಿದ್ದ ತಾಳಿ ಮತ್ತೆ ಚಿಗವ್ವನಿಗೆ ಸಿಕ್ಕಿತು. "ಸತ್ತವಂತ ಕಟ್ಟಿರೊ ತಾಳಿ ಕಳ್ಳಸೂಳೆ ಮಕ್ಕಳಿಗೆ ಯಂಗೆ ಸಿಗಬೇಕು" ಎಂದುಕೊಂಡು ಕಳ್ಳರೊಂದಿಗೆ ಹೋರಾಡಿ ಗೆದ್ದ ಸಾಹಸವನ್ನು ಚಿಗವ್ವ ಸುಮಾರು ದಿನ ಹೇಳಿಕೊಂಡು ತಿರುಗಿದಳು. "ನನ್ನನ್ನು ಯಾರೂ ಸಾಯಿಸಕ್ಕಾಗದಿಲ್ಲ ಕಣಪ್ಪ, ಗಟ್ಟಿಜೀವ ನೋಡು, ಇಬ್ರು ತಮ್ಮದಿರು ಸತ್ರ ನಾನ್ಯಂಗಿದ್ದಿನಿ" ಎನ್ನುತ್ತಿದ್ದ ಚಿಗವ್ವ ತನ್ನ ದೀರ್ಘಾಯುಷ್ಯಕ್ಕೆ ಕೊಡುತ್ತಿದ್ದ ಕಾರಣ "ಸುಳ್ಳೇಳಬಾರ್ದು, ಇದರ ಜೊತೆಗೆ ಕರುಬುತನ, ಕಿಜ್ರತನ ಇರಬಾರ್ದು. ತಂಗ್ಳ ಬಂಗ್ಳ ಹಳಸ್ಲು ಪಳುಸ್ಲು ತಿನ್ನಬಾರ್ದು. ಏನಿದ್ರು ಬಿಸಿದ್ದೆ ತಿನ್ನಬೇಕು. ಯಭಿಚಾರ ಮಾಡಬಾರ್ದು" ಎಂಬುದು. ವ್ಯಭಿಚಾರ ನಿಷೇಧವನ್ನು ದೀರ್ಘಾಯುಷ್ಯದ ಪಟ್ಟಿಗೆ ಸೇರಿಸಿಕೊಂಡಿರುವ ಅವಳ ಜ್ಞಾನಕ್ಕೆ ಸಾಕ್ಷಿಯಾಗಿ ಶತಾಯುಷಿಗಳಾಗಿ ಸತ್ತ ಊರಿನ ಅನೇಕರು ಏಕಪತ್ನಿ ವ್ರತಸ್ಥರಾಗಿದ್ದರಂತೆ.

ಒಂದು ದಿನ ಚಿಗವ್ವಳಿಗೆ "ಈ ಬಾರಿ ಊರಬ್ಬಕ್ಕೆ ಗೌರಿ ಬತ್ತಳೆ ಕಣವ್ವ" ಎಂದೆ. "ಕರ್ಮಂಬಾರೊ ಅವುಳ ನೋಡ್ಯಾಗಲೆ ವರ್ಸಾಯ್ತು" ಎಂದಳು. "ಏ ನನ್ನೆದ್ದಿ ಗೌರಿಯಲ್ಲಾ ಲಂಕೇಶ್ ಮಗಳು ಗೌರಿ ಬತ್ತಳೆ" ಎಂದೆ. "ಕರ್ಮಂಬಾ ಹಾದಿವಲ ಮಾಡಿ ಬೀದಿಮನೆ ಮಾಡಿ ಯಾರ್ನೂ ಬರಬ್ಯಾಡಿ ಅನ್ನಕ್ಕಾದತೆ" ಎಂದಳು.

ಊರ ಹಬ್ಬಕ್ಕೆ ಗೌರಿ ಬಂದಳು. ಚಿಗವ್ವಳ ಕಲ್ಪನೆಯ ಗೌರಿ ರೇಷ್ಮೆ ಸೀರೆ, ಕುಪ್ಪಸ, ತಲೆತುಂಬ ಹೂ ಮತ್ತು ಚಿನ್ನಾಭರಣದಿಂದ ಅಲಂಕೃತಗೊಂಡ ಗಜಗೌರಮ್ಮನಾಗಿದ್ದಳು. ಆದರೆ ಈ ಗೌರಿ ಒಂದು ಬನಿಯನ್ ತರ ಅಂಗಿ, ಪ್ಯಾಂಟು ಹಾಗೂ ಬಾಬ್‌ಕಟ್ಟನೊಂದಿಗೆ ಮನೆಬಾಗಿಲಲ್ಲಿ ಇಳಿದಕೂಡಲೇ ಚಿಗವ್ವನಿಗೆ ನವಿಲು ನೋಡಲು ತಯಾರಾಗಿ ನಾಟಕೋಳಿ ನೋಡಿದಂತಾಗಿ "ಯೆವ್ವ ನನಕ್ಕಟ್ಟೆ ಹೆಂಗುಸ್ರು ಹಿಂಗೂ ಇದ್ದರೇ" ಎಂದು ಉದ್ಗಾರ ತೆಗೆದಳು. ಗೌರಿ ನೇರ ಕೊಟ್ಟಿಗೆಗೆ ಹೋಗಿ ಎಮ್ಮೆ, ಎತ್ತು, ಕರ ಮತ್ತು ಕುರಿ ನಡುವೆ ಜಾಗ ಮಾಡಿಕೊಂಡು ತನ್ನ ಹತಾರಗಳೊಂದಿಗೆ ಕುಳಿತ ಕೂಡಲೇ ಚಿಗವ್ವ ಇದು ತನ್ನದೇ ಹುಡುಗಿ ಎಲ್ಲೋ ಹೋಗಿತ್ತು ಈಗ ಬಂದಿದೆ ಎನ್ನುವಂತೆ ಬದಲಾದಳು. ಊರ ಹಬ್ಬವಾದ್ದರಿಂದ ಮನೆಯೊಳಗೆ ಮಾಂಸ ಮದ್ಯ ನಿಷಿದ್ಧವಾಗಿತ್ತು, ಆದ್ದರಿಂದ ಗೌಸಣ್ಣ ತನ್ನ ಮನೆಯಿಂದಲೇ ಎಲ್ಲವನ್ನು ಮಾಡಿಸಿಕೊಂಡು ತಂದಿದ್ದ. ಕೊಟ್ಟಿಗೆಯಲ್ಲಿ ನಮ್ಮ ಪಾರ್ಟಿ ಆರಂಭವಾಯ್ತು. ಅಪ್ಪ ಅತ್ಯಂತ ಸಹಜವಾಗಿ "ಉಣ್ಣನ್ನ ನಿಮ್ಮನೆ ಅಂತ ತಿಳಕಳಿ" ಎಂಬ ಮಾತಿನೊಂದಿಗೆ ಕೂತ. ಗೌಸಣ್ಣ ತಾನು ಮಾಡಿಕೊಂಡು ಬಂದ ಬಿರಿಯಾನಿ, ಕಬಾಬ್, ಇತ್ಯಾದಿ ಮಾಂಸ ಭಕ್ಷಣೆಗಳ ಬಗ್ಗೆ ಗೌರಿ ಹೊಗಳಿದ್ದರಿಂದ ಉಬ್ಬಿಹೋಗಿದ್ದ. ಅದೊಂದು ಅನಿರೀಕ್ಷಿತವಾದ ಪಾರ್ಟಿ ಮತ್ತು ಕಟ್ಟಕಡೆಯ ಪಾರ್ಟಿ. ಗೌರಿ ತನ್ನಲ್ಲಿದ್ದ ಶಾಲನ್ನು ಚಿಗವ್ವನಿಗೆ ಹೊದಿಸಿದಳು. ಎಲ್ಲರ ಫೋಟೋ ತೆಗೆದಳು. ಆ ಫೋಟೋಗಳನ್ನು ಆದು ಕುರಿ ಮತ್ತು ಕರುಗಳನ್ನು ಅವಾಯ್ಡ್ ಮಾಡಿ ತೆಗೆಯಲಾಗಲಿಲ್ಲ. ಆ ಜಾಗ ನಮ್ಮನ್ನು ಶತಮಾನಗಳ ಕಾಲ ಹಿಂದೆ ಅಂದರೆ ಹೈನುಗಾರಿಕೆ ಯುಗಕ್ಕೆ ಹಾಕಿತ್ತು. ಹೀಗೆ ಬಂದು ಹಾಗೆ ಕಾರಿನಲ್ಲಿ ಹೊರಟ ಗೌರಿಯನ್ನು ಬೀಳ್ಕೊಟ್ಟ ಚಿಗವ್ವ "ಸಗತಿವಂತೆ ಬುಡಪ್ಪ, ಇಂತ ಮಕ್ಕಳಿದ್ರೆ ಗಂಡುಮಕ್ಕಳು ಯಾಕೆ ಬೇಕೇಳು" ಎಂದು ಉದ್ಗಾರ ತೆಗೆದಿದ್ದಳು.

ಕೆಲದಿನಗಳ ನಂತರ ಚಿಗವ್ವನಿಗೆ ಕಣ್ಣು ಮಂಜಾಗುತ್ತ ಬಂದವು. ಕ್ರಮೇಣ ಕಾಣದಂತಾದವು. ತನ್ನ ಪರಿಚಿತ ಮನೆಯಲ್ಲಿ ಕಣ್ಣಿದ್ದಂತೆಯೇ ವರ್ತಿಸುತ್ತಿದ್ದರೂ ಜನ ದನ ಆಡುಕುರಿಗಳನ್ನು ನೋಡದಂತಾದೆನಲ್ಲಾ ಎಂದು ಗೋಳಾಡುತ್ತಿದ್ದಳು. "ಮನುಸುನಿಗೆ ಯಾವ ಅಂಗನಾರ ಹೋಗ್ಲಿ, ಕಣ್ಣು ಮಾತ್ರ ಅಂಗೇಯಿರಬೇಕು ಕಣಪ್ಪ. ಅವುನ ಮನಿಯಾಳಾಗ, ದೇವರು ನನಿಗಿಂತಾ ಶಿಕ್ಷೆ ಕೊಡದೇ. ನಾನು ಯಾರಿಗನ್ಯಾಯ ಮಾಡಿದ್ದಿನಿ. ದೇವರು ಮೆಚ್ಚಂಗೇ ಬದುಕಿದ್ರು ನನಿಗಿಂಗೆ ಮಾಡಿದನಲ್ಲಾ ಅವುನ ಕಣ್ಣಿಂಗ" ಎಂದು ತನ್ನ ಪ್ರಾಮಾಣಿಕ ಬದುಕು ಮತ್ತು ಈಗ ಹಠಾತ್ತನೆ ಎದುರಾದ ಕತ್ತಲನ್ನು ನೆನೆದು ಮಂಕಾಗುತ್ತಿದ್ದಳು.

ಒಂದು ದಿನ ಹೃದಯಾಘಾತದಿಂದ ಗೌಸಣ್ಣ ತೀರಿಕೊಂಡ ಎಂಬ ಸುದ್ದಿಬಂತು. "ಅಂತ ಮಗನ ಸಾವು ನೋಡಬಾರ್ದು ಎಂತಲೇ ದೇವರು ಕಣ್ಣು ಕಿತ್ತುಗೊಂಡವುನೆ" ಎಂದು ಅತ್ತು ಸುಮ್ಮನಾದಳು. ಆದರೂ ಸುಮಾರು ದಿನ ಒಬ್ಬಳೇ ಮಾತನಾಡಿಕೊಳ್ಳುತ್ತಿದ್ದಳು. ಅದು ರಾಗವಾಗಿ "ವತ್ರಾಯ್ತು ಅಂದ್ರೆ ಸೂರ್ಯನ ಬೆಳಕು ಬಂದಂಗೆ ಅಟ್ಟ ಬಾಗಲಿಗೆ ಬಂದು ನಿಂತಿರೋನು. ಹಣ್ಣೆಡಕಂಡು ಬರೋನು. ಯಲೆ ಅಡಕೆ ತರೋನು. ಆಯ್ತಾರ ಮೀನು ತರೋನು. ಅವ್ವಾ ಅನ್ನೋನು. ಇನ್ನ್ಯಾರಪ್ಪಾ ಅಂಗೆ ಕರಿಯೋರು. ಅಯ್ಯೋ ಕಂದಾ ನನಗಿಂತ ಮದ್ಲೆಹೋದಲ್ಲೋ. ನಿನ್ನ ಕಣ್ಣೆದ್ರಿಗೆ ನಾನೇ ಹೋಗಬಾರದಿತ್ತೇನೋ ಅಷ್ ನಾರಾಯ್ನ" ಎಂದು ಸಂಕಟಪಡುತ್ತಿದ್ದಳು.

ಇದನ್ನು ಕೇಳಿಸಿಕೊಂಡ ಅಪ್ಪ "ಸುಮ್ಮನಿರೆ ಯಲ್ಲಾ ಒಂದಿನ ಹೋಗದೆಯಾ" ಎಂದು ಸಮಾಧಾನಪಡಿಸುತ್ತಿದ್ದ. ಇಂತಹ ಅಪ್ಪನೂ ಒಂದು ದಿನ ಯಾಕೊ ಎದೆನೋವು ಎಂದು ಮಲಗಿದವನು ಹಾಗೇ ಹೊರಟು ಹೋದ. ಆಗ ಚಿಗವ್ವಳ ಗೋಳನ್ನ ನೋಡಲಾಗಲಿಲ್ಲ. ದಾಂಪತ್ಯ ಜೀವನದಲ್ಲೇ ಬರೋಬ್ಬರಿ ಅರವತ್ತು ವರ್ಷ ಕಳೆದಿದ್ದರೂ ಬಾಲ ವಿಧವೆಯಂತೆ ರೋದಿಸುತ್ತಾ ಅಪ್ಪನ ಕೆನ್ನೆ ಸವರುವುದೇನು, ಆತನ ಕೈಹಿಡಿದು ಹಣೆಗೊತ್ತಿಸಿಕೊಳ್ಳುವುದೇನು. ಅವಳನ್ನ ಸುಮ್ಮನಿರಿಸಲು ಸಾಕಾಗಿ ಹೋಯ್ತು. ಆದರೆ ಎದೆಯ ದುಃಖ ಬಸಿದ ಮೇಲೆ ಮರುದಿನ ಆರಾಮವಾಗಿ ಅಪ್ಪನ ಸಾಹಸ ಕೊಂಡಾಡುತ್ತ ಇಲ್ಲೆ ಎಲ್ಲೋ ತೋಟದ ಕಡೆ ಹೋಗ್ಯವುನೆ ಈಗ ಬತ್ತನೆ ಎನ್ನುವಂತೆ ಮಾತನಾಡಿದಳು. ತಿಥಿಕಾರ್ಯ ಮುಗಿದನಂತರ ನಾವೆಲ್ಲಾ ನಮ್ಮ ನಮ್ಮ ದಿಕ್ಕಿಗೆ ಹೊರಡುವ ಮುನ್ನ ಅವ್ವನ ಕಣ್ಣಿಗೆ ಪೊರೆ ಆಪರೇಷನ್ ಮಾಡಿಸಿದರೆ ಹೇಗೆ ಎಂಬ ಸಲಹೆಕೊಟ್ಟು ಬಂದೆವು. ಅದರಂತೆ ಕೆಲದಿನಗಳ ನಂತರ ಅಣ್ಣ ಚಿಗವ್ವನನ್ನು ಕರೆದುಕೊಂಡು ಹೋಗಿ ಕಣ್ಣಿನ ಪೊರೆ ತೆಗೆಸಿಕೊಂಡು ಬಂದ. ಆಶ್ಚರ್ಯ ಅವ್ವನಿಗೆ. ಮನೆಬಾಗಿಲಿಂದ ಹಿಡಿದು ಚುಂಚನಗಿರಿ ಬೆಟ್ಟದವರೆಗೂ ಎಲ್ಲವೂ ಕಾಣತೊಡಗಿತು. ಆದರೆ ತನಗೆ ಕಣ್ಣು ಬಂದ ಸಂಭ್ರಮ ಹಂಚಿಕೊಳ್ಳಲು ಗೌಸಣ್ಣನೂ ಇಲ್ಲ, ಗಂಡನೂ ಇಲ್ಲ. "ಯಾವ ಸುಖ ಉಣ್ಣಕ್ಕೆ ತಿರುಗ ಕಣ್ಣು ಕೊಟ್ಟೊ ದೇವರೆ" ಎಂದು ಮತ್ತೆ ದೇವರನ್ನ ನಿಂದಿಸತೊಡಗಿದಳು.

"ನೋಡವ್ವ ನೀನೇನೊ ಒಬ್ಬ ಮಗ ಒಬ್ಬ ಗಂಡನ ಕಳಕೊಂಡು ಹಿಂಗಾಡ್ತಿ. ಗಾಂಧಾರಿ ಏಸುಮಕ್ಕಳ ಕಳಕಂಡ್ಳು? ಅವು ಬದುಕಿದ್ದಾಗ ಕಣ್ಣಲ್ಲಿ ನೋಡಲಿಲ್ಲವಂತೆ. ಅವುಳಿಗೆ ಕಣ್ಣು ಬಂದಾಗ ನೋಡನ ಅಂದ್ರೆ ಅವ್ಯಾವೂ ಇರಲಿಲ್ಲ, ಅವುಳಿಗೋಲಿಸಿದ್ರೆ ನೀನೇ ಪುಣ್ಯವಂತೆ" ಎಂದು ಸಮಾಧಾನ ಮಾಡಿ ಬಂದೆ.

ಕಣ್ಣು ಬಂದ ನಂತರವೂ ಚಿಗವ್ವ ಚೇತರಿಸಿಕೊಳ್ಳುವ ಸೂಚನೆ ಕಾಣಲಿಲ್ಲ. ದಿನ ಎಣಿಸುತ್ತಿದ್ದಾಳೆ ಎಂಬ ಸುದ್ದಿ ಬಂತು. ಆಕೆಯ ಕೊನೆಯಾಸೆ ಏನು ಎಂದು ಕೇಳಲಾಗಿ ಅವಳ ತವರುಮನೆಯ ಹಿರಿಯ ಮಗನನ್ನು ನೋಡಬೇಕೆಂಬ ಅಪೇಕ್ಷೆ ವ್ಯಕ್ತವಾಯ್ತು. ಆಕೆ ತನ್ನ ತವರುಮನೆಯ ವಂಶೋದ್ಧಾರಕನ ಬಗ್ಗೆ ಇಟ್ಟಿರುವ ಪ್ರೀತಿಯನ್ನು ನೋಡಿ ಎಲ್ಲರೂ ದಂಗುಬಡಿದೆವು. ಏನು ಮಾಡುವುದು? ಆಕೆ ಕಟ್ಟಕಡೆಗೆ ನೋಡಬೇಕೆಂದು ಇಚ್ಚಿಸಿರುವ ವ್ಯಕ್ತಿ ಕಾಲುಮುರಿದುಕೊಂಡು ಶಿವಮೊಗ್ಗದ ಸುಬ್ಬಯ್ಯ ಆಸ್ಪತ್ರೆಯಲ್ಲಿ ಮಲಗಿದ್ದಾನೆ. ಚಿಗವ್ವ ತನ್ನ ಅಪೇಕ್ಷೆ ಹೇಳಿದ ದಿನವೇ ಆತನ ಕಾಲಿಗೆ ಬ್ಯಾಂಡೇಜ್ ಆಗಿದೆ. ಇಂತಹ ಕೊರಗಿನಲ್ಲಿ ಸತ್ತ ಹುಚ್ಚಮ್ಮ ಗಾಳಿ ಗರಾವಾದರೆ ಸುಮ್ಮನೆ ಬಟ್ಯಾಳೆ ಎಂದು ಹೆದರಿದ ಜನ ಆಂಬ್ಯುಲೆನ್ಸ್ ಮಾಡಿಕೊಂಡು ಚಿಗವ್ವನ ಕೊನೆಯಾಸೆಯನ್ನು ತಂದು ತೋರಲು ತೀರ್ಮಾನಿಸಿದರು.

ನಾನು ನನ್ನ ಶಿಫಾರಸ್ಸನ್ನು ಬಳಸಿ ಡಾಕ್ಟರಿಕೆ ವಿಷಯವನ್ನು ಹೇಳಿ ನಾಗರಾಜನ ಕಾಲಿಗೆ ಏನೂ ಆಗದಂತೆ ತೆಗೆದುಕೊಂಡು ಹೋಗಿ ತಂದು ಮಲಗಿಸುತ್ತೇವೆ ಎಂದೆ. ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿದ ವೈದ್ಯರು ಕಳುಹಿಸಿಕೊಟ್ಟರು. ಚಿಗವ್ವ ತನ್ನ ತವರಿನ ವಂಶಜ್ಯೋತಿಯನ್ನು ಕಣ್ತುಂಬ ನೋಡಿ ಕಳುಹಿಸಿಕೊಟ್ಟಳು.

ಇದಾಗಿ ಇದೇ ಮಾರ್ಚ್ ತಿಂಗಳಿಗೆ ಸರಿಯಾಗಿ ಒಂದು ವರ್ಷವಾಯ್ತು. ಚಿಗವ್ವನ ದಿಕ್ಕಿನಿಂದ ಯಾವ ಕೆಟ್ಟ ಸುದ್ದಿಯೂ ಬಂದಿಲ್ಲ.

ಅವಳ ಪ್ರಕಾರ ಯಮಧರ್ಮ ಆಕೆಯನ್ನು ಮರೆತು ಬುಟ್ಟುವುನಂತೆ, ಅವುನಿಗೆ ಯಾರೂ ಜ್ಞಾಪನ ಮಾಡಕ್ಕೂ ಹೋಗಿಲ್ಲವಂತೆ, ಅಂಗಾಗಿ ಇನ್ನೂ ಇದ್ದಳಂತೆ! ■

ಕನ್ನಡ ದಿನಪತ್ರಿಕೆಗಳು ಮತ್ತು ಸವಾಲುಗಳು!



■ ಬಿ.ಎಂ. ಬಷೀರ್

ಪತ್ರಿಕೆಯ ಮುಂದಿರುವ ಸವಾಲುಗಳನ್ನು ಚರ್ಚಿಸುವುದು-ಸಮಾಜದ ಮುಂದಿರುವ ಸವಾಲುಗಳನ್ನು ಚರ್ಚಿಸುವುದು ಬೇರೆ ಬೇರೆಯಲ್ಲ. ಯಾಕೆಂದರೆ ಸದ್ಯದ ದಿನಗಳಲ್ಲಿ ಪತ್ರಿಕೆಗಳೇ ಸಮಾಜಕ್ಕೆ ಸವಾಲಾಗಿ ನಿಂತಿವೆ. ಸಂವೇದನಾಹೀನ ಮಾಧ್ಯಮಿಯ ಜೊತೆಗೆ ಪತ್ರಕರ್ತ ಕೈಜೋಡಿಸಿ ನಿಂತಿದ್ದಾನೆ. ಬೇರೆ ಬೇರೆ ಸ್ತರಗಳಲ್ಲಿ ಮಿದಿಯುತ್ತಿದ್ದ ಭಾಷೆ, ಶಬ್ದಗಳು ಇಂತಹ ಪತ್ರಕರ್ತರ ದೆಸೆಯಿಂದಾಗಿ ತನ್ನ ಸೂಕ್ಷ್ಮವನ್ನು, ಲಜ್ಜೆಯನ್ನು, ಸಂವೇದನೆಯನ್ನು ಕಳೆದುಕೊಳ್ಳುತ್ತಿವೆ. ಭಾಷೆ, ಶಬ್ದಗಳೇ ಕುಲಗೆಟ್ಟ ಮೇಲೆ, ದೈನಂದಿನ ವಾಸ್ತವಗಳನ್ನು ತೆರೆದಿಡುವುದಾದರೂ ಯಾವುದರ ಮೂಲಕ? ಈ ಕಾರಣದಿಂದಲೇ, ಪತ್ರಿಕೆ ಒಂದು ಹೇಳಿದರೆ, ಇನ್ನೊಂದು ಅರ್ಥದಲ್ಲಿ ಅದು ಧ್ವನಿಸುತ್ತದೆ. ಟಿ.ವಿ.ಯಲ್ಲಿ 'ಶಂಕಿತ ಉಗ್ರ'ನ ಕುರಿತಂತೆ ವಿವರ ನೀಡುತ್ತಿರುವ ವರದಿಗಾರ ತಾನು ಬಳಸುವ ಭಾಷೆಯ ಕಾರಣದಿಂದಾಗಿ ನಿಧಾನಕ್ಕೆ ತಾನೇ ಘಟನೆಗಳ ಒಬ್ಬ ಪಾತ್ರಧಾರಿಯಾಗಿ ಬಿಡುತ್ತಿದ್ದಾನೆ. ಪತ್ರಿಕಾಭಾಷೆಯನ್ನು ಮರೆತು ರಾಜಕಾರಣಿಗಳ, ಸಂಘಪರಿವಾರದ ನಾಯಕರ ಭಾಷೆಯಲ್ಲಿ ವರದಿಯನ್ನು ನೀಡುತ್ತಿದ್ದಾನೆ. ಮೂರನೆ ವ್ಯಕ್ತಿಯಾಗಿ ಒಂದು ಘಟನೆಯನ್ನು ಕಂಡು ವರದಿ ಸಂಗ್ರಹಿಸಬೇಕಾದ ಪತ್ರಕರ್ತ, ಸಂಗ್ರಹಿಸುವುದರ ಬದಲು ಸೃಷ್ಟಿಸುವುದರಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿದ್ದಾನೆ. ವರದಿಗಳು ಹೆಚ್ಚು ಆಕರ್ಷಣೀಯವಾಗಿರಬೇಕು, ಮನರಂಜಿಸಬೇಕು, ರೋಚಕವಾಗಿರಬೇಕು. ಇವೆಲ್ಲದರ ನಡುವೆ ಆ ವರದಿ ಸತ್ಯಕ್ಕೆ ಹತ್ತಿರವಾಗಬೇಕಾಗಿಯೇನೂ ಇಲ್ಲ. ಇದರ ಪರಿಣಾಮವಾಗಿಯೇ, ದಿನಪತ್ರಿಕೆಗಳು ಮನುಷ್ಯವಿರೋಧಿಗಳಾಗುತ್ತಿವೆ. ಕಿಡ್ನಿ ಕದಿಯುವ ವೈದ್ಯನಿಗೂ, ವೃತ್ತಿಗೆ ದ್ರೋಹ ಬಗೆದು ಪತ್ರಿಕೆಯ ವಿಶ್ವಾಸಾರ್ಹತೆ(ಕ್ರೆಡಿಬಲಿಟಿ)ಯನ್ನೇ ಕದ್ದು ಕೆಲವು ಹಿತಾಸಕ್ತಿಗಳಿಗೆ ಮಾರುತ್ತಿರುವ ಪತ್ರಕರ್ತನಿಗೂ ಹೆಚ್ಚಿನ ವ್ಯತ್ಯಾಸವಿಲ್ಲ.

ದಿನಪತ್ರಿಕೆಗಳಲ್ಲಿ ವರದಿಗಾರರ ವೃತ್ತಿಪರತೆಯ ಕೊರತೆಯನ್ನು 'ಕನ್ನಡಪ್ರಭ' ದೈನಿಕದ ಒಂದು ವರದಿಯನ್ನು ಮುಂದಿಟ್ಟು ನಾವು ಚರ್ಚಿಸಬಹುದಾಗಿದೆ. ಕಳೆದ ಒಂದು ತಿಂಗಳಿಂದ ಉಗ್ರರ ಕುರಿತಂತೆ ವರದಿ ಸಂಗ್ರಹಿಸುವ ಹೆಸರಿನಲ್ಲಿ ತಾವೇ ವರದಿಯನ್ನು ಸೃಷ್ಟಿಸಿ, ತಾವೇ ಎಫ್‌ಐಆರ್ ದಾಖಲಿಸಿ ತಾವೇ ತೀರ್ಪು ನೀಡುತ್ತಿರುವ ಪತ್ರಿಕೆಗಳ ಕೃತ್ಯಗಳನ್ನು ನೋಡುತ್ತಿದ್ದೇವೆ.

ಕಳೆದ ಫೆಬ್ರವರಿ 22ರಂದು 'ಕನ್ನಡಪ್ರಭ'ದಲ್ಲಿ ಪ್ರಕಟವಾದ ಮುಖಪುಟ ಸುದ್ದಿಯೊಂದನ್ನು ಇದಕ್ಕೆ ಪೂರಕವಾಗಿ ತೆಗೆದುಕೊಳ್ಳೋಣ. ಹುಬ್ಬಳಿಯಲ್ಲಿ ನಡೆದ ಪತ್ರಿಕಾಗೋಷ್ಠಿಯೊಂದರಲ್ಲಿ ಪೊಲೀಸ್ ಮಹಾನಿರ್ದೇಶಕ ಶಂಕರ ಬಿದರಿ, ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ 'ಉಗ್ರ' ವರದಿಗಳನ್ನು ಸಾರಾಸಗಟಾಗಿ ಅಲ್ಲಗಳೆದರು. ರಾಜ್ಯದಲ್ಲಿ ಭಯೋತ್ಪಾದನೆ ಚಟುವಟಿಕೆ ಇಲ್ಲ ಎಂದು ಸ್ಪಷ್ಟಪಡಿಸಿದರು. ಈ ಸಂದರ್ಭದಲ್ಲಿ ಒಬ್ಬ ವರದಿಗಾರನ ಕೆಲಸ ಏನು? ಈವರೆಗೆ 'ಮೂಲಗಳು ತಿಳಿಸಿವೆ' ಎಂದು ಪತ್ರಿಕೆಗಳು ಮಾಡಿರುವ ವರದಿಗಳಿಗೆ ಅವರು ನೀಡಿದ ಅಧಿಕೃತ ಸ್ಪಷ್ಟೀಕರಣವಾಗಿತ್ತು ಅದು. ಈ ರಾಜ್ಯದಲ್ಲಿ ಉಗ್ರಗಾಮಿಗಳ ಕುರಿತಂತೆ ಮಾಹಿತಿ ನೀಡಬಲ್ಲ ಅಧಿಕೃತ ಮೂಲ ಶಂಕರ್ ಬಿದರಿ. ಪತ್ರಿಕೆಗಳು ತಮ್ಮ ವಿಳಾಸವಿಲ್ಲದ 'ಮೂಲ'ಗಳನ್ನು ಆಧರಿಸಿ ನೀಡಿದ ವರದಿಗಳ ಕುರಿತಂತೆ ಒಬ್ಬ ಪೊಲೀಸ್ ವರಿಷ್ಠ ಅಧಿಕೃತ ಹೇಳಿಕೆ ನೀಡಿದರೆ ಅದನ್ನು ಪ್ರಕಟಿಸುವ ಎದೆಗಾರಿಕೆಯಾಗಲಿ, ವೃತ್ತಿಪರತೆಯಾಗಲಿ ಆ ಪತ್ರಿಕೆಗಿರಲಿಲ್ಲ. ಪರಿಣಾಮವಾಗಿ ಫೆಬ್ರವರಿ 22ರಂದು ಬಿದರಿಯ ಸ್ಪಷ್ಟೀಕರಣ 'ಕನ್ನಡಪ್ರಭ'ದಲ್ಲಿ ಪ್ರಕಟವಾದ ರೀತಿ ಹೇಗಿತ್ತು ಗೊತ್ತೆ? "ರಾಜ್ಯದಲ್ಲಿ ಭಯೋತ್ಪಾದನೆ ಇಲ್ಲ" ಇದು ತಲೆಬರಹ. ಅದರ ಕೆಳಗೆ ಎರಡು ಕಿಕ್ಕರ್‌ಗಳು "ನಂಬಿದರೆ ನಂಬಿ ಬಿಟ್ಟರೆ ಬಿಡಿ ಹೀಗೆ ಹೇಳಿದ್ದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಶಂಕರ್ ಬಿದರಿ". "ಹಾಗಾದರೆ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ, ದಾವಣಗೆರೆ ಪೊಲೀಸರು ಬಂಧಿಸಿದ್ದು ಸುಳ್ಳಾ?"

ಒಂದು ಸುದ್ದಿಗೂ ಸಂಪಾದಕೀಯಕ್ಕೂ ಇರುವ ವ್ಯತ್ಯಾಸ ಗೊತ್ತಿಲ್ಲದ ಅವಿವೇಕಿ ವರದಿಗಾರ ಮಾತ್ರ ಈ ರೀತಿ ವರದಿಯನ್ನು ಬರೆಯಬಲ್ಲ. ಆ ಬಳಿಕ ಸುದ್ದಿಯ ರೂಪದಲ್ಲಿ ಬಿದರಿಯ ಹೇಳಿಕೆಗಳ ವಿಶ್ಲೇಷಣೆ ನಡೆಯುತ್ತದೆಯೇ ಹೊರತು, ಎಲ್ಲೂ 'ವರದಿ' ಇಲ್ಲ, ಪತ್ರಿಕಗೋಷ್ಠಿ ಬಿದರಿಯದು. ಆದರೆ ಹೇಳಿಕೆಗಳೆಲ್ಲ ವರದಿಗಾರನದ್ದು. ಸರಿ, ರಾಜ್ಯದಲ್ಲಿ ಉಗ್ರರು ಇದ್ದಾರೆ, ಭಯಾನಕ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎನ್ನುವುದನ್ನು ಬಿದರಿ ಯಾಕೆ ಒಪ್ಪಿಕೊಳ್ಳಬೇಕು ಎನ್ನುವುದಕ್ಕೂ ಈ ವರದಿಗಾರನಲ್ಲಿ ಕಾರಣಗಳಿಲ್ಲ. ಈತನ ಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನು ಆಧರಿಸಿ ಒಬ್ಬ ಪೊಲೀಸ್ ಮಹಾ ನಿರ್ದೇಶಕ 'ಉಗ್ರರನ್ನು ಬಂಧಿಸಿರುವುದು ನಿಜ, ಶಸ್ತ್ರಾಸ್ತ್ರ ದೊರಕಿರುವುದು ನಿಜ' ಎಂದು ಒಪ್ಪಿಕೊಳ್ಳಲಾಗುತ್ತದೆಯೆ?



ಫೆಬ್ರವರಿ 28 ರಂದು ಬೆಂಗಳೂರಿನಲ್ಲಿ ಪೊಲೀಸ್ ಮಹಾನಿರ್ದೇಶಕ ಕೆ.ಆರ್. ಶ್ರೀನಿವಾಸನ್ ಈ ಕುರಿತಂತೆ ಪತ್ರಕರ್ತರ ಮುಖಕ್ಕೆ ರಾಚುವಂತೆ ಹೇಳಿದರು "ಕೆಲ ಮಾಧ್ಯಮಗಳು ಪೊಲೀಸ್ ಇಲಾಖೆಯ ಉನ್ನತ ಮೂಲಗಳು ತಿಳಿಸಿವೆ ಎಂದು ಮನಸೋ ಇಚ್ಛೆ ಪ್ರಕಟಿಸುವ ವರದಿಗಳು ಸತ್ಯಕ್ಕೆ ದೂರವಾದವು. ನೀವು ವರದಿ ಮಾಡಿದಂತೆ ನಾವು ತನಿಖೆ ನಡೆಸಲು ಸಾಧ್ಯವಿಲ್ಲ". ಸಾಧಾರಣವಾಗಿ ಈ ಹಿಂದೆ ಪತ್ರಿಕಾಗೋಷ್ಠಿಗಳಲ್ಲಿ ಪತ್ರಕರ್ತರು ಪೊಲೀಸರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿ ಮೊದಲ ಬಾರಿಯೆಂಬಂತೆ ಪೊಲೀಸರು ಪತ್ರಕರ್ತರನ್ನು ಯದ್ವಾತದ್ವಾ ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ವೃತ್ತಿಪರತೆಯ ಕೊರತೆ, ವೃತ್ತಿಗೆಸಗಿದ ದ್ರೋಹದ ಫಲವಾಗಿ ಪತ್ರಿಕೋದ್ಯಮ ಈ ಅವಮಾನವನ್ನು ಎದುರಿಸಬೇಕಾಗಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯದ ಕುರಿತಂತೆ ಮಾತನಾಡುವ ಹಕ್ಕನ್ನು ಪತ್ರಕರ್ತರು ಅವರಾಗಿಯೇ ಕಳೆದುಕೊಳ್ಳುತ್ತಿದ್ದಾರೆ. ಯಾಕೆಂದರೆ ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ ಕೆಲಸವನ್ನು ಪತ್ರಕರ್ತರೇ ಅತ್ಯುತ್ಸಾಹದಿಂದ ನಿರ್ವಹಿಸುತ್ತಿದ್ದಾರೆ. ಪತ್ರಕರ್ತರೆಂದು ಕರೆಸಿಕೊಳ್ಳುವ ಜನರಿಂದಲೇ ಕಳೆದ ಒಂದು ತಿಂಗಳಿನಿಂದ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಡೆಯುತ್ತಿರುವ ದಾಳಿ ಸಣ್ಣದೇನಲ್ಲ. ಪೊಲೀಸರ ಅಭಿವ್ಯಕ್ತಿ ಸ್ವಾತಂತ್ರ್ಯ, ಸಂತ್ರಸ್ತರ ಅಭಿವ್ಯಕ್ತಿ ಸ್ವಾತಂತ್ರ್ಯ, ಓದುಗರ ಅಭಿವ್ಯಕ್ತಿ ಸ್ವಾತಂತ್ರ್ಯ ಎಲ್ಲದರ ಮೇಲೂ ಸಾರಾಸಗಟಾಗಿ ದಾಳಿ ನಡೆಯುತ್ತಿದೆ. ಇದು ಪತ್ರಿಕೆಗಳ ಪಾಲಿಗೆ ಅತ್ಯಂತ ಅಪಾಯಕಾರಿ ಬೆಳವಣಿಗೆ. ಯಾಕೆಂದರೆ, ಮುಂದಿನ ದಿನಗಳಲ್ಲಿ ಪತ್ರಕರ್ತರ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹಲ್ಲೆಯಾದಾಗ ಅದಕ್ಕೆ ಅನುಕಂಪ ವ್ಯಕ್ತಪಡಿಸುವವರೇ ಇಲ್ಲದಂತಹ ಸನ್ನಿವೇಶ ನಿರ್ಮಾಣವಾಗಲಿದೆ.

* * *

ಒಂದು ಕಡೆ ವ್ಯಾಪಾರೀಕರಣ, ಇನ್ನೊಂದೆಡೆ ಕೋಮುವಾದೀಕರಣಗೊಳ್ಳುತ್ತಿರುವ ಪತ್ರಿಕೆಗಳು ಪತ್ರಕರ್ತರ ಆಯ್ಕೆಯ ಸಂದರ್ಭದಲ್ಲೂ ತಮ್ಮ ಮಾನದಂಡಗಳನ್ನು ಬದಲಿಸುತ್ತಿವೆ.

ಒಂದು ಅಂಗಡಿಯ ಸೇಲ್ಸ್ ಮ್ಯಾನ್‌ನ ಆಯ್ಕೆ ಮತ್ತು ವರದಿಗಾರರ ಆಯ್ಕೆಯ ನಡುವಿನ ಅಂತರ ಕಡಿಮೆಯಾಗುತ್ತಿದೆ. 'ಟಿ.ವಿ.9' ಎಂಬ ಸುದ್ದಿ ವಾಹಿನಿಯಲ್ಲಿ ವರದಿಗಾರರನ್ನು ಆಹ್ವಾನಿಸುತ್ತಿರುವ ರೀತಿ ಮತ್ತು ಅವರು ನೀಡುವ ಆದ್ಯತೆಗಳನ್ನು ಗಮನಿಸಿ:

'ನೀವು ವರದಿಗಾರರಾಗಲು ಆಸಕ್ತಿಯನ್ನು ಹೊಂದಿದ್ದೀರಾದರೆ ನಿಮಗಿರುವ ಅರ್ಹತೆಗಳು ಇವು. ಮುಖ್ಯವಾಗಿ ನೀವು ಮಹಿಳೆಯಾಗಿರಬೇಕು. ಅದಕ್ಕಿಂತಲೂ ಮುಖ್ಯವಾಗಿ ನಿಮ್ಮ ವಯಸ್ಸು 25ರ ಒಳಗಿರಬೇಕು. ಅದಕ್ಕಿಂತಲೂ ಮುಖ್ಯವಾಗಿ ನೋಡಲು ಆಕರ್ಷಕವಾಗಿರಬೇಕು'. ಯಾವುದೇ ಅಂಗಡಿಯ ಮಾಲಿಕನೊಬ್ಬ ತನ್ನ ಸೇಲ್ಸ್‌ಮ್ಯಾನನ್ನು ಆಯ್ಕೆ ಮಾಡುವುದು ಇದೇ ಅರ್ಹತೆಗಳ ಮೇಲೆ.

ಕನ್ನಡಪ್ರಭ ದೈನಿಕ ವರದಿಗಾರರ ಆಯ್ಕೆಯ ಸಂದರ್ಭದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದೆ. ಅಭ್ಯರ್ಥಿಯ ಡೇಟ್ ಆಫ್ ಬರ್ತ್‌ಸರ್ಟಿಫಿಕೇಟ್‌ನ್ನು ಆಂಧ್ರದ ಖ್ಯಾತ ಜ್ಯೋತಿಷಿಯೊಬ್ಬರಿಗೆ ತೋರಿಸಿ, ಅವರಿಂದ ಓಕೆ ಆದ ಬಳಿಕವೇ ಅದು ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತದೆ.

ದಿನಪತ್ರಿಕೆಗಳಿಗೆ ಅತಿ ದೊಡ್ಡ ಸವಾಲಾಗಿದೆ ಪತ್ರಿಕೋದ್ಯಮದ ಸ್ನಾತಕೋತ್ತರ ಪದವಿ (ಎಂಸಿಜೆ). ಪತ್ರಿಕೆಗಳಲ್ಲಿ ಕಾಲಿಡುವುದಕ್ಕೆ, ವರದಿಗಾರನಾಗುವುದಕ್ಕೆ ಎಂಸಿಜೆ ಅಂಕಗಳೇ ನಿಜವಾದ ಅರ್ಹತೆ ಎಂದು ಬಲವಾಗಿ ನಂಬಿರುವ ಇವರಲ್ಲಿ ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿರುವುದಕ್ಕೆ ಕಾರಣಗಳಿರುವುದಿಲ್ಲ. ಎಂಸಿಜೆ ಮಾಡಿದ ಹುಡುಗನಲ್ಲಿ ಸುಮ್ಮನೆ ಕನ್ನಡದ ಕೆಲವು ಪತ್ರಕರ್ತರ ಕುರಿತಂತೆ, ಅವರ ಬರಹಗಳ ಕುರಿತಂತೆ ಕೇಳಿ. ಒಬ್ಬ ಹುಡುಗನಲ್ಲಿ ಹೀಗೆ ಮಾತನಾಡುತ್ತಿದ್ದೆ. "ಇತ್ತೀಚೆಗೆ ನೀನು ಓದಿದ ಪುಸ್ತಕ ಯಾವುದು?" ಆತನಿಗೆ ನೆನಪಿಲ್ಲ. "ಕನಿಷ್ಠ ಕಳೆದ ಒಂದು ವರ್ಷದಲ್ಲಿ ಓದಿದ ಪುಸ್ತಕವಾದರೂ ನೆನಪಿದೆಯೆ?" ನನ್ನ ಪ್ರಶ್ನೆ ಆತನಿಗೆ ಬಾಲಿಶ ಅನ್ನಿಸಿರಬೇಕು. ನನ್ನನ್ನೇ ಪ್ರಶ್ನಾರ್ಥಕವಾಗಿ ನೋಡತೊಡಗಿದ. ಪಿ.ಲಂಕೇಶ್ ಗೊತ್ತಾ? ಹೂಂ ಎಂದ. ಟೀಕೆ ಟಿಪ್ಪಣಿ ಓದಿದ್ದೀಯ ಎಂದರೆ ಇಲ್ಲ ಎಂದ- ತೇಜಸ್ವಿಯ ಚಿದಂಬರ ರಹಸ್ಯ ಓದಿಲ್ಲ, ಪಾ.ವೆಂ. ಆಚಾರ್ಯರ ಪದಾರ್ಥ ಚಿಂತಾಮಣಿ ಕೃತಿಯನ್ನು ಬಿಡಿಸಿಲ್ಲ . ಆದರೆ ಆ ಕುರಿತಂತೆ ಅವನಿಗೆ ಯಾವ ಖೇದವೂ ಇಲ್ಲ. ಯಾಕೆಂದರೆ ಅದಕ್ಕೂ ಪತ್ರಿಕೋದ್ಯಮಕ್ಕೂ ಯಾವ ಸಂಬಂಧವೂ ಇಲ್ಲ. ಅಗತ್ಯ ಬಿದ್ದರೆ 'ಗೂಗಲ್'ನಲ್ಲಿ 'ಲಂಕೇಶ್' ಒಂದು ಹೊಡೆದರೆ ಆಯಿತಲ್ಲ!

ಮುಖ್ಯವಾಗಿ ಎಂಸಿಜೆಯಿಂದ ಹೊರಬಂದ ಹೆಚ್ಚಿನ ಅಭ್ಯರ್ಥಿಗಳಿಗೆ ಪತ್ರಿಕೋದ್ಯಮ ಅದರಲ್ಲೂ ಕನ್ನಡ ಪತ್ರಿಕೋದ್ಯಮ ಒಂದು ಬಸ್ ಕೂಡ ಅಲ್ಲ, ಬರೇ 'ಬಸ್‌ಸ್ಟಾಪ್' ಅಷ್ಟೇ. ಬಸ್ ಬರುವವರೆಗೆ ಕಾಯಬೇಕಿರುವ ಒಂದು ಸ್ಥಳ. ಅವರ ಗುರಿ ಯಾವುದೋ ಕಂಪನಿಯ ಪಿಆರ್‌ಓ ಅಥವಾ ಜಾಹೀರಾತು ಕಂಪೆನಿಗಳಲ್ಲಿ ಕೆಲಸ ಮಾಡುವುದು. ಇಂತಹ ಅಭ್ಯರ್ಥಿಗಳು ಬಸ್ ಮಿಸ್ ಮಾಡಿಕೊಂಡು ಶಾಶ್ವತವಾಗಿ ಆ ಬಸ್ ಸ್ಟಾಪ್‌ನಲ್ಲೇ ಉಳಿದುಬಿಟ್ಟರೆ ಆಗುವ ಪರಿಣಾಮಗಳ ಫಲಾನುಭವಿಗಳಾಗಿದ್ದಾರೆ ಓದುಗರು.

ಇನ್ನೊಂದು ಉದಾಹರಣೆ. ನನ್ನೊಬ್ಬ ಗೆಳೆಯ ಹೇಳಿದ್ದು, ಪಿಹೆಚ್‌ಡಿಗೆ ಅದಾವುದೋ ಸಂದರ್ಭದಲ್ಲಿ ಕನ್ನಡದ ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿ ಬಂದಿದ್ದರಂತೆ. ಅದೆಲ್ಲಿಂದ ಪ್ರತ್ಯಕ್ಷಳಾದಳೋ, ಟಿ.ವಿ. ವರದಿಗಾರ್ತಿ ಕ್ಯಾಮರಾದ ಜೊತೆ ಧುತ್ತೆಂದು ಕಾಸರವಳ್ಳಿಯ ಮುಂದೆ ನಿಂತಳು. ತನ್ನ ಕೈಯಲ್ಲಿದ್ದ ಮೈಕ್ ಹಿಡಿದು 'ಮಾತನಾಡಿ ಸಾರ್' ಎಂದಳು. ಕಾಸರವಳ್ಳಿಗೆ ಗಾಬರಿ. ಯಾವ ಪ್ರಶ್ನೆಯನ್ನೂ ಕೇಳದೆ 'ಮಾತನಾಡಿ' ಎಂದರೆ ಏನನ್ನು ಮಾತನಾಡುವುದು? "ಏನನ್ನು ಮಾತನಾಡಲಿ?" ಕಾಸರವಳ್ಳಿ ಕೇಳಿದರಂತೆ.

"ಯಾವುದರ ಬಗ್ಗೆಯಾದರೂ ಮಾತನಾಡಿ ಸಾರ್..." ಎಂದಳಾಕೆ. ಕಾಸರವಳ್ಳಿ ಗೊಂದಲಕ್ಕೊಳಗಾದರು.

"ಸಾರ್ ನಿಮ್ಮ ದ್ವೀಪಕ್ಕೆ ಅವಾರ್ಡ್ ಸಿಕ್ಕಿತ್ತಲ್ಲ, ಆ ಚಿತ್ರದ ಬಗ್ಗೆ ಮಾತನಾಡಿ" ಎಂದಳು.

"ಅದಕ್ಕೆ ಅವಾರ್ಡ್ ಸಿಕ್ಕಿ ವರ್ಷ ಆಯಿತಲ್ಲಮ್ಮ..." ಎಂದವರು, ಅನಿವಾರ್ಯ ಕಾರಣದಿಂದ ತಾವೇ ತಮ್ಮನ್ನು ಪ್ರಶ್ನಿಸಿ, ಉತ್ತರ ಹೇಳಿದರಂತೆ.

ಈ ನಾಡಿನ ಬರಹಗಾರರ ಕುರಿತಂತೆ, ಚಿಂತಕರ ಕುರಿತಂತೆ, ಅತ್ಯುತ್ತಮ ಕೃತಿಗಳ ಕುರಿತಂತೆ, ನಾಯಕರ ಕುರಿತಂತೆ, ಸಿನಿಮಾಗಳ ಕುರಿತಂತೆ ಸಾಮಾನ್ಯ ಜ್ಞಾನವೂ ಇಲ್ಲದ ಇಂತಹ ಕೆಲವು ಪತ್ರಕರ್ತರ ಕೈಯಲ್ಲಿ ಈ ನಾಡು, ನುಡಿ, ಜನಸಾಮಾನ್ಯರ ಬದುಕು ಸಿಕ್ಕಿದರೆ ಅದು 'ದುರಂತ'ವನ್ನಲ್ಲದೆ, ಇನ್ನಾವ ಫಲಿತಾಂಶವನ್ನು ನೀಡಲು ಸಾಧ್ಯ?

ಬಳಸುವ ಪ್ರತಿ ಶಬ್ದಗಳಿಗೂ ಸಂವೇದನಗಳಿವೆ ಎನ್ನುವುದನ್ನು ಅರ್ಥ ಮಾಡಿಕೊಳ್ಳದ ಈ ಪತ್ರಕರ್ತರ ಕೈಯಲ್ಲಿ 'ಉಗ್ರ' ಎನ್ನುವ ಶಬ್ದ ತನ್ನ ಲಜ್ಜೆಯನ್ನು ಕಳೆದುಕೊಂಡ ರೀತಿಯನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ಕಂಡವರಿಗೆಲ್ಲ ಉಗ್ರ, ಭಯೋತ್ಪಾದಕ ಎಂದು ಬಳಸುತ್ತಾ ಹೋದ ಈ ವ-ರದ್ಧಿಗಾರರ ದೆಸೆಯಿಂದ ಇಂದು ಆ ಶಬ್ದ ಯಾರನ್ನೂ ಬೆಚ್ಚಿ ಬೀಳಿಸುತ್ತಿಲ್ಲ, ಅದು ತನ್ನ ಸಂಕೋಚ ಮತ್ತು ಗಾಂಭೀರ್ಯವನ್ನು ಕಳೆದುಕೊಂಡಿದೆ. ಒಬ್ಬ ಬೈಕ್‌ಕಳ್ಳನಿಗೂ ಉಗ್ರನಿಗೂ ವ್ಯತ್ಯಾಸವೇ ಇಲ್ಲದಂತೆ ಮಾಡಿದ ಹೆಗ್ಗಳಿಕೆ ಈ ಪತ್ರಕರ್ತರಿಗೆ ಸಲ್ಲಬೇಕು. ಈ ಪತ್ರಕರ್ತರ 'ನಕಲಿ ಉಗ್ರ'ರ ಮರೆಯಲ್ಲಿ ನಿಜವಾದ ಉಗ್ರರು ಆರಾಮವಾಗಿ ಬದುಕುವ ದಿನಗಳು ದೂರವಿಲ್ಲ.

* * *


ಒಂದು ಪತ್ರಿಕೆಯ ಬೆಲೆ 2.50.ರೂ. ಆದರೆ ಅದರ ಅಸಲು ಸುಮಾರು 5.00ರೂ. ಪ್ರಸಾರ ಸಂಖ್ಯೆ ಹೆಚ್ಚುತ್ತಾ ಹೋದ ಹಾಗೆಯೇ ಪತ್ರಿಕೆಯ ನಷ್ಟವೂ ಹೆಚ್ಚುತ್ತಾ ಹೋಗುತ್ತದೆ. ಪತ್ರಿಕೆಗಳಿಗೆ ಪ್ರಸಾರ ಸಂಖ್ಯೆ ಬೇಕಾಗಿರುವುದು ಜಾಹೀರಾತುದಾರರಿಗೆ ತೋರಿಸುವುದಕ್ಕೆ ಮಾತ್ರ. ದರ ಸಮರ ಹೆಚ್ಚಿದ ಪರಿಣಾಮವಾಗಿ ಪತ್ರಿಕೆಗಳು ಓದುಗರಿಗೇನೋ ಸುಲಭವಾಗಿ ದೊರಕತೊಡಗಿದವು. ಆದರೆ ಓದುಗರ ಸಾರ್ವಭೌಮತೆಗೆ ಭಾರೀ ಧಕ್ಕೆಯುಂಟಾಯಿತು. ತಾವು ಏನನ್ನು ಕಳೆದುಕೊಂಡಿದ್ದೇವೆ ಎನ್ನುವುದು ಅವರಿಗೆ ಹೊಳೆಯುವ ಮೊದಲೇ ಅವರು ಎಲ್ಲವನ್ನೂ ಕಳೆದುಕೊಂಡಿದ್ದರು. ಅವರ ಕೈಯಲ್ಲಿ ಒಂದು ರೂಪಾಯಿಗೆ ಆಕರ್ಷಕ ಪುರವಣಿಗಳುಳ್ಳ 20 ಪುಟಗಳ ಪತ್ರಿಕೆಯಿತ್ತು. ಆದರೆ ಅದಕ್ಕೆ ಪ್ರತಿಯಾಗಿ ಆತ ತೆತ್ತದ್ದು ತನ್ನ ಸಾರ್ವಭೌಮತೆಯನ್ನು. ಇಂದು ಆ ಸಾರ್ವಭೌಮತೆಯನ್ನು ಜಾಹೀರಾತುದಾರರು, ಬೃಹತ್ ಕಂಪನಿಗಳು ತಮ್ಮದಾಗಿಸಿಕೊಂಡಿವೆ. ಒಂದು ರೀತಿಯಲ್ಲಿ ಓದುಗನಿಗೆ ಚಿನ್ನದ ಚೂರಿಯಿಂದ ಇರಿಯಲಾಗಿದೆ. ಹಾಗೆ ಇರಿತಕ್ಕೊಳಗಾದ ಓದುಗ ಚೂರಿ ಚಿನ್ನದ್ದು ಎನ್ನುವ ಸೌಭಾಗ್ಯಕ್ಕಾಗಿ ಸಂಭ್ರಮಿಸಬೇಕು.

ಒಂದು ದಿನಪತ್ರಿಕೆಯ ನಿಜವಾದ ಬಂಡವಾಳ ಅದರ 'ಕ್ರೆಡಿಬಲಿಟಿ'. ಸದ್ಯಕ್ಕೆ ಪತ್ರಿಕೆಯ ಉದ್ಯಮಿಗಳು ತಮ್ಮ ಲಾಭಕ್ಕಾಗಿ ಬಿಕರಿಗಿಟ್ಟಿರುವುದು ದಿನಪತ್ರಿಕೆಗಳನ್ನಲ್ಲ. ತಮ್ಮ ಪತ್ರಿಕೆಗಳ 'ಕ್ರೆಡಿಬಲಿಟಿ'ಯನ್ನು. ಪ್ರಜಾವಾಣಿಯಂತಹ ಹಿರಿಯ ಪತ್ರಿಕೆಯೂ ಈ ಕ್ರೆಡಿಬಲಿಟಿಯ ಹರಾಜಿನಲ್ಲಿ ಭಾಗವಹಿಸಿರುವುದು ಖೇದಕರ ಸಂಗತಿ. ಈ ಹರಾಜಿನಲ್ಲಿ ರಾಜಕಾರಣಿಗಳು, ಉದ್ಯಮಿಗಳು, ಸಂಘಪರಿವಾರ ಎಲ್ಲರೂ ಭಾಗವಹಿಸಿ, ಬೆಲೆ ಕೂಗುತ್ತಿದ್ದಾರೆ. 'ವಿಶ್ವಾಸಾರ್ಹತೆ' ಎನ್ನುವುದು ಸಂಪೂರ್ಣವಾಗಿ ಹರಾಜಾದ ದಿನ ಅಥವಾ ಪತ್ರಿಕೆಗಳು ಸಂಪೂರ್ಣ ನಂಬಿಕೆಗೆ ಅನರ್ಹವಾದ ದಿನ ಈ ಸಮಾಜದ ಪಾಲಿಗೆ, ಈ ನಾಡಿನ ಪಾಲಿಗೆ ಕಪ್ಪು ದಿನ. ಆಗ ಈ ದೇಶದಲ್ಲಿ ನೂರಾರು ಪತ್ರಿಕೆಗಳು ಕಡಿಮೆ ದರದಲ್ಲಿ ಹೆಚ್ಚುಪುಟಗಳಲ್ಲಿ, ಆಕರ್ಷಕವಾಗಿ ಅಂಗಡಿ ಅಂಗಡಿಗಳಲ್ಲಿ ಸೂಳೆಯರಂತೆ ತಮಗೆ ಗಿರಾಕಿಗಳನ್ನು ಕಾಯುತ್ತ ಬಳಲುತ್ತಿರುತ್ತವೆ. ಆದರೆ ತಮ್ಮದೆನ್ನುವ ಒಂದೇ ಒಂದು ಪತ್ರಿಕೆಯೂ ಜನಸಾಮಾನ್ಯರ ಬಳಿಯಿರುವುದಿಲ್ಲ. ■

ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೇ....

ಅನ್ನಿಸಿದ್ದಂತೆ ಅವಳಿಗೆ ತನ್ನೆಲ್ಲ ಸೌಂದರ್ಯ ತನ್ನಿಂದ ಕಳಚಿ ಬಿದ್ದು ಒಂದು ಗಡ್ಡೆಯೋ ಅಥವಾ ಗಂಥಿಯೋ ಎನ್ನುವ ಹಾಗೆ ತನ್ನ ದೇಹವನ್ನು ನೋಯಿಸುತ್ತಿರುವಂತೆ ಎನಿಸಿತು. ಆಕೆಯ ದೇಹಸೌಂದರ್ಯ ವಿಶೇಷ ಸೌಕರ್ಯದ ಹಾಗೆ ಭಾಸವಾಗುತ್ತಿತ್ತು ಎಳೇ ಪ್ರಾಯದಲ್ಲಿ, ಆಗ ಆಕೆ ಹೊಂದಿದ್ದ ದೈಹಿಕ ಆಕರ್ಷಣೆಯ ಬಲ ಅವಳ ನೆನಪಿನಲ್ಲಿ ಇನ್ನೂ ಹಸಿರಾಗಿತ್ತು. ಈಗವಳು ಅದನ್ನು ಕೈಬಿಟ್ಟಿದ್ದಾಳೆ- ಎಲ್ಲೋ ಯಾರಿಗೆ ಗೊತ್ತು? ತನ್ನ ಸ್ಥಿತಿಯ ಬಗ್ಗೆ ಗೊಣಗಲೂ ಬೇಸರವೆನಿಸಿ, ಅದನ್ನು ಅನಿವಾರ್ಯವೆಂದು ಒಪ್ಪಿಕೊಂಡಂಥ ಸ್ಥಿತಿ ಅವಳದು. ಇಂಥ ಸ್ಥಿತಿಯಿಂದ ಬೇಸರ ಮಡುಗಟ್ಟಿದ್ದರೂ, ನಶಿಸಿಹೋಗುತ್ತಿರುವ ಜೀವಿಯೊಂದರ ಕೊನೆಯ ಸನ್ನೆಯೆಂಬಂತೆ ಅದನ್ನು ಭರಿಸಿದ್ದಾಳೆ. ಇನ್ನು ಮುಂದೆ, ಆ ಭಾರವನ್ನು ಹೊರಲು ತನ್ನಿಂದ ಸಾಧ್ಯವೇ ಇಲ್ಲ ಎನಿಸಿತು. ತನ್ನ ವ್ಯಕ್ತಿತ್ವದ ಆ ನಿಷ್ಪ್ರಯೋಜಕ ವೈಶಿಷ್ಟ್ಯವನ್ನು ಅವಳು ಕೊಡವಿಕೊಳ್ಳಲೇಬೇಕಿತ್ತು, ಆದರೆ ಕೊಡವಿಕೊಳ್ಳುವುದಾದರೂ ಎಲ್ಲಿ? ಮೂಲೆಯೊಂದರ ತಿರುವಿನಲ್ಲಿ, ಎಲ್ಲೋ ನಗರದ ಹೊರವಲಯದಲ್ಲಿ ಅಥವಾ ಯಾವುದಾದರೂ ಎರಡನೇ ದರ್ಜೆಯ ರೆಸ್ಟೊರಾನ್‌ನ ಕೋಟ್‌ರ್ಯಾಕಿನ ಮೇಲೆ, ಮಾಸಿದ ಕೆಲಸಕ್ಕೆ ಬಾರದ ಕೋಟಿನಂತೆ ಅದನ್ನು ಬಿಟ್ಟು ಹೋಗಬೇಕಿತ್ತು, ಎಲ್ಲರ ಆಕರ್ಷಣೆಯ ಕೇಂದ್ರವಾಗಿ, ಗಂಡಸರ ಕಣ್‌ಕೀಳದ ದೀರ್ಘನೋಟಗಳ ಮುತ್ತಿಗೆಗೆ ಬಲಿಯಾಗಿ ಬಾಳುವುದು ಅವಳಿಗೆ ಸಾಕಾಗಿ ಹೋಗಿತ್ತು. ರಾತ್ರಿ ವೇಳೆಯಲ್ಲಿ, ನಿದ್ದೆ ಹತ್ತದ ರಾತ್ರಿಗಳಲ್ಲಿ ಸೂಜಿಮೊನೆಗಳು ಕಣ್ಣಲ್ಲಿ ನೆಟ್ಟಾಗ, ತಾನೊಬ್ಬ ಸಾಧಾರಣ ಹೆಂಗಸಾಗಿ ಯಾವ ವಿಶೇಷ ಆಕರ್ಷಣೆಯ ಸವಲತ್ತೂ ಇಲ್ಲದೆ ಉಳಿಯುವ ಬಯಕೆ ಅವಳಲ್ಲಿ ಮೂಡುತ್ತಿತ್ತು. ತನ್ನ ಕೋಣೆಯ ನಾಲ್ಕು ಗೋಡೆಗಳ ಬಂಧನದಲ್ಲಿ ಎಲ್ಲವೂ ಅವಳಿಗೆ ಪ್ರತಿಕೂಲವಾಗೇ ಇತ್ತು. ಹತಾಶೆ ಹಿಡಿದ ಅವಳಿಗೆ, ನಿದ್ರಾಹೀನತೆ ಒಂದು ಜ್ವರದ ಹಾಗೆ ತನ್ನ ಚರ್ಮದ ಅಡಿಯಲ್ಲೆಲ್ಲ ಹರಡುತ್ತ, ತನ್ನ ತಲೆಗೆ ಏರಿ, ಮೇಲುಮೇಲಕ್ಕೆ ತನ್ನ ಮುಡಿಯ ಬೇರುಗಳತ್ತ ಸಾಗುವುದು ತೀಕ್ಷ್ಣವಾಗಿ ಅನುಭವಕ್ಕೆ ಬರುತ್ತಿತ್ತು, ತನ್ನ ರಕ್ತನಾಳಗಳಲ್ಲಿ ಬೆಂಕಿಯ ಕಿಡಿಗಳಂಥ ಸಣ್ಣ ಸಣ್ಣ ಕ್ರಿಮಿಗಳು ತುಂಬಿಕೊಂಡು, ಪ್ರತಿದಿನ ಮುಂಜಾವು ಹತ್ತಿರ ಸಾರುತ್ತಿದ್ದಂತೆ ಎದ್ದು, ತಮ್ಮ ಚುರುಕಾದ ಕಾಲುಗಳ ಮೇಲೆ ಆತ್ತಿತ್ತ ಓಡಾಡುತ್ತಿದ್ದವು. ತನ್ನ ಆಂಗಿಕ ಸೌಂದರ್ಯ ಮನೆಮಾಡಿದ್ದ ಆ ನಿಗೂಢ ಸ್ಥಾನವನ್ನು ಆಕ್ರಮಿಸಿ, ಮೃದುವಾದ ಆದರೆ ಜಡಗೊಂಡ ತನ್ನ ಆ ಸ್ಥಾನವನ್ನು ಫಲವತ್ತುಗೊಳಿಸಿ, ಚರ್ಮದ ಒಳಪದರಗಳ ಅಡಿಯಲ್ಲಿ ಅವು ತಮ್ಮ ಸಾಹಸದಲ್ಲಿ ತೊಡಗುತ್ತಿದ್ದವು. ಆ ಜೀವಿಗಳನ್ನು ಓಡಿಸುವ ವ್ಯರ್ಥ ಪ್ರಯತ್ನ ಆಗ ಶುರುವಾಗುತ್ತಿತ್ತು ಅವಳಲ್ಲಿ, ಇಲ್ಲ, ಅವಳಿಗದು ಸಾಧ್ಯವೇ ಇಲ್ಲ, ಆ ಕ್ರಿಮಿಗಳು ಅವಳ ಶರೀರದ ಒಂದು ಭಾಗವೇ ಆಗಿಹೋಗಿದ್ದವು. ಅವು ಅಲ್ಲಿಯೇ ಜೀವಂತವಾಗಿದ್ದು, ಅವಳ ದೇಹ ಅಸ್ತಿತ್ವಕ್ಕೆ ಬರುವುದಕ್ಕಿಂತಲೂ ಎಷ್ಟೋ ಮುಂಚಿನಿಂದಲೇ ಅಲ್ಲಿ ಮನೆಮಾಡಿದ್ದವು. ತನ್ನ ತಂದೆ ಹತಾಶನಾಗಿ ಏಕಾಂಗಿತನ ಅನುಭವಿಸುತ್ತಿದ್ದ ಆ ರಾತ್ರಿಗಳಲ್ಲಿ ಹುಟ್ಟಿದ ಕ್ರಿಮಿಗಳು ಅವು. ಒಂಟಿತನದ ಆ ರಾತ್ರಿಗಳಲ್ಲಿ ನೋವುಣ್ಣುತ್ತಲೇ ಅವುಗಳಿಗೆ ಆಹಾರವಾದ ಅವಳ ತಂದೆಯ ಹೃದಯದಿಂದ ಅವು ಬಂದಿರ ಬಹುದು. ಈ ಭೂಮಿ ಹುಟ್ಟಿದ ದಿನದಿಂದ, ತನ್ನ ತಾಯಿಯೊಂದಿಗೆ ತನ್ನನ್ನು ಬೆಸೆದಿದ್ದ ಆ ಹೊಕ್ಕುಳ ಬಳ್ಳಿಯ ಮೂಲಕ ತನ್ನ ಧಮನಿಗಳೊಳಕ್ಕೆ ಸುರಿದಿರಬಹುದು. ಆ ಕ್ರಿಮಿಗಳು ತಾವಾಗಿ ತಾವೇ ತನ್ನ ದೇಹದಲ್ಲಿ ಇದ್ದಕ್ಕಿದ್ದಂತೆ ಜನಿಸಿಲ್ಲ ಎಂಬುದರ ಬಗ್ಗೆ ಸಂದೇಹವೇ ಇಲ್ಲ, ಅವು ಆ ಗತದಿಂದ ಬಂದವು. ತನ್ನ ಹಾಗೆಯೇ, ತನ್ನ ಮನೆತನದ ಹೆಸರನ್ನು ಹೊತ್ತ ಎಲ್ಲರೂ ಅದನ್ನು ಹೊರಬೇಕಿತ್ತು, ಅವರೆಲ್ಲರೂ ಅಷ್ಟೆ, ಎಡೆಬಿಡದೆ ಕಾಡುವ ನಿದ್ರಾಹೀನತೆಯ ಹಿಡಿತದಲ್ಲಿ, ಆ ಕ್ರಿಮಿಗಳನ್ನು ಜಯಿಸಲಾಗದೆ, ಬೆಳಕು ಮೂಡುವವರೆಗೂ ತನ್ನಂತೆಯೇ ಯಾತನೆ ಅನುಭವಿಸಬೇಕಿತ್ತು, ತನ್ನ ಪೂರ್ವಜರ ಮುಖಗಳ ಮೇಲೆ ಅಚ್ಚೊತ್ತಿದ್ದ ಆ ಕಹಿಂಭಾವವನ್ನು, ಸಂತೈಸಲಾಗದ ನೋವುಗಳನ್ನು ಬಳಿದವು ಅವೇ ಕ್ರಿಮಿಗಳೇ. ತನ್ನಂಥದೇ ಯಾತನೆಗೆ ಬಲಿಯಾದ ತನ್ನ ಪೂರ್ವಿಕರು, ಪೂರ್ವಕಾಲದ ತಮ್ಮ ಪಟಗಳಿಂದ, ಸಂದಿಹೋದ ತಮ್ಮ ಅಸ್ತಿತ್ವದಿಂದಾಚೆಗೆ ಒಂದೇ ಸಮ ನೋಡುತ್ತಿದ್ದುದನ್ನು ಅವಳು ಕಂಡಿದ್ದಳು. ಅವಳ ನೆತ್ತರಿನ ನಾಳಗಳಲ್ಲಿ ಹರಿಯುತ್ತ, ಅವಳನ್ನು ಹುತಾತ್ಮಗೊಳಿಸುತ್ತ, ನಿರ್ದಯವಾಗಿ ಅವಳನ್ನು ಸುಂದರಗೊಳಿಸುತ್ತಿದ್ದ ಆ ಕ್ರಿಮಿಗಳು ಅವಳ ಮುತ್ತಜ್ಜಿಯನ್ನು ಕಾಡಿದ್ದುಂಟು. ಅವುಗಳ ಕಾಟದಿಂದ ಮುಕ್ತಿ ಸಿಗಲಿ, ಒಂದು ನಿಮಿಷದ ವಿಶ್ರಾಂತಿ ಸಿಗಲಿ, ಒಂದು ಘಳಿಗೆಯ ನೆಮ್ಮದಿ ತನ್ನದಾಗಲಿ ಎಂದು ಮುಪ್ಪಡರಿದ ಚಿತ್ರಪಟದ ಆಳದಿಂದ ಬೇಡುತ್ತಿದ್ದ ತನ್ನ ಮುತ್ತಜ್ಜಿಯ ಮುಖ ಅವಳ ನೆನಪಲ್ಲಿ ಇನ್ನೂ ಉಳಿದಿತ್ತು, ಇಲ್ಲ, ಆ ಕ್ರಿಮಿಗಳು ತನಗೆ ಸೇರಿದುವಲ್ಲ, ಅವು ತಲೆಮಾರಿನಿಂದ ತಲೆಮಾರಿಗೆ ಹರಿದು, ತಮ್ಮ ಸಣ್ಣ ಕವಚದ ರಕ್ಷಣೆಯಲ್ಲಿ ವಿಶೇಷ ಸವಲತ್ತಿನ ಸಂಗಡವಾಗಿ ಬೆಳೆದು, ಅತೀವ ನೋವುಣಿಸುವ ಸಾಮರ್ಥ್ಯ ಉಳಿಸಿಕೊಂಡು ಬಂದಂಥವು. ಸುಂದರ ಮಗಳೊಬ್ಬಳನ್ನು ಹಡೆದ ಮೊದಲ ತಾಯಿಯ ಗರ್ಭದಲ್ಲಿ ಆ ಕ್ರಿಮಿಗಳು ಜನಿಸಿದ್ದವು. ಆದರೆ ಆ ಪರಂಪರೆಗೆ ತಡೆಹಾಕುವ ಅಗತ್ಯವಿತ್ತು, ತೀವ್ರ ಒತ್ತಡವಿತ್ತು ಕೂಡ. ಆ ಕೃತ್ರಿಮ ಸೌಂದರ್ಯದ ನಿರಂತರ ಹರಿವನ್ನು ಯಾರಾದರೂ ತಡೆಗಟ್ಟಲೇಬೇಕಿತ್ತು, ಇರುಳಿನ ಕತ್ತಲಲ್ಲಿ, ನಿಧಾನಗತಿಯಲ್ಲಿ- ಆದರೆ ತೀಕ್ಷ್ಣವಾಗಿ- ಆ ಕ್ರಿಮಿಗಳು ಶತಶತಮಾನಗಳ ನಿಷ್ಠೆಯಿಂದ ನಿರಂತರವಾಗಿ ನೋವುಣಿಸುತ್ತಿವೆ. ಹೀಗಿರುವಾಗ, ತನ್ನಂಥ ಹೆಣ್ಣುಗಳು, ಕನ್ನಡಿಯಲ್ಲಿನ ತಮ್ಮ ಪ್ರತಿಬಿಂಬವನ್ನು ಮೆಚ್ಚುಗೆಯಿಂದ ನೋಡಿಕೊಂಡು, ಆತ್ಮತೃಪ್ತಿಯಿಂದ ಬರುವುದರಲ್ಲಿ ಯಾವ ಸಾರ್ಥಕತೆಯೂ ಇಲ್ಲ, ಅಂಥ ಸೌಂದರ್ಯ, ಇನ್ನು ಸೌಂದರ್ಯವಾಗಿರಲಿಲ್ಲ, ತಡೆಯಲೇಬೇಕಾದ ಒಂದು ಅಸ್ವಸ್ಥತೆಯಾಗಿ ಪರಿಣಮಿಸಿತ್ತು, ದಿಟ್ಟತನದಿಂದ ಬೇರು ಸಹಿತ ಅದನ್ನು ತೊಡೆದುಹಾಕಲೇ ಬೇಕಿತ್ತು,

ಕಾದ ಸೂಜಿಗಳನ್ನು ನೆಟ್ಟ ಆ ಹಾಸಿಗೆಯ ಮೇಲೆ ಕಳೆದ ನಿರಂತರ ಗಂಟೆಗಳು ಇನ್ನೂ ಅವಳ ನೆನಪಲ್ಲಿ ಹಸಿರಾಗಿದ್ದವು. ಆ ಕ್ರಿಮಿರೂಪದ ಮೃಗಗಳು ಅವಳಿಗೆ ಕೊಡುತ್ತಿದ್ದ ಬಾಧೆ ಬೆಳಗಾಗುವ ವೇಳೆಗೆ ಕೊನೆಯಾಗುತ್ತದೆ ಎಂಬ ಆಸೆ ಹೊತ್ತು ಅವಳು ಆ ರಾತ್ರಿಗಳಲ್ಲಿ ಕಾಲವನ್ನು ವೇಗವಾಗಿ ಓಡಿಸಲು ಯತ್ನಿಸುತ್ತಿದ್ದಳು. ಓ ಆ ರಾತ್ರಿಗಳು. ಅಂತಹ ಸ್ಥಿತಿಯಲ್ಲಿ ಸೌಂದರ್ಯದಿಂದ ದೊರೆಯುವ ಪ್ರಯೋಜನವಾದರೂ ಏನು? ರಾತ್ರಿಗಳು ಉರುಳಿದಂತೆ, ಹತಾಶೆಯಲ್ಲಿ ಮುಳುಗಿ, ತಾನೊಬ್ಬ ಸಾಮಾನ್ಯ ಹೆಂಗಸಾಗಿದ್ದಿದ್ದರೆ ಎಷ್ಟೋ ಮೇಲಾಗಿರುತ್ತಿತ್ತು ಎನಿಸಿದ್ದುಂಟು ಅವಳಿಗೆ; ಅಥವಾ ಒಬ್ಬ ಗಂಡಸಾಗಿ. ಕಾಣದ ಮೂಲದಿಂದ ಹುಟ್ಟಬೇಕು, ಹಿಮ್ಮರಳದ ಸಾವಿನ ಆಗಮನಕ್ಕಾಗಿ



ಸೌಂದರ್ಯಕ್ಕಾಗಿ ಅವಳೆಂದೂ ತ್ಯಾಗಗಳ ಬೆಲೆ ತೆರಬೇಕಾಗುತ್ತದೆಂದು ಅವಳು ಎಣಿಸಿರಲಿಲ್ಲ. ಆ ಘಳಿಗೆಯಲ್ಲಿ ಎಂದಿನ ಹಾಗೆಯೇ ಅವಳ ಹೆದರಿಕೆಯನ್ನು ಮೆಟ್ಟಿ ನಿಂತು, ನೋವು ಅವಳ ಅನುಭವಕ್ಕೆ ಬರುತ್ತಿತ್ತು. ಆ ಹೆದರಿಕೆಯ ಮರೆಯಲ್ಲಿ, ಆ ತಣಿಸಲಾಗದ ಕ್ರಿಮಿಗಳು ಅವಳನ್ನು ಇನ್ನೂ ಯಾತನೆಗೆ ಗುರಿ ಮಾಡುತ್ತಲೇ ಇದ್ದವು. ಅವು ಕೇಡಿನಂತೆ ಅವಳನ್ನು ಹಿಸುಕಿ ಹಿಡಿದಿತ್ತು. ಆವೇಶದಿಂದ ಕಡಿಯುತ್ತ, ಅವಳನ್ನು ವಶಪಡಿಸಿಕೊಳ್ಳಲು ಸಿದ್ಧವಾಗಿತ್ತು. ಆದರೆ ಆ ಹುಡುಗಿಯು ಅವುಗಳಿಗೆ ಇನ್ನೂ ಸಿಗದೆ ಉಳಿದಿರಲಿಲ್ಲ, ಉಳಿಯುವುದಕ್ಕಿಲ್ಲ.

ಆತುರಗೊಳಿಸುತ್ತ ಅವಳನ್ನು ಕಾಡುತ್ತಿದ್ದ ಆ ಕ್ರಿಮಿಗಳಿಗೆ ಆಹುತಿಯಾಗಿ, ಆ ನಿಷ್ಪ್ರಯೋಜಕ ಸದ್ಗುಣದಿಂದಲೂ ಅವಳು ವಂಚಿತಳಾಗಿದ್ದಳು. ಬಹುಶಃ ನಾಯಿಯೊಂದರ ಹೆಸರಿಟ್ಟುಕೊಂಡಿದ್ದ ಅವಳ ಜೆಕೊಸ್ಲೊವಾಕಿಯನ್ ಗೆಳತಿಯಂತೆ ಯಾರನ್ನೂ ಸೆಳೆಯದ ಕುರೂಪದಿಂದ ಕೂಡಿ ಯಾವ ಬೆಡಗೂ ಇಲ್ಲದವಳಾಗಿದ್ದರೆ ಅವಳು ಸಂತೋಷವಾಗಿರುತ್ತಿದ್ದಳೇನೋ. ಕುರೂಪಿಯಾಗಿದ್ದರೆ ಅವಳು ಇನ್ನೂ ಹೆಚ್ಚು ಸುಖಿಯಾಗಿರಬಹುದಿತ್ತೇನೋ. ಆಗ ಯಾರೇ ಒಬ್ಬ ಕ್ರಿಶ್ಚಿಯನ್‌ನಂತೆ ನೆಮ್ಮದಿಯ ನಿದ್ರೆ ಅವಳ ಪಾಲಿಗಿರುತ್ತಿತ್ತು,

ತನ್ನ ಪೂರ್ವಜರನ್ನು ಅವಳು ಶಪಿಸಿದಳು. ಅವಳ ನಿದ್ರಾಹೀನಸ್ಥಿತಿಗೆ ಅವರೇ ಮೂಲ ಕಾರಣ. ತದ್ರೂಪವಾದ, ಕೊಂಚವೂ ವ್ಯತ್ಯಾಸಗೊಳ್ಳದ ಅದೇ ಸೌಂದರ್ಯವನ್ನು ಅವಳಿಗೆ ರವಾನಿಸಿದ್ದರು. ತಮ್ಮ ಸಾವಿನ ನಂತರ ತಾಯಿಯರು ತಮ್ಮ ತಲೆಗಳನ್ನೇ ಕೊಡವಿ, ತಮ್ಮ ಹೆಣ್ಣುಮಕ್ಕಳ ಮುಂಡಗಳಿಗೆ ಕಸಿಮಾಡಿ, ಮತ್ತೆ ಜೀವ ತುಂಬಿದಂತಿದ್ದವು ಆ ಸುಂದರ ಪಡಿಯಚ್ಚುಗಳು. ಅದೇ ತಲೆ; ಆ ಒಂದೇ ತಲೆಯನ್ನು, ಅವೇ ಕಿವಿಗಳು, ಅದೇ ಮೂಗು, ಮಹತ್ತರ ಬುದ್ಧಿವಂತಿಕೆ ಸೂಸುವ ಅದೇ ಬಗೆಯ ಬಾಯಿಯೊಂದಿಗೆ ಪಡೆಯಲೇಬೇಕಿತ್ತು, ನೋವು ತುಳುಕುವ ಸೌಂದರ್ಯದ ಉತ್ತರಾಧಿಕಾರಿಣಿಯರಂತೆ ಪರಿಹಾರವೇ ಸಾಧ್ಯವಾಗದ ರೀತಿಯಲ್ಲಿ ಆ ಹೆಣ್ಣುಗಳು ಅದೇ ತಲೆಯನ್ನು ಪಡೆಯದೆ ಗತ್ಯಂತರವಿರಲಿಲ್ಲ, ಈ ತಲೆಯ ರವಾನೆಯಲ್ಲಿ ಈ ನಿರಂತರ ಕ್ರಿಮಿಯು ಹಲವು ಸಂತತಿಗಳನ್ನು ಹಾದು ವ್ಯಕ್ತಿತ್ವ ಶಕ್ತಿಗಳನ್ನು ಮೈಗೂಡಿಸಿಕೊಂಡು ಬೆಳೆಯಿತು. ಅದೊಂದು ಅಜೇಯ ಶಕ್ತಿಯಾಗಿ, ನಿವಾರಿಸಲಾಗದ ಕಾಯಿಲೆಯಾಗಿ ಅವಳನ್ನು ತಲುಪಿದ ಮೇಲೆ, ಅಸಹನೀಯ ಸ್ಥಿತಿ ತಲುಪಿ, ವೇದನೆಯಾಗಿ, ಬಾಧೆಯಾಗಿ, ಒಂದು ಸಂಕೀರ್ಣ ಸತ್ವಪರೀಕ್ಷೆಯ ಮೂಲಕ ಹಾದು ಅಸಲು ಒಂದು ಗಡ್ಡೆಯಾಗಿ ಅಥವಾ ಒಂದು ಗಂಥಿಯಾಗಿ ಪರಿಣಮಿಸಿತ್ತು,

ನಿದ್ದೆ ಬಾರದ ಆ ದೀರ್ಘ ಗಂಟೆಗಳನ್ನು ಕಳೆಯುವಾಗ ಅವಳ ನವಿರಾದ, ಸೂಕ್ಷ್ಮ ಸಂವೇದನಾ ಶಕ್ತಿಗೆ ಅಪ್ರಿಯವಾದ ಎಷ್ಟೋ ವಿಷಯಗಳು ತಪ್ಪದೆ ಅವಳ ನೆನಪಲ್ಲಿ ಹಾದುಹೋಗುತ್ತಿದ್ದವು. ಅವಳ ಭಾವನಾಪ್ರಪಂಚವನ್ನು ತುಂಬಿದ್ದ ವಸ್ತುಗಳನ್ನು ಅವಳು ನೆನೆಸಿಕೊಂಡಳು. ಅವಳ ಆ ಲೋಕದಲ್ಲಿ, ರಾಸಾಯನಿಕ ಮಾಧ್ಯಮದಲ್ಲಿ ಬೆಳೆಸುವಂತೆ ಆ ಹತಾಶೆಯ ಸೂಕ್ಷ್ಮ ಜೀವಿಗಳನ್ನು ಸಾಕಿ ಬೆಳೆಸಲಾಗಿತ್ತು, ಆ ರಾತ್ರಿಗಳಲ್ಲಿ ತನ್ನ ತೆರೆದ, ಬೆದರಿದ ವಿಶಾಲ ದುಂಡು ಕಣ್ಣುಗಳನ್ನು ಅರಳಿಸುತ್ತ ಕಾದ ಸೀಸದಂತೆ ತನ್ನ ಕಪೋಲಗಳ ಮೇಲೆ ಬೀಳುತ್ತಿದ್ದ ಆ ಕರಾಳ ರಾತ್ರಿಯ ಕಡುಗಪ್ಪಿನ ಭಾರವನ್ನು ಅವಳು ಭರಿಸಿದ್ದಳು. ಅವಳ ಸುತ್ತ ಎಲ್ಲವೂ ನಿದ್ರೆಯಲ್ಲಿ ಮುಳುಗಿತ್ತು, ನಿದ್ದೆ ಬರಿಸಿಕೊಳ್ಳುವ ಸನ್ನಾಹದಲ್ಲಿ ತಾನು ಮಲಗಿದ್ದ ಮೂಲೆಯಿಂದ ಹೊರಟು, ತನ್ನ ಬಾಲ್ಯದ ನೆನಪುಗಳ ಹಾದಿಯಲ್ಲಿ ಹಿನ್ನಡೆಯಲು ಯತ್ನಿಸುತ್ತಿದ್ದಳು.

ಆದರೆ ಆ ನೆನಪಿನ ಓಟ ಅಜ್ಞಾತದ ಬಗೆಗಿನ ಭೀತಿಯಲ್ಲೇ ಕೊನೆಗೊಳ್ಳುತ್ತಿತ್ತು, ಪ್ರತಿಯೊಂದು ಬಾರಿಯೂ ಆ ಮನೆಯ ಕತ್ತಲ ಮೂಲೆಗಳಲ್ಲಿ ಅಲೆದಾಡಿದ ಮೇಲೆ ಅವಳ ಆಲೋಚನೆಗಳು ಭೀತಿಯೊಂದಿಗೆ ಮುಖಾಮುಖಿಯಾಗುತ್ತಿದ್ದವು. ಆಗ ಶುರು ಅವಳ ಹೋರಾಟ. ಮೂರು ಅಚಲ ಶತ್ರುಗಳ ವಿರುದ್ಧ ಅವಳ ನಿಜವಾದ ಸೆಣಸಾಟ ಶುರುವಾಗುತ್ತಿತ್ತು, ಇಲ್ಲ, ಆ ದಿಗಿಲನ್ನು ಅವಳ ಮೆದುಳಿನಿಂದ ಕೊಡವಿಕೊಳ್ಳಲು ಅವಳಿಗೆ ಸಾಧ್ಯವಾಗುತ್ತಿರಲಿಲ್ಲ, ಇಲ್ಲ ಸಾಧ್ಯವೇ ಇರಲಿಲ್ಲ, ಆ ಭೀತಿ ಅವಳ ಗಂಟಲನ್ನು ಹಿಡಿದಿದ್ದಂತೆಯೇ ಅದನ್ನು ಭರಿಸಬೇಕಾಗಿತ್ತವಳು. ಇಷ್ಟೆಲ್ಲಾ ಭೀತಿಯನ್ನು ಆ ಪ್ರಾಚೀನ ಭವ್ಯಸೌಧದಲ್ಲಿ ವಾಸವಾಗಿರುವುದಕ್ಕೋಸ್ಕರ, ಮಿಕ್ಕ ಜಗತ್ತಿನಿಂದ ದೂರವಾಗಿ ಆ ಮೂಲೆಯಲ್ಲಿ ಒಂಟಿಯಾಗಿ ಮಲಗುವುದಕ್ಕೋಸ್ಕರವೇ ಅನುಭವಿಸಬೇಕಿತ್ತು,

ಅವಳ ಆಲೋಚನೆಗಳು ಸದಾ ಆ ಹಸಿಹಸಿಯಾದ, ಕತ್ತಲೆ ತುಂಬಿದ ಮಾರ್ಗಗಳಲ್ಲಿ, ಆ ಪಟಗಳ ಮೇಲಿನ ಇಲ್ಲಣ ತುಂಬಿದ ಒಣಧೂಳನ್ನು ಕೊಡವುತ್ತ ನಡೆಯುತ್ತಿದ್ದವು. ಧೂಳು. ಎಂಥ ಧೂಳೆಂದರೆ ಮೇಲಿನಿಂದ ಬೀಳುತ್ತಿದ್ದ, ಮನಸ್ಸು ಕಲಕುವ, ಹೆದರಿಕೆ ಹುಟ್ಟಿಸುವ ಧೂಳು; ತನ್ನ ಪೂರ್ವಿಕರ ಮೂಳೆಗಳು ಕಳಚಿಬೀಳುತ್ತಿದ್ದ ಆ ಸ್ಥಳದಿಂದ ಉದುರುತ್ತಿದ್ದ ಧೂಳು. ಆಗವಳಿಗೆ ತಪ್ಪದೆ ಆ ಹುಡುಗನ ನೆನಪು. ಒಂದು ಹಿಡಿ ಹಸಿಮಣ್ಣನ್ನು ಬಾಯಲ್ಲಿ ತುಂಬಿಕೊಂಡು, ಆ ಕಿತ್ತಳೆ ಮರದ ಪಕ್ಕದಲ್ಲಿ ಅಂಗಳದ ಹುಲ್ಲಿನ ಅಡಿಯಲ್ಲಿ, ಬಸವನಹುಳುಗಳ ನಡುವೆ ವಾಸವಾಗಿದ್ದ ಅವನು, ತನ್ನ ಉಗುರುಗಳು ಮತ್ತು ಹಲ್ಲುಗಳಿಂದ ಭೂಮಿಯನ್ನು ಬಗೆಯುತ್ತ ಬೆನ್ನು ಕೊರೆಯುತ್ತಿದ್ದ ಚಳಿಯಿಂದ ತಪ್ಪಿಸಿಕೊಳ್ಳಲು, ಆ ಸಣ್ಣ ಸುರಂಗದ ಮೂಲಕ ಅಂಗಳಕ್ಕೆ ಕಾಲಿಡಲು ದಾರಿ ಹುಡುಕುತ್ತ ಬರುತ್ತಿದ್ದ ಹಾಗೆ ಅವಳಿಗೆ ತೋರುತ್ತಿತ್ತು,

ಮಣ್ಣಿನ ಅಡಿಯಲ್ಲಿ, ಚಳಿಗಾಲದ ದಿನಗಳಲ್ಲಿ, ಮಳೆಯಲ್ಲಿ ಒದ್ದೆಮುದ್ದೆಯಾದ ಅವನು ತನ್ನ ಸಣ್ಣ ದನಿಯ ಬಿಕ್ಕಿನೊಂದಿಗೆ

ಮ ಅವನ ಶಿವಿಗೆ ಬೀಳುತ್ತಿತ್ತು, ಅವನು ಇನ್ನೂ ಇರುತ್ತಾನೆಂಬುದು ಅವಳ ಗಿತ್ತು. ಐದು ವರ್ಷಗಳಿಗೆ ಮುನ್ನ, ಆ ನೀರು ಗುಂಡಿಯಲ್ಲಿ ಅವನನ್ನು ಹೇಗಿರಿಸಿದ್ದರೋ ಇಂದೂ ಉಳಿದಿರುತ್ತಾನೆಂದು ಅವಳು ಅವನು ಕೊಳೆತು ಹೋಗಿರುತ್ತಾನೆ ಎಂಬುದನ್ನು ಆಗದ ಸ್ಥಿತಿಯಲ್ಲಿದ್ದಳು ದಲಾಗಿ. ಆ ಆಳವಾದ ಹಾಗಲು ಸಾಧ್ಯವೇ ರ್ಘಯಾನದಲ್ಲಿ ಬಹುಶಃ ಸುಂದರನಾಗಿ ತೇಲು ಅವನ ಎಣಿಕೆ. ಅಥವಾ ಗಿದ್ದುಕೊಂಡು ಮಂಕು ಗಳದ ಮಣ್ಣಿನಡಿಯಲ್ಲಿ ಗಿರಲು ಭಯಪಟ್ಟು ದ್ದಾನೆ ಎಂದೇ ಅವಳ ಮನೆಗೆ ಅಷ್ಟು ಸಮೀಪ ಳೆ ಮರದ ಅಡಿಯಲ್ಲಿ ಇರಿಸುವುದು ಅವಳಿಗೆ ರಲಿಲ್ಲ. ಅವನ ಬಗ್ಗೆ ಹೆದರಿಕೆ ಮೂಡಿತ್ತು. ತೆ ಅವಳನ್ನು ಬೆಂಬತ್ತಿದ ಆ ವಿಷಯ ಅವನ ಅರಿವಿಗೆ ಬಂದೇ ದು ಅವಳಿಗೆ ಚೆನ್ನಾಗಿ ಗೊತ್ತು, ಹಿಂದಿರುಗಿ ವಿಶಾಲವಾದ ಮೊಗಸಾಲೆಗಳಲ್ಲಿ ತನ್ನೊಂದಿಗೆ ಅವಳನ್ನು ಗೋಗರೆಯಲು ಬಂದೇ ಬರುತ್ತಾನೆ, ಟ್‌ಗಳ ಬೇರುಗಳನ್ನೇ ಕಿತ್ತು ತಿನ್ನುತ್ತಿದ್ದ ಆ ವಿರುದ್ಧ ತನ್ನನ್ನು ರಕ್ಷಿಸುವಂತೆ. ಅವಳನ್ನು ತ್ತಾನೆ, ಅವನು ಜೀವಂತವಾಗಿದ್ದಾಗ ದ್ದಂತೆಯೇ ತನ್ನನ್ನು ಅವಳ ಪಕ್ಕದಲ್ಲೇ ಕೊಳ್ಳಬೇಕೆಂಬ ಇಚ್ಛೆ ಹೊತ್ತು ಅವಳ ಬಳಿಗೆ ರುತ್ತಾನೆ, ಇದೆಲ್ಲ ಅವಳಿಗೆ ತಿಳಿದ ವಿಷಯವೆ. ವಿನ ಗೋಡೆಯನ್ನು ಜಗಿದಿದ್ದ ಅವನನ್ನು ಪಕ್ಕದಲ್ಲಿ ಕೊಳ್ಳಲು, ಅವನ ಸ್ಪರ್ಶವನ್ನು ಅನುಭವಿಸಲು ಹೆದರಿಕೆಯಾಗುತ್ತಿತ್ತು. ತನ್ನ ಪುಟ್ಟ ಮಂಜುಗಡ್ಡೆಯ ಬೆಚ್ಚಗೆ ಮಾಡಿಕೊಳ್ಳುವ ಸಲುವಾಗಿ ಸದಾ ಕೊಳ್ಳುತ್ತಿದ್ದ ಆ ಹುಡುಗನ ಕೈಗಳನ್ನು ಕದಿಯಲು ಹೆದರಿಕೆಯಾಗುತ್ತಿತ್ತು, ಮಣ್ಣೆಗುರುಳಿದ ಭೀತಿಯ ಯುಂತೆ ಅವನು ಸಿಮೆಂಟಿಗೆ ಪರಿವರ್ತನೆ ನ್ನು ಕಂಡನಂತರ ರಾತ್ರಿವೇಳೆ ಅವನ ನೆನಪಾಗದಂತೆ ದೂರ ಕೊಂಡೊಯ್ದರೆ ಸಾಕೆನಿಸಿತ್ತು. ಆದರೂ ಅಲ್ಲೇ ಬಿಟ್ಟು ಅವರೆಲ್ಲ ನಡೆದಿದ್ದರು. ಾಗದ ಈಗಿನ ಸ್ಥಿತಿಯಲ್ಲಿ, ನಿರ್ಭಾಗ್ಯನಾಗಿ, ತನ್ನ ಹುಳುಗಳ ಮಣ್ಣನ್ನು ಉಣ ಬಡಿಸುತ್ತ ಅವನಿದ್ದಾನೆ. ಳುಗಳ ಆಳದಿಂದ ಅವನು ಹಿಂದಕ್ಕೆ ಬಂದೇ ೆಂದು ಅವಳು ಗಟ್ಟಿ ಮನಸ್ಸಿನಿಂದ ಸಮಾಧಾನ ಳ್ಳಬೇಕಿತ್ತು, ಏಕೆಂದರೆ, ಪ್ರತಿ ಸಲವೂ ತಪ್ಪದಂತೆ, ಸ್ಥಿತಿಯಲ್ಲಿ ಮಲಗಿರುವಾಗೆಲ್ಲ ಅವಳ ಗಳು ಆ ಅರ್ಥಹೀನ ಸಾವಿನಿಂದ ತಪ್ಪಿಸಿಕೊಂಡು ಗಲು ಸಹಾಯ ಮಾಡಬರುವಂತೆ ಮಣ್ಣಿನಿಂದ ರೆಯುತ್ತಿದ್ದ ಆ 'ಹುಡುಗ'ನತ್ತಲೇ ಹಾರುತ್ತಿದ್ದವು.

ಸರೀಗ, ಅವಳ ಹೊಸ ಬದುಕಿನಲ್ಲಿ ಆಕಾಶ ಂತ ಬದುಕಿನಲ್ಲಿ, ಅವಳು ಹೆಚ್ಚು ಪ್ರಶಾಂತಳಾಗಿ ವಳ ಆ ಲೋಕದಿಂದಾಚೆ ಎಲ್ಲವೂ ಎಂದಿನಂತೆ ಯುದಲ್ಲಿ ಮುಂದುವರಿಯುವುದೆಂದು ಅವಳು ತನ್ನ ಕೋಣೆ ಇನ್ನೂ ಬೆಳಗಿನ ಜಾವದ ಕತ್ತಲಲ್ಲಿ ರುತ್ತದೆ. ತನ್ನ ವಸ್ತುಗಳು, ತನ್ನ ಫರ್ನಿಚರ್, ತನ್ನ ಹದಿಮೂರು ಪುಸ್ತಕಗಳು, ಎಲ್ಲವೂ ಅಲ್ಲಲ್ಲೇ ಲೇ ಇರುತ್ತವೆ ಎಂದು ಅವಳಿಗೆ ಗೊತ್ತು, ತನ್ನ ಹಾಸಿಗೆಯ ಮೇಲೆ, ಹಿಂದೆ ಸಂಪೂರ್ಣ ಹೆಣ್ಣೊಂದು ದ್ದ ಹಾಸಿಗೆಯ ಮೇಲೆ ಈಗ ಖಾಲಿತನವೇ ಾದಿರುತ್ತದೆ. ಆದರೂ ಆ ಹಾಸಿಗೆಯನ್ನು ತುಂಬಿದ್ದ ಮೈಯ ಸುವಾಸನೆ ಈಗಷ್ಟೇ ಮಾಯವಾಗ ರುತ್ತದೆ. ಅರೆ! ಆದರೆ ಅದು ಹೇಗೆ ತಾನೆ ಸುಂದರ ಹೆಣ್ಣಾಗಿದ್ದವಳು, ಕ್ರಿಮಿಗಳಿಂದ ತುಂಬಿದ ಹರಿಯುವವಳು, ಆ ಕರಾಳ ಪರಿಪೂರ್ಣ ರಾತ್ರಿಯ ಬಿಟ್ಟು ಬೆಚ್ಚಗೆ ಕಟ್ಟಿಕೊಂಡೇ ಬಂದವಳು, ಅಂಥ ಈಗ ಎಲ್ಲ ಆಯಾಮಗಳೂ ಕಳಚಿಹೋಗಿರುವ ಪರಿಚಿತ, ಅಜ್ಞಾತ ಲೋಕವನ್ನು ಪ್ರವೇಶಿಸಲು ಸಾಧ್ಯ? ನಿದ್ದೆ ಬಾರದ ಸ್ಥಿತಿಯಲ್ಲಿ ಭೀಕರ ದುಃಸ್ವಪ್ನಗಳ ಅನುಭವಿಸಲು ಹೇಗೆ ಸಾಧ್ಯ? ಅವಳು ನೆನಪಿಗೆ ಕೊಂಡಳು. ಆ ರಾತ್ರಿ ಅವಳ ಪ್ರಯಾಣದ ಆ ಎಂದಿಗಿಂತ ಹೆಚ್ಚು ಥಂಡಿಯಿಂದ ಕೂಡಿತ್ತು. ನಿದ್ದೆ ಯಾತನೆ ಅನುಭವಿಸುತ್ತ ಚಿತ್ರಹಿಂಸೆಯಾಗುತ್ತಿತ್ತು ...

ನೆತ್ತರು, ತನ್ನ ಕ್ರಿಮಿಗಳ ಸರಕನ್ನು ಹೊರಹಾಕುತ್ತಿದೆಯೋ ಎನ್ನುವಂತೆ ಅವಳ ದೇಹದಲ್ಲಿ ಬೆವರೊಡೆಯಿತು. ಯಾರಾದರೂ ಬೀದಿಯಲ್ಲಿ ಸಾಗಿ ಹೋಗಲಿ, ಕೂಗಾಡಲಿ, ಆ ನೀರವ ವಾತಾವರಣವನ್ನು ಧ್ವಂಸ ಮಾಡಲಿ ಎಂದು ಅವಳು ಕಾತರಿಸಿದಳು. ಪ್ರಕೃತಿಯಲ್ಲಿ ಏನಾದರೂ ಚಲಿಸಬೇಕು, ಭೂಮಿ ಮತ್ತೆ ಸೂರ್ಯನ ಸುತ್ತ ತಿರುಗಬೇಕು ಎಂದು ಬಯಸಿದಳು. ಆದರೆ ಅದು ಕೈಗೂಡಲಿಲ್ಲ, ಹಿಂದೆಲ್ಲ ಅವಳ ಜೊತೆಯಲ್ಲೇ ಅವಳ ಕಿವಿಯ ಬಳಿಯಲ್ಲಿ ನಿದ್ದೆಹೋಗಿದ್ದ, ಅವಳ ತಲೆದಿಂಬಿನಲ್ಲಿ ಹುದುಗಿ ಮಲಗಿದ್ದ ಆ ಬಲಹೀನ ಗಂಡಸರಿಗೂ ಎಚ್ಚರ ವಾಗುವಂತಿರಲಿಲ್ಲ, ಅವಳು ಕೂಡ ನಿಶ್ಚಲಳಾಗಿದ್ದಳು. ಗೋಡೆಗಳು ಹೊಸ ಪೈಂಟಿನ ತೀಕ್ಷ್ಣ ವಾಸನೆಯನ್ನು ಹೊರಸೂಸುತ್ತಿದ್ದವು. ಮೂಗಿಗೆ ಮಾತ್ರವಲ್ಲ, ಹೊಟ್ಟೆಯ ತಳವನ್ನು ಮುಟ್ಟುವ ದಟ್ಟ, ಭರ್ಜರಿ ವಾಸನೆಯದು. ಮತ್ತೆ ಮೇಜಿನ ಮೇಲೆ ಆ ಒಂಟಿ ಗಡಿಯಾರ ತನ್ನ ಐಹಿಕ ಯಂತ್ರದಿಂದ ನಿಶ್ಶಬ್ದವನ್ನು ಸೀಳುತ್ತ ಮೌನವನ್ನು ಅಪ್ಪಳಿಸುತ್ತ ಸಾಗಿತ್ತು. ಸಾವನ್ನು ನೆನೆದ ಅವಳು 'ಕಾಲ,... ಓ ಕಾಲ' ಎಂದು ನಿಡುಸುಯ್ದಳು. ಮತ್ತೆ ಅಲ್ಲಿ, ಅಂಗಳದಲ್ಲಿ, ಆ ಕಿತ್ತಳೆ ಮರದ ಅಡಿಯಲ್ಲಿ 'ಆ ಹುಡುಗ' ತನ್ನ ಸಣ್ಣ ದನಿಯ ಬಿಕ್ಕನೊಂದಿಗೆ ಅಳುತ್ತಿರುವ ಸದ್ದು ದೂರದ ಲೋಕದಿಂದ ಹರಿದುಬಂತು.

ಅವಳು ತನ್ನೆಲ್ಲ ನಂಬಿಕೆಗಳ ಮೊರೆಹೋದಳು. ಅಲ್ಲೇ ಆಗಲೇ ಏಕೆ ಬೆಳಗಾಗಲಿಲ್ಲ? ಅಥವಾ ಒಮ್ಮೆಗೇ ಸಾವು ಬಂದು ಅವಳನ್ನೇಕೆ ಅಪ್ಪಿಕೊಳ್ಳಲಿಲ್ಲ? ಸೌಂದರ್ಯಕ್ಕಾಗಿ ಅಷ್ಟೊಂದು ತ್ಯಾಗಗಳ ಬೆಲೆ ತೆರಬೇಕಾಗುತ್ತದೆಂದು ಅವಳು ಎಣಿಸಿರಲಿಲ್ಲ. ಆ ಘಳಿಗೆಯಲ್ಲಿ ಎಂದಿನ ಹಾಗೆಯೇ ಅವಳ ಹೆದರಿಕೆಯನ್ನೂ ಮೆಟ್ಟಿ ನಿಂತು, ನೋವು ಅವಳ ಅನುಭವಕ್ಕೆ ಬರುತ್ತಿತ್ತು. ಆ ಹೆದರಿಕೆಯ ಮರೆಯಲ್ಲಿ, ಆ ತಣಿಸಲಾಗದ ಕ್ರಿಮಿಗಳು ಅವಳನ್ನು ಇನ್ನೂ ಯಾತನೆಗೆ ಗುರಿ ಮಾಡುತ್ತಲೇ ಇದ್ದವು. ಸಾವು ಜೇಡನಂತೆ ಅವಳನ್ನು ಹಿಸುಕಿ ಜೀವ ಹೆಣೆದಿತ್ತು. ಆವೇಶದಿಂದ ಕಡಿಯುತ್ತ ಅವಳನ್ನು ವಶಮಾಡಿಕೊಳ್ಳಲು ಸಿದ್ಧವಾಗಿತ್ತು. ಆದರೆ ಆ ತುತ್ತತುದಿಯ ಘಳಿಗೆ ಇನ್ನೂ ಬಂದಿರಲಿಲ್ಲ, ಬರುವುದರಲ್ಲಿತ್ತು. ಅವಳ ಕೈಗಳು-ಕಾಮ ಕ್ರೋಧಗಳ ಕಂಪನವನ್ನು ಹತ್ತಿಕ್ಕಲಾಗದ ದುರ್ಬಲ ಮನಸ್ಸಿನ ಗಂಡಸರು ಹಿಸುಕುತ್ತಿದ್ದ ಅವಳ ಆ ಕೈಗಳು ನಿಶ್ಚಲವಾಗಿದ್ದವು. ಹೆದರಿಕೆಯಿಂದ ನಿಸ್ಸತ್ವಗೊಂಡು, ಒಳಗಿನಿಂದ ಒತ್ತಿಕೊಂಡು ಬಂದ ವಿಚಾರಹೀನ ಭೀತಿಯಿಂದಾಗಿ ಹಾಗಾಗಿತ್ತು. ಇನ್ನಾವುದೇ ಕಾರಣಕ್ಕಲ್ಲದಿದ್ದರೂ ಆ ಪುರಾತನ ಮನೆಯಲ್ಲಿ ತೊರೆಯಲ್ಪಟ್ಟಿದೇನೆ ಎಂಬ ತಿಳಿವಳಿಕೆಯಿಂದಲೇ ಆ ನಿಶ್ಚಲತೆ ಉಂಟಾಗಿತ್ತು. ಅವಳು ಪ್ರತಿಕ್ರಿಯೆ ತೋರಲು ಯತ್ನಿಸಿದಳು. ಆದರೆ ಸಾಧ್ಯವಾಗಲಿಲ್ಲ, ಭೀತಿ ಅವಳನ್ನು ಸಂಪೂರ್ಣವಾಗಿ ಆವರಿಸಿತ್ತು ಮತ್ತು ಅಲ್ಲಿಯೇ ಸ್ಥಾವರಗೊಂಡು, ಹಿಡಿದ ಪಟ್ಟು ಬಿಡದಂತೆ, ಜಡವಾಗಿದೆಯೋ ಎನ್ನುವಂತೆ, ಆ ಕೋಣೆಯನ್ನು ಬಿಟ್ಟು ಹೊರಡಬಾರದೆಂದು ಸಂಕಲ್ಪ ಮಾಡಿದ ಅದೃಶ್ಯ ವ್ಯಕ್ತಿಯಂತೆ, ಅಲ್ಲಿಯೇ ಉಳಿದಿತ್ತು. ಮನಸ್ಸು ಕಲಕುವ ಅಂಶವೆಂದರೆ ಆ ಭೀತಿಗೆ ಯಾವುದೇ ಆಧಾರವಿರಲಿಲ್ಲ, ಅದೊಂದು ವಿಶಿಷ್ಟ ಬಗೆಯ ಭೀತಿ. ವಿನಾಕಾರಣ ಹುಟ್ಟಿದ ಭೀತಿ. 'ಯಾಕೋ ಗೊತ್ತಿಲ್ಲ, ಆದರೆ ತುಂಬಾ ಭಯ' ಎನಿಸುವಂಥದ್ದು.

ಅವಳ ನಾಲಿಗೆಯ ಮೇಲಿನ ಉಗುಳು ದಟ್ಟವಾಗಿತ್ತು, ಬಾಯ ಛಾವಣಿಗೆ ಹತ್ತಿದ್ದ ಆ ಅಂಟುಪದಾರ್ಥ ಹರಿಯತೊಡಗಿ ಅವಳ ಹಲ್ಲುಗಳ ನಡುವೆ ಸೇರಿ ಫಜೀತಿಯಾಗಿತ್ತು, ನೀರಡಿಕೆಗಿಂತ ತುಂಬಾ ಭಿನ್ನವಾದ ಉತ್ಕಟ ಅಪೇಕ್ಷೆಯದು. ಜೀವನದಲ್ಲಿ ಮೊದಲ ಬಾರಿ ಅವಳಿಗುಂಟಾಗಿದ್ದ ಉತ್ಕೃಷ್ಟ ಬಯಕೆ ಅದಾಗಿತ್ತು. ಒಂದು ಘಳಿಗೆ ಅವಳ ಸೌಂದರ್ಯ, ಅವಳ ನಿದ್ರಾಹೀನತೆ ಮತ್ತು ಅವಳ ಅಸಹಜ ಭೀತಿ ಎಲ್ಲವೂ ಅವಳಿಂದ ಮರೆಯಾದವು. ಅವಳ ಗುರುತು ಅವಳಿಗೇ ಹತ್ತಲಿಲ್ಲ. ಒಂದು ಘಳಿಗೆ ಆ ಕ್ರಿಮಿಗಳೆಲ್ಲ ತನ್ನ ದೇಹವನ್ನು ತೊರೆದಿವೆ ಎನ್ನಿಸಿತವಳಿಗೆ. ಅವಳ ಉಗುಳಿಗೆ ಅಂಟಿಕೊಂಡು. ಆ ಕ್ರಿಮಿಗಳೆಲ್ಲ ಹೊರಬಂದಿವೆ ಎನಿಸಿತು. ಹೌದು. ಆ ಅನುಭವ ತುಂಬಾ ಹಿತವಾಗಿತ್ತು, ಆ ಕ್ರಿಮಿಗಳು ಅವಳನ್ನು ತೊರೆದಿದ್ದವು. ಅವಳೀಗ ನಿದ್ದೆ ಮಾಡಬಹುದಾಗಿತ್ತು, ಅದೆಲ್ಲ ಅತ್ಯಂತ ಹಿತವೆನಿಸಿತು. ಆದರೆ ಅವಳ ನಾಲಿಗೆಯನ್ನು ಜಡಗೊಳಿಸಿದ್ದ

ಆ ಅಂಟುಪದಾರ್ಥವನ್ನು ಕರಗಿಸುವ ದಾರಿ ಕಂಡುಕೊಳ್ಳಬೇಕಿತ್ತು. ಅವಳು ಉಗ್ರಾಣಕ್ಕೆ ಹೋದರೆ ಸಾಕು. ಮತ್ತೆ... ಅರೆ, ಅವಳು ಯೋಚಿಸುತ್ತಿರುವುದೇನು? ಆಶ್ಚರ್ಯದಿಂದ ಒಮ್ಮೆಲೆ ಅವಳು ಅವಾಕ್ಕಾದಳು. ಅವಳಿಗೆ 'ಆ ಬಯಕೆ' ಉಂಟಾಗಿರಲೇ ಇಲ್ಲ. ಆ ಆಮ್ಲತೆಯ ತೀವ್ರತೆ ಅವಳನ್ನು ದುರ್ಬಲಗೊಳಿಸಿತ್ತು. ಆ 'ಹುಡುಗ'ನನ್ನು ಹೂಳಿದ್ದ ದಿನದಿಂದಲೂ ವರ್ಷಾಂತರಗಳಿಂದ ಅವಳು ಕಾಯ್ದುಕೊಂಡು ಬಂದಿದ್ದ ಆ ನಿಷ್ಠೆ ಈಗ ಕೆಲಸಕ್ಕೆ ಬಾರದಂತಾಗಿತ್ತು. ಅದು ದಡ್ಡತನವೆನಿಸಿದರೂ ಕಿತ್ತಳೆ ಹಣ್ಣು ತಿನ್ನಲು ಅವಳಿಗೆ ಅಸಹ್ಯವಾಯಿತು. ಆ 'ಹುಡುಗ' ಕಿತ್ತಳೆ ಹೂಗಳ ಬಳಿಗೇರಿ ಹೋಗಿದ್ದ. ಮುಂದಿನ ಚಳಿಗಾಲದ ಹಣ್ಣು ಅವನ ಮಾಂಸದಿಂದ ಮೈದುಂಬಿಕೊಂಡಿರುತ್ತದೆ, ಅವನ ಸಾವಿನ ಶೀತಲತೆಯಿಂದ ತಣ್ಣಗಾಗಿರುತ್ತದೆ. ಇಲ್ಲ, ಅವಳು ಕಿತ್ತಳೆ ಹಣ್ಣುಗಳನ್ನು ತಿನ್ನಲು ಸಾಧ್ಯವೇ ಇಲ್ಲ. ಈ ಪ್ರಪಂಚದ ಪ್ರತಿಯೊಂದು ಕಿತ್ತಳೆ ಮರದ ಅಡಿಯಲ್ಲೂ, ಮಣ್ಣಿನಡಿಯಲ್ಲಿ ಹುಡುಗನೊಬ್ಬ ನಿಶ್ಚಲವಾಗಿ ಮಲಗಿರುತ್ತಾನೆ. ತನ್ನ ಮೂಳೆಗಳ ಕ್ಯಾಲ್ಸಿಯಂನಿಂದ ಹಣ್ಣುಗಳಿಗೆ ಸಿಹಿ ತುಂಬಿರುತ್ತಾನೆ. ಅದೇನಾದರೂ ಇರಲಿ, ಅವಳೀಗ ಕಿತ್ತಳೆ ಹಣ್ಣೊಂದನ್ನು ತಿನ್ನಬೇಕಾಗಿತ್ತು, ಅವಳನ್ನು ಕಾಡುತ್ತಿದ್ದ ಆ ಅಂಟನಿಂದ ಮುಕ್ತಳಾಗಲು ಅವಳಿಗಿದ್ದ ದಾರಿ ಅದೊಂದೇ. 'ಹುಡುಗ' ಹಣ್ಣಿನೊಳಗಡೆ ಇದ್ದಾನೆ ಎಂದೆಲ್ಲ ಭಾವಿಸುವುದು ಶುದ್ಧ ದಡ್ಡತನ. ಅವಳ ಸೌಂದರ್ಯ ಕೊಡುವ ಯಾತನೆ ಆ ಘಳಿಗೆಯಲ್ಲಿ ನಿಂತಿತ್ತು, ಅದೇ ಘಳಿಗೆಯಲ್ಲಿ ಅವಳಿಗೆ ಉಗ್ರಾಣಕ್ಕೆ ಹೋಗುವ ಬಯಕೆಯಾಯಿತು. ಆದರೆ ವಿಚಿತ್ರ. ಕಿತ್ತಳೆಹಣ್ಣು ತಿನ್ನಬೇಕೆನಿಸಿದ್ದು ಅವಳ ಜೀವನದಲ್ಲಿ ಇದೇ ಮೊದಲ ಬಾರಿ. ಅವಳ ಸಂತೋಷಕ್ಕೆ ರೆಕ್ಕೆ ಮೂಡಿತು. ಓಹ್ ಎಂಥ ಸುಖ! ಕಿತ್ತಳೆ ಹಣ್ಣು ತಿನ್ನುವುದರಲ್ಲಿ ಎಂಥ ಆನಂದವಿದೆ. ಏಕೆಂದು ಅವಳಿಗೆ ಗೊತ್ತಾಗಲೇ ಇಲ್ಲ, ಆದರೆ ಆ ಬಗೆಯ ಅತೀವ ಬಯಕೆ ಅವಳಿಗೆಂದೂ ಉಂಟಾಗಿರಲಿಲ್ಲ. ಸಾಮಾನ್ಯ ಹೆಣ್ಣಾಗಿ ಪರಿವರ್ತನೆಗೊಂಡಿರುವ ಖುಷಿಯಿಂದ ಎದ್ದು ಹಕ್ಕಿಯಂತೆ ಹಾರುತ್ತ ಹೊಸ ಹೆಣ್ಣಿನಂತೆ, ಮರುಹುಟ್ಟು ಪಡೆದಿರುವ ಹೆಣ್ಣಿನಂತೆ

ಕತೆ

ಅನುವಾದ : ಸಿ.ಎಸ್. ಸರ್ವಮಂಗಳಾ

ಉಗ್ರಾಣಕ್ಕೆ ನಡೆದವಳು, ಅಲ್ಲಿಂದ ಅಂಗಳಕ್ಕೂ ನಡೆದು...... ಅವಳ ನೆನಪು ಇದ್ದಕ್ಕಿದ್ದಂತೆ ಕಡಿದು ಹೋಯಿತು. ಅವಳು ಎದ್ದೇಳಲು ಪ್ರಯತ್ನಿಸಿದ್ದು ಈಗವಳು ಹಾಸಿಗೆಯ ಮೇಲಿಲ್ಲ ಎಂಬುದು, ಅವಳ ದೇಹ ಅದೃಶ್ಯವಾಗಿರುವುದು, ಅವಳ ನೆಚ್ಚಿನ ಹದಿಮೂರು ಪುಸ್ತಕಗಳು ಯಥಾಸ್ಥಾನದಲ್ಲಿ ಇಲ್ಲದೆ ಹೋದದ್ದು, ಅವಳನ್ನು ಅವಳಾಗಿರಲಿಲ್ಲ ಎಂಬುದು, ನಿರ್ದೇಹಿಯಾಗಿ ತೇಲುತ್ತ, ಸಂಪೂರ್ಣ ಶೂನ್ಯತೆಯಲ್ಲಿ ಕೊಚ್ಚಿಕೊಂಡು ಹೋಗುತ್ತ ಇದ್ದದ್ದು, ದಿಕ್ಕಿಲ್ಲದ, ಅತಿ ಸಣ್ಣ ರೂಪರಹಿತ ಚುಕ್ಕಿಯಾಗಿ ಮಾರ್ಪಾಡುಗೊಂಡದ್ದು, ಎಲ್ಲವೂ ಅವಳ ನೆನಪಲ್ಲಿ ಹಾದುಹೋದವು. ಏನಾಯಿತು ಎಂಬುದನ್ನು ನಿಖರವಾಗಿ ಬೊಟ್ಟು ಮಾಡಿ ತೋರಿಸುವ ಸ್ಥಿತಿಯಲ್ಲಿ ಅವಳಿರಲಿಲ್ಲ, ಅವಳ ಮನಸ್ಸು ಪ್ರಕ್ಷುಬ್ಧವಾಗಿತ್ತು. ಎತ್ತರದ ಹೆಬ್ಬಂಡೆಯ ಮೇಲಿಂದ ಯಾರೋ ಅವಳನ್ನು ಆಕಾಶರಹಿತ ವಲಯಕ್ಕೆ ನೂಕಿದಂತೆ ಭಾಸವಾಯಿತು. ಅವಳೊಂದು ಅಮೂರ್ತ ಕಾಲ್ಪನಿಕ ಜೀವಿಯಾಗಿ ಪರಿವರ್ತನೆಗೊಂಡಿದ್ದಳು. ತಾನೊಂದು ಅಶರೀರ ಹೆಣ್ಣಾಗಿ ಪರಿವರ್ತನೆಗೊಂಡಂತೆ, ಶುದ್ಧ ಚೇತನಗಳಿಂದ ತುಂಬಿದ, ಹಿಂದೆಂದೂ ನೋಡಿರದಿದ್ದ ಆ ಎತ್ತರದ ಲೋಕಕ್ಕೆ ತಾನು ಇದ್ದಕ್ಕಿದ್ದಂತೆ ಪ್ರವೇಶಿಸಿದಂತೆ ಅವಳಿಗೆ ಭಾಸವಾಯಿತು.

ಅವಳಿಗೆ ಮತ್ತೆ ಭಯವಾಯಿತು. ಆದರೆ ಒಂದು ಘಳಿಗೆಯ ಮುನ್ನವಷ್ಟೇ ಅವಳಿಗುಂಟಾಗಿದ್ದ ಭಯಕ್ಕಿಂತ ಇದು ಬೇರೆಯೇ ಆಗಿತ್ತು. ಇದಕ್ಕೆ ಮುಂಚೆ ಬಿಕ್ಕುವ 'ಹುಡುಗ'ನ ಅಳುವಿನ ಹೆದರಿಕೆ ಇರುತ್ತಿತ್ತು. ಈಗಿನ ಹೆದರಿಕೆ ಅದಲ್ಲ, ಈಗ ತಾನಿರುವ ಅಪರಿಚಿತ ಲೋಕದಲ್ಲಿ ವಿಲಕ್ಷಣವಾಗಿ, ನಿಗೂಢವಾಗಿ, ಅಗೋಚರವಾಗಿದ್ದ ಯಾವುದೋ ಒಂದರ ಬಗ್ಗೆ ಅವಳಿಗೆ ಭೀತಿ. ಇಷ್ಟೆಲ್ಲವೂ ತನಗೆ ತಿಳಿಯದಂತೆಯೇ, ಏನೂ ಅರಿಯದ ಮುಗ್ಧಳಂತಿದ್ದ ತನ್ನ ತಿಳಿವಿಗೆ ಬಾರದೆಯೇ ನಡೆದು ಹೋಯಿತೆನ್ನುವುದು ಸೋಜಿಗದ ಸಂಗತಿಯಾಗಿತ್ತು. ತಾನು ಮನೆಗೆ ಹಿಂದಿರುಗಿದಾಗ ಏನೆಲ್ಲ ನಡೆಯಿತು ಎಂದು ಅಮ್ಮ ಕೇಳಿದರೆ ತಾನು ಹೇಳುವುದಾದರೂ ಏನೆಂದು? ತನ್ನ ಮಲಗುವ ಕೋಣೆಯ ಬಾಗಿಲನ್ನು ತೆರೆದು, ತಾಳವಿದ

ಬಾರಿ ಹಾಸಿಗೆಯನ್ನು ಗಮನಿಸಿದಾಗ, ಅವಳಲ್ಲಿ ಹೇಗೆ ಹೊರಹಾರಬಹುದು ಎಂಬುದನ್ನು ಕಲ್ಪಿಸಿಕೊಳ್ಳುತ್ತಿದ್ದಳು. ಬೀಗಗಳು ಹಾಕಿದಂತೆಯೇ ಇವೆ. ಯಾರೂ ಕೋಣೆಯೊಳಕ್ಕೆ ಬಂದಿಲ್ಲ, ಹೊರ ಹೋಗಿಲ್ಲ, ಆದ್ದಾಗ್ಯೂ ಅವಳು ಅಲ್ಲಿಲ್ಲ, ಆ ಕೋಣೆಯಲ್ಲೆಲ್ಲಾ ಹುಡುಕಾಡುತ್ತ, ಊಹಾಪೋಹಗಳಲ್ಲಿ ತೊಡಗಿ ವಿಸ್ಮಯಗೊಳ್ಳುತ್ತ, 'ಆ ಹುಡುಗಿಗೆ ಏನಾಗಿರಬಹುದು' ಎನ್ನುವ ಉದ್ಗಾರದೊಂದಿಗೆ ಗಡಿಬಿಡಿಯಿಂದ ಅತ್ತಿತ್ತ ಓಡಾಡುತ್ತ, ಹುಡುಕುವ, ಎದೆಗುಂದಿದ ತನ್ನ ತಾಯಿಯ ಚಲನವಲನಗಳನ್ನು ಅವಳು ಊಹಿಸಿದಳು. ಆ ದೃಶ್ಯ ಅವಳ ಕಣ್ಣಮುಂದೆ ಕಟ್ಟಿದಂತಿತ್ತು, ನೆರೆಹೊರೆಯವರು ಬರುವರು. ಬಂದವರೇ ಅವಳು ಕಾಣದಾಗಿರುವ ಬಗ್ಗೆ ತಮ್ಮ ಪ್ರತಿಕ್ರಿಯೆಗಳನ್ನು- ಕೆಲವಂತೂ ಮತ್ಸರದಿಂದ ಹುಟ್ಟಿದಂಥವು- ಹೆಣೆಯತೊಡಗುವರು. ತಮ್ಮದೇ ಆದ ನಿರ್ದಿಷ್ಟ ಆಲೋಚನಾಶೈಲಿಯನ್ನು ಅನುಸರಿಸಿ ಪ್ರತಿಯೊಬ್ಬರೂ ಯೋಚಿಸತೊಡಗುವರು. ಆ ದೊಡ್ಡ ಮನೆಯಲ್ಲಿ ತನ್ನ ತಾಯಿ, ಎದೆಗುಂದಿದ ತನ್ನ ತಾಯಿ, ಮಗಳ ಹೆಸರು ಹಿಡಿದು ಕೂಗುತ್ತ ಎಲ್ಲ ಮೊಗಸಾಲೆಗಳಲ್ಲೂ ಓಡುವಾಗ, ಪ್ರತಿಯೊಬ್ಬರೂ ಅತ್ಯಂತ ತರ್ಕಬದ್ಧವಾದ, ಕಡೇಪಕ್ಷ ಅತ್ಯಂತ ಹಿತವೆನಿಸುವ, ವಿವರಣೆಯನ್ನು ನೀಡಲು ಪ್ರಯತ್ನಿಸುತ್ತಿರುತ್ತಾರೆ.

ಆಗವಳು ಅಲ್ಲಿರುತ್ತಾಳೆ. ಆ ಕ್ಷಣವನ್ನು ಅವಳು ಅದರ ಎಲ್ಲ ವಿವರಗಳಲ್ಲಿ, ಒಂದು ಮೂಲೆಯಿಂದ, ತಾರಸಿಯಿಂದ ಗೋಡೆಗಳ ಸಂದುಗೊಂದುಗಳಿಂದ, ಎಲ್ಲಿಂದಲಾದರೂ ಸರಿ, ಅತ್ಯುತ್ತಮ ಕೋನದಿಂದ ತನ್ನ ಅಶರೀರ ಸ್ಥಿತಿಯ ರಕ್ಷೆಯಲ್ಲಿ, ತನ್ನ ಆಕಾಶ-ಕಾಲ-ರಹಿತ ಸ್ಥಿತಿ ತನಗೊದಗಿಸಿರುವ ಅನುಕೂಲದ ಲಾಭಪಡೆದು ಧ್ಯಾನಿಸುತ್ತಾಳೆ. ಅದರ ಬಗ್ಗೆ ಯೋಚಿಸುತ್ತಿದ್ದ ಅವಳಿಗೆ ಆ ಯೋಚನೆಯೇ ಸಂಕಟವಾಗಿ, ನೆಮ್ಮದಿಯೆಲ್ಲ ಕದಡಿದಂತಾಯಿತು. ಅವಳ ತಪ್ಪು ಈಗವಳ ಅರಿವಿಗೆ ಬಂತು. ಅವಳು ಯಾವ ವಿವರಣೆಯನ್ನೂ ನೀಡುವ, ಯಾವ ಗೊಂದಲವನ್ನೂ ಪರಿಹರಿಸುವ, ಯಾರನ್ನೂ ಸಮಾಧಾನಿಸುವ ಸ್ಥಿತಿಯಲ್ಲಿರಲಿಲ್ಲ, ಜೀವದಿಂದಿರುವ ಯಾವ ಜೀವಿಗೂ ಅವಳ ಪರಿವರ್ತನೆಯ ಬಗ್ಗೆ ತಿಳಿಸುವಂತಿರಲಿಲ್ಲ.

ಅವಳಿಗೊಂದು ಬಾಯಿ ಇರದು, ತೋಳುಗಳು ಇರದು ಈಗ- ಬಹುಶಃ ಇದೊಂದೇ ಬಾರಿ ಅವುಗಳ ಅಗತ್ಯ ಅಷ್ಟು ತೀವ್ರವಾಗಿ ಅವಳಿಗೆ ಕಂಡುಬಂದದ್ದು. ಅವಳ ಇರವನ್ನು ಸಾರುವಂತೆ, 'ಆ ಮೂಲೆಯಲ್ಲಿ ಅವಳಿದ್ದಾಳೆ; ತ್ರಿಪ್ರಮಾಣ ಜಗತ್ತಿನಿಂದ ಬೇರ್ಪಟ್ಟು ಸಂಪರ್ಕ ಕಲ್ಪಿಸಲು ಸಾಧ್ಯವೇ ಆಗದಷ್ಟು ದೂರದಲ್ಲಿ ಅವಳಿದ್ದಾಳೆ' ಎಂದು ಎಲ್ಲರಿಗೂ ತಿಳಿಸುವಂತಹ ಬಾಯಿ, ತೋಳುಗಳು ಇಲ್ಲದೆ ಹೋಗುವವು. ಅವಳ ಹೊಸ ಬದುಕಿನಲ್ಲಿ, ಅವಳು ಒಬ್ಬಂಟಿಯಾಗಿ ಯಾವುದೇ ರಾಗ ಭಾವಗಳನ್ನು ಗ್ರಹಿಸಲು ಸಾಧ್ಯವಾಗದ ಸ್ಥಿತಿಯಲ್ಲಿದ್ದಳು. ಆದರೆ ಪ್ರತಿಯೊಂದು ಕ್ಷಣವೂ ಅವಳ ಪ್ರಪಂಚದ ಹೊರಗೆ ಚಲಿಸುತ್ತಿದ್ದ ಆ ಮತ್ತೊಂದು ವಿಶ್ವದ ಭೌತಿಕ ಪ್ರಜ್ಞೆ ಅವಳಲ್ಲಿ ಮಿಡಿಯುತ್ತ ಯಾವುದೋ ಒಂದು ಬಗೆಯ ತೀವ್ರ ಸಂವೇದನೆ ಉಂಟಾಯಿತು.

ಅವಳು ಕಿವುಡಿಯಾಗಿದ್ದಳು, ಕುರುಡಿಯಾಗಿದ್ದಳು. ಆದರೆ ಆ ಶಬ್ದದ ಬಗ್ಗೆ, ಆ ನೋಟದ ಬಗ್ಗೆ, ಅವಳಲ್ಲಿ ಪೂರ್ಣ ಅರಿವಿತ್ತು, ಅಲ್ಲಿ ಆ ಉನ್ನತ ಜಗತ್ತಿನ ಎತ್ತರಗಳಲ್ಲಿ ಯಾತನೆಯ ಪರಿಸರವೊಂದು ಅವಳನ್ನು ಸುತ್ತುವರಿದಿದೆಯೆಂಬುದು ಅವಳ ಅನುಭವಕ್ಕೆ ಬರತೊಡಗಿತು.

ಒಂದೇ ಒಂದು ಘಳಿಗೆಗೆ ಮುನ್ನ-ನಮ್ಮ ಐಹಿಕ ಪ್ರಪಂಚದ ಮಾನಕದಲ್ಲಿ ಅವಳು ಸ್ಥಿತ್ಯಂತರ ಹೊಂದಿದ್ದಳು. ತನ್ನ ಹೊರ ಪ್ರಪಂಚದ ವೈಶಿಷ್ಟ್ಯಗಳು, ವಿಶೇಷ ಗುಣಗಳು ಈಗಷ್ಟೇ ಅವಳ ಅರಿವಿಗೆ ಬರತೊಡಗಿದ್ದವು. ಅವಳ ಸುತ್ತಲೂ ಸಂಪೂರ್ಣವಾದ, ಆಳವಾದ, ತಳವಿಲ್ಲದ ಅಂಧಕಾರ ತಿರುಗುತ್ತಿತ್ತು. ಆ ಅಂಧಕಾರ ಎಷ್ಟು ಹೊತ್ತು ಉಳಿಯಬಹುದು? ಅನಂತ ಕಾಲದವರೆಗೂ ಅವಳು ಆ ಕತ್ತಲಿಗೆ ಹೊಂದಿಕೊಂಡಿರಬೇಕೆ? ತನ್ನ ಗಮನವನ್ನು ಸಂಪೂರ್ಣವಾಗಿ ಕೇಂದ್ರೀಕರಿಸಿ, ಆ ದಟ್ಟ, ಅಭೇದ್ಯ ಮಂಜಿನಲ್ಲಿ ಮುಳುಗಿಹೋದ ತನ್ನನ್ನು ತಾನು ನೋಡಿಕೊಂಡಾಗ ಅವಳ ಯಾತನೆ ತೀವ್ರವಾಯಿತು. ತಾನು ನರಕದ ಅಂಚಿನಲ್ಲಿರಬಹುದೆ? ಅವಳು ನಡುಗಿದಳು. ಆ ಬಗ್ಗೆ ಅಲ್ಲಿವರೆಗೆ ಕೇಳಿದ್ದೆಲ್ಲವನ್ನೂ ಅವಳು ನೆನಪಿಗೆ ತಂದುಕೊಂಡಳು. ತಾನು ನಿಜವಾಗಿಯೂ ನರಕದಲ್ಲಿದ್ದರೆ ಇತರ ಸತ್ತುಹುಟ್ಟಿದ ಮಕ್ಕಳ ಆತ್ಮಗಳು, ... ಸತ್ತ, ಸಾವಿರಾರು ವರ್ಷಗಳಿಂದ ಕಾಯುತ್ತಲೇ ಇರುವ ಮಕ್ಕಳ ಆತ್ಮಗಳು. ಅವಳ ಸುತ್ತಲೂ ತೇಲಾಡುತ್ತಿರಬೇಕು ...

(ಮುಂದಿನ ಪುಟಕ್ಕೆ)



ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್


ಉಳಿದೇ ಬರುವ ಮಡಕೆಗೆ ತಾನು ಗುರಿಯಾಗಿರಬಹುದು. ಬಹುಶಃ ಆ 'ಹುಡುಗ'ನೂ ಅಲ್ಲೇ ಇರಬಹುದು. ತನ್ನ ಆತ್ಮವನ್ನು ದೇಹದತ್ತ ಕೊಂಡೊಯ್ಯುವ ಹೊರದಾರಿಗಾಗಿ ಹುಡುಕಾಡುತ್ತ ಅಲೆಯುತ್ತಿರಬಹುದು.

ಆದರೆ ಇಲ್ಲಿ ಅವಳೇಕೆ ನರಕದ ಅಂಚಿನಲ್ಲಿರಬೇಕು? ಅವಳೇನಾದರೂ ಸತ್ತು ಹೋಗಿರಬಹುದೆ? ಇಲ್ಲ, ಅದೊಂದು ಸ್ಥಿತ್ಯಂತರ ಮಾತ್ರ. ಭೌತಿಕ ಪ್ರಪಂಚದಿಂದ, ಸರಳವಾದ, ಜಟಿಲವಲ್ಲದ, ಎಲ್ಲ ಪರಿಮಾಣಗಳೂ ಅದೃಶ್ಯವಾಗಿರುವಂಥ ಪ್ರಪಂಚಕ್ಕೆ ಸಹಜವೇ ಎನಿಸುವಂಥ ಸ್ಥಿತ್ಯಂತರ. ಈಗವಳು ಆ ಭೂತಲದ ಕ್ರಿಮಿಗಳನ್ನು ಹೊತ್ತುಕೊಂಡಿರಬೇಕಾದ ಪ್ರಮೇಯವಿಲ್ಲ. ಅವಳ ಸೌಂದರ್ಯ ಅವಳಿಂದ ಕಳಚಿ ಬಿದ್ದಿತ್ತು. ಈಗ ಆ ಅಶರೀರ ಸ್ಥಿತಿಯಲ್ಲಿ ಅವಳು ಸಂತೋಷವಾಗಿರಬಹುದು.

ಸ್ಥಳವೊಂದಕ್ಕೆ, ಹಿಂದೆ ಸರಿಯುವ ಇಚ್ಛೆ ಬಲವಾಗಿತ್ತು, ಆದರೆ ಅದಾವುದೋ ಶಕ್ತಿ ಹಾಗೆ ಮಾಡದಂತೆ ಅವಳನ್ನು ತಡೆಹಿಡಿಯಿತು. ಕಾಣದ ಆ ಅಪರಿಚಿತ ಪ್ರದೇಶದಲ್ಲಿ ಉತ್ತಮ ಭವಿಷ್ಯದ ಭರವಸೆಯೊಂದು ಅವಳಿಗೆ ಗೋಚರವಾಯಿತು. ಹೌದು, ಅವತರಿಸಬಹುದಾದ ಜೀವಿಯೊಂದು ಆ ಮನೆಯಲ್ಲಿ ಅವಳ ಗಮನಕ್ಕೆ ಬಂತು: ಆ ಬೆಕ್ಕು. ಕೂಡಲೆ ಅವಳು ಹಿಂದೆಮುಂದೆ ನೋಡಿದಳು. ಪ್ರಾಣಿಯೊಂದರ ದೇಹದಲ್ಲಿ ಜೀವಿಸುವ ಸ್ಥಿತಿಯನ್ನು ಒಪ್ಪಿಕೊಳ್ಳುವುದು ಅವಳಿಗೆ ಅಹಿತವೆನಿಸಿತು. ಅದೇ ಕ್ಷಣದಲ್ಲಿ ತಾನು ಬಿಳುಪಾದ ಮೃದುವಾದ ಚರ್ಮ ಹೊಂದಬಹುದು, ತನ್ನ ಮಾಂಸಖಂಡಗಳಲ್ಲಿ ಶಕ್ತಿಗೂಡಿಸಿಕೊಂಡು ಜಿಗಿಯಬಹುದು ಎನಿಸಿತು. ತನ್ನ ಕಣ್ಣುಗಳು ಕತ್ತಲಲ್ಲಿ ಹಸಿರು ಕಲ್ಲಿದ್ದಲುಗಳ ಜೋಡಿಯಂತೆ ಹೊಳೆಯುತ್ತಿರುವ

ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೇ....

ಅಷ್ಟಾದರೂ-ಓಹ್ -ಸಂಪೂರ್ಣ ಆನಂದ ದಕ್ಕಿಲ್ಲ. ಏಕೆಂದರೆ ಅವಳ ಅತ್ಯುನ್ನತ ಬಯಕೆ, ಕಿತ್ತಳೆ ಹಣ್ಣನ್ನು ತಿನ್ನುವ ಅತೀವ ತಹತಹಿಕೆ ಮೇರೆ ಮೀರಿತ್ತು. ತನ್ನ ಹಿಂದಿನ ಸ್ಥಿತಿಯಲ್ಲೇ ಮುಂದುವರಿಯುವ ಬಯಕೆ ತರಿಸಿದ್ದು ಅದೊಂದು ಮಾತ್ರವೇ ಇರಬೇಕು, ಸ್ಥಿತ್ಯಂತರದ ನಂತರವೂ ಆ ಆಮ್ಲತೆಯ ತೀವ್ರ ಬಯಕೆಯನ್ನು ಪೂರೈಸಿಕೊಳ್ಳುವ ಸಾಧ್ಯತೆಯೊಂದೇ ಇರಬೇಕು. ಬೇರೇನಿಲ್ಲದಿದ್ದರೂ ಸರಿ, ಕಿತ್ತಳೆ ಹಣ್ಣುಗಳ ತಣ್ಣನೆಯ ಹುಳಿಹುಳಿ ಸಾಮೀಪ್ಯವನ್ನು ಅನುಭವಿಸುವ ಸಲುವಾಗಿ ಅಡಿಗೆಸಾಲೆಯನ್ನು ಸೇರುವತ್ತ ತನ್ನ ಗಮನವನ್ನು ಕೇಂದ್ರೀಕರಿಸಲು ಪ್ರಯತ್ನಿಸಿದಳು. ಈಗಿನ ಅವಳ ಲೋಕದ ಹೊಸದೊಂದು ಲಕ್ಷಣಗುಣ ಅವಳಿಗೆ ಗೋಚರವಾದದ್ದು ಆ ಘಳಿಗೆಯಲ್ಲೇ. ಅವಳು ಎಲ್ಲೆಲ್ಲಿಯೂ ಇದ್ದಳು. ಮನೆಯ ತುಂಬೆಲ್ಲ, ಅಂಗಳದಲ್ಲಿ, ತಾರಸಿಯ ಮೇಲೆ, 'ಹುಡುಗ'ನ ಕಿತ್ತಳೆ ಮರದಲ್ಲೂ, ಅಲ್ಲಿಂದಾಚೆಗಿನ ಸಮಸ್ತ ಭೌತಿಕ ಪ್ರಪಂಚದಲ್ಲೂ ಅವಳು ಇದ್ದಳು. ಆದರೂ ಅವಳು ಎಲ್ಲೂ ಇರಲಿಲ್ಲ, ಅವಳು ಮತ್ತೆ ಪ್ರಜ್ಞಾಬದ್ಧಗೊಂಡಳು. ಅವಳ ಮೇಲಿನ ಹತೋಟಿಯನ್ನೇ ಅವಳು ಕಳೆದುಕೊಂಡಿದ್ದಳು.



ಈಗವಳು ತನಗಿಂತ ಬಲಶಾಲಿಯಾದ ಮನಃ ಶಕ್ತಿಯೊಂದರ ಅಧೀನದಲ್ಲಿದ್ದಳು. ಅವಳೊಬ್ಬ ಅಪ್ರಯೋಜಕ, ವಿಚಾರಹೀನ, ಕೆಲಸಕ್ಕೆ ಬಾರದ ಜೀವಿಯಾಗಿದ್ದಳು. ಏಕೆಂದು ತಿಳಿಯದೆಯೇ ಅವಳು ಅತ್ಯಂತ ದುಃಖಿತಳಾದಳು. ತನ್ನ ಸೌಂದರ್ಯದ ಬಗ್ಗೆ ತನ್ನನ್ನು ಅವಿವೇಕದಿಂದ ನಾಶಮಾಡಿದ್ದ ಸೌಂದರ್ಯದ ಬಗ್ಗೆ ತೀವ್ರ ಹಂಬಲದ ಭಾವ ಆವರಿಸತೊಡಗಿತು.

ಆದರೆ ಒಂದು ಮಹೋತ್ತಮ ವಿಷಯ ಅವಳಲ್ಲಿ ಮತ್ತೆ ಚೈತನ್ಯ ತುಂಬಿತು. ಶುದ್ಧ ಆತ್ಮಗಳು ತಮ್ಮ ಮನೋ ಇಚ್ಛೆಯಂತೆ ಯಾವುದಾದರೂ ದೇಹವೊಂದನ್ನು ಹೋಗಬಹುದು ಎಂಬ ವಿಷಯ ಅವಳಿಗೆ ತಿಳಿಯದೆ? ಹೌದು, ಪ್ರಯತ್ನಿಸಲು ಏನಡ್ಡಿ? ತನ್ನ ಮನೆಯಲ್ಲಿ ವಾಸವಾಗಿರುವ ಯಾವ ಜೀವಿಯನ್ನು ಭಾವಣಿಯ ಮೇಲೆ ಏರಿಸಲು ಸಾಧ್ಯ ಎಂಬುದನ್ನು ಅವಳು ನೆನಪಿಗೆ ತಂದುಕೊಳ್ಳಲು ಯತ್ನಿಸಿದಳು. ಅವಳ ಉದ್ದೇಶ ಈಡೇರುವುದಾದರೆ ಅವಳಿಗೆ ತೃಪ್ತಿ: ಕಿತ್ತಳೆ ಹಣ್ಣನ್ನು ತಿನ್ನಬಹುದಿತ್ತು. ಅವಳು ನೆನಪನ್ನು ಕೆದಕಿದಳು. ಸಾಮಾನ್ಯವಾಗಿ ಆ ಹೊತ್ತಿನಲ್ಲಿ ಆಳುಗಳು ಯಾರೂ ಅಲ್ಲಿರುತ್ತಿರಲಿಲ್ಲ, ಅವಳ ತಾಯಿ ಇನ್ನೂ ಬಂದಿರಲಿಕ್ಕಿಲ್ಲ, ಆದರೆ ಕಿತ್ತಳೆ ಹಣ್ಣನ್ನು ತಿನ್ನುವ ಬಯಕೆ, ತನ್ನ ದೇಹಕ್ಕಿಂತ ಬೇರೆಯಾದ ಇನ್ನೊಂದು ಜೀವಿಯ ದೇಹದಲ್ಲಿ ಮೈವೆತ್ತುವುದನ್ನು ಅನುಭವಿಸುವ ಕುತೂಹಲದೊಂದಿಗೆ ಸೇರಿಕೊಂಡು ಕೂಡಲೆ ಅವಳನ್ನು ಕ್ರಿಯೆಗೆ ಹಚ್ಚಿತು. ಹಾಗಿದ್ದರೂ ತಾನು ಅವತರಿಸಬಹುದಾದಂಥ ಯಾವ ವ್ಯಕ್ತಿಯೂ ಅಲ್ಲಿರಲಿಲ್ಲ ಆ ಕಾರಣವೇ ಅನಾಥಪ್ರಜ್ಞೆಯನ್ನು ತರಿಸುವಂಥದಾಗಿತ್ತು. ಮನೆಯಲ್ಲಿ ಮನುಷ್ಯರೆಂಬುವರೇ ಇರಲಿಲ್ಲ.

ಬಾಹ್ಯ ಪ್ರಪಂಚದಿಂದ ದೂರವಾಗಿ, ತನ್ನ ಪರಿಮಾಣಶೂನ್ಯ ಜಗತ್ತಿನಲ್ಲಿ ಆ ಮೊದಲ ಹಣ್ಣನ್ನು ತಿನ್ನಲಾರದೆ ನಿರಂತರವಾಗಿ ಬದುಕಬೇಕಾಗುತ್ತದೆ, ಅದೂ ಒಂದು ಅವಿವೇಕದಿಂದಾಗಿ. ಆ ಪ್ರತಿಕೂಲ ಸೌಂದರ್ಯದ ಸ್ಥಿತಿಯನ್ನು ಇನ್ನಷ್ಟು ವರ್ಷಗಳು ಹೇಗಾದರೂ ಸಹಿಸಿಕೊಂಡಿದ್ದರೆ ಚೆನ್ನಾಗಿತ್ತು, ಹೀಗೆ ತನ್ನನ್ನು ತಾನು ಸಂಪೂರ್ಣವಾಗಿ ಇಲ್ಲವಾಗಿಸಿಕೊಂಡು, ಅಪ್ರಯೋಜಕಳನ್ನಾಗಿಸಿಕೊಂಡು ಸೆರೆಸಿಕ್ಕ ಮೃಗದಂತಾಗಿತ್ತು ಅವಳ ದುಃಸ್ಥಿತಿ. ಆದರೆ ಆ ಹೊತ್ತಿಗೆ ಕಾಲ ಮಿಂಚಿಹೋಗಿತ್ತು,

ನಿರಾಶಳಾದ ಅವಳಲ್ಲಿ ಈ ಜಗತ್ತಿನ ದೂರದೊಂದು ಪ್ರದೇಶಕ್ಕೆ, ತನ್ನೆಲ್ಲ ಐಹಿಕ ಆಕಾಂಕ್ಷೆಗಳನ್ನು ಮರೆಸುವಂಥ

ಭೀತಿ ಅವಳನ್ನು ಸಂಪೂರ್ಣವಾಗಿ ಆವರಿಸಿತ್ತು ಮತ್ತು ಅಲ್ಲಿಯೇ ಸ್ಥಾವರಗೊಂಡು, ಹಿಡಿದ ಪಟ್ಟು ಬಿಡದಂತೆ, ಜಡವಾಗಿದೆಯೋ ಎನ್ನುವಂತೆ, ಆ ಕೋಣೆಯನ್ನು ಬಿಟ್ಟು ಹೊರಡಬಾರದೆಂದು ಸಂಕಲ್ಪ ಮಾಡಿದ ಅದೃಶ್ಯ ವ್ಯಕ್ತಿಯಂತೆ, ಅಲ್ಲಿಯೇ ಉಳಿದಿತ್ತು. ಮನಸ್ಸು ಕಲಕುವ ಅಂಶವೆಂದರೆ ಆ ಭೀತಿಗೆ ಯಾವುದೇ ಆಧಾರವಿರಲಿಲ್ಲ. ಅದೊಂದು ವಿಶಿಷ್ಟ ಬಗೆಯ ಭೀತಿ. ವಿನಾಕಾರಣ ಹುಟ್ಟಿದ ಭೀತಿ. 'ಯಾಕೋ ಗೊತ್ತಿಲ್ಲ. ಆದರೆ ತುಂಬಾ ಭಯ' ಎನಿಸುವಂಥದ್ದು.

ಅನುಭವವುಂಟಾಯಿತು. ಅಷ್ಟೇ ಅಲ್ಲದೆ, ತನಗೆ ಬಿಳಿಯ ಚೂಪಾದ ಹಲ್ಲುಗಳು ಮೂಡಿ, ತನ್ನ ಮಾರ್ಜಾಲ ಹೃದಯದಿಂದ ತನ್ನ ತಾಯಿಯತ್ತ ಮನಃಪೂರ್ತಿಯಾದ ಒಳ್ಳೆಯ ನಗುವನ್ನು ಬೀರಲು ಸಾಧ್ಯವಾಗಬಹುದು. ಆದರೆ, ಓ ಹಾಗಾಗಲು ಸಾಧ್ಯವಿಲ್ಲ, ಬೆಕ್ಕೊಂದರ ದೇಹದಲ್ಲಿ ತನ್ನನ್ನು ತಾನು ಕಲ್ಪಿಸಿಕೊಂಡಳು. ಮನೆಯ ಮೊಗಸಾಲೆಗಳಲ್ಲಿ ಮತ್ತೊಮ್ಮೆ ಓಡಾಡುತ್ತಿರುವಂತೆ, ನಾಲ್ಕು ತಾಪತ್ರಯದ ಕಾಲುಗಳ ಮೇಲೆ ನಡೆದಾಡುತ್ತ.... ಮತ್ತು ಆ ಬಾಲ, ಯಾವುದೇ ಲಯವಿಲ್ಲದೆ, ತನ್ನ ಮನೋಇಚ್ಛೆಗೆ ಯಾವ ಸಂಬಂಧವೂ ಇಲ್ಲವೆಂಬಂತೆ, ತನ್ನಂತೆ ತಾನೆ ಚಲಿಸುವ ಆ ಬಾಲ? ಹೊಳೆಯುವ ಹಸಿರು ಕಣ್ಣುಗಳ ಮೂಲಕ ಪ್ರಪಂಚ ಹೇಗೆ ಕಾಣಬಹುದು? ರಾತ್ರಿಯ ವೇಳೆ, ಆಕಾಶದತ್ತ ನೋಡುತ್ತ ತನ್ನ ಬೆನ್ನ ಮೇಲೆ ಮಲಗಿ, ಇಬ್ಬನಿ ಕುಡಿಯುತ್ತ ಮಲಗಿರುವ ಹುಡುಗನ ಮುಖದ ಮೇಲೆ ಚೆಂಬೆಳಕಿನ ಸಿಮೆಂಟನ್ನು ಹಾಕದಿರುವಂತೆ ಮಿಯಾಂವ್‌ಗುಡಲು ಹೋಗಬಹುದು. ತನ್ನ ಮಾರ್ಜಾಲ ಸ್ಥಿತಿಯಲ್ಲಿ ತನಗೂ ಭಯವೆನಿಸಬಹುದು. ಬಹುಶಃ ಕಡೆಯಲ್ಲಿ ಆ

ಮಾಂಸಾಹಾರಿ ಹಲ್ಲಿನಿಂದ ಕಿತ್ತಳೆ ಹಣ್ಣನ್ನು ತಿನ್ನಲಾಗದೆಯೇ ಹೋಗಬಹುದು. ಅಲ್ಲೇ ಆ ಕ್ಷಣದಲ್ಲೇ, ತನ್ನ ಅಸ್ತಿತ್ವದ ಮೂಲದಿಂದ ಹುಟ್ಟಿದ ತಣ್ಣನೆಯ ಕೊರೆತ ಅವಳ ಇಡೀ ಇರವನ್ನೇ ನಡುಗಿಸಿತು. ತನ್ನ ನಾಲಿಗೆಯ ಮೇಲೆ, ತನ್ನ ಗಂಟಲಲ್ಲಿ, ಒಂದು ದಿನ ತನ್ನ ಪಟ್ಟೆಪಟ್ಟೆ ಜೀವಿತತ್ವದಲ್ಲಿ ಇಲಿಯೊಂದನ್ನು ತಿನ್ನುವ ತಡೆಯಲಾಗದ ಬಯಕೆಯೊಂದು ಮೂಡಬಹುದೆಂಬ ಭಯ ಅವಳನ್ನು ಆವರಿಸಿತು. ಬಹುಶಃ ಅವಳ ಚೇತನ ಬೆಕ್ಕಿನ ದೇಹದಲ್ಲಿ ವಾಸಿಸತೊಡಗಿದ ಮೇಲೆ, ಕಿತ್ತಳೆಹಣ್ಣನ್ನು ತಿನ್ನುವ ಬಯಕೆಯೇ ಮಾಯವಾಗಬಹುದು; ಅದರ ಬದಲಿಗೆ ಇಲಿಯೊಂದನ್ನು ತಿನ್ನುವ ಅಹ್ಯವಾದ ಅತೀವ ಬಯಕೆಯುಂಟಾಗಬಹುದು. ಅದರ ಬಗ್ಗೆಯೇ ಯೋಚಿಸುತ್ತ ಬೆನ್ನಟ್ಟಿಕೊಂಡು ಹೋಗಿ ಇಲಿಯನ್ನು ಹಿಡಿದ ಮೇಲೆ, ತನ್ನ ಬಾಯಲ್ಲಿ ಕಚ್ಚಿಕೊಂಡ ಅದನ್ನು ನೆನೆದು, ಅವಳು ತತ್ತರಿಸಿದಳು. ಬಿಡಿಸಿಕೊಂಡು ತನ್ನ ಬಿಲಕ್ಕೆ ಮರಳುವ ಸನ್ನಾಹದಲ್ಲಿ, ಬಿಡಿಸಿಕೊಂಡು ಓಡುವ ತನ್ನ ಕಡೆಯ ಯತ್ನಗಳಲ್ಲಿ, ಇಲಿಯ ಒದ್ದಾಟವನ್ನು ಅವಳು ಕಲ್ಪಿಸಿಕೊಂಡಳು, ಇಲ್ಲ, ಅದೊಂದನ್ನು ಬಿಟ್ಟು ಇನ್ನೇನಾದರೂ ಸರಿ, ಅನಂತಕಾಲದವರೆಗೂ ಅಲ್ಲಿಯೇ ಉಳಿದು, ಆ ಶುದ್ಧ ಆತ್ಮಗಳಿಂದ ತುಂಬಿದ, ದೂರದ ನಿಗೂಢ ಜಗತ್ತಿನಲ್ಲಿ ಉಳಿಯುವುದೇ ವಾಸಿ ಎನಿಸಿತು.

ಆದರೆ ಎಲ್ಲರ ನೆನಪಿನಿಂದ ಅಳಿಸಿ ಹೋದಂಥ ಸ್ಥಿತಿಯಲ್ಲಿ ಬದುಕನ್ನು ಒಪ್ಪಿಕೊಳ್ಳುವುದು ಅವಳಿಗೆ ತುಂಬಾ ಕಷ್ಟವೆನಿಸಿತು. ಇಲಿಯನ್ನು ತಿನ್ನುವ ಬಯಕೆಯಾದರೂ ಅವಳಲ್ಲಿ ಮೂಡಬೇಕೇಕೆ? ಆ ಸ್ತ್ರೀ-ಮಾರ್ಜಾಲ ಸಂಗಮ ಸ್ಥಿತಿಯಲ್ಲಿ ಮೇಲುಗೈ ಯಾರದಿರಬಹುದು? ದೇಹದ ಪಶುಸಹಜ ಪ್ರವೃತ್ತಿ ತನ್ನ ಮೇಲುಗೈ ಸಾಧಿಸುವುದೋ ಅಥವಾ ಹೆಣ್ಣಿನ ತೀವ್ರ ಮನೋಸ್ವೇಚ್ಛೆಯೋ? ಉತ್ತರ ಸ್ಫಟಿಕದಷ್ಟು ಸುಸ್ಪಷ್ಟವಾಗಿತ್ತು, ಹೆದರಲು ಕಾರಣವೇ ಇರಲಿಲ್ಲ, ಅವಳು ಬೆಕ್ಕಿನಲ್ಲಿ ಅವತರಿಸಿ ತನ್ನ ಬಯಕೆಯ ಕಿತ್ತಳೆಹಣ್ಣನ್ನು ತಿನ್ನುವಳು. ಅಷ್ಟೇ ಅಲ್ಲ, ಸುಂದರ ಹೆಣ್ಣಿನ ಗುಣವುಳ್ಳ ಅಗಾಧ ಬುದ್ಧಿಶಕ್ತಿಯ ಮಾರ್ಜಾಲವಾಗಿ, ತಾನೊಂದು ವಿಶಿಷ್ಟ ಜೀವಿಯಾಗ ಬಲ್ಲಳು. ತಾನು ಎಲ್ಲರ ಆಕರ್ಷಣೆಯ ಕೇಂದ್ರವಾಗ ಬಲ್ಲಳು.... ಆಗಷ್ಟೆ ಮೊದಲ ಬಾರಿಗೆ ಅವಳ ಅರಿವಿಗೆ ಬಂದ ವಿಷಯ- ತನ್ನೆಲ್ಲ ಸದ್ಗುಣಗಳನ್ನು ಮೀರಿ, ತನ್ನ ಮೇಲೆ ಪ್ರಭುತ್ವ ಸಾಧಿಸಿದ್ದುದು, ಭೌತಿಕ ಆಯಾಮ ಮೀರಿದ ಸೂಕ್ಷ್ಮತಮ ಹೆಣ್ಣೊಬ್ಬಳ ನಿರರ್ಥಕತೆ.

ಮೈಯೆಲ್ಲ ಕಣ್ಣಾಗಿ, ಕೀಟವೊಂದು ತನ್ನ ಸ್ಪರ್ಶ ತಂತುವನ್ನು ನಿಮಿರಿಸುವಂತೆ, ಇವಳು ತನ್ನೆಲ್ಲ ಶಕ್ತಿಯನ್ನು ಒಗ್ಗೂಡಿಸಿ ಇಡೀ ಮನೆಯನ್ನು ಚೆಕ್ಕಾಗಿ ಶೋಧಿಸಿದಳು. ನಿದ್ದೆ ಕಳೆದು ಏಳುವಾಗ, ಸೂರ್ಯನಕಾಂತಿಯತ್ತ ಹೊರಳುವ ಹೀಲಿಯೋಟ್ರೋಪ್ ಕುಡಿಯೊಂದನ್ನು ಬಾಯಲ್ಲಿ ಕಚ್ಚಿಕೊಂಡೇ ಎಚ್ಚರಗೊಳ್ಳುತ್ತೇನೆ ಎಂದು ಕನಸುತ್ತ ಆ ನಿಶಾಚರ ಬೆಕ್ಕು ಬೆಚ್ಚನೆಯ ಒಲೆಯ ಮೇಲ್ಭಾಗದಲ್ಲೇ ಇರಬೇಕು. ಇಲ್ಲ; ಆದರೆ ಬೆಕ್ಕು ಅಲ್ಲಿರಲಿಲ್ಲ, ಮತ್ತೆ ಅಲ್ಲೆಲ್ಲ ತಡಕಾಡಿದಳು. ಆದರೆ ಆ ಒಲೆಯೂ ಅಲ್ಲಿ ಕಾಣಲಿಲ್ಲ. ಅಡುಗೆ ಮನೆಯ ಸ್ವರೂಪವೂ ಬದಲಾಗಿ ಹೋಗಿತ್ತು. ಮನೆಯ ಮೂಲೆಗಳೆಲ್ಲ ಅವಳಿಗೆ ಅಪರಿಚಿತವೆನಿಸಿದವು. ಇಲ್ಲಣ ತುಂಬಿದ ಮೂಲೆಗಳಾಗಿರಲಿಲ್ಲ ಅವು. ಬೆಕ್ಕು ಎಲ್ಲೂ ಕಾಣಸಿಗಲಿಲ್ಲ, ಛಾವಣಿಯ ಮೇಲೆ, ಮರಗಳಲ್ಲಿ, ಮೋರಿಗಳಲ್ಲಿ, ಹಾಸಿಗೆಯ ಮೇಲೆ, ಉಗ್ರಾಣದಲ್ಲಿ ಎಲ್ಲೆಲ್ಲೂ ಹುಡುಕಿದಳು. ಎಲ್ಲವೂ ಗೊಂದಲಮಯವಾಗಿ ತೋರಿತು. ತನ್ನ ಪೂರ್ವಿಕರ ಚಿತ್ರಪಟಗಳನ್ನು ನಿರೀಕ್ಷಿಸಿದ್ದ ಸ್ಥಾನದಲ್ಲಿ ಪಾಷಾಣದ ಶೀಷೆಯೊಂದು ಮಾತ್ರ ಕಂಡಿತು. ಅಲ್ಲಿಂದಾಚೆ, ಆ ಮನೆಯ ಎಲ್ಲೆಡೆಯಲ್ಲೂ ಪಾಷಾಣವೇ ಕಾಣಿಸಿತು. ಆದರೆ ಆ ಬೆಕ್ಕು ಮಾಯವಾಗಿತ್ತು. ಮುಂಚಿನಂತಿರದೆ, ಆ ಮನೆಯ ಸ್ವರೂಪವೇ ಬದಲಾಗಿತ್ತು, ಅವಳ ವಸ್ತುಗಳೆಲ್ಲ ಏನಾದವು? ಅವಳ ಆಪ್ತ ಹದಿಮೂರು ಪುಸ್ತಕಗಳು? ದಟ್ಟವಾದ ಪಾಷಾಣದ ಪದರದಿಂದ ಆವೃತ್ತವಾಗಿದ್ದವೇಕೆ? ಅಂಗಳದಲ್ಲಿದ್ದ ಕಿತ್ತಳೆಮರ ನೆನಪಾಯಿತು. ಅದಕ್ಕಾಗಿ ಹುಡುಕಾಡಿ, ನೀರಿನ ಗುಂಡಿಯಲ್ಲಿ ಹುಡುಗನನ್ನು ಮತ್ತೆ ಕಾಣಲು ಯತ್ನಿಸಿದಳು. ಆದರೆ ಕಿತ್ತಳೆಮರ ಆ ಸ್ಥಳದಲ್ಲಿರಲಿಲ್ಲ, ಅಷ್ಟೇ ಅಲ್ಲ, ಹುಡುಗ ದಟ್ಟ ಕಾಂಕ್ರೀಟ್ ಕಟ್ಟೆಯೊಂದರ ಅಡಿಯಲ್ಲಿ ಬೂದಿಯೊಂದಿಗೆ ಕಲೆತುಹೋದ ಒಂದು ಹಿಡಿ ಪಾಷಾಣವಾಗಿದ್ದನೇ ಹೊರತು ಮತ್ತೇನೂ ಅಲ್ಲ, ಈಗವಳನ್ನು ನಿಜವಾಗಿಯೂ ನಿದ್ದೆ ಆವರಿಸುತ್ತಿತ್ತು. ಎಲ್ಲವೂ ಬದಲಾಗಿ ಹೋಗಿತ್ತು, ಫಾರ್ಮಸಿಯೊಂದರ ಆಳದಿಂದ ಹೊರಹೊಮ್ಮುವ ಪಾಷಾಣದ ಗಾಢ ವಾಸನೆ ಅವಳ ಮೂಗಿಗೆ ಬಡಿಯಿತು.

ಆಗಷ್ಟೇ ಅವಳ ಅರಿವಿಗೆ ಬಂದು ಅರ್ಥವಾದದ್ದು, ಮೊಟ್ಟಮೊದಲ ಕಿತ್ತಳೆ ಹಣ್ಣನ್ನು ತಿನ್ನುವ ಬಯಕೆ ಉಂಟಾದ ದಿನದಿಂದ, ಈವರೆಗೆ ಮೂರು ಸಾವಿರ ದೀರ್ಘ ವರ್ಷಗಳು ಸರಿದುಹೋಗಿದ್ದವು. ■

ಕಾಗೆಗಳೇ ನೀವೆಲ್ಲಿ ಹೋದಿರಿ?

ಬಯಲ ಬರಿದೆದೆಯ ಟೊಂಗೆಗಳಲಿ
ಕೂತು
ನನ್ನದೇ ಹಾಡುಗಳನ್ನು ಗುನುಗುತ್ತಾ
ಒಕ್ಕಲು ಮನೆಯ ಹೊಲೆಯ ತಂದ
ಸಾವಿನ ಸುದ್ದಿಗೆ ಮುನ್ಸೂಚನೆಯಾದ
ಬಣ್ಣವಿರದ ಬದುಕುಗಳ ಚಹರೆಯಾದ
ಕಾಗೆಗಳೇ ನೀವೆಲ್ಲಿ ಹೋದಿರಿ?

ಅಪ್ಪನ ಛಡಿಯೇಟಿನೊಂದಿಗೆ ಸಿಕ್ಕ
ತಿಂಡಿಯಲಿ ಪಾಲು ಕೇಳುತ್ತಿದ್ದ
ಮುಗ್ಧ ಅಳುವಿನಲ್ಲಿ ಬಾಯಾರಿಕೆ
ಹಿಂಗಿಸಿಕೊಂಡ
ಕಾಗೆಗಳೇ ನೀವೆಲ್ಲಿ ಹೋದಿರಿ?
ಆಲದ ಕೆಳಗೆ ಕೂತು
ಕನಸುಗಳ ಕಸೂತಿ ಎಣೆವಾಗ
ತಲೆಯಂಗಳದಿ ರಂಗವಲ್ಲಿಯಿಟ್ಟ
ಕೃಷ್ಣೆಯರೇ ನೀವೆಲ್ಲಿ ಹೋದಿರಿ?

ಸಾವು ಕಟಕಟೆಗೆ ಬಂದಾಗ
ನ್ಯಾಯಸ್ಥಾನದಲಿ ಕೂತು
ಮರಣಿಸಿದವರ ಬದುಕಿನ ಒಕ್ಕಣಿಕೆ ಬರೆ
ನ್ಯಾಯಾಧೀಶರೇ ನೀವೆಲ್ಲಿ ಹೋದಿರಿ?

ಹಸಿವಿನಿಂದ ತಳಸುಟ್ಟ ಬೆಕ್ಕಿನಂತೆ
ಹೊಯ್ದಾಡುತ್ತಿರುವ ನನಗೆ
ನಿಮ್ಮದೇ ನೆನಪು.

ಅನ್ನದೊಂದಗುಳ ಕಂಡು
ಬಳಗವನೇ ಆಹ್ವಾನಿಸುವ
ನಿಮ್ಮ ಔದಾರ್ಯ
ಬೆಚ್ಚನೆಯ ಅರಮನೆಗಳಲ್ಲಿ ಕೂತು
ಬಿಡುವಿಲ್ಲದೆ ಭಕ್ಷಿಸುವ
ಬಕಾಸುರರಿಗೆ ಬರಲಿ

ಯಾರದೋ ಕುಡಿಗೆ
ಎದೆಯ ಬಿಸುಪುಣಿಸಿ ಜೀವಕೊಟ್ಟ
ನಿಮ್ಮ ಮಾತೃತ್ವ
ಬಂಜೆಯಾದ ನಮ್ಮೊಡಲುಗಳ
ಬಸಿರಾಗಿಸಲಿ.
ಯಾವುದೋ ಧಾವಂತದಿ
ಸುಂದರ ಜಗತ್ತನ್ನು ಹುಡುಕಲ್ಹೊರಟ
ಗೆಳೆಯರೇ

ಕಳೆಗುಂದಿದೊಡನೆ ಹಿಂದಿರುಗಿ
ಇಲ್ಲೊಂದು ಪಾಪಿ ಹೆಣದ ಮೇಲಿನ
ಬುತ್ತಿ ತಿನ್ನುವುದಿದೆ.



■ ಕೈದಾಳ್ ಕೃಷ್ಣಮೂರ್ತಿ

ಆಸ್ತಿ

...ಗಲು-ರಾತ್ರಿಯಲ್ಲೂ ನೆನೆವೆ
... ಅರ್ಧರಾತ್ರಿಯಲ್ಲೂ ಇದನ್ನೇ
...ೇಳುವೆ
...ನಿದರ ಹೆಸರು?
...ನ್ನನ್ನು ಒಂದೇ ಸಮ ಹಿಡಿದಿಟ್ಟಿರುವ
...ಸಿರು?

ಪಲ್ಲಕ್ಕಿ ಪಯಣದ ಮಧ್ಯೆ
ಹೊತ್ತವರು ಕಾಲು ಸೋತು
ನಡು ಮಧ್ಯೆ ಇಳಿಸಿಬಿಟ್ಟ
ರಾಜಕುಮಾರಿ ನಾನು
ಸುತ್ತ ತಿರುಗಾಡುತ್ತಾ
ನೆಲದ ಸ್ಪರ್ಶ
ಹೆಜ್ಜೆಹೆಜ್ಜೆಗೂ ನನ್ನ
ಹೊಸಬಳನ್ನಾಗಿಸುತ್ತಿದೆ
ಮಣ್ಣು-ಗಾಳಿ-ನೀರು ಆಹಾ!
ನಾನು ಹುಡುಕುತ್ತಿರುವ
ನದೀಯಂತಹ ಹುಡುಗ



ಇಲ್ಲಿಯೇ ಸಿಕ್ಕರೂ ಸಿಗಬಹುದು!
ಪಲ್ಲಕ್ಕಿ ಹೊತ್ತ ಆಳುಗಳು ಹಿಂದಿರುಗಲಿ
ಕಾಲಿನ ಸಂಭ್ರಮವನ್ನು
ಆಚರಿಸಿಕೊಳ್ಳುತ್ತೇನೆ
ನಾನು ಅಂಗವಿಕಲೆಯಲ್ಲ
ಎಂದು ಸಾಬೀತುಪಡಿಸುತ್ತೇನೆ!
ಅರಮನೆ ಗೋಡೆ ದಾಟಿಯಾಯಿತು
ಇನ್ನು ಈ ಮಣ್ಣ ಮೇಲಿನ ನಡಿಗೆಯೇ
ನನ್ನ ಆಸ್ತಿ!

ಜ್ಯೋತಿ ಗುರುಪ್ರಸಾದ್

...ಗೌಡರು ನಡೆದಾಡುವ ವಿಶ್ವಕೋಶ' ...ಯಾವುದೋ ಪುಸ್ತಕದಲ್ಲಿ ದಾಖಲಾಗಿದ್ದನ್ನು ...ಓದಿದ್ದೆ. ವಿದ್ವತ್ತಿನಿಂದ ಕಂಗೊಳಿಸುತ್ತಿರುವ ಪಾಂಡಿತ್ಯ... ಮುಖದರ್ಶನ ಮಾಡುವ ಹಂಬಲ ಆಯಿತು. ...ವಹಿಸಿ ಅವರ ವಿಳಾಸ ಪಡೆದೆ. ಕಾಲೇಜಿನಲ್ಲಿ ...ಪಕರು ಎಂಬುದು ತಿಳಿಯಿತು. ಹುಡುಕಿಕೊಂಡು ...ದೆ. ನನ್ನ ದುರಾದೃಷ್ಟ. ಅವರು ಕಾಲೇಜಿಗೇ ...ವಲಿಲ್ಲ. ಎಲ್ಲಿಯೋ ಅಧ್ಯಯನದಲ್ಲಿ ಮಗ್ನರಾಗಿರ... ಅನ್ನಿಸಿತು. ನಾಲ್ಕು ಐದು ಸಲ ಪ್ರಯತ್ನಿಸಿದೆ. ...ಉತರ ಮುಖದರ್ಶನ ದೊರೆಯಲೇ ಇಲ್ಲ. ...ದಿಸಲಾಗಿ ಈ 'ನಡೆದಾಡುವ ವಿಶ್ವಕೋಶ' ...ಜನ್ನು ತಮ್ಮ ಪಾದಸ್ಪರ್ಶದಿಂದ ಪುನೀತಗೊಳಿಸು... ಸಂಬಳ ತೆಗೆದುಕೊಳ್ಳುವಾಗ ಮಾತ್ರ ಎಂಬ ...ರ ತಿಳಿಯಿತು. ತಮ್ಮ ವಿಶ್ವಕೋಶಕ್ಕೆ ಇನ್ನು ಯಾವ ...ಕ ವಿಷಯಗಳ ಸಂಗ್ರಹಣೆ ಮಾಡಬೇಕಿತ್ತೋ ...ೀ, ಪಾಠ ಮಾಡಲು ಸಮಯ ದೊರಕದೇ ...ವುದು ಸಾಮಾನ್ಯ ಆಗಿತ್ತು.

...ಅವರ ಮುಖದರ್ಶನ ಲಭ್ಯ ಆಗಲಿಲ್ಲ. ಲೇಖನ... ...ವರಿಗೆ ಫೋನಾಯಿಸಿದೆ. 'ಏನ್ರಿ ನಿಮ್ಮ ಗೌಡರು... ನಡೆದಾಡುವ ವಿಶ್ವಕೋಶ....' ಅನ್ನುತ್ತಿದ್ದಂತೆಯೇ ...ಸು ಬಹಳ ಬಿಸಿ ಸಾರ್. ಸಿಗುವುದು ಕಷ್ಟ' ...ರು. ಅದು ನನ್ನ ಅನುಭವಕ್ಕೂ ಬಂದಿತ್ತಲ್ಲ... ಈ ...ತ ಪುರುಷೋತ್ತಮ ಅವರಿಂದ ಹೊರಬಂದಿರುವ ...ಗಳ ಪಟ್ಟಿ ತಿಳಿಯಬೇಕು ಅನ್ನಿಸಿತು. ಅವರನ್ನು ...ಲು ಸಾಧ್ಯವಾಗದಿದ್ದರೂ ಇದರಿಂದಲಾದರೂ ಅವರ ...ಪರಿಚಯ ಆಗಬಹುದು ಅಂತ. ಅದನ್ನೇ ತಿಳಿಸಿದೆ. ...ಇನ್ನೂ ಯಾವ ಗ್ರಂಥವನ್ನೂ ರಚಿಸಿಲ್ಲ' ಅಂದರು ...ನಿಕ ಬಾಸ್‌ವೆಲ್! ಅವರ ಪಾಂಡಿತ್ಯ ಅವ... ...ನೆಯೇ ನಾಶವಾಗಬಹುದಾ ಅನ್ನುವ ಚಿಂತೆ ...ತು. 'ಬೇಗ ಅವರ ಜ್ಞಾನವನ್ನು ಕೃತಿಗಿಳಿಸಲು ...ಯಪ್ಪಾ' ಅಂದೆ. 'ನಾನೂ ಒತ್ತಾಯ ಮಾಡುತ್ತಿದ್ದೀನಿ ... ನಿವೃತ್ತನಾದ ಮೇಲೆ ಬರೀತೀನಿ ಅಂದಿದಾರೆ' ...ರು.

...ಗೌಡರಿಗೆ ನಿವೃತ್ತಿಯೂ ಆಯಿತು. 'ನಡೆದಾಡುವ ...ಕೋಶ'ದಿಂದ ಅದ್ಭುತ ಕೃತಿಯ ನಿರೀಕ್ಷೆಯಲ್ಲಿದ್ದೆ. ...ಕ್ಕೆ ಎಂಟನೇ ಜ್ಞಾನಪೀಠ ಪ್ರಶಸ್ತಿ ತರಬಹುದು, ... ಎಂಬ ಆಸೆಯಿಂದ ಕಾಯ್ತಿದ್ದೆ. ಈ ಪ್ರಶಸ್ತಿಗಳಲ್ಲಿ ...ಪಡೆದುಕೊಳ್ಳೋದು', 'ಪಡೆದುಕೊಳ್ಳೋದು' ಅಂತ ...ಡು ರೀತಿ ಇದೆಯಂತೆ. ಸಂಘಟನಾ ಚತುರರಾದ ...ರು 'ಪಡೆದುಕೊಳ್ಳು'ವುದರಲ್ಲಿ ಪ್ರಾವೀಣ್ಯತೆ ...ದಿದ್ದರೂ ಅವರ ವಿದ್ವತ್ಪೂರ್ಣ ಪುಸ್ತಕದಿಂದ ...ಬರಲಿರುವ ಗ್ರಂಥಕ್ಕೆ ಇಂತಹ ಹೀನಾಯ ಸ್ಥಿತಿ ...ತ ಬರುವುದಿಲ್ಲವೆಂದು ದೃಢವಾಗಿ ನಂಬಿದ್ದೆ. ... ಅವರಿಂದ ಯಾವ ಗ್ರಂಥವೂ ರಚನೆ ಆಗಲೇ ...! 'ನಡೆದಾಡುವ ವಿಶ್ವಕೋಶ' ಪಟ್ಟ ತಪ್ಪಲೇ ...! ಅದಾಗಲೇ ಪುಸ್ತಕದಲ್ಲಿ ದಾಖಲೆ ಆಗಿತ್ತಲ್ಲಾ... ... ಬರೆಯದೆ ಶಾಶ್ವತಿಯಾಗಿ ಗುರುತಿಸಿಕೊಂಡಿದ್ದರು!

...ಮುಂದೊಮ್ಮೆ 'ನಡೆದಾಡುವ ವಿಶ್ವಕೋಶ' ...ವನ್ನು ಸಂಶೋಧನಾ ವಿದ್ಯಾರ್ಥಿಗೆ ಗೋಚರಿಸಿ... ...ಅವರಿನ್ನೂ ಬರೆದಿರಬಹುದಾದ ಗ್ರಂಥಗಳಿಗಾಗಿ ...ಹುಡುಕಿಯೂ ಸಿಗದ ಬೇಸರಿಕೆಯಿಂದ ಗೌಡರಂತಹ ...ಕೋಶವು ರಚಿಸಬಹುದಾದ ಗ್ರಂಥಗಳನ್ನು ಕಾಯ್ದಿರಿಸಿಕೊಳ್ಳಲಾಗದ ಕನ್ನಡದ ಜನರ ಉದಾಸೀನತೆಯನ್ನೋ, ಸಾಹಿತ್ಯ ವಲಯಕ್ಕೂ ಜಾತಿರೋಗ ಬಡಿದಿರುವುದನ್ನೋ ಗುರುತಿಸಬಹುದು! ಶ್ರೀಯುತರ ಬದುಕು, ಬರಹಗಳ ಬಗ್ಗೆ ಸಂಶೋಧನೆ ನಡೆಸಿ ಅನ್ನಕ್ಕೆ ದಾರಿ ಮಾಡಿಕೊಂಡರೂ ಆಶ್ಚರ್ಯ ಇಲ್ಲ!

ಡಾ. ಮುನೇಶ್ವರ ಬೀಗ ಚಿಕಿತ್ಸೆ...

ಇದಕ್ಕೇ ಹೇಳುವುದು-ಖಾಲಿ ಡಬ್ಬ ಇದ್ದರೆ ಸಾಲದು. ಅದರೊಳಗೆ ಕಲ್ಲು ಇದ್ದರೂ ಸಾಲದು. ಅಳ್ಳಾಡಿಸುವವರು ಒಬ್ಬರಾದರೂ ಇರಬೇಕು ಅಂತ. ಆಗ ಮಾತ್ರ 'ಪುರುಷಪ್ರುಸಿದ್ಧೋ ಭವ' ಆಗುವುದು!

ಈ ಕೀರ್ತಿಶನಿ ಹುಲುಮಾನವರಿಗೆ ಮಾತ್ರ ಸೀಮಿತವಾಗಿಲ್ಲ. ಸರ್ವಸಂಗ ಪರಿತ್ಯಾಗಿಗಳೂ ಕಿರುತೆರೆಯ ಮೇಲೆ ತಮ್ಮ ಮುಖ ಬಂದರೆ 'ಧನ್ಯೋಸ್ಮಿ' ಅಂದುಕೊಳ್ತಾರೆ. 'ತಾವು ಮಾತನಾಡಿದ್ದು ಅದ್ಭುತವಾಗಿ ಟೀವಿಲಿ ಬಂತು ಸ್ವಾಮಿಗಳೆ' ಎಂಬುದಾಗಿ ಬೆಣ್ಣೆ ಹಚ್ಚಿದರೆ 'ಎಲ್ಲ ಆ ಭಗವಂತನ ಲೀಲೆ' ಅಂತ ಮೊರದಗಲ ಮೊಕ ಮಾಡಿಕೊಂಡು ಹಾಗಂದವರ ಇಷ್ಟಾರ್ಥಗಳನ್ನು ಪೂರೈಸುತ್ತಾರೆ. ಯಾವ ಭಗವಂತನೂ ಇಷ್ಟು ಇನ್‌ಸ್ಟಂಟ್ ಆಗಿ ವರ ದಯಪಾಲಿಸಲ್ಲವೋ ಏನೋ! ಆ ದೇವರಾದ ದೇವರಲ್ಲಿ 'ಇಷ್ಟಾರ್ಥಸಿದ್ಧಿರಸ್ತು' ಅನ್ನಿಸಿಕೊಳ್ಳಬೇಕಾದರೆ ಪೂಜೆ ಪುನಸ್ಕಾರ ಹೋಮ ಹವನ, ಆ ಯಾಗ ಈ ಯಾಗ, ತಪಸ್ಸು ಗಿಪಸ್ಸು ಅಂತ ನೂರೆಂಟು ಪರಿಪಾಟಲು ಪಡಬೇಕು. ಅದೂ ಇಷ್ಟಾರ್ಥ ಸಿದ್ಧಿ ಆಗುತ್ತೋ ಇಲ್ಲವೋ ಅನ್ನೊ ಅನುಮಾನ ಭಕ್ತನಿಗೆ ಇದ್ದೇ ಇರುತ್ತೆ. ಭಸ್ಮಾಸುರನಿಗೆ ಆಗಲಿಲ್ಲವೆ ಹಾಗೆ. ಇಷ್ಟಾರ್ಥ ಇನ್ನೇನು ಕೈಗೂಡಿತು ಅನ್ನುವಾಗ ಆ ಭಗವಂತ ಅಂಬೋನು ಯಾವ ಮೋಹಿನಿ ವೇಷದಲ್ಲಿ ಬಂದು ತಾನು ನೀಡಿದ ವರದ ಜೊತೆಗೆ ಭಕ್ತನನ್ನು ತನ್ನ ಪಾದಾರವಿಂದಕ್ಕೆ ಸೇರಿಸಿಕೊಂಡಾನು ಅನ್ನೊ ಅನುಮಾನ ಪುರಾಣ ಓದಿದವರಿಗೆಲ್ಲ ಕಾಣುತ್ತೆ. ಆದರೆ ಕಾವಿಧಾರಿಗಳು ಈ ಜಾಯಮಾನದವರಲ್ಲ, ಹೊಗಳಿದರೆ ಹೊನ್ನು ಸುರಿಸುತ್ತಾರೆ!


ನಾದಪ್ರಿಯನಲ್ಲದ, ವೇದಪ್ರಿಯನಲ್ಲದ ಭಗವಂತನೂ ಪ್ರಚಾರ ಪ್ರಿಯನೆ. ತನ್ನನ್ನು ಎಗ್ಗಾಮುಗ್ಗಾ ಹೊಗಳುವ ಸ್ತೋತ್ರಗಳನ್ನು ಬರೆಸಿಟ್ಟುಕೊಂಡಿದ್ದಾನೆ. ಸುಶ್ರಾವ್ಯ ಕಂಠದಿಂದ ಹಾಡಿ ಹೊಗಳಿದರೆ ಆನಂದತುಂದಿಲ ಆಗ್ತಾನೆ. ಆದರೆ ಹಾಗೆ ಹಾಡಿದ್ದು ತನಗೊಬ್ಬನಿಗೇ ಕೇಳಿಸಿದರೆ ಏನೋನೂ ಸಾಲದು; ಭಕ್ತಕೋಟಿಗೂ ತನ್ನ ಮಹಿಮೆ ತಿಳಿಯದೇ ಹೋದರೆ ಇದು ವ್ಯರ್ಥ ಆಲಾಪನೆ ಆಗುತ್ತದಲ್ಲಾ ಎಂಬ ಸಂಕಟ ಕಾಡುತ್ತೆ. ತಿರುಪತಿ ತಿಮ್ಮಪ್ಪ, ನಂಜನಗೂಡಿನ ನಂಜುಂಡ, ಧರ್ಮಸ್ಥಳದ ಮಂಜುನಾಥ, ಮೈಸೂರಿನ ಚಾಮುಂಡಿ ಇಂತಹ ಘನಾನುಘಟ ದೇವತೆಗಳು ಯಾರ ಹಂಗೂ ಇಲ್ಲದೆ ಇರಬಹುದು. ಕರ್ಣಾಕರ್ಣಿಯಾಗಿ ಅವರ ಮಹಿಮೆ ಹಬ್ಬಿ ಜನರನ್ನು ಸೆಳೆಯುತ್ತದೆ. ಪುಟಿ ದೇವತೆಗಳಿಗೆ ಇನ್ನೂ ಇಂತಹ ಸೌಲಭ್ಯ ದೊರೆತಿಲ್ಲ. ಅಂತಹ ದೇವರುಗಳು ಪ್ರಸಿದ್ಧಿಗೆ ಬರುವ ತನಕವಾದರೂ ವಿಜ್ಞಾನದ ಆವಿಷ್ಕಾರಗಳ ಮರೆಹೋಗುವುದು ಅನಿವಾರ್ಯ ಆಗುತ್ತದೆ.

ಮುನೇಶ್ವರ ಇಂತಹ ಪುಟಿ ದೇವರು. ಸರ್ಕಾರಿ ಆಸ್ಪತ್ರೆಯ ಕಾಂಪೌಂಡಿನಲ್ಲಿ ಅವನ ವಾಸ. ಜಾಗವೇನೋ ಆಯ ಕಟ್ಟಿನದೆ. ಆಸ್ಪತ್ರೆಗೆ ಬರಲೇಬೇಕಾದ ಎಂತಹ ನಾಸ್ತಿಕನಾದರೂ ಕೈಮುಗಿದು ಮುಂದೆ ಹೋಗ್ತಾನೆ. ಅವನ ಮಹಿಮೆ ಜನರಿಗೆ ತಿಳಿಯಬೇಕಲ್ಲ, ಅದಕ್ಕೇನು ಮಾಡಿದ ಆ ದೇವರು ಎಂದರೆ... ಟಿವಿ ಮಾಧ್ಯಮದವರ ಗಮನ ಸೆಳೆದ. ಬಂದಿತು ವರದಿ. ಅದರ ಸಾರಾಂಶ ಇಷ್ಟು.

ಡಾ. ಮುನೇಶ್ವರ!

ದೇವರಿಗೆ ಹೇಗೆ ಬಂತು ಈ ಡಾಕ್ಟರೇಟು?

ಇದು ಡಾಕ್ಟರೇಟ್ ಅಲ್ಲ. ಅವನು ನಿಜವಾಗಿಯೂ ವೈದ್ಯ!



ಎಚ್ ಎಲ್ ಕೇಶವಮೂರ್ತಿ


ಯಾರಿಗೋ ವಿಚಿತ್ರವಾದ ಕಾಯಿಲೆ ತಡೆಯಲಾರದ ಸಂಕಟ. ಹಲವಾರು ವೈದ್ಯರ ಬಳಿಗೆ ಹೋದ. ರೋಗ ಯಾವುದು ಎಂಬುದೇ ಪತ್ತೆ ಆಗಲಿಲ್ಲ. ಕೊನೆಗೆ ಮುನೇಶ್ವರನಿಗೆ ಹರಕೆ ಹೊತ್ತ. ಚಿಟಿಕೆ ಹೊಡೆಯುವಷ್ಟರಲ್ಲಿ ರೋಗ ಮಾಯ!

ಇದನ್ನು ಹೇಳಿದ್ದು ಯಾರು?

ಮಾಜಿ ರೋಗಿ!

ಹರಕೆ ಎಂತಹದ್ದು?

ಗುಡಿಯ ಮುಂದೆ ಇರುವ ಕಬ್ಬಿಣದ ಗೇಟಿನ ಸರಳಿಗೆ ಒಂದು ಬೀಗ ಹಾಕುವುದು!



ಎಂತಹ ಸುಲಭ ಚಿಕಿತ್ಸೆ!

ಮುಗಿಬಿದ್ದರು ರೋಗಿಗಳು. ರೋಗ ಯಾವುದಾದರೂ ಸರಿ. ಹರಕೆ ಹೊತ್ತರು. ಬೀಗದ ಮೇಲೆ ಬೀಗ ಹಾಕಿದರು!

ಗುಣ ಹೊಂದಿದನೆ ರೋಗಿ?

ಹೊಂದಿದೆ ಅನ್ನುತ್ತಾನೆ!

ಇದು ಲೋಕಲ್ ಸುದ್ದಿ ಆಯಿತು. ಮುನೇಶ್ವರನ ಕೀರ್ತಿ ಇಲ್ಲಿಗೆ ಮಾತ್ರ ಸೀಮಿತ ಆಗಬೇಕೆ?

ಇಂಟರ್‌ನೆಟ್‌ನಲ್ಲೂ ಮುನೇಶ್ವರ ಬಂದ!

ಅಮೆರಿಕದಲ್ಲಿರುವ ನಾನು ಅನಿವಾಸಿ ಭಾರತೀಯ. ಇಲ್ಲಿನ ವೈದ್ಯರೂ ಗುಣಪಡಿಸಲಾಗದ ಕಾಯಿಲೆಯನ್ನು ಮುನೇಶ್ವರ ಗುಣಪಡಿಸಿದ!

ವಿದೇಶೀ ತಜ್ಞ ವೈದ್ಯರೂ ಮುನೇಶ್ವರನ ಮುಂದೆ 'ನಿಲ್ಲು'!

ನಂಬದವನೇ ಪಾಪಿ!

ಇಷ್ಟಕ್ಕೇ ನಿಂತಿತೆ ಮುನೇಶ್ವರನ ಪ್ರಭಾವ?

ಮುನೇಶ್ವರನ ಗುಡಿ ಇದ್ದದ್ದು ಸರ್ಕಾರಿ ಜಮೀನಿನಲ್ಲಿ. ಆಸ್ಪತ್ರೆಯ ಕಾಂಪೌಂಡ್ ವಿಸ್ತರಿಸಬೇಕಾಯಿತು. ಗುಡಿ ಅಡ್ಡ ಇತ್ತು.

ಒಡೆಯಬೇಕಲ್ಲ ಮುನೇಶ್ವರನ ಗುಡಿ?

'ಬಡಿ' ಅಂದ ಪಾಪಿ ಇಂಜಿನಿಯರ್.

ಮುನೇಶ್ವರನ ಶಾಪದ ಅರಿವಿರಲಿಲ್ಲ ಅವನಿಗೆ!

ಒಡೆದೇ ಹಾಕುತ್ತಿದ್ದರೇನೋ. ಆದರೆ... ಮುನೇಶ್ವರ ಕೋಪಗೊಂಡಿದ್ದನಲ್ಲ... ಕಾಫಿ ಕುಡಿಯಲೆಂದು ಎದುರು ಹೋಟೆಲಿಗೆ ಹೋಗುತ್ತಿದ್ದ ಪಾಪಿ ಲಾರಿಗೆ ಸಿಕ್ಕಿ ದುರ್ಮರಣ ಹೊಂದಿದ!

ಮುನೇಶ್ವರನ ಶಾಪಕ್ಕೆ ಇನ್ನೂ ಪುರಾವೆ ಬೇಕೆ!

ಅವನ ಬದಲಿಗೆ ಬಂದ ಇಂಜಿನಿಯರ್ ಘಟನೆ ವಿವರ ಕೇಳಿ ತಲ್ಲಣಿಸಿದ. ಗುಡಿಬಿಟ್ಟು ಕಾಂಪೌಂಡ್ ಕಟ್ಟಿಸಿದ!

ಈ ವಿವರಗಳೆಲ್ಲ ಕಿರುತೆರೆಯ ಮೇಲೆ ಬಂತು. ಮುನೇಶ್ವರನಿಗೆ ಶುಕ್ರದೆಶೆ... ಹರಕೆಯ ಸುರಿಮಳೆ!

ಈ ಗುಡಿಯ ಪೂಜಾರಿ ಇದ್ದನಲ್ಲ, ಅವನು ಇನ್ನೂ ಯುವಕ. ವಿಜ್ಞಾನ ವಿಷಯದಲ್ಲಿ ಪದವಿ ಪಡೆದಿದ್ದ. ಬೇರೆ ಕೆಲಸಗಳಿಗಿಂತ ಇದೇ ಲಾಭದಾಯಕ ಅಂತ ಇದನ್ನೇ ತಬ್ಬಿಕೊಂಡಿದ್ದ. ಅವನಿಗೊಂದು ಅನುಮಾನ. ರೋಗ ಗುಣವಾಗುವುದಕ್ಕೂ ಬೀಗ ಹಾಕುವುದಕ್ಕೂ ಥಳುಕು ಹಾಕಿದವರು ಯಾರು ಅಂಬೋದು. ಮನೆಯಲ್ಲಿ ಮೂಲೆ ಹಿಡಿದಿದ್ದ ಅಜ್ಜನನ್ನು ಕೇಳಿದ. ಅವರೂ ಈ ಹಿಂದೆ ಪೂಜಾರಿಯಾಗಿದ್ದೋರು ಅನ್ನೋ ಕಾರಣಕ್ಕೆ. ಅಜ್ಜ ಹೇಳಿದ್ದು:

ಮಗು ಸುಮಾರು ವರ್ಷಗಳ ಹಿಂದಿನ ಮಾತು. ಒಂದು ದಿವಸ ಪೂಜೆ ಮಾಡಲು ಗುಡಿಗೆ ಹೋದೆ. ಗೇಟಿನ ಬಾಗಿಲು ತೆಗೆದು ಬೀಗವನ್ನ ಕಂಬಿಸರಳಿಗೆ ಹಾಕಿದೆ. ಪೂಜೆ ಮುಗಿಯಿತು. ನೋಡ್ತೀನಿ, ಹಾಳಾದ ಬೀಗದ ಕೈ ಎಲ್ಲೋ ಕಳೆದು ಹೋಗಿದೆ. ಹುಡುಕಿದರೂ ಸಿಗಲಿಲ್ಲ. ಹಾಳಾಗಲಿ ಅಂತ ಗೇಟು ಮುಂದೆ ಎಳೆದು ಹೊರಟುಬಂದೆ. ಗುಡೀಲೇನು ಹಣ ಆಸ್ತಿ ಇತ್ತೆ ಯಾರಾದರೂ ಕದ್ದಾರು ಅನ್ನೋಕೆ. ಮಾರನೆ ಬೆಳಿಗ್ಗೆ ಹೋಗಿ ನೋಡ್ತೀನಿ. ಗೇಟು ಹಾಕಿದ್ದು ಹಾಗೆಯೇ ಇದೆ. ಹಾಕಿದ್ದ ಬೀಗದ ಪಕ್ಕ ಇನ್ನೊಂದು ಬೀಗ ಇದೆ! ಆ ಭಗವಂತ ನನ್ನ ಮೇಲೆ ಕಣ್ಣುಬಿಟ್ಟು ಅನ್ನಕ್ಕೆ ಒಂದು ದಾರಿ ಮಾಡಿದಾನೆ ಅನ್ನಿಸಿತು. 'ರೋಗ ವಾಸಿ ಆಗಲಿ ಅಂತ ಮುನೇಶ್ವರನಿಗೆ ಬೀಗದ ಹರಕೆ ಹೊತ್ತಿದಾರೆ' ಅಂತ ಸುದ್ದಿ ಮಾಡಿದೆ!

ಬೀಗದ ಚಿಕಿತ್ಸೆ ಕಿವಿಯಿಂದ ಕಿವಿಗೆ ಹರಡಿತು!

ಕಾಲನ ಸಮಯಪ್ರಜ್ಞೆ ವಂಶದ ನಂದಾದೀಪ ಆಯಿತು!

ಜೈ, ಡಾ. ಮುನೇಶ್ವರ!

ಅದಕ್ಕೇ ಹೇಳಿದ್ದು ಡಬ್ಬದಲ್ಲಿ ಕಲ್ಲಿದ್ದರೆ ಮಾತ್ರ ಸಾಲದು. ಅಳ್ಳಾಡಿಸುವವರೂ ಇರಬೇಕು ಅಂತ'

ನಾನು ಇಂಗ್ಲಿಷ್ ಮಾಸ್ತರನಾಗಿದ್ದೆ

"ಇಂಗ್ಲಿಷ್ ಭಾರತೀಯರನ್ನು ಹಲವು ಬಗೆಯಲ್ಲಿ ಕಾಡುತ್ತದೆ ಮತ್ತು ಒಲಿಸಿಕೊಳ್ಳುತ್ತದೆ. ನಾನೀಗ ಇಲ್ಲಿ ಕಾಣಿಸಲಿರುವ ಅಂಶಗಳು ನನಗೇ ಆಗಾಗ ಅನ್ನಿಸಿದ ಸಂಗತಿಗಳ ಮಂಡನೆ. ಇವು ತೀರಾ ವೈಯಕ್ತಿಕವಾಗಿರಲಾರವು ಮತ್ತು ನಮ್ಮ ಜೀವನ ಕ್ರಮಕ್ಕೆ ಹೊಂದಿಕೊಳ್ಳಬಲ್ಲವು ಎಂಬ ಆಶಯ ಇದನ್ನೆಲ್ಲ ಬರೆಯುವ ಕಷ್ಟದ ಕೆಲಸಕ್ಕೆ ನನ್ನನ್ನು ಹಚ್ಚಿದೆ.

ನಾನು ತೀರಾ ಚಿಕ್ಕವನಿದ್ದಾಗ ಇಂಗ್ಲಿಷ್ ಬಲ್ಲವರು ನಮ್ಮ ಊರಲ್ಲಿ ಯಾರೂ ಇರಲಿಲ್ಲ. ನಮ್ಮ ಗದ್ದೆಯೊಂದರ ಒಡೆಯನಾಗಿದ್ದ ಹಾರ್ನಳ್ಳಿಯ ಶ್ಯಾನುಭೋಗರ ಮಗ ಪ್ರಹ್ಲಾದ ಎಂಬ ಮಾಧ್ವರ ಹುಡುಗ ನನ್ನ ಅಪ್ಪನ ಎದುರು ಇಂಗ್ಲಿಷ್ ಬೆರೆಸಿ ಕನ್ನಡದಲ್ಲಿ ಮಾತಾಡಿ ನನ್ನ ಅಪ್ಪನ ಮೆಚ್ಚುಗೆಗೆ ಪಾತ್ರನಾಗಿದ್ದ. ಅವನು ಹೈಸ್ಕೂಲಿನ ಪಬ್ಲಿಕ್ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ಪಾಸಾದಾಗಲಂತೂ ನನ್ನ ಹೆತ್ತವನ ಬೆರಗಿಗೆ ಪಾರವಿಲ್ಲದಾಯಿತು. ಪ್ರಹ್ಲಾದ ಮತ್ತು ಅವನ ಅಣ್ಣ ಲಕ್ಷ್ಮಣ ಆಮೇಲೆ ಅದೇನೋ ಗುಮಾಸ್ತೆ ಹುದ್ದೆ ಪಡೆದು ಮಳೆ, ಬೆಳೆ ಮುಂತಾದ್ದರ ಹಂಗಿಲ್ಲದೆ ಕ್ಲುಪ್ತ ಕಾಲಕ್ಕೆ ಪಗಾರ ಪಡೆಯತೊಡಗಿದರು. ನಾನೂ ಹೈಸ್ಕೂಲು ಮುಂತಾದ ಕಡೆ ಓದುವ ಹೊತ್ತಿಗೆ ನಮ್ಮ ನಾಡಿಗೆ ಸ್ವಾತಂತ್ರ್ಯ ಬಂದು, ಕನ್ನಡ ಪುಸ್ತಕಗಳನ್ನು ಬಹಳ ಜನ ಬರೆಯತೊಡಗಿದ್ದರು ಮತ್ತು ಅನೇಕರು ಕನ್ನಡ ಬಹಳ ಒಳ್ಳೆಯ ಭಾಷೆಯೆಂದೂ ಕನ್ನಡಿಗರಿಗೆ ಅನಿವಾರ್ಯ ಭಾಷೆಯೆಂದೂ ಪ್ರಚಾರ ಮಾಡುತ್ತಿದ್ದರು. ಈ ಕಾಲದಲ್ಲಿ ನಾನು 'ಹೆಂದ್ಮುಷ್ಠ ರತ್ನ', 'ಕನ್ನಡವೆನೆ ಕುಣಿದಾಡುವುದೆನ್ನದೆ' ಮುಂತಾದ ಪದ್ಯಗಳನ್ನು ಓದಿದ್ದೆ. ಇಷ್ಟಾದರೂ ನನ್ನ ಅಪ್ಪ, ಅಣ್ಣ ಮುಂತಾದವರ ಇಂಗ್ಲಿಷ್ ಪ್ರೇಮ ಕಡಿಮೆಯಾಗಿರಲಿಲ್ಲ. ಪೇಟೆಯ ಯಾವುನೋ ಒಬ್ಬ ಶೇಕ್‌ದಾರನೋ ಅಮಲ್ದಾರನೋ ಬಂದಾಗ ನನ್ನಿಂದ ಇಂಗ್ಲಿಷ್‌ನಲ್ಲಿ ಮಾತಾಡಿಸಿ ಅವರೆಲ್ಲ ಸಂಭ್ರಮದಿಂದ ನೋಡುತ್ತ ನಿಲ್ಲುತ್ತಿದ್ದರು. ಇದೇ ಸಮಯದಲ್ಲಿ ಶಿವಮೊಗ್ಗ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಬದರಿನಾರಾಯಣ ಅಯ್ಯಂಗಾರ್ರು ನಮ್ಮೂರಿಗೆ ಬಂದಾಗ ನಾನು ಅವರನ್ನು ಮೆಚ್ಚಿಸಲು (ನಮ್ಮೂರ ಶಾಲೆಯ ಉದ್ಘಾಟನೆಯ ಸಮಯದಲ್ಲಿ) `Cardinal Welcome' ಎಂಬ ಬೋರ್ಡು ಬರೆದಿಟ್ಟಿದ್ದೆ ಅದನ್ನು ಅಯ್ಯಂಗಾರ್ರು ಓದಿದರೋ ಇಲ್ಲವೋ ನಮ್ಮೂರವರಿಗೆ ಅದೇಕೋ ವಿಚಿತ್ರ ಹೆಮ್ಮೆ ಎನ್ನಿಸಿತ್ತು ಆ ಬೋರ್ಡಿನ ಬಗ್ಗೆ.

ಹಳ್ಳಿಗರು ಈ ಇಂಗ್ಲಿಷಿನಿಂದ ಪಟ್ಟಕಷ್ಟಗಳು ಒಂದಲ್ಲ, ಎರಡಲ್ಲ. ಯಾವನೋ ಒಬ್ಬ ತಲೆಕೆಟ್ಟ ರೆವಿನ್ಯೂ ಗುಮಾಸ್ತನೋ, ಜೀವವಿಮೆ ಇಲಾಖೆಯವನೋ ಒಂದು ಪತ್ರ ಬರೆದರೆ ಅದನ್ನು ಓದಿಸಿ ತಿಳಿದುಕೊಳ್ಳಲು ನನ್ನಪ್ಪ ನಾಲ್ಕು ಮೈಲಿ ನಡೆದುಹೋಗುತ್ತಿದ್ದುದು ನನಗಿನ್ನೂ ನೆನಪಿದೆ. ಆದರೆ ಇಂಗ್ಲಿಷ್ ಭಾಷೆ ಸ್ವಚ್ಛ ಬಟ್ಟೆ, ಕೈ ಕೆಸರಾಗದೆ ಸಂಬಳ, ಹಳ್ಳಿಗರ ಹತ್ತಿರ ಕೂಡ ಸುಳಿಯದ ಸರ್ಕಾರಿ ಅಧಿಕಾರ, ಜಗತ್ತಿನ ಅರಿಸಿದ ಜನಗಳೊಂದಿಗಿನ ಸಂಪರ್ಕ, ಹಳ್ಳಿಯ ವ್ಯವಸ್ಥೆಗೆ ಹೊರತಾದ ಪ್ರಭಾವದ ಪ್ರತಿಬಿಂಬ, ಹೀಗೆ ಏನೇನೋ ಆಗಿತ್ತು. ಮತ್ತು ಈ ಇಂಗ್ಲಿಷ್ ಭಾಷೆ ಹಳ್ಳಿಗನ ಕಷ್ಟ, ಮಳೆಗಾಳಿಯನ್ನು ಅವಲಂಬಿಸಿದ ಬದುಕು, ಋತುಚಕ್ರದ ಕ್ರೂರವೂ ಅತಿ ಕಡಿಮೆ ಬದಲಾವಣೆಯನ್ನು ಉಳ್ಳದ್ದೂ ಆದ ಏಕತಾನದ ಬದುಕಿಗೆ ಹೊರತಾದ್ದನ್ನು ತೋರುತ್ತಿತ್ತು. ಇಂಗ್ಲಿಷ್ ಒಂದು ರೀತಿಯಲ್ಲಿ ಬದಲಾವಣೆ ಮಂತ್ರ ಸದೃಶ ಶಕ್ತಿಯನ್ನು ಪಡೆದ ಹಾಗಿತ್ತು. ಇಂಗ್ಲಿಷ್ ಜನರನ್ನು ಎಂದೂ ಖುದ್ದಾಗಿ ನೋಡದಿದ್ದರೂ ಅವರ ಬಗ್ಗೆ ಅಪಾರ ಗೌರವ, ಭಯ, ಭಕ್ತಿ ಹೊಂದಿದ್ದ ಜನರಿದ್ದರು. ಅವರನ್ನು ಖುದ್ದು ನೋಡಿದ ಕೆಲವರು ಹಲವಾರು ಘಟನೆಗಳನ್ನು ವರ್ಣಿಸುತ್ತಿದ್ದರು. ಒಮ್ಮೆ ನಮ್ಮೂರ ಹತ್ತಿರದ ಕಾಡಿನಲ್ಲಿ ಅಡಗಿಕೊಂಡು ಮನುಷ್ಯರನ್ನು ಕಬಳಿಸುತ್ತಿದ್ದ ಹುಲಿಯನ್ನು ಕೊಂದ ಕಥೆ ಹಬ್ಬಿತು. ಬಂದೂಕುಗಳನ್ನೇ ಬಳಸಿ ಗೊತ್ತಿಲ್ಲದ ಜನರ ಹಳ್ಳಿಗೆ ಒಬ್ಬ ಫರಂಗಿ ಮನುಷ್ಯ ಬಂದು ಕೆಲವರೊಂದಿಗೆ ಕಾಡಿಗೆ ಹೋಗಿ ಮಲಗಿದ್ದ ಹುಲಿಗೆ ಬೆನ್ನುತಟ್ಟಿ ಎಬ್ಬಿಸಿ ಬಂದೂಕಿನಿಂದ ಹೊಡೆದು ಸುಟ್ಟು ಹಾಕಿದನಂತೆ.

ನೂರಾರು ವರ್ಷ ಇಂಗ್ಲಿಷರ ಕಬ್ಬಿಣದ ಪಂಜರದಲ್ಲಿದ್ದ ಜನಕ್ಕೆ ಅದೇ ಜೀವನ ಅಭ್ಯಾಸವಾಗಿಹೋಗಿದ್ದರೆ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಟವಾದ ಸಮಯದಲ್ಲಿ ಬಹಳ ಜನ ಇಂಗ್ಲಿಷರ ಪರವಾಗಿದ್ದರೆ ಅದೇನೂ ಅಂಥ ಅಸಹಜ ವಿಷಯವಲ್ಲ. ನಮ್ಮ ಧರ್ಮದ ವಿಷಯದಲ್ಲಿ ತಲೆಹಾಕುವುದಿಲ್ಲ ಎಂದು ಆಶ್ವಾಸನೆ ಕೊಟ್ಟ ಈ ಕೆಂಪು ಮನುಷ್ಯ ಇನ್ನೊಂದು ನಾಲಗೆಯಲ್ಲಿ ತನ್ನ ಭಾಷೆ ಕಲಿತವರಿಗೆ ಉದ್ಯೋಗ ಕೊಡುತ್ತ ಹೋದದ್ದು ಅನಿವಾರ್ಯವಾಗಿಯೇ ಕೆಲವು ಅಸಂಗತಗಳನ್ನು ಹುಟ್ಟಿಹಾಕಿತು. ಯಾವನೇ ಒಬ್ಬ ಮನುಷ್ಯನ ಧರ್ಮವಾಗಲಿ ಶ್ರದ್ಧೆಯಾಗಲಿ ಅವನು ಹಿಡಿಯುವ ಉದ್ಯೋಗಕ್ಕೆ ಹೊಂದಿಕೊಂಡಿರಬೇಕು: ಉದಾಹರಣೆಗೆ, ಚರ್ಮ ಹದಮಾಡುವ ಕಾರ್ಖಾನೆಯಲ್ಲಿ ಕೆಲಸ ಮಾಡುವಾತ ಸಸ್ಯಾಹಾರಿ ಸಂಪ್ರದಾಯಸ್ಥ ಬ್ರಾಹ್ಮಣನಾಗಿರುವುದು ಮಾನಸಿಕ ಒತ್ತಡಗಳನ್ನು ಹೆಚ್ಚಿಸುತ್ತದೆ. ಈ ಉದಾಹರಣೆಯೊಂದಿಗೆ ನಮ್ಮ ಆಂಗ್ಲ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತ ಗ್ರಾಮೀಣ ಬದುಕಿಗೆ ಹೊಂದಿಕೊಂಡಿರುವುದು ಎಷ್ಟು ಕಷ್ಟವೆಂಬುವುದನ್ನು ನೋಡಬಹುದು. ಇಂಗ್ಲಿಷ್ ಬಲ್ಲವರ ಸವಲತ್ತು ಮತ್ತು ಅದನ್ನು ಅರಿಯದವರ ಕಷ್ಟಗಳು ಶೋಷಕ ಮತ್ತು ಶೋಷಿತರ ಗುಂಪನ್ನು ಸೃಷ್ಟಿ ಮಾಡಿತು. ಉದ್ಯೋಗಸ್ಥ ಇಂಗ್ಲಿಷ್ ವಿದ್ಯಾವಂತ ತನ್ನ ಗ್ರಾಮದ ಬದುಕಿನೊಂದಿಗೆ ಹೊಂದಿಕೊಂಡು ಕ್ರಿಯಾಶಾಲಿಯಾಗಿರುವುದು ಒಂದು ರೀತಿಯಲ್ಲಿ ಶೋಷಕ ಮತ್ತು ಶೋಷಿತ ಎರಡೂ ಒಬ್ಬನೇ ಆಗುವ ಪ್ರಯತ್ನ. ಇದು ಯಶಸ್ವಿಯಾಗುವುದು ಕಷ್ಟ.

ನಾನು ಇಂಗ್ಲಿಷ್ ಕಲಿಯಹತ್ತಿದ್ದು ಹನ್ನೊಂದನೇ ವರ್ಷದಲ್ಲಿ. ಅಂಕಗಳೇನೋ ಚೆನ್ನಾಗಿಯೇ ಬರುತ್ತಿದ್ದವು ಮತ್ತು ತರಗತಿಯ ಅತ್ಯುತ್ತಮ ವಿದ್ಯಾರ್ಥಿ ಎಂಬ ಕೀರ್ತಿ ಬೇರೆ ನನ್ನ ತಲೆ ತಿರುಗಿಸಿತ್ತು. ನಾವು ಪಡೆಯುವ ಎಲ್ಲ ವಿದ್ಯೆಯೂ ಹೇಗೆ ಚಿಕ್ಕಂದಿನಲ್ಲಿಯೇ ಸ್ವಾರ್ಥದ, ಶೋಷಣೆಯ ಬೀಜಗಳನ್ನು ಬಿತ್ತುತ್ತದೆ ಎಂಬುದು ಅಚ್ಚರಿ ಹುಟ್ಟಿಸುತ್ತದೆ. ಕೆಲವರೇ ಅಕ್ಷರಸ್ಥರಾಗಿರುವ ಒಂದು ಸಮಾಜದಲ್ಲಿ ಹಾಗೆ ಅಕ್ಷರಸ್ಥರಾದ ಕೆಲವರು ಅಕ್ಷರ ಗೊತ್ತಿಲ್ಲದವರನ್ನು ಸುಲಿಯುತ್ತಾರೆ. ವಿದ್ಯೆ ಕೊಡುವ ಸವಲತ್ತು ಹೇಗೆ ನಮ್ಮ ಸಮಾಜದಲ್ಲಿ ತಾಳೆಗರಿಗಳ ಮೂಲಕ ಜನರನ್ನು ಕಬಳಿಸಿತು ಎನ್ನುವುದು ಇತಿಹಾಸವಾಗಿದೆ; ಇಂಗ್ಲಿಷ್ ವಿದ್ಯೆ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಸಾಂಸ್ಕೃತಿಕವಾಗಿ ತೀರಾ ಭಿನ್ನವಾದ ಜನರ ಮರ್ಜಿಯೊಂದಿಗೆ ಸೇತುವೆ ಕಟ್ಟಿ ಸುಲಿತವನ್ನು ತೀವ್ರಗೊಳಿಸಿತು. ಈ ಅರ್ಥದಲ್ಲಿಯೇ ನೀರದ ಚೌಧುರಿ ಹೇಳುವ ಮಾತು ಉಪಯುಕ್ತವಾಗಿವೆ. ನಾವು ಪೂರ್ತಿಯಾಗಿ, ಎಲ್ಲರೂ ಪಶ್ಚಿಮದ ಪ್ರಭಾವಕ್ಕೆ ಒಳಗಾಗಿ ಬದಲಾಗಬೇಕು; ಇಲ್ಲವೇ ಪೂರ್ತಿಯಾಗಿ ನಾವೆಲ್ಲ ಪಶ್ಚಿಮದ ಪ್ರಭಾವದಿಂದ ಮುಕ್ತವಾಗಬೇಕು. ಅರೆಬರೆ ಕ್ರಮದಿಂದಾಗಿ ನಮ್ಮ ಜನರೊಳಗೇ ಅನಾರೋಗ್ಯದ ಸಂಘರ್ಷ ತಂದುಕೊಳ್ಳುವುದಲ್ಲದೆ ಬೇರೆ ಸಮಾಜಗಳೊಂದಿಗಿನ ತೂಕದಲ್ಲೂ ಹಗುರವಾಗುತ್ತೇವೆ.

ಕೆಲವರೇ ಅಕ್ಷರಸ್ಥರಾಗಿರುವ ಒಂದು ಸಮಾಜದಲ್ಲಿ ಹಾಗೆ ಅಕ್ಷರಸ್ಥರಾದ ಕೆಲವರು ಅಕ್ಷರ ಗೊತ್ತಿಲ್ಲದವರನ್ನು ಸುಲಿಯುತ್ತಾರೆ. ವಿದ್ಯೆ ಕೊಡುವ ಸವಲತ್ತು ಹೇಗೆ ನಮ್ಮ ಸಮಾಜದಲ್ಲಿ ತಾಳೆಗರಿಗಳ ಮೂಲಕ ಜನರನ್ನು ಕಬಳಿಸಿತು ಎನ್ನುವುದು ಇತಿಹಾಸವಾಗಿದೆ; ಇಂಗ್ಲಿಷ್ ವಿದ್ಯೆ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಸಾಂಸ್ಕೃತಿಕವಾಗಿ ತೀರಾ ಭಿನ್ನವಾದ ಜನರ ಮರ್ಜಿಯೊಂದಿಗೆ ಸೇತುವೆ ಕಟ್ಟಿ ಸುಲಿತವನ್ನು ತೀವ್ರಗೊಳಿಸಿತು.

ನನ್ನ ಇಂಟರ್ ಪರೀಕ್ಷೆ ಮುಗಿದೊಡನೆ ನಮ್ಮ ಕನ್ನಡ ಅಧ್ಯಾಪಕರೊಬ್ಬರು ನನಗೆ ಇಂಗ್ಲಿಷ್ ಆನರ್ಸ್ ಸೇರಲು ಹೇಳಿದ್ದು ಮೇಲಿನ ಯೋಚನೆಗಳ ಬೆಳಕಿನಲ್ಲಿ ಅಷ್ಟೇನೂ ಸೋಜಿಗದ ಮಾತಲ್ಲ. 1955ರ ಹೊತ್ತಿಗೆ ಆಗಲೇ ಸ್ವಾತಂತ್ರ್ಯ ಬಂದಿದ್ದರೂ ಇಂಗ್ಲಿಷ್ ಭಾಷೆಯ ರಾಜಕೀಯ ಒತ್ತಡ ಹೋಗಿ ಅದೊಂದು ಜ್ಞಾನದ ಸ್ವರ್ಣದ್ವಾರ ಎಂಬ ನಂಬಿಕೆ ಕೆಲವರಲ್ಲಿ ಮೂಡಿತ್ತು; ಇನ್ನು ಕೆಲವರಲ್ಲಿ ಇಂಗ್ಲಿಷ್ ಭಾಷೆ ಈ ದೇಶದಿಂದ ಬಹುಬೇಗ ಹೊರಟು ಹೋಗಲಿರುವ ಭಾಷೆಯಾದ್ದರಿಂದ ಇಂಗ್ಲಿಷ್ ಆನರ್ಸ್ ಸೇರುವುದು ನಿರುದ್ಯೋಗ ಹುಡುಕಿಕೊಂಡು ಹೋಗುವ ಪರಿಯಾಗಿತ್ತು. ನಾನು ಇಂಗ್ಲಿಷ್ ಆನರ್ಸ್ ಸೇರಿದೊಡನೆ ನನಗೆ ಅಲ್ಲಿಯವರೆಗೆ ಮುಖ್ಯವಾಗಿ ಕಾಣದಿದ್ದ ಕೆಲವು ಸಂಗತಿಗಳು ಗೋಚರಿಸತೊಡಗಿದವು. 1. ನನಗಿಂತ ಒಳ್ಳೆಯ ಇಂಗ್ಲಿಷ್ ಶಾಲೆಗಳಲ್ಲಿ ಓದಿದ ಅನೇಕ ಹುಡುಗಹುಡುಗಿಯರು ಸರಾಗವಾಗಿ ಮತ್ತು ಜಾಣವಾಗಿ ಮಾತಾಡ ಬಲ್ಲವರಾಗಿದ್ದು ನನ್ನ ಸಹಪಾಠಿಗಳಾಗಿದ್ದರು. 2. ನಾನಾಡುವ ಭಾಷೆ ಅವರಿಗೆ ವಿಚಿತ್ರವಾಗಿ ಕಂಡುಬರುವ ಸಾಧ್ಯತೆ ಇತ್ತು. 3. ಇಂಟರಿನವರಿಗೆ ನಾನು ಸರಾಗವಾಗಿ ಮುಗ್ಧವಾಗಿ ಬರೆದು ಹಾಕುತ್ತಿದ್ದ ರೀತಿಯಲ್ಲಿ ಬರೆಯಲು ಇನ್ನು ಸಾಧ್ಯವಾಗದೆ ಹೆಚ್ಚು ಶಿಸ್ತಿನಿಂದ ಮತ್ತು ಹೆಚ್ಚು ವಸ್ತುಗಳನ್ನು ಹೇಳಲು ಬರೆಯುವ ಅಗತ್ಯ ಹುಟ್ಟಿಕೊಂಡಿದೆ. 4. ನನ್ನದೇ ಆದ ಶೈಲಿಯನ್ನು ದೊರಕಿಸಿಕೊಂಡರೆ ನನ್ನ ವ್ಯಕ್ತಿತ್ವ ಸ್ಪಷ್ಟವಾಗಿ ವ್ಯಕ್ತಗೊಳ್ಳುವ ಸಾಧ್ಯತೆಯಿದ್ದು ಪರಭಾಷೆಯಲ್ಲಿ ನನ್ನದೇ ಆದ ಶೈಲಿಯನ್ನು ಹೇಗೆ ದೊರಕಿಸಿಕೊಳ್ಳುವುದು- ಎಂಬ ಪ್ರಶ್ನೆ ಕಾಡತೊಡಗಿತು. 5. ನಾನು ಆಗ ಎಳೆಹರಯ ತಲುಪುತ್ತಿದ್ದುದರಿಂದ ನಾನು ಹೆಚ್ಚು ಜನರೊಂದಿಗೆ, ಅದೂ ಹುಡುಗಿಯರೊಂದಿಗೆ ಮಾತಾಡುವುದು ಮತ್ತು ನನ್ನ ಬಿಗಿತಗಳನ್ನು ನಿವಾರಿಸಿಕೊಳ್ಳುವುದು ಅವಶ್ಯಕವೆನ್ನಿಸಿದರೂ ನನ್ನ ಮಾತಿನ ರೀತಿ ಹುಡುಗಿಯರಲ್ಲಿ ತಾತ್ಸಾರ ಹುಟ್ಟಿಸಬಹುದೆಂಬ ಭಯ ಕಾಡತೊಡಗಿತು. 6. ಮೇಲಿನ ಅನೇಕ ತೊಂದರೆಗಳು ಖಾಸಗಿ ತೊಂದರೆಗಳಾಗಿದ್ದು ನನ್ನ ಹಿನ್ನೆಲೆಯಾಗಿದ್ದ ಪರಿಸರವನ್ನು ಕ್ರಮೇಣ ಕಳಚಿಕೊಳ್ಳತೊಡಗಿದೆ, ನನಗೆ ಗೊತ್ತಿಲ್ಲದೇ. 7. ಇವೆಲ್ಲದರಿಂದಾಗಿ ಅರಿಯಲೆಳಸುತ್ತಿದ್ದ ಇಂಗ್ಲಿಷ್ ಭಾಷೆ ಸ್ಥಾಪಿತವೂ ಸ್ವಸ್ಥವೂ ಆದ ಸಮಾಜದ ಭಾಷೆಯಾಗಿದ್ದರಿಂದ ನನ್ನ ಮನಸ್ಥಿತಿಗೆ ಹೊಂದಿಕೊಳ್ಳುವ ಸಾಧ್ಯತೆ ಕಡಿಮೆಯಿತ್ತು.

ಇಂಗ್ಲಿಷ್ ಅಧ್ಯಾಪಕನಾಗಿ ನಾನು ಸೇರಿದ ಮೇಲೆ ನನ್ನ ಮೇಲೆ ಮತ್ತೊಂದು ಹೊರೆಬಿತ್ತು; ಒಂದು ರೀತಿಯಲ್ಲಿ ಬರೆಯಲು ಕಲಿತ ನಾನು ಇಡೀ ಒಂದು ಗಂಟೆ ಇಂಗ್ಲಿಷಿನಲ್ಲಿ ಮಾತಾಡಬೇಕಿತ್ತು. ನಾ ಬಲ್ಲ ಅನೇಕರಿಗಿಂತ ನಾನು ಚೆನ್ನಾಗಿಯೇ ಮಾತಾಡುವುದು ನನಗೆ ಗೊತ್ತಿದ್ದರೂ ಈ ಇಂಗ್ಲಿಷ್‌ವಾಕ್ ವ್ಯವಹಾರ ತಮಾಷೆಯದಾಗಿತ್ತು. ಕರ್ನಾಟಕದ ಪಟ್ಟಣವೊಂದರ ಕಾಲೇಜಿನಲ್ಲಿ ನಾನು ಕಲಿಸುತ್ತಿದ್ದಾಗ ಅಲ್ಲಿಗೆ ಬರುತ್ತಿದ್ದ ಹಳ್ಳಿಯ ಹುಡುಗಹುಡುಗಿಯರಿಗೆ ಹೇಗೋ ಪಾಠ ಹೇಳುತ್ತಿದ್ದೆ. ಅವರು ನನ್ನ ವೇಷಭೂಷಣ ಮೆಚ್ಚುತ್ತಿದ್ದರೋ, ನನ್ನ ಕಂಠ ಮೆಚ್ಚುತ್ತಿದ್ದರೋ, ನನ್ನ ಜ್ಞಾನಸಂಪತ್ತು ಮೆಚ್ಚುತ್ತಿದ್ದರೋ ಗೊತ್ತಿಲ್ಲ. ಅಂತೂ ಅವರಲ್ಲಿ ಬಹಳ ಜನ ನನ್ನನ್ನು ಅಧ್ಯಾಪಕನಾಗಿ ಒಪ್ಪಿಕೊಂಡಿದ್ದರೆಂಬ ವದಂತಿ ಇತ್ತು. ಇಲ್ಲೂ ಕೆಲವು ವೈಚಿತ್ರ್ಯಗಳನ್ನು ನಾನು ಗಮನಿಸಿದ್ದೆ. ನಾನು ಸರಳವಾಗಿ, ಈ ಭಾಷೆ ಕನ್ನಡವೋ ಎಂಬಂತೆ ವಾಕ್ಯರಚನೆ ಮಾಡಿದಾಗ ಹುಡುಗರಿಗೆ ಅಷ್ಟು ಮಜ ಬರುತ್ತಿರಲಿಲ್ಲ- ಯಾಕೆಂದರೆ ನಾನು ನನ್ನ ತಾರುಣ್ಯದ ಉತ್ಸಾಹದಲ್ಲಿ ಹೇಳಬಬೇಕೆಂದಿದ್ದು ಕೂಡ ಮುಕ್ಕಾಗುತ್ತಿತ್ತು.

ಇದಕ್ಕೆ ಪ್ರತಿಯಾಗಿ ನಾನು ಪುಸ್ತಕಗಳನ್ನು ಓದುವಾಗ ಗಮನಿಸಿದ ನುಡಿಕಟ್ಟುಗಳನ್ನೂ ವಿಶಿಷ್ಟ ರಚನೆಗಳನ್ನೂ ಹೇಗೋ ಸಂದರ್ಭ ಹುಡುಕಿ ಪ್ರಯೋಗಿಸಿದರೆ ಹುಡುಗರ ಅಪಾರ ಮೆಚ್ಚುಗೆ ದೊರೆಯುತ್ತಿತ್ತು. ಆದರೆ ನಾನು ಹೇಳಬಾರದ್ದನ್ನು ಪರಿಣಾಮಕಾರಿ ವಾಕ್ಯಗಳಲ್ಲಿ ಹೇಳಿ ಮೆಚ್ಚುಗೆ ಪಡೆದಂತಾಗಿ ಅಸಹ್ಯವಾಗುತ್ತಿತ್ತು. ಆದರೆ ತಾರುಣ್ಯದ ಕೊಬ್ಬು ಮತ್ತು ಇನ್ನೊಬ್ಬರನ್ನು ತಲೆದೂಗಿಸುವ ಚಟ ವಿಚಿತ್ರವಾದದ್ದು; ಲಾರೆನ್ಸ್‌ನ ಪ್ರೇಮ ಸಿದ್ಧಾಂತವೂ ಟಾಲ್‌ಸ್ಟಾಯ್‌ನ ಶಾಂತಿ ಸಿದ್ಧಾಂತವೂ ಒಟ್ಟಾಗಿ ನುಗ್ಗಿಬರುತ್ತಿದ್ದ ಕಾಲವದು. ಇವನ್ನು ಹೇಳಲು ನಾನು ಕಂಡು ಕೊಂಡಿರಬಹುದಾದ ಇಂಗ್ಲಿಷ್ ಭಾಷೆ ಮತ್ತು ನನ್ನ ಮಾತು ಕೇಳಿಸಿಕೊಳ್ಳುತ್ತಿದ್ದ ಶಿಷ್ಯರ ತಂಡ ನೆನೆದಾಗ ದಿಗಿಲಾಗುತ್ತದೆ.

ಈ ಸಂದರ್ಭದಲ್ಲೇ ಎಂದು ಕಾಣುತ್ತದೆ: ಇಂಗ್ಲಿಷ್ ಭಾಷೆಯನ್ನು ಆರಿಸಿದ ನುಡಿಗಟ್ಟುಗಳೊಂದಿಗೆ ಬಳಸುವಾಗ ನಾಟಕೀಯ ಕೈಕಾಲುಗಳ ಚಲನವಲನವೂ ಇದ್ದರೆ ರಸಪೂರ್ಣ ಉಪನ್ಯಾಸಗಳಾಗಬಹುದೆಂಬ ಭ್ರಮೆ ಹುಟ್ಟಿದ್ದು: ಅನೇಕ ನಿಷ್ಪ್ರಯೋಜಕ ಜೋಕುಗಳೂ, ಅಪ್ರಸ್ತುತ ಘಟನೆಗಳೂ, ಆತ್ಮಚರಿತ್ರೆಯ ಕಲ್ಪಿತ ಸಂಗತಿಗಳೂ ಸೇರಿಕೊಂಡು ಇಡೀ ಮಾತುಕತೆ ನನಗೇ ಹಾಸ್ಯಾಸ್ಪದವಾಗಿ ಕಾಣತೊಡಗಿತ್ತು. ಈ ವೇಳೆಯಲ್ಲಿ ನನಗೆ ಕತೆ ಬರೆಯುವ ಮತ್ತು ಕುಟುಂಬವೊಂದನ್ನು ಸಾಕುವ ಕೆಲಸಗಳಿಲ್ಲದಿದ್ದರೆ ಇಷ್ಟು ಹೊತ್ತಿಗೆ ಹರಿಕಥೆಯ ಕೇಶವದಾಸರಾಗುತ್ತಿದ್ದೆ. ಈ ಆರಂಭದ ದಿನಗಳಲ್ಲೇ ನಾನು ನಿಘಂಟುವನ್ನು ನೋಡುವ ಗೋಜಿಗೆ ಹೋಗದೆ `Ire' ಮತ್ತು `ranged ಎಂಬ ಪದಗಳನ್ನು ತಪ್ಪಾಗಿ ವಿವರಿಸುತ್ತ ಹೋಗಿ ಸುಳ್ಳು ಹೇಳುತ್ತಿರುವ ಪೇಚಿಗೆ ಸಿಕ್ಕಿಹಾಕಿಕೊಂಡು ಬೆಂಗಳೂರಿಗೆ ಓಡಿ ಬಂದೆ. ಮೊದಲಿನದು ಏಟ್ಸನ್ ಪದ್ಯದಲ್ಲಿ ಬರುತ್ತದೆ; ಎರಡನೆಯದು `ranged round' ಎಂದು ಗೋಲ್ಡ್‌ಸ್ಮಿತ್‌ನ Village School Master ಪದ್ಯದಲ್ಲಿ ಬರುತ್ತದೆ. ಅನೇಕ ವಾರಗಳ ಬಳಿಕ ಅವುಗಳ ಅರ್ಥ ನನಗೆ ಗೊತ್ತಾದಾಗ ತುಂಬ ನಾಚಿಕೆಯಾಯಿತು. ಇಂಗ್ಲಿಷ್ ಶಾಲೆಯ ಮಕ್ಕಳಿಗೆ ಕೂಡ ಗೊತ್ತಿರಬಹುದಾದಂಥ ಈ ಸರಳ ಪದಗಳು ಗೊತ್ತಿಲ್ಲದ ನಾನು ಸುಳ್ಳು ಹೇಳುವುದು ಮತ್ತು ಲಾರೆನ್ಸ್, ಟಾಲ್‌ಸ್ಟಾಯ್, ವರ್ಜಿಲ್ ಮುಂತಾದವರ ಬಗ್ಗೆ ಮಾತಾಡುವುದು-ಎರಡೂ ಒಂದೇ ಎಂಬ ಅನುಮಾನ ಬರತೊಡಗಿತು.

ನನ್ನತನ ಮತ್ತು ನನ್ನ ವ್ಯಕ್ತಿತ್ವದ ಮೇಲಿನ ತೊಂದರೆಗಳನ್ನು ಇನ್ನೊಂದು ರೂಪದಲ್ಲಿ ಕನ್ನಡದಲ್ಲಿ ಹೇಳಿಕೊಳ್ಳಲು ಕತೆಗಳ ಮತ್ತು ಪದ್ಯಗಳ ಪ್ರಕಾರ ಇತ್ತು. ನನ್ನ ಆಗಿನ ಬರವಣಿಗೆಗಳ ಅತೀ ಬಿಗುವು ಮತ್ತು ಕ್ರೌರ್ಯಕ್ಕೆ ಮೇಲಿನ ಮಾತುಗಳಲ್ಲಿ ಕಾರಣ ಸಿಗಬಹುದೋ ಏನೋ. ಆದರೆ ಅಷ್ಟರಲ್ಲಿ ನಾನು ಸ್ನಾತಕೋತ್ತರ ಮಟ್ಟದಲ್ಲಿ ಪಾಠ ಹೇಳಲು ಬೆಂಗಳೂರಿಗೆ ವರ್ಗವಾಗಿದ್ದೆ. ಅಲ್ಲಿ ನಾನು ಬೇರೆ ರೀತಿಯ-ಆದರೆ ಮೇಲಿನ ಎಲ್ಲ ತೊಂದರೆಗಳ ಮೊತ್ತದ ರೂಪದಲ್ಲಿ- ಸಮಸ್ಯೆಗಳನ್ನು ಎದುರಿಸಬೇಕಾಯಿತು. ಸಣ್ಣ ತರಗತಿಗಳಲ್ಲಿ ಕ್ಷುಲ್ಲಕ ಸಂಗತಿಗಳಿಂದ ತಬ್ಬಿಬ್ಬಾಗುತ್ತಿದ್ದ ನಾನು ಈ ಮೇಲಿನ ತರಗತಿಗಳಿಗೆ ಪಾಠ ಹೇಳುವ ಹಕ್ಕುಳ್ಳವನೇ ಎಂಬ ಅನುಮಾನ ಬಂತು. ಈ ಅನುಮಾನ ಬಹಳ ಕಾಲ ಉಳಿಯಲಿಲ್ಲ-ಯಾಕೆಂದರೆ ಇಂಗ್ಲಿಷ್ ಬಲ್ಲವರು ಸದಾಕಾಲವೂ ಮಾಡುತ್ತಿರುವಂತೆಯೇ ಒಂದು ಬಗೆಯ ಪದಗಳ ಹಂದರದಲ್ಲಿ ತೀರಾ ಮೂಲಭೂತವಾದ ಸಂಗತಿಗಳನ್ನು ಮರೆಯತೊಡಗಿದೆ. ಸಿದ್ಧತೆ ಮಾಡಿಕೊಂಡು ಹೋದರೆ ತರಗತಿಯ ವಿದ್ಯಾರ್ಥಿಗಳೆಲ್ಲ ತಲೆದೂಗುವಂತೆ ಪಾಠ ಮಾಡಬಲ್ಲೆನೆಂಬ ಹೆಸರು ಬಂತು. ಇಂಗ್ಲಿಷ್ ಅಧ್ಯಾಪಕನ ಸಿದ್ಧತೆಯೆಂದರೆ ಒಂದು ಗ್ರಂಥದ ಮೇಲೆ




ಪಿ.ಲಂಕೇಶ್

ಮುಂತಾಯ ಪುಸ್ತಕಗಳನ್ನು ಓದಿ ಪರಾಟಿಗೆ ಹೋಗುವುದು. ಈ ವಿಮರ್ಶೆಗಳು ...ೆ ಎಂದರೆ ನೀವು ಹೇಳುತ್ತಿರುವುದರಲ್ಲಿ ನಿಮ್ಮದೆಷ್ಟು, ಆ ಪುಸ್ತಕಗಳದ್ದೆಷ್ಟು ನಿಮಗೇ ಗೊತ್ತಿರುವುದಿಲ್ಲ. ಇನ್ನು ವಿದ್ಯಾರ್ಥಿಗಳ ಮಾತು ಬಿಡಿ.


...ಂ ಇಂಗ್ಲಿಷ್ ಅಧ್ಯಾಪಕರ ಬಗ್ಗೆ ಹೇಳದೆ ನನ್ನ ಬಗ್ಗೆ ಮಾತ್ರ ...ಳ್ಳುತ್ತಿದ್ದೇನೆಂಬುದನ್ನು ಮತ್ತೆ ಸೂಚಿಸಬಯಸುವೆ. ಕೆಲವರು ತುಂಬ ...ಚಾರವಿದ್ದಿರಬಹುದು. ಕೆಲವರಿಗೆ ಇಂಗ್ಲಿಷ್ ಮತ್ತು ಆ ಮೂಲಕ ಜ್ಞಾನ ...ಗಿ ಬರಬಹುದು; ಆದರೆ ಹಳ್ಳಿಯವನಾದ ನಾನು ಇಂಗ್ಲಿಷ್ ಪಳ್ಳಿಗಳನ್ನು ...ಮರ್ಪಕವಾಗಿ ಇಂಗ್ಲಿಷ್‌ನಲ್ಲಿ ವರ್ಣಿಸಲಾಗದಿದ್ದರೆ, ವರ್ಣಿಸಿದ ಮೇಲೂ ...ಷೆಯ ಚಾಕಚಕ್ಯ ಮಾತ್ರ ಎಂಬ ಭಾವನೆ ಉಳಿದರೆ ಏನೆನ್ನುವುದು? ...ಯುಕ್ತ ಮತ್ತು ತೀರಾ ಇಲ್ಲಿಯವು ಎನ್ನುವಂಥ ಸಂಗತಿಗಳನ್ನು ಹೇಳಲೇ ...ಲ್ಲ ಮತ್ತು ಅತ್ಯಂತ ಗಾಢವಾದ ತಿಳಿವು ಈ ಎರಡನ್ನೂ ಒಳಗೊಂಡದ್ದು ...ವಳಿಕೆ ನನ್ನದಾಯಿತು. ಯಾವನೇ ಇಂಗ್ಲಿಷಿನವನೂ ಇಲ್ಲಿಯ ಪಟಗಣ್ಣೆ ...ನ್ನಿ ಮುಂತಾದವನ್ನೊಳಗೊಂಡ ಗಳೇವು ಸಾಮಾನುಗಳನ್ನು ಅಡುಗೆಮನೆಯ, ...ಮನೆಯ, ಮಲಗುವ ಕೋಣೆಯ ವಸ್ತುಗಳನ್ನೂ ಸ್ಪಷ್ಟವಾಗಿ ವರ್ಣಿಸಲು ...ಲ್ಲವೆನಿಸುತ್ತದೆ. ಇದು ನನಗೆ ಆಗ ಅಷ್ಟು ಮುಖ್ಯವಾಗುತ್ತಿರಲಿಲ್ಲ, ಬಹಳ ...। ಬರೆಯುವಾತ 'ನೊಗುಟ್ಟಿಗೆ ಬಿಗಿದ ರಟ್ಟೆ' ಎಂದು ಬರೆಯಬೇಕಾಗುತ್ತದೆ. ...ಧ್ಯಾಪಕರು ಬರೆದಾರು, ಹೇಳಿಯಾರು, ನನ್ನಿಂದ ಮಾತ್ರ ಸಾಧ್ಯವಿಲ್ಲ, ...ಇಂಗ್ಲಿಷ್ ಅಧ್ಯಾಪಕನ ವಿಚಾರಗಳು ಸಿದ್ಧ ಮಾತುಗಳಲ್ಲೇ ...ಹೊರಡುತ್ತವೆ. ಒಮ್ಮೆ ಯಾವನೋ ಯೋಚಿಸಿದ ಸಂಗತಿಗಳನ್ನೇ ತನ್ನವೆಂದು ...ಯಬೇಕಾಗುತ್ತದೆ.

...ಷ್ ಬಲ್ಲವರು ಕೇವಲ ಹೊರಗಿನ ಪ್ರಜ್ಞೆಯುಳ್ಳವರು ಎಂಬ ಸಣ್ಣತನದ ...ದ ಕೊಡುವ ಬದಲು ನನ್ನೊಳಗಣ ಕಷ್ಟಗಳನ್ನು ಹೇಳುವುದು ಇಲ್ಲಿ ನನ್ನ ... ಇಂಗ್ಲಿಷ್ ಬಲ್ಲವರು ಅಥವಾ ಬೋಧಿಸುವವರು ಅಷ್ಟೇನೂ ...ವರಿರಲಾರರು. ನಾನು ಬಲ್ಲಂತೆ ಅನೇಕ ಜನ ಇಂಗ್ಲಿಷ್ ಪ್ರಜ್ಞೆಯವರು ಈ ...ಗಳಿಗಿಂತ ಹೆಚ್ಚು ಸೂಕ್ಷ್ಮಜ್ಞರೂ, ಹೆಚ್ಚು ವಿನೀತರೂ, ಜಾಣರೂ ಆಗಿದ್ದಾರೆ. ...ನನ್ನಂಥವರಿಗೆ ಕಲಿಸಿದ್ದು ಅಪಾರವಾಗಿದೆ; ಪೇನ್, ಮೆಂಕೆನ್, ಮೆಗರಿಜ್‌ರ ...ಲ್‌ಸ್ಟಾಯ್‌ನ ಆವೃತ ಅರಿವು, ಜೇನ್ ಆಸ್ಟೆನ್ನಳ ನೀತಿಯ ಮಟ್ಟಕ್ಕೇರುವ ...ದ ಅಥವಾ ಕಟ್ಟುಕತೆಯ ಗಡಿದಾಟ ಹೋಗಿ ಜೀವನವನ್ನು ಹಿಡಿದೆತ್ತುವ ...ರ್ಷ ಮತ್ತು ಫಾರ್‌ಸ್ಟರ್‌ನ ಗ್ರಹಿಕೆ; ಇವು ನನ್ನ ಮೇಲೆ ಅಪಾರ ಪರಿಣಾಮ ... ಆದರೆ ಇಷ್ಟರಿಂದ ಮುಗ್ಧರಾಗಿ, ಇವುಗಳಿಂದಾಗಿಯೇ ನನ್ನ ತಿಳಿವಿಗೆ ...ನ್ನು ಪ್ರಾಮಾಣಿಕವಾಗಿ ಹೇಳದಿದ್ದರೆ ಅನ್ಯಾಯವಾಗುತ್ತದೆ. ಶಿವಮೊಗ್ಗ ... ಹುಡುಗಿಯೊಬ್ಬಳು ತುಂಬ ಸಂಕೋಚ ಮತ್ತು ಸೌಜನ್ಯದಿಂದ ನನ್ನ ...ಲ್ಲಿ ಎದ್ದು ನಿಂತು 'ಸರ್, ಆ suite ಪದವನ್ನು 'ಸ್ವೀಟ್' ಎಂದು ...ಪು ಅಲ್ಲವಾ?' ಎಂದು ಕೇಳಿದಾಗ ಅವಳ ಮುಖದ ಜಾಣತನ ಮತ್ತು ... ನೋಡಿ 'ಹೌದು. ಕ್ಷಮಿಸಿ' ಎಂದು ಹೇಳಿದೆ ನಾನು. ಇನ್ನೊಮ್ಮೆ ...nical' ಎಂಬ ಪದವನ್ನು ಬಳಸಿ ಚರ್ಚಿಸುತ್ತಿದಾಗ ನನಗೆ ಸೂಚಿಸದೆಯೇ ...ಜ್' ಎಂದು ಬಳಸಿ ಇನ್ನೊಬ್ಬ ಹುಡುಗ 'ಟಿರನಿಕಲ್' ಎನ್ನುತ್ತಿದ್ದ ನನ್ನನ್ನು ...ಂಡಿಯನ್ ವಾತಾವರಣದ ಎಲ್ಲರೂ 'ಎಂಬರಾಸ್‌ಡ್' ಎಂದೇ ಆರಂಭಿಸಿ ...ಐ ವಿದ್ಯಾರ್ಥಿಯಿಂದ 'ಎಂಬ್ಯಾರ್‌ಸ್‌ಡ್' ಎಂದು ಕಲಿಯುತ್ತಾರೆ. ಅಲ್ಲದೆ ...ಅಧ್ಯಾಪಕರು ಹೊಸ ಮಾತು ಮತ್ತು ನುಡಿಗಟ್ಟುಗಳನ್ನು ಕಾನ್ವೆಂಟ್ ...ಹುಡುಗಿಯರ ಮೂಲಕ ತಿಳಿಯುತ್ತಾರೆ. `Get lost' ಎಂಬುದನ್ನು ...ಳಿಕೊಟ್ಟವಳು ಒಬ್ಬಳು ಹುಡುಗಿ- ನನಗೆ ತಮಾಷೆಗೆ ಹೇಳಿ!

...ಪಂಜರಾಪ್ಪೋಲು ಕಾನ್ವೆಂಟ್ ಜನಕ್ಕೂ ನಾನು ಸಲ್ಲಬೇಕಾದ್ದಕ್ಕಿಂತ ಹೆಚ್ಚು ...ಡಲಾರೆ. ನಾನು ಅನೇಕರನ್ನು ಬಲ್ಲೆ. ಇವರ ಒಂದು ದೊಡ್ಡ ದೋಷವೆಂದರೆ ...ಒಂದೇ ಶೈಲಿ, ಲಯದಲ್ಲಿ ಮಾತಾಡುವುದು; ಇವರ ಸ್ಮಾರ್ಟ್ ಜಗತ್ತು ...ಗೊಂಡಿದ್ದು ಅನೇಕ ಪದಗಳ ಗೊಂದಲದಿಂದ ತುಂಬಿ ಹೋಗಿರುವುದು. ...ಬಿರುವಂತೆ ಹಳ್ಳಿ, ಪಟ್ಟಣದ ನುಡಿಗಳನ್ನು ಪಡೆದು ಅವುಗಳ ಮೂಲ ...ಳಸುತ್ತ ಸ್ತಿಮಿತ ತಂದುಕೊಳ್ಳುವ, ಅನುಭವ ಮತ್ತು ಜೀವನಕ್ರಮವನ್ನು ...ಲವಾಗಿಟ್ಟುಕೊಳ್ಳಬಲ್ಲ ಮನುಷ್ಯ ಭಾರತಕ್ಕೆ ಮುಖ್ಯ. ಗಾಂಧೀಜಿ ಆ ...ಮನುಷ್ಯನಾಗಿದ್ದ: ಆತನ ಕಾಳಜಿ ಊಟ ತಿಂಡಿಯಿಂದ ಹಿಡಿದು ರಾಜಕೀಯ, ...ಷಯಗಳನ್ನು ಒಳಗೊಂಡಿದ್ದರೂ ಭಾಷೆಯ ಬಗ್ಗೆ ನೇರವೂ ಪ್ರಾಮಾಣಿಕವೂ ...ಬಂಧವನ್ನಿಟ್ಟುಕೊಂಡಿದ್ದ. ಯಾವನೇ ಒಬ್ಬ ಇಂಗ್ಲಿಷ್ ಪ್ರೇಮಿಯೂ ಈ ... ತೊಂದರೆಗಳನ್ನೂ, ಕಂಡುಕೊಂಡ ಉಪಾಯಗಳನ್ನೂ ಅಭ್ಯಸಿಸಿದರೆ ...ವಾಗಬಲ್ಲದು.

...ಂ ಇಂಗ್ಲಿಷ್ ಅಧ್ಯಾಪಕನ ಕೆಲಸಕ್ಕೆ ರಾಜೀನಾಮೆ ಕೊಡಲು ನನ್ನ ಮೇಲಿನ ... ಮಾತುಗಳಲ್ಲಾದರೂ ಕಾರಣ ಸಿಕ್ಕಬಹುದು. ಒಂದು ರೀತಿಯ ...ಣಿಕತೆ ನನ್ನ ಕ್ರಿಯಾಶೀಲತೆಗೆ ತೊಂದರೆ ಕೊಡಬಲ್ಲದೆಂದು ನನಗೆ ಅನ್ನಿಸಿತ್ತು. ...ನೊಂದಿಗೆ ನಾನು ಹೆಚ್ಚುಹೆಚ್ಚಾಗಿ ಸಾಹಿತ್ಯ ಮತ್ತು ಚಲನಚಿತ್ರದ ಕೆಲಸದಲ್ಲಿ ...ೆ. ಆದಷ್ಟೂ ಮಟ್ಟಿಗೆ ಅಖಿಲ ಭಾರತ ಮಟ್ಟದ ಚಟುವಟಿಕೆಯಿಂದ ...ಹೊರಗಿದೆ: ಯಾಕೆಂದರೆ ಈ ಸೆಮಿನಾರ್ ಜನರೂ ರಾಷ್ಟ್ರಪ್ರಜ್ಞೆಯ ಮಂದಿಯೂ ...ಬಾರಿ ಸುಳ್ಳು ಮತ್ತು ಅಪ್ರಾಮಾಣಿಕತೆಗೆ ಬಲಿಯಾಗುತ್ತಾರೆಂಬುದು ನನ್ನ ...ನಿಸಿತ್ತು, 43ರ ಗಡಿ ದಾಟುತ್ತಿರುವ ನನಗೆ ಇರಬಹುದಾದ ಹತ್ತಾರು ...ಂ ವಿದ್ಯಾಗಬೇಕಿತ್ತು, ಸಾಕಷ್ಟು ಕ್ರಿಯಾತ್ಮಕವಾಗಿ ನಾನು ಕಂಡದ್ದು ಕೇಳಿದ್ದು ...ಪಡೆಯುತ್ತಿರುವುದು ಕೇವಲ ವೃತ್ತಿಯ ಪದ ಪಂಜರಗಳ ಮೂಲಕವಲ್ಲದೆ ...ಗಬೇಕಾಗಿತ್ತು, ಇದೂ ಕೂಡ ಭ್ರಮೆ ಇರಬಹುದು. ಎಂದೂ ಸರ್ಕಾರಿ ...ದಿಯುದವರ ಮನೆಯಿಂದ ಬಂದ ನಾನು ನೌಕರಿ ಮತ್ತು 'ನಿರುದ್ಯೋಗ' ... ಈ ಜೀವನದಲ್ಲೇ ನೋಡುವ ಆಸೆಬುರುಕ ಕೂಡ ಇರಬಹುದು. ...ಗೆ ವಿಟ್ಮನ್ನು, ನೆರೂಡನನ್ನು, ಶೇಕ್ಸ್‌ಪಿಯರನನ್ನು ಬೋಧಿಸಲು ಓದಬೇಕಾದ ... ಅವರ ಬಗ್ಗೆ ಬರೆಯಬೇಕಾದ ಒತ್ತಡ ಕೂಡ ಇಲ್ಲ; ಇದು ಸಂತೋಷ


...ಷ್ ಯಾವ ಭಾರತೀಯನಿಗೂ ಬರುವುದಿಲ್ಲ, ಹಾಗೆಬಂದ ಹುಂಬತನ ... ತೀರಾ ತಡವಾಗಿ ಅರಿಯುತ್ತಾನೆ; ಇಂಗ್ಲಿಷ್ ಬರುವುದಕ್ಕೂ, ಕೆಲವು ...ನ್ನು ತಿಳಿಯುವುದಕ್ಕೂ ಸಂಬಂಧವಿಲ್ಲ; ಇಂಗ್ಲಿಷ್ ಬರಲಿ, ಬಿಡಲಿ ...ಸಹಜವಾದ ಜಾಣ್ಮೆ, ಅದೊಂದು ಅವಮಾನ, ರೋಮಾಂಚನ, ಭ್ರಮೆ ...ಂಭೀರವಾಗಿ ಬಹಳ ಕಾಲ ಉಳಿಯುತ್ತದೆ. ಇಷ್ಟನ್ನು, ಈ ಲೇಖನವನ್ನು ...ಳಗೊಳಿಸುವುದು ಎಂಬುದು ಗೊತ್ತಿಲ್ಲದೆ ಕಾಣಿಸಬಯಸುತ್ತೇನೆ.



ಇಂಗ್ಲಿಷ್ ಎಂಬ ಮೂದೇವಿ

ಹೈಸ್ಕೂಲು ದಿನಗಳಿಂದಲೂ 'ಇಂಗ್ಲಿಷ್' ಅಂದರೇನೆ ಹೆದರಿಕೆ. ಹೇಗೋ ಕಷ್ಟಪಟ್ಟು ಮೆಟ್ರಿಕ್ ಪಾಸಾಗಿ ಸುರಪುರದ ಪ್ರಭು ಕಾಲೇಜಿನಲ್ಲಿ ಪಿಯುಸಿ ಸೈನ್ಸ್‌ಗೆ ಹುಟಿಯುದ ಉತ್ಸಾಹದಿಂದ ... ಜನ ಸೇರಿದ್ದೆವು. ಆಗ್ಗೆ ಎಲ್ಲಾ ಉಪನ್ಯಾಸಕರು ಬೋರ್ಡಿನ ಮೇಲೆ ಆ ವರ್ಷದಲ್ಲಿ ನಾವು ಓದಬೇಕಾದ ಹಲವು ವಿಷಯಗಳ 'ಸಿಲೆಬಸ್' ಬರೆಸ್ತಾ ಇದ್ದರು. ಅದೆಲ್ಲಾ ಇಂಗ್ಲಿಷ್‌ನಲ್ಲಿ ಇದ್ದ ಸಲುವಾಗಿ ಪದಗಳೆಲ್ಲಾ ಹೆಚೆಂದರೆ ಏನೂ... ತಿಳಿಯದೆ ಗಾಬರಿ ಆದೆವು.

ಮೊದಲೇ ಕನ್ನಡ ಮೀಡಿಯಂನಿಂದ ಪಾಸಾಗಿ ಬಂದ ಗ್ರಾಮೀಣ ಹುಡುಗರು ನಾವು. ಈಗಲೇ ಹೀಂಗಾದರೆ ಮುಂದೆ ಹ್ಯಾಗೆ! ನಮ್ಮ ಗತಿ ಏನು? ಅಂತ ವಾರವೆಲ್ಲಾ ಸೈನ್ಸ್ ಕ್ಲಾಸಿನಲ್ಲಿ ಕುಂತು ಗೋಳಾಡಿಕೊಂಡ ನಾವೆಲ್ಲಾ ಪಕ್ಷಾಂತರಕ್ಕೆ ರೆಡಿ ಆದೆವು. ಒಂದು ಶುಭದಿನ ಬೆಳಿಗ್ಗೆ ಆಗ ನಮ್ಮ ಪ್ರಿನ್ಸಿಪಾಲರಾಗಿದ್ದ ಕೆ.ವಿಶ್ವನಾಥ್ ಸರ್ ಹತ್ತಿರ ಹೋಗಿ. "ನಮಗೆ ಏನೆಂದರೆ ಏನೂ ತಿಳಿಯುತ್ತಿಲ್ಲ, ದಯವಿಟ್ಟು ಕಲಾ ವಿಭಾಗದ ಕನ್ನಡ ಮಾಧ್ಯಮಕ್ಕೆ ಹಾಕಿ" ಅಂತ ಅರ್ಜಿ ಕೊಟ್ಟೆವು.



ಅವರು ಆರಂಭದಲ್ಲಿ ಹೀಗೆ ಆಗುತ್ತೆ, ಸುಮ್ಮನೆ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿರಿ. ಮುಂದೆ ತಾನೇತಾನಾಗಿ ಅದು ಅರ್ಥವಾಗುತ್ತದೆ ಅಂತ ಸಾಕಷ್ಟು ತಿಳಿ ಹೇಳಿದರು. ಅವರ ಮಾತು ಸರಿ ಇತ್ತು, ಆಗ ನಮಗೆ ಅದು ಅರ್ಥವಾಗುವ ವಯಸ್ಸಾಗಿರಲಿಲ್ಲ. ಅವರ ಮಾತಿನಿಂದ ಸೋಮು ಅನ್ನುವ ಸ್ನೇಹಿತನೊಬ್ಬ ಅಲ್ಲೇ ಉಳಿದ. ನಾವೆಲ್ಲಾ "ಸರ್, ನಮ್ಮ ಕೈಯಿಂದ ಆಗವಲ್ಲರಿ. ಮ್ಯಾಟ್ರಿಕ್‌ನಲ್ಲಿ ಇಂಗ್ಲಿಷ್ ಒಂದೇ ವಿಷಯ ನಮಗೆ ಸಾಕಷ್ಟು ಭುಗಿಲು ಹುಟ್ಟಿಸಿತ್ತು. ಇಲ್ಲಿ ನೋಡಿದರೆ ಎಲ್ಲಾ ವಿಷಯವು ಇಂಗ್ಲಿಷ್‌ನಲ್ಲಿದೆ. ನಮ್ಮ ತಲಿಮ್ಯಾಗ ಎತ್ತಿ ಕಲ್ಲುಹಾಕಿದರೂ ಇದು ಆಗುವುದಿಲ್ಲ, ನಮಗೆ ಕನ್ನಡ ಮೀಡಿಯಂ ಆರ್ಟ್ಸ್ ಸೆಕ್ಷನ್‌ಗೆ ವರ್ಗಾಯಿಸಿರಿ" ಅಂತ ದುಂಬಾಲು ಬಿದ್ದೆವು. ಸರಿ ಹೋಗ್ರಿ ಅಂತ ನಮ್ಮನ್ನು ಕಲಾ ವಿಭಾಗಕ್ಕೆ ವರ್ಗಾಯಿಸಿದರು. ಆಗ ಸೈನ್ಸ್ ವಿಭಾಗದಲ್ಲಿ ಉಳಿದ ಆ ಸೋಮು ಎಂಬ ನಮ್ಮ ಗೆಳೆಯ ಇದೀಗ ಬಹುದೊಡ್ಡ ಅಧಿಕಾರಿಯಾಗಿದ್ದಾನೆ. ಆ ಮಾತು ಬೇರೆ. ಆದರೆ ನಮ್ಮಗಳ ಕಥೆ ಈ ಇಂಗ್ಲಿಷ್‌ನಿಂದ ಬೇರೆಯೇ ಆಯಿತು.

ಆಗ ಕಲಾ ವಿಭಾಗದಲ್ಲಿ ಪ್ರಥಮ ಪಿಯುಸಿಯಲ್ಲಿ ಕ್ಯಾರಿವೋವರ್ ಪದ್ಧತಿ ಇದ್ದು ಹ್ಯಾಗೋ ಪಾಸಾಗಿ ದ್ವಿತೀಯ ಪಿಯುಸಿಗೆ ತಲುಪಿಕೊಂಡೆವು. ಆದರೆ ಇಲ್ಲಿಯೂ ನನಗೆ ಇಂಗ್ಲಿಷ್ ಒಂದೇ ಹೆದರಿಕೆ ಹುಟ್ಟಿಸ್ತಾ ಇತ್ತು, ಉಳಿದ ಎಲ್ಲಾ ವಿಷಯಕ್ಕೆ ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದರೂ ಇಂಗ್ಲಿಷ್‌ನಲ್ಲಿ ಇಪ್ಪತ್ತಮೂರು ಅಂಕ ಪಡೆದು ಫೇಲಾಗಿದ್ದೆ. ಅದು ಎಂಬತ್ತರ ದಶಕ. ಲಂಕೇಶ್ ಪತ್ರಿಕೆ ಆರಂಭವಾಗಿದ್ದ ಕಾಲ. ಕಾಲೇಜಿನಲ್ಲಿ ಸದಾ ಲಂಕೇಶ್, ತೇಜಸ್ವಿ, ಕಾರಂತ, ಭೈರಪ್ಪರ ಕಾದಂಬರಿ, ಕಥೆ ಓದಿ ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸಿ ಜಾಣ ವಿದ್ಯಾರ್ಥಿಯಾಗಿ ಗುರುತಿಸಿಕೊಂಡಿದ್ದ ನಾನು ಫೇಲ್ ಆದದ್ದಕ್ಕೆ ತೀರಾ ದುಃಖವಾಗಿತ್ತು, ಸಮಾಧಾನ ಅಂದ್ರೆ ನನ್ನ ಸ್ನೇಹಿತರು ಸಹ ಫೇಲ್ ಆಗಿದ್ದರು. ಆದರೆ ನನ್ನ ಪ್ರತಿಸ್ಪರ್ಧಿ ವಿದ್ಯಾರ್ಥಿಗಳು ಕಾಣಿಸಿದಾಗಲೆಲ್ಲಾ ನನ್ನ ಕಣ್ಣೀರು ಹರೀತಾ ಇದ್ದವು. ಅವರು ರಸ್ತೆಯಲ್ಲಿ ಕಂಡರೆ ಸಾಲ ಮಾಡಿದವರು ತಪ್ಪಿಸಿಕೊಂಡಂತೆ ರಸ್ತೆ ಬದಲಾಯಿಸುತ್ತಿದ್ದೆ. ಒಂದು ವರ್ಷ ಆ 'ಫೇಲ್' ಎಂಬ ಅವಮಾನ ಹೊತ್ತು ಮನೆಯಲ್ಲಿದ್ದೆ.

ಆಗ ವಿಕ್ರಮ ಗೈಡ್‌ಗಳು ಕನ್ನಡ ಹಾಗೂ ಇಂಗ್ಲಿಷ್ ಎರಡರ ಸಾರಾಂಶ ಕೊಟ್ಟು ಅರ್ಥವಾಗುವಂತಿದ್ದವು. ಇಡೀ ವರ್ಷ ಅದೊಂದೆ ವಿಷಯ ಓದಿ ಹ್ಯಾಗೋ ಪಾಸಾಗಿ ಗೆದ್ದೆ ಅಂದುಕೊಂಡಿದ್ದೆ. ಮುಂದೆ ಬಿಎದಲ್ಲಿ ಅರ್ಥಶಾಸ್ತ್ರ ಎಂಎನಲ್ಲಿ ಕನ್ನಡ ತೆಗೆದುಕೊಂಡು ಉತ್ತಮಶ್ರೇಣಿಯಲ್ಲಿ ಪಾಸಾಗಿ ಇಂದು ಆರೋಗ್ಯ ಶಿಕ್ಷಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವೆ. ಆದಾಗ್ಯೂ ಇಂದಿಗೂ ಇಂಗ್ಲಿಷ್ ಅಂದ್ರೆ ಭಯ.


ಹೈಸ್ಕೂಲ್ ಮಟ್ಟದವರೆಗೂ ಕನ್ನಡ ಮೀಡಿಯಂನಲ್ಲಿ ಓದಿದ ಮಗಳು ಕಾವ್ಯ ಈಗ ಬಿಬಿಎಂದಲ್ಲಿ ಇಂಗ್ಲಿಷ್‌ನಲ್ಲಿರುವ ಆ ದಪ್ಪದಪ್ಪ ಪುಸ್ತಕಗಳನ್ನು ಓದಿ ಹ್ಯಾಗೆ ಅರ್ಥ ಮಾಡ್ಕೋತಾಳೋ ಎಂಬ ಭಯ. ಕನ್ನಡ ಮಾಧ್ಯಮದಲ್ಲಿ ಓದಿ ಇದೀಗ ಇಂಗ್ಲಿಷ್ ಮೀಡಿಯಂದಲ್ಲಿ ಓದುತ್ತಿರುವ ಕೊನೆಯ ಮಗು ಬಸವಪ್ರಭು ತನ್ನ ತೊಂದರೆ ಹೇಳಿಕೊಂಡಾಗ ಏನೂ ಹೇಳಲಾಗದ ನನ್ನ ಅಸಹಾಯಕತೆ ನನಗೆ ಮಾತ್ರ ಗೊತ್ತು. ಹೀಗೆ ಇಡೀ ನಮ್ಮ ಕುಟುಂಬಕ್ಕೆ ಇಂಗ್ಲಿಷ್ ಎಂಬ ಮೂದೇವಿ ಕಾಡುತ್ತಿದೆ. ಕನ್ನಡ ವಾತಾವರಣ, ಕನ್ನಡ ಸಾಹಿತ್ಯದಲ್ಲಿ ಅಷ್ಟಿಷ್ಟು ಹೆಸರು ಇರುವ ನನ್ನ ಪರಿಸ್ಥಿತಿ, ನನ್ನ ಮಕ್ಕಳ ಪರಿಸ್ಥಿತಿ ನೆನೆದು ಈಗಲೂ ಒಮ್ಮೊಮ್ಮೆ ಭಯ. ಆದಾಗ್ಯೂ ಈಗಿನ ಮಕ್ಕಳು ನಮಗಿಂತ ಹುಷಾರು ಎಂಬ ಧೈರ್ಯವಿದೆ.

-ಸಿದ್ಧರಾಮ ಹೊನ್ಕಲ್, ಶಹಾಪುರ

ಇಂಗ್ಲಿಷ್ ಎಂಬ ಬಾಂಬ್!

1968-69ರಲ್ಲಿ ನಾನಾಗ ಏಳನೇ ತರಗತಿ ಪಾಸಾಗಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ಎಲ್ಲಿಗೆ ಹೋಗುವುದು ಎಂದು ಯೋಚನೆಯಲ್ಲಿರುವಾಗ ಯಾರೋ ಪುಣ್ಯಾತ್ಮರು ಸಿದ್ಧಗಂಗಾಮಠದ ದಾರಿ ತೋರಿಸಿದ್ದರು. ಅದೇ ಸಮಯಕ್ಕೆ ಸರಿಯಾಗಿ ನಮ್ಮೂರಿನ ಬುದ್ಧಿವಂತರ್‍ಯಾರೋ ನಮ್ಮಪ್ಪನಿಗೆ "ನಿನ್ನ ಮಗನನ್ನು ಇಂಗ್ಲಿಷ್ ಮೀಡಿಯಂಗೆ ಸೇರಿಸು ಮುಂದೆ ಇಂಜಿನಿಯರ್ ಆಗ್ತಾನೆ" ಅಂತ ತಲೆಕೆಡ್ಸಿದ್ರು. ಸರಿ ನನ್ನಪ್ಪ ಏನಾರ ಮಾಡಿ ನನ್ನನ್ನು ಇಂಜಿನಿಯರ್ ಮಾಡಲೇಬೇಕೆಂಬ ಹಠದಿಂದ ಮಠದಲ್ಲಿ ಇಂಗ್ಲಿಷ್ ಮೀಡಿಯಂಗೆ ಸೇರಿಸಿ "ಚೆನ್ನಾಗಿ ಓದಿ ಇಂಜಿನಿಯರ್ ಆಗ್ಬೇಕು" ಅಂತ ತಲೆ ಸೇವರಿಸಿ ಆಶೀರ್ವಾದ ಮಾಡಿಹೋದರು. ನನಗೋ ಶಾಲೆಯಲ್ಲಿ ಮೇಷ್ಟ್ರುಗಳು ಹೇಳಿಕೊಡುತ್ತಿದ್ದ ಯಾವ ಪಾಠವೂ ಅರ್ಥವಾಗುತ್ತಿರಲಿಲ್ಲ ಎಲ್ಲವೂ ಇಂಗ್ಲಿಷ್‌ಮಯವಾಗಿರುತ್ತಿತ್ತು. ಅಯ್ಯೋ ದೇವರೇ ಏನಪ್ಪಾ ಮಾಡೋದು. ಈ ನಡುವೆ ಡಾ. ರಾಜ್‌ರವರ 'ದಾರಿ ತಪ್ಪಿದ ಮಗ' ಸಿನಿಮಾ ರಿಲೀಜ್ ಆಯಿತು. ತುಮಕೂರಿನ ಯಾವುದೋ ಥಿಯೇಟರ್‌ನಲ್ಲಿ ಅದನ್ನ ನೋಡಲು ಹೋಗಿದ್ದೆ. ಅದರಲ್ಲಿ ರಾಜ್ ಮತ್ತು ವಜ್ರಮುನಿಯ ನಡುವೆ ಯಾವುದೋ ವಿಷಯದಲ್ಲಿ ವಾಗ್ವಾದ, ವಜ್ರಮುನಿಯಿಂದ ಏನೋ ಆದೇಶ, ರಾಜ್ ತಕ್ಷಣ ವಜ್ರಮುನಿಯನ್ನ ಇರಿಯುವ ನೋಟದಿಂದ ನೋಡಿ "ಇಂಪಾಜಿಬಲ್" ಅಂತಾ ಸೂಟ್‌ಕೇಸಿನೊಂದಿಗೆ ಹೊರಟೋಗ್ತಾರೆ. ವಜ್ರಮುನಿ ಸಿಟ್ಟಿನಿಂದ ರಾಜ್ ಮೇಲೆ ಕೆಕ್ಕರಿಸುವ ದೃಶ್ಯ. ಸರಿ ವಜ್ರಮುನಿಗೆ ಇಷ್ಟೊಂದು ಸಿಟ್ಟು ಬರಬೇಕಾದ್ರೆ ರಾಜ್ ಹೇಳಿದ 'ಇಂಪಾಜಿಬಲ್' ಅನ್ನೋ ಪದದ ಅರ್ಥ?

ನನಗೆ ಗೊತ್ತಿಲ್ಲ, ಯಾರನ್ನಾದರೂ ಕೇಳೋಣ ಅಂದ್ರೆ ನಾನು ಇಂಗ್ಲಿಷ್ ಮೀಡಿಯಂ ವಿದ್ಯಾರ್ಥಿ. ಇದೊಂದೇ ಒಂದು ಪದ ನನ್ನನ್ನು ಸುಮಾರು ವರ್ಷಗಳ ಕಾಲ ತಲೆ ತಿನ್ತು, ಥೂ ನನ್ನಪ್ಪ ನನ್ನನ್ನು ಕನ್ನಡ ಮೀಡಿಯಂ ಸೇರಿಸೋದು ಬಿಟ್ಟು ದರಿದ್ರ ಈ ಇಂಗ್ಲಿಷ್ ಮೀಡಿಯಂಗೇ ಸೇರಿಸಿ... ಅಂತೂ ಇಂತೂ ಹೇಗೋ ಎಸ್ಸೆಸ್ಸೆಲ್ಸಿ ಪಾಸಾಯಿತು. 81ರ ಡಿಸೆಂಬರ್‌ನಲ್ಲಿ ಕೆಎಸ್ಸಾರ್ಟಿಸಿಯಲ್ಲಿ ನಿರ್ವಾಹಕನಾಗಿ ನೌಕರಿಗೆ ಸೇರಿದೆ. ಈಗೊಂದೆರಡು ವರ್ಷದಲ್ಲಿ ಟ್ರಾಫಿಕ್ ಕಂಟ್ರೋಲರ್ ಆಗಿ ಪ್ರಮೋಷನ್ ಆಗಿದೆ. ನನ್ನ ಇಂಗ್ಲಿಷ್ ಮೀಡಿಯಂ ಗೊಂದಲ ನನ್ನ ಮಕ್ಕಳಿಗೆ ಆಗೋದು ಬ್ಯಾಡ ಕನ್ನಡದಲ್ಲೇ ಓದಿ ವಿದ್ಯಾವಂತರಾಗಲಿ ಅಂತಾ ಪುತ್ತೂರಿನ (ದ.ಕ) ವಿಕ್ಟರ್ಸ್‌ಗೆ ಸೇರಿಸಿದೆ. ಈಗ ಮಗಳು MCom ಮುಗಿಸುವುದರಲ್ಲಿದ್ದಾಳೆ. ಮಗ ಮೆಕಾನಿಕಲ್ BE ಮುಗಿಸುವುದರಲ್ಲಿದ್ದಾನೆ. ಮುಂದೆ ಅವನಿಗೆ ಕ್ಯಾಂಪಸ್ ಸೆಲೆಕ್ಷನ್ ಇದೆ. ಮೊನ್ನೆ ಸಂಜೆ ನನ್ನ ಹೆಂಡತಿ ಹೀಗೆ ಮಾತಿನ ಮಧ್ಯೆ, "ನಾನ್ ಬಡ್ಕೊಂಡೆ ಹುಡುಗನ ಇಂಗ್ಲಿಷ್ ಮೀಡಿಯಂಗೆ ಸೇರಿಸಿ ಅಂತಾ, ನನ್ನ ಮಾತ್ ಕೇಳಲಿಲ್ಲ, ಈಗ ನೋಡಿ ಕ್ಯಾಂಪಸ್ ಸೆಲೆಕ್ಷನ್ನಿಗೆ ಚೆನ್ನಾಗಿ ಇಂಗ್ಲಿಷ್ ಮಾತ್ನಾಡಕ್ಕೆ ಬರ್‍ಬೇಕಂತೆ" ಅಂತ ಸಣ್ಣದಾಗಿ ಒಂದು ಇಂಗ್ಲಿಷ್ ಅನ್ನೋ ಬಾಂಬ್ ಸಿಡಿಸಿದ್ಲು. ಎದುರಿಗೆ ಕುಳಿತಿದ್ದ ಮಗನನ್ನು "ಹೌದೇನಯ್ಯಾ" ಎಂದೆ. "ಹೌದು ಅಪ್ಪಾಜಿ ಕೆಲವು ಕಂಪನಿಗಳಿಂದ ಕ್ಯಾಂಪಸ್ ಸೆಲೆಕ್ಷನ್ನಿಗೆ ಬರೋರಿಗೆ ಕನ್ನಡವೇ ಬರಲ್ವಂತೆ." ಮತ್ತೊಂದು ಬಾಂಬ್. ಅಯ್ಯೋ ದೇವರೇ. ನನ್ನ ಸ್ನೇಹಿತರ ಮುಂದೆ ನೋಡ್ರೋ ನನ್ನ ಮಗನನ್ನ ಕನ್ನಡದಲ್ಲಿ ಓದಿಸಿ ಇಂಜಿನಿಯರ್ ಮಾಡ್ತಿದ್ದೀನಿ ಅಂತಾ ಹೇಳ್ಕೊಂಡ್ ಬರ್‍ತಿದ್ದೆ. ಈಗ?



ನನಗೊತ್ತು ಕಾನ್ವೆಂಟ್ ಶಾಲೆಯಿಂದ ಬಂದಿರೋ ಎಷ್ಟೋ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಮಾತನಾಡಲು ಬರಲ್ಲ, ಹಾಗೇ ಎಷ್ಟೋ ಇಂಜಿನಿಯರ್‌ಗಳಿಗೂ ಸಹ, ಆದರೆ ಮೂವತ್ತೈದು ವರ್ಷದ ಹಿಂದೆ ಹಾಗೂ ಈಗಲೂ ಇಂಗ್ಲಿಷ್ ನನ್ನನ್ನು ಹೆದರಿಸುತ್ತಲೇ ಇದೆ!

-ಎಚ್.ವಿ. ಹೊನ್ನಲಿಂಗಪ್ಪ, ಮಂಗಳೂರು

ಆತ್ಮಹತ್ಯೆಯೇ ವಾಸಿ ಅನಿಸಿತ್ತು

ಐದನೇ ಕ್ಲಾಸಿಗೆ ಸೇರಿದ್ದೇ ತಡ ಇಂಗ್ಲಿಷ್ ನನ್ನನ್ನು ಭಯೋತ್ಪಾದಕನಂತೆ ಬೆನ್ನು ಹತ್ತಿತು. ಇಂಗ್ಲಿಷ್ ಕಲಿಸುವುದರ ಭಾಗವಾಗಿ ಬ್ರಾಹ್ಮಣ ಮುಖ್ಯೋಪಾಧ್ಯಾಯ ಬಾಲಕೃಷ್ಣ ಪರಂಜಪೆಯವರಿಂದ ಆಗುತ್ತಿದ್ದ ಅವಮಾನ ಮತ್ತು ಹಿಂಸೆಗಳನ್ನು ಸಹಿಸಲಸಾಧ್ಯವಾಗಿ ನಮ್ಮೂರ ಕೆರೆಯಂಗಳದಲ್ಲಿ ಏಡಿಗಳನ್ನು ಹಿಡಿಯುವುದೇ ನನಗೆ ಪರಮ ಪವಿತ್ರ ಕೆಲಸವಾಗಿತ್ತು.


ಇಂಗ್ಲಿಷಿಗೆ ಹೆದರಿ ಒಂದು ದಿನ ನಾನು ಮತ್ತು ಯೋಗೀಶ ಶಾಲೆಗೆ ಚಕ್ಕರ್ ಹೊಡೆದು ಏಡಿ ಹಿಡಿಯಲು ಹೋದೆವು. ಮೈ ಕೈ ಕೆಸರು ಮಾಡಿಕೊಂಡು ಏಡಿಗಳನ್ನು ಹಿಡಿದು ಅರ್ಧಭಾಗ ಮಾಡಿಕೊಂಡು, ನನ್ನ ಭಾಗಕ್ಕೆ ಬಂದಿದ್ದ ಎಂಟು ಏಡಿಗಳನ್ನು ನನ್ನ ಚೊಣ್ಣದ ಎಡಜೇಬಿನಲ್ಲಿ ತುಂಬಿಕೊಂಡು, ಏಡಿಗಳು ತಪ್ಪಿಸಿಕೊಳ್ಳುತ್ತವೆಂದು ಏಡಿಗಳಿದ್ದ ಜೇಬಿನ ಎರಡೂ ಬದಿಯ ಬಟ್ಟೆಯನ್ನು ಭದ್ರವಾಗಿ ಹಿಡಿದುಕೊಂಡು ಊರನಡುವೆ ಬರುತ್ತಿದ್ದೆ. ಶಾಲೆಗೆ ತಪ್ಪಿಸಿಕೊಂಡ ನಮ್ಮಂತವರನ್ನು ಹಿಡಿದು ತರಲೆಂದೇ ನೇಮಕಗೊಂಡಿದ್ದ ಕಾತ್ಯಾಂಬೇ ಅಕ್ಕ ನನ್ನನ್ನು ನೋಡಿದ್ದೇ ತಡ ರೆಡ್‌ಹ್ಯಾಂಡಾಗಿ ಹಿಡಿದು ನೇರ ಹೆಡ್‌ಮಾಸ್ತರ ಹತ್ತಿರ ಎಳೆದುಕೊಂಡು ಹೋದಳು. 'ಶೂದ್ರ ಮುಂಡೇಗಂಡ' ಎಂದು ಬೈಯುತ್ತಾ ಹೆಡ್‌ಮಾಸ್ತರು ಹೊಡೆಯಲು ಬೆತ್ತವನ್ನೆತ್ತಿ ಎರಡೂ ಕೈ ಚಾಚಲು ಹೇಳಿದರು. ನನ್ನನ್ನು ಹೊಡೆಯಲು ಎಚ್‌ಎಮ್ ಏರಿಬಂದದ್ದರಿಂದ ಹೆದರಿ ಎರಡೂ ಕೈ ಚಾಚಿದ್ದೇ ತಡ ಜೇಬಿನೊಳಗಿದ್ದ ಏಡಿಗಳಿಗೆ ಸ್ವಾತಂತ್ರ್ಯ ಸಿಕ್ಕು ಒಂದೊಂದೇ ನನ್ನ ಜೇಬಿನಿಂದ ಹೊರಬೀಳಲಾರಂಭಿಸಿದವು. ಬಾಲಕೃಷ್ಣ ಪರಂಜಪೆ ಮುಖ ಕಿವುಚಿಕೊಂಡು ಕಕ್ಕಾಬಿಕ್ಕಿಯಾದರು. ಅವರು ಬ್ರಾಹ್ಮಣ ಹೆಡ್‌ಮಾಸ್ತರೆಂದು ಏಡಿಗಳಿಗೆ ಗೊತ್ತಾಗುವುದಿಲ್ಲವಲ್ಲ- ದಿಕ್ಕಾಪಾಲಾಗಿ ಓಡಾಡುತ್ತಿದ್ದ ಏಡಿಗಳಲ್ಲಿ ಒಂದೆರಡು ಏಡಿಗಳು ಅವರ ಕಾಲಿನ ಮೇಲೂ ಹತ್ತಿದಾಗ "ಅಯ್ಯಯ್ಯೋ" ಕಿರುಚುತ್ತಾ ಅವರು ಕೊಠಡಿಯಿಂದ ಹೊರಗೋಡಿದರು. ನಾನೂ ತಪ್ಪಿಸಿಕೊಂಡು ಓಡಿದೆ.

ಸೇಡು ತೀರಿಸಿಕೊಳ್ಳಲೆಂಬಂತೆ ಮರುದಿನ ಹೆಡ್‌ಮಾಸ್ತರರು ನನ್ನನ್ನು ತಮ್ಮ ಕೋಣೆಗೆ ಕರೆಸಿ ತಮ್ಮ ತೀಕ್ಷ್ಣ ಕಣ್ಣುಗಳಿಂದ ನನ್ನ ಚೊಣ್ಣದ ಜೇಬುಗಳನ್ನು ಪರೀಕ್ಷಿಸಿದ ನಂತರ ಇಂಗ್ಲಿಷ್ ಪದಗಳ ಸ್ಪೆಲ್ಲಿಂಗ್ ಕೇಳಲಾರಂಭಿಸಿದರು. ನನಗೆ ಗೊತ್ತಿದ್ದದ್ದು ಟಿ.ಎಚ್.ಐ.ಎಸ್ - ದಿಸ್, ಟಿ.ಎಚ್.ಎ.ಟಿ - ದಟ್, ಈ ಎರಡು ಪದಗಳ ಸ್ಪೆಲ್ಲಿಂಗ್ ಮಾತ್ರ. ಅವರು ಕೇಳಿದ್ದಕ್ಕೆ ಉತ್ತರ ಹೇಳದಿದ್ದುದರಿಂದ ಕೆಂಡಮಂಡಲರಾದ ಹೆಡ್‌ಮಾಸ್ತರು ಬೆತ್ತದಿಂದ ನನ್ನ ಬೆನ್ನಿನ ಮೇಲೆ ಎರಡು ಬಾರಿಸಿದರು. ಶಾಲೆಯವರೆಗೂ ಏಡಿಗಳನ್ನು ತಂದಿದ್ದರಿಂದ ಏನೇನು ಕಾದಿದೆಯೋ? ಎಂದು ಹೆದರಿದ್ದ ನನಗೆ ಎರಡು ಒದೆಗಳು ಏನೂ ಅನ್ನಿಸಲಿಲ್ಲ. ನಾನು ಅಳದೆ, ಕಿರುಚಿಕೊಳ್ಳದೆ ಸೆಟ್ಟಗೆ ನಿಂತಿದ್ದನ್ನು ನೋಡಿ ಮತ್ತಷ್ಟು ಕೆರಳಿದ ಎಚ್‌ಎಮ್ ನನ್ನನ್ನು ಗೋಡೆಗೆ ಮುಖಮಾಡಿ ನಿಲ್ಲಿಸಿ ಐದಾರು ಏಟು ಜೋರಾಗಿಯೇ ಬಾರಿಸಿದರು - ಆಗ ನಾನು ಅಳಲಾರಂಭಿಸಿದೆ. ಒರೆಸಿಕೊಂಡ ಸಿಂಬಳ ಮತ್ತು ಕಣ್ಣೀರಿನಿಂದಾಗಿ ನನ್ನ ಅಂಗಿ ಭಾಗಶಃ ತೋಯ್ದಿತ್ತು. ಹೆಡ್‌ಮಾಸ್ತರರ ಉಗ್ರಾವತಾರದಿಂದಾಗಿ ನನ್ನ ಚೊಣ್ಣವೂ ಸಹ ಅಂಗಿಯನ್ನು ನಾಚಿಸುವಂತೆ ಒದ್ದೆಯಾಗಿತ್ತು.

ಗೆಳೆಯರಾದ ಯೋಗೀಶ, ಹನುಮಂತರಿಗೆ ನನ್ನ ಗತಿಯೇ ಪ್ರಾಪ್ತಿಯಾಗಲಿದ್ದುದರಿಂದ ನಾವು ಮೂವರೂ ಸೇರಿ 'ಇಂಗ್ಲಿಷ್‌ನಿಂದ್ಲೇ ಇದೆಲ್ಲ ಆಗಿದ್ದು, ಕರೆಂಟ್ ವೈರ್ ಮುಟ್ಟಿ ಸತ್ತೋಗಾನ' ಎಂದು ತೀರ್ಮಾನಿಸಿಕೊಂಡು ಊರ ಹೊರಗಿನ ಟ್ರಾನ್ಸ್‌ಫಾರ್ಮರ್ ಕಂಬದ ಹತ್ತಿರ ಹೋದೆವು. ಎರಡು ಕಂಬಗಳ ಒಂದೊಂದು ಬದಿಯಿಂದ ನಾನು ಮತ್ತು ಯೋಗೀಶ ಟ್ರಾನ್ಸ್‌ಫಾರ್ಮರ್‌ವರೆಗೆ ಹತ್ತಿದ್ದೂ ಆಗಿತ್ತು. ಟ್ರಾನ್ಸ್‌ಫಾರ್ಮರ್‌ನ ಗೊಯ್ ಎಂಬ ಶಬ್ದಕ್ಕೆ ಅಂಜಿ ನಿಂತಿದ್ದೆವು. ಹತ್ತಿರದಲ್ಲೇ ಕುರಿ ಮೇಯಿಸುತ್ತಿದ್ದ ಗೊಲ್ಲರ ಕಾಟಪ್ಪ ಕೂಗುತ್ತಾ ಕೋಲನ್ನೆತ್ತಿಕೊಂಡು ನಮ್ಮೆಡೆಗೇ ಓಡಿಬರುತ್ತಿದ್ದ. ಕೆಳಗೆ ನಿಂತಿದ್ದ ಹನುಮಂತ ಜೋಳದ ತೂಳೆಗಳು ಕಾಲಿಗೆ ಚುಚ್ಚುತ್ತಿದ್ದರೂ ಅದರ ಪರಿವೆ ಇಲ್ಲದೆ ಮುಚ್ಚಸಂಗೆ ಕಿರುಚುತ್ತಾ ಓಡಲಾರಂಭಿಸಿದ್ದ. ನಾವಿಬ್ಬರೂ ಕೆಳಗೆ ಹಾರಿ ಹನುಮಂತನೆಡೆಗೆ ಓಡಿದೆವು - ಹೀಗೆ ಮೊದಲ ಬಾರಿಗೆ ಇಂಗ್ಲಿಷ್ ನನ್ನನ್ನು ಕರೆಂಟು ಮುಟ್ಟುವ ಹತಾಶೆಗೆ ಕೈಹಾಕುವಷ್ಟು ಹೆದರಿಸಿತ್ತು.

-ಚಂದ್ರಶೇಖರ ತೋರಣಘಟ್ಟ, ದಾವಣಗೆರೆ

ಬೆನ್ನತ್ತಿದ ಭೂತ




1950ರ ದಶಕ. ಸ್ವಾತಂತ್ರ್ಯ ಬಂದು ಗಾಂಧಿಯ ಕೊಲೆಯಾಗಿತ್ತು, ನಾನಾಗ ಮಧುಗಿರಿ ತಾಲ್ಲೂಕು ಬಡವನಹಳ್ಳಿ NTM ಶಾಲಾ ವಿದ್ಯಾರ್ಥಿ. ಅದು ನಮ್ಮೂರು ಆವಿನಮಡುಗಿಗೆ 4-5 ಮೈಲಿ ದೂರ. ಕೂಲಿಮಠದಲ್ಲಿ ಮಗ್ಗಿ, ಕಾಗುಣಿತ, ಗೋವಿನ ಹಾಡು, ಬಾಲಬೋಧೆ ಕಲಿತಿದ್ದ ನನ್ನನ್ನು ಏಕದಂ ಮೂರನೇ ಕ್ಲಾಸಿಗೆ ಸೇರಿಸಿಕೊಂಡರು. 5ನೇ ತರಗತಿಯಿಂದ ಇಂಗ್ಲಿಷ್ ಅಭ್ಯಾಸ. ABCD ಈ 26 ಅಕ್ಷರಗಳು ಸುಲಭವೇ. ಆದರೆ ದೊಡ್ಡಕ್ಷರ, ಸಣ್ಣಕ್ಷರ ಕೂಡಿಸಿ ಬರೆವುದೇ ಫಜೀತಿ, ಗ್ರಾಮರ್ ಇನ್ನೂ ಕಷ್ಟ. ಹೊಸಹಳ್ಳಿ ಮೇಷ್ಟ್ರು ಕಡ್ಡಿ ಹಿಡಿದು ಬಂದರೆಂದರೆ ಮೈಯಲ್ಲಿ ಚಳುಕು- ಅವರು ಹೋಗುವತನಕ. ಗಣಿತದ ಮೇಷ್ಟ್ರು ಗುರುಲಿಂಗೇಗೌಡರು ಕಿವಿ ಹಿಡಿದೆತ್ತಿ ನಿನ್ನ ಕಿವಿ ಗಾಂಧಿ ಕಿವಿ ಇದ್ದಂತೆ ಎಂದಾಗ ಮೈ ಪುಳಕ, ಕಣ್ಣೀರ ... 8ನೇ ತರಗತಿಯ ಕೊನೆಯ LS ಪರೀಕ್ಷೆ, ಮಧುಗಿರಿ ಸೆಂಟರ್. ಉಳಿದೆಲ್ಲ ವಿಷಯಗಳು ಒಂದು ತೂಕವಾದರೆ ಇಂಗ್ಲಿಷ್‌ದೇ ಬೇರೆ ತೂಕ. ಆ ಬೇಸಿಗೆಯಲ್ಲಿ ಮಾವಿನ ಮರಕ್ಕೆ ಕಲ್ಲು ಹೊಡೆದಾಗ 'ಮೊದಲ ಕಲ್ಲಿಗೆ ಮಾವಿನ ಕಾಯಿ ಬಿದ್ದರೆ ಇಂಗ್ಲಿಷ್ ಪಾಸ್' ಎಂದುಕೊಳ್ಳುವುದು, ಬೀಳದಿದ್ದಾಗ ಹ್ಯಾಪ್ ಮೋರೆ! ರಿಜಲ್ಟ್ ಬಂತು. ಇಂಗ್ಲಿಷ್‌ನಲ್ಲಿ ... ಅಂಕಗಳು. ನಮ್ಮೂರಿಗೆ ನಾನೇ ಮೊದಲು ಇಂಗ್ಲಿಷ್ ಕಲಿತವನು. ಮುಂದೇನು ಎಂಬ ಚಿಂತೆ?

ಅದೇ ವರ್ಷ ಶಿರಾ ತಾಲ್ಲೂಕು ಚಿಕ್ಕನಹಳ್ಳಿಯಲ್ಲಿ ಒಂದು ರೂರಲ್ ಹೈಸ್ಕೂಲ್ ತೆರೆಯಿತು. ನನ್ನನ್ನು ಅಲ್ಲಿಗೆ ಸೇರಿಸಿದರು. ಕನ್ನಡ ಮಾಧ್ಯಮದಲ್ಲಿ ಎಲ್ಲವೂ ಸುಲಭವೇ. ಆದರೆ ಇಂಗ್ಲಿಷ್ ಭಾಷೆ ಮಾತ್ರ ಕಬ್ಬಿಣದ ಕಡಲೆ. ನಿವೃತ್ತಿಯ ಅಂಚಿನಲ್ಲಿದ್ದ ಹೆಡ್‌ಮಾಸ್ಟರ್ ವೆಂಕೋಬರಾವ್ ರೆನ್ ಅಂಡ್ ಮಾರ್ಟಿನ್ ಅರೆದು ಕುಡಿಸಿದರೂ ಅಜೀರ್ಣ, ಪಥ್ಯವಾಗಲಿಲ್ಲ, ನೋಟ್ಸ್ ಬಾಯ್‌ಹಾರ್ಟ್ ಮಾಡಿ ಬರೆದುಬಂದೆ. 35 ಅಂಕಗಳ ಜೀವನಾಂಶದಲ್ಲಿ ಪಾಸಾಗಿದ್ದೆ.

SSLCಆದ ಮೇಲೆ ಮನೆಯವರ ಪ್ರಯತ್ನದಿಂದ ತುಮಕೂರಿನಲ್ಲಿ ಕಾಲೇಜಿಗೆ ಸೇರಿದೆ. PUC ಪರೀಕ್ಷೆ ಹತ್ತಿರ ಬಂದಾಗ ರಾ... ಎಂಬುವರ ಬಳಿ ಟ್ಯೂಷನ್ ಸೇರಿ ಅಂತೂ ಪಾಸಾದೆ. ಪ್ರಥಮ ಬಿಎನಲ್ಲಿ ಇಂಗ್ಲಿಷ್ ಡುಮುಕಿ. ಆ ವರ್ಷ ಪುನಃ ನೋಟ್ಸ್‌ನ್ನೇ ಅವಲಂಬಿಸಿ ಎರಡರಲ್ಲೂ 35-35 ಅಂಕ ಪಡೆದು ತೇರ್ಗಡೆಯಾದೆ. ಮೂರನೇ ವರ್ಷಕ್ಕೆ ಇಂಗ್ಲಿಷ್ ಸದ್ಯ ಇರಲಿಲ್ಲ. ಖುಷಿಯೋ ಖುಷಿ. ಕನ್ನಡ ಸಮಾಜಶಾಸ್ತ್ರದಲ್ಲಿ ಎರಡನೇ ಕ್ಲಾಸ್‌ನಲ್ಲಿ ಪಾಸಾದೆ. ಆನಂತರ ಮೈಸೂರಿನಲ್ಲಿ ಕನ್ನಡ ಎಂಎ ಸೇರಿದೆ. Lyrics ಎಂದು ಪ್ರತ್ಯೇಕ ಪೇಪರ್ ಇತ್ತು, ಸ್ವಪ್ರಯತ್ನದಿಂದ ಹಾಗೂ ಹೀಗೂ ಓದಿಕೊಂಡೆ. ಎಂಎ ಸೆಕೆಂಡ್ ಕ್ಲಾಸ್ ಬಂತು. ಬಚಾವಾದೆ. ಆದರೂ ಇಂಗ್ಲಿಷ್ ಸರಿಯಾಗಿ ಕಲಿಯಲಿಲ್ಲವೆಂಬ ಕೊರಗು ಇಂದಿಗೂ ಇದೆ. 2006ರಲ್ಲಿ ಅಮೆರಿಕಕ್ಕೆ ಹೋಗಿ ಬರುವಾಗಲಂತೂ ಇದರ ಅನುಭವ ಸಾಕಷ್ಟು ಆಯಿತು. ಇಂಗ್ಲಿಷ್ ಚೆನ್ನಾಗಿ ಕಲಿತಿದ್ದರೆ ಪ್ರವಾಸದ ರೀತಿಯೇ ಬೇರೆ. ಆದರೆ ಎಲ್ಲರೂ ಪರದೇಶಕ್ಕೆ ಹೋಗಲಾರರಷ್ಟೆ. ಆದ್ದರಿಂದ ಕುವೆಂಪು ಎಂದ 'ನಮ್ಮ ಕೋಟಿ ಕೋಟಿ ಮಕ್ಕಳಿಗೆ ಸಾಕು ಈ ಬಲಾತ್ಕಾರ', 1963ರಲ್ಲಿಯೇ ಅವರು ಇಂಗ್ಲಿಷಿನ ಜಿಲೋಟಿನ್ನಿಗೆ ನಮ್ಮ ಮಕ್ಕಳ ಕೊರಳೊಡ್ಡುವುದು ಎಂದು ಎಚ್ಚರಿಸಿದ್ದರು. ಆದರೆ ನಮ್ಮ ಇವತ್ತಿನ ಕಲಿಕೆ ಅದಕ್ಕೆ ತದ್ವಿರುದ್ಧ ಕೇಳುವರ್‍ಯಾರು?

-ಪ್ರೊ.ಶಿವರಾಮಯ್ಯ, ಬೆಂಗಳೂರು



ಇಂಗ್ಲಿಷ್ ನನ್ನನ್ನು ಹೆದರಿಸಿದ್ದು ಹೀಗೆ!

ಇಂಗ್ಲಿಷ್ ಭಾಷೆ ಒಬ್ಬೊಬ್ಬರನ್ನೂ ಒಂದೊಂದು ರೀತಿ ಕಾಡಿರುತ್ತದೆ. ಬಹಳಷ್ಟು ಜನ ಇಂಗ್ಲಿಷ್ ಭಾಷೆಯಿಂದಾಗಿ ತಮಾಷೆಯ, ಗಂಭೀರವಾದ ಪ್ರಸಂಗಗಳನ್ನು ಎದುರಿಸಿರುತ್ತಾರೆ. 'ಲಂಕೇಶ್' ವಿಶೇಷಾಂಕಕ್ಕಾಗಿ 'ಇಂಗ್ಲಿಷ್ ನನ್ನನ್ನು ಹೆದರಿಸಿದ ಬಗೆ' ಎಂಬ ವಿಷಯವನ್ನು ನಮ್ಮ ಓದುಗ ಮಿತ್ರರಿಗೆ ನೀಡಿದ್ದೆವು. ನಮಗೆ ಹಲವಾರು ಜನ ತಮ್ಮ ಅನುಭವಗಳನ್ನು ಬರೆದು ಕಳುಹಿಸಿದ್ದರು. ಅವುಗಳಲ್ಲಿ ಉತ್ತಮವಾದ ಕೆಲವೇ ಪತ್ರಗಳನ್ನು ಆಯ್ದು ಇಲ್ಲಿ ಪ್ರಕಟಿಸಲಾಗಿದೆ.



ಬೇತಾಳದಂತೆ ಕಾಡಿದೆ

ಒಂದರಿಂದ ನಾಲ್ಕನೆಯ ತರಗತಿಯವರೆಗೆ ನಿರುಮ್ಮಳವಾಗಿ ಕಲಿತು ಜ್ಞಾನಾರ್ಜನೆಯ ಹಾದಿ ಹೂವಿನಿಂದಲೇ ಕೂಡಿತ್ತು, ಮೃದು, ಮಧುರ. ಐದನೇ ತರಗತಿಗೆ ಪಾದಾರ್ಪಣೆ ಮಾಡುತ್ತಲೇ ಅಪ್ಪ ತಂದುಕೊಟ್ಟ ಪುಸ್ತಕ ಬಿಚ್ಚಿನೋಡಿದರೆ ಅರ್ಥವಾಗದ, ಓದಲು ಬಾರದ, ಬರೆಯಲು ಗೊತ್ತಿಲ್ಲದ ಹೊಸಲೋಕದ ಹಾದಿಯನ್ನು ತಡಕಾಡಿದಂತಾಯಿತು. ಇಂಗ್ಲಿಷ್ ಪಾಠ ಶುರು ಮಾಡಿದಾಗ ಶಿಕ್ಷಕರ ಬಾಯಿಂದ ಬರುವ ಶಬ್ದಗಳು ಬರೀ ಶಬ್ದಗಳಾಗಿರಲಿಲ್ಲ, ದೈವಾಂಶಸಂಭೂತರು ಮಾತ್ರ ಹೇಳುವ ದಿವ್ಯವಾಣಿಯಂತೆ ಕೇಳಿದೆವು. ಯಾವುದೋ ಹೊಸ ಲೋಕದರ್ಶನ ಉಂಟಾಗುತ್ತಿದೆ ಎನಿಸಿತು. ಎರಡಲ್ಲ ಮೂರು ಬಾರಿ ಹೇಳಿದ ಶಿಕ್ಷಕರು "ನಾಳೆ ಬರುವಾಗ ಇಷ್ಟನ್ನು ಕಲಿತುಕೊಂಡು ಬರಬೇಕು" ಎಂದಾಗ ಮಾತ್ರ ಉಸಿರೇ ಹೊರಡಲಿಲ್ಲ, ಮೈ ಬೆವರತೊಡಗಿತು. ಹೇಳಿಕೊಟ್ಟ ಶಬ್ದಗಳು ಒಂದೊಂದೆ ಕೈ ಕೊಡತೊಡಗಿದವು. ಕಾಲುಗಳು ಬೆವರಿ ಇಂದು ಬಂದಿದ್ದಕ್ಕೆ ಸಾಕ್ಷಿ ಹೆಜ್ಜೆಗಳನ್ನಿಟ್ಟವು. ನಿನ್ನೆ ಬಂದಿರಲಿಲ್ಲ ಎಂಬ ಹಾರಿಕೆಯ ಉತ್ತರದ ಹಾದಿಯನ್ನು ಮುಚ್ಚಿತ್ತು, ಸಂಜೆ ಊಟ ಮಾಡದೆ ಮಲಗಿ ಜ್ವರದ ನೆಪಹೇಳಿ ನಾಳೆ ಶಾಲೆಗೆ ಚಕ್ಕರ್ ಹಾಕುವುದು, ನಂತರ ಶಾಲೆಯನ್ನೇ ಬಿಡುವುದು ಎಂದು ತೀರ್ಮಾನಿಸಿಬಿಟ್ಟಿದ್ದೆ. ಆದರೆ ಅಪ್ಪನ ಹೊಡ್ತದ (ಮೆಣಸಿನಕಾಯಿ ಹೊಗೆ ಹಾಕಿ ಬುಟ್ಟಿಯೊಳಗೆ ಕೂಡಿಹಾಕುವುದು) ಶಿಕ್ಷೆಯ ಮುಂದೆ ಇಂಗ್ಲಿಷ್ ಕಲಿಕೆಯೇ ಸುಲಭ ಎನಿಸತೊಡಗಿತು. ಆರ್.ಎಸ್. ಮಾಚೇನಹಳ್ಳಿಯ ಹೊಡೆತದ ಕಲೆಗಳು ಮಾಸುವ ಮುನ್ನವೇ ಶೂರಬಕ್ಕೆ ಬಂದೆ.

ಇಂಗ್ಲಿಷ್ ಶಬ್ದಗಳನ್ನು ಓದಿ ಹೇಳಿ, ಅರ್ಥ ಬರೆಯಿಸಿದ ಶಾಲೆಯಿಂದ ಬಂದ ನನಗೆ ಶಿವರಾಯಪ್ಪನವರ ಇಂಗ್ಲಿಷ್ ಟು ಇಂಗ್ಲಿಷ್ ಮತ್ತಷ್ಟು ಕಂಗಾಲಾಗಿಸಿತು. ಇಂಗ್ಲಿಷ್‌ನಲ್ಲಿ ಕೇಳಿದ ಪ್ರಶ್ನೆಗಳಿಗೆ ತಟ್ಟನೆ ಉತ್ತರಿಸುವ ಪೇಟೆಯ ಮಕ್ಕಳ ಜೊತೆ ಕೂತು ಶಿಕ್ಷಕರು ಕೇಳುವ ಪ್ರಶ್ನೆಗಳೇ ಅರ್ಥವಾಗದೇ ಕಣ್ಣುಕಣ್ಣು ಬಿಡುತ್ತಾ ಕುಳಿತುಕೊಳ್ಳುವುದಲ್ಲದೇ ಶಿಕ್ಷಕರಿಗೆ ಕಾಣಿಸದಂತೆ

Dear, Dearer, Dearest English

1971ರ ಜುಲೈ ತಿಂಗಳಲ್ಲೊಂದು ದಿನ. ನಾನಾಗ ಧಾರವಾಡದ ಸರ್ಕಾರಿ ಟಿಸಿಎಚ್ ಕಾಲೇಜಿನಲ್ಲಿ ಉಪನ್ಯಾಸಕ. ನಮ್ಮ ನೇಬರ್ ...ಮುದರಡ್ಡಿ (ಹೆಸರು ಬದಲಿಸಿದೆ) ನನಗಿಂತ ಹತ್ತು ವರ್ಷಗಳಾದರೂ ಚಿಕ್ಕವ. ಇಲ್ಲಿಯ 'ಇಂಗ್ಲಿಷ್ ಲಾಂಗ್ವೇಜ್ ಟೀಚಿಂಗ್ ... ಬೋಧಕನಾಗಿದ್ದ. ಅವನ ಪತ್ನಿ ರೇಣುಕಾ (ಹೆಸರು ಬೇರೆ) ನಮ್ಮ ಕಾಲೇಜಿನಲ್ಲೇ ಉಪನ್ಯಾಸಕಿ. ಈ ಇಬ್ಬರೂ ಒಂದೇ ವರ್ಷ ...ಎಡ್ ಮುಗಿಸಿದ್ದು ಇಂಗ್ಲಿಷ್ ಮೆಥೆಡ್ ಓದಿದವರು. ಹಿರಿಯರಾದ ನಮ್ಮನ್ನು 'ಅಣ್ಣಾವ್ರೆ, ಅಣ್ಣಾವ್ರೆ' ಎಂದು ಸಂಬೋಧಿಸುತ್ತಿದ್ದರೂ ...ಭಾವಿತು ಸ್ವಲ್ಪ ದೊಡ್ಡು. ಆದರೆ ರೇಣುಕಾ ರಸಿಕಳು. ಆರೋಗ್ಯಕರ ಚೇಷ್ಟೆಗಳನ್ನು ಮಾಡುವಲ್ಲಿ ನಿಸ್ಸೀಮಳು.

...ತಿಂಗಳಲ್ಲಿ ಇಂಗ್ಲಿಷ್ ಕಲಿಸುವುದರಲ್ಲಿ ಹೆಚ್ಚಿನ ತರಬೇತಿಗಾಗಿ ಶಂಕ್ರಣ್ಣ ಬೆಂಗಳೂರಿನ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ...ಯೋಜನೆಗೊಂದು ಹೋಗಿದ್ದ. ಎರಡೇ ದಿನ ರಜೆ ಇದ್ದರೂ ಸಾಕು, ಇಲ್ಲಿಗೆ ಬಂದು ಹೋಗುವುದನ್ನು ತಪ್ಪಿಸಲಿಲ್ಲ, ಮೂರು ...ಸುವ್ವಾದ ಮಗು, ಸುಂದರ ಸಂಸಾರ ಅದು.


...ಬಿ. ಆ ದಿನ ಸಾಯಂಕಾಲ ರೇಣುಕಾ ಇದ್ದಕ್ಕಿದ್ದಂತೆ 'ಅಣ್ಣಾವ್ರೆ, ಅಣ್ಣಾವ್ರೆ' ಎಂದು ಕೂಗುತ್ತ ಮಗನೊಂದಿಗೆ ಮನೆಯ ಒಳಗಡೆ ಗಾಬರಿಯಾಗಿದ್ದಳು. ನಾವೂ ಗಾಬರಿಗೊಂಡು, "ಯಾಕೆ ಏನಾಯ್ತು ರೇಣುಕಾ? ಶಂಕ್ರಣ್ಣ ಆರಾಮ್ ಇದ್ದಾನಲ್ಲ?" ಎಂದು ಕೇಳಿದ್ದೇ ...ನಾ ಯಾಕೀ? ನಿಮ್ಮ ಶಂಕ್ರಣ್ಣ ಗುಟ್ಟಾಗಿ ಇನ್ನೂ ಇಬ್ಬಬ್ರು ಹೆಂಡ್ರನ್ನ ಇಟ್ಕೊಂಡು ಸಕತ್ ಚೈನಿ ಮಾಡ್ಯಾಕ ಹತ್ತಾರ! ನಾ ಏನ್ ...ಮಾಡ್ಕೊಳ್ಳೀನ? ಇದ್ನೋಡಿ ಸಬೂಬ ಬೇಕಾದ್ರೆ..." ಎಂದೆನ್ನುತ್ತ ಪೋಸ್ಟ್ ಕಾರ್ಡೊಂದನ್ನು ನನ್ನ ಕೈಯಲ್ಲಿ ತುರುಕಿ ಮುಖಕ್ಕೆ ಸೆರಗು ...ಡು ಅಳತೊಡಗಿದಳು. ನಾವಿಬ್ಬರೂ ಕುತೂಹಲದಿಂದ "ಏನು?" ಎನ್ನುತ್ತ ಆ ಕಾರ್ಡನ್ನು ಓದಲು ಪ್ರಾರಂಭಿಸಿದಾಗಲೇ ಇಬ್ಬರಿಗೂ ನಗುವುಕ್ಕಾಯಿತು!

...ಅವಳೂ ನಸುನಗಹತ್ತಿದಳು. ಶಂಕ್ರಣ್ಣ ಆ ಪತ್ರದಲ್ಲಿ ಅವಳನ್ನು **"My dearest wife"** ಎಂದು ಸಂಬೋಧಿಸಿದ್ದ!

...ಇ ನಿಮ್ಮ ಮೊದ್ಮಣಿ ಶಂಕ್ರಣ್ಣನಿಗೆ **dear wife** ಮತ್ತು **dearer wife** ಅಂತ ಇನ್ನೂ ಇಬ್ರು ಹೆಂಡ್ರು ಅದಾರಂದಾಯ್ತಲ್ಲ?" ...ಣುಕಾ ಕೇಳಿದಾಗ ನಾವೆಲ್ಲ ಒಟ್ಟಾಗಿ ನಕ್ಕಿದ್ದೇ ನಕ್ಕಿದ್ದು.

...ಲ್ಲಿ ಹೆಂಡತಿಗೆ ಇಂಗ್ಲಿಷ್‌ನಲ್ಲಿ ಬರೆದ ಮೊದಲ ಪತ್ರವಂತೆ ಅದು.

-ವಸಂತ.ಎಂ. ನಾಯಕ್, ಧಾರವಾಡ



ಅಂತಃಕರಣವಾಗದ ಇಂಗ್ಲಿಷ್

ನಾನು ನರ್ಸರಿಯಿಂದ ತುಮಕೂರಿನಲ್ಲಿ ಪ್ರತಿಷ್ಠಿತ(?) ಇಂಗ್ಲಿಷ್ ಮಾಧ್ಯಮದ ಶಾಲೆಯಲ್ಲಿ ಓದಿದವನು. ಇಂಗ್ಲಿಷ್ ಹೆದರಿಕೆಯ ಭಾಷೆಯಾಗಿಲ್ಲದಿದ್ದರೂ ಮುಜುಗರದ ಭಾಷೆಯಾಗಿತ್ತು. ಆದರೆ ಕನ್ನಡ ಸೊಗಸಾಗಿ ಬರುತ್ತಿತ್ತು. ಹಲವರಿಗೆ ಕನ್ನಡವೇ ಕಬ್ಬಿಣದ ಕಡಲೆಯಾಗಿತ್ತು. ಗೆಳೆಯನೊಬ್ಬ ಇಂಗ್ಲಿಷ್‌ನಲ್ಲಿ ಮುಂದೆ, ಕನ್ನಡದಲ್ಲಿ ಹಿಂದಿದ್ದ. ಒಮ್ಮೆ ಕನ್ನಡ ಮೇಡಂ ಹಲವು ಪದಗಳನ್ನು ಡಿಕ್ಟೇಟ್ ಮಾಡಿ 'ಸೊಳ್ಳೆ' ಎಂಬ ಪದವನ್ನು ಬರೆಯಲು ಹೇಳಿದ್ದರು. ನನ್ನ ಗೆಳೆಯ 'ಸೂಳೆ' ಎಂದು ಬರೆದಿದ್ದ. ಕನ್ನಡ ಮೇಡಂ ಅದನ್ನೋದಿ ಕೆಂಡವಾಗಿದ್ದರು.

ಇನ್ನೊಬ್ಬ ಗೆಳೆಯ ಅರ್ಧದಿನ ರಜೆ ಬೇಕಾದಾಗ, ಇಂಗ್ಲಿಷ್‌ನಲ್ಲಿ ಲೀವ್ ಲೆಟರ್ ಹೀಗೆ ಬರೆದಿದ್ದ: **`Give me half a day holiday'!**

...ಏಳನೆಯ ಕ್ಲಾಸಿನಲ್ಲಿದ್ದೆ. ಅಂದು ಹೆಡ್‌ಮೇಡಂ ನಮ್ಮ ಕ್ಲಾಸಿಗೆ ಬಂದು, ನಮ್ಮ ಕ್ಲಾಸ್ ತೆಗೆದುಕೊಳ್ಳುತ್ತಿದ್ದ ಗಣಿತದ ಮೇಡಂಗೆ ...ವಿನಿಂದ ಪ್ರಧಾನಿ ಇಂದಿರಾಗಾಂಧಿ ಕೊಲೆಯಾದ ವಿಷಯ ಹೇಳಿದರು. ಇಬ್ಬರ ಮೇಡಂಗಳ ಕಣ್ಣುಗಳು ತೇವವಾಗಿದ್ದವು.

...ತಿಂಗಳ ನಂತರ ಪ್ರಿಪರೇಟರಿ ಪರೀಕ್ಷೆಯಿತ್ತು. **Social studies** ಬೋಧಿಸುತ್ತಿದ್ದ ಹೆಡ್‌ಮೇಡಂ ಪರೀಕ್ಷೆಯಲ್ಲಿ ಸರಳವಾದ ...ರ್ಕಿನ ಪ್ರಶ್ನೆಯೊಂದನ್ನು ಕೇಳಿದ್ದರು - **who is our present prime minister?**

...ಾ ಗಾಂಧಿ ಕೊಲೆಯಾದ ಮೇಲೆ ರಾಜೀವ್ ಗಾಂಧಿ ಪ್ರಧಾನಿಯಾಗಿದ್ದರು. ನನಗದು ಚೆನ್ನಾಗಿ ಗೊತ್ತಿತ್ತು. ಆದರೆ ನನಗೆ ಗೊಂದಲ ...ದ್ದು **present** ಎಂದರೆ ವರ್ತಮಾನವೋ ಭೂತವೋ ಎಂದು! ಕನ್ನಡದಲ್ಲಿ "ಇಂದಿನ ಪ್ರಧಾನಿ ಯಾರು?" ಎಂದು ಕೇಳಿದ್ದರೆ ...ಉತ್ತರಿಸುತ್ತಿದೆ.

...ದುಕೊಂಡು ಯೋಚಿಸಿದೆ. ಈಗಿನ ಪ್ರಧಾನಿ ಯಾರೆಂದು ಬಹುತೇಕ ಎಲ್ಲರಿಗೂ ಗೊತ್ತಿರುವುದರಿಂದ ಹಿಂದಿನ ಪ್ರಧಾನಿ ...ಕೇಳಿರಬಹುದು ಎಂದುಕೊಂಡು, **"Indira Gandhi is our present prime minister"** ಎಂದು ಬರೆದೆ. ...ಬಗಿದ ಮೇಲೆ ನನ್ನ ಉತ್ತರ ತಪ್ಪು ಎಂದು ಗೊತ್ತಾಯಿತು. ಇಡೀ ಕ್ಲಾಸಿನಲ್ಲಿ ನಾನೊಬ್ಬನೇ ತಪ್ಪು ಉತ್ತರ ಬರೆದಿದ್ದರಿಂದ ಆತಂಕ ...ವಾಯಿತು.

...ಪತ್ರಿಕೆಗಳನ್ನು ಕರೆಕ್ಟ್ ಮಾಡಿದ ಹೆಡ್‌ಮೇಡಂ ನನ್ನನ್ನು ಎಲ್ಲರೆದುರು ಬೈದು **"You don't know who is our prime ...."** ಎಂದರು. ನನಗೆ ನೋವಿನ ಜೊತೆ ಪ್ರಾಣಸಂಕಟ. ಪ್ರಧಾನಿ ಯಾರೆಂದು ಸ್ಪಷ್ಟವಾಗಿ ಗೊತ್ತು; ಆದರೆ ಗೊಂದಲವಿರುವುದು ...ಎಂದರೆ ವರ್ತಮಾನವೋ ಭೂತವೋ ಎಂಬುದರ ಬಗ್ಗೆ ಎಂದು ಹೇಳಿದರೆ ಇನ್ನೂ ನಗೆಪಾಟಲಿಗೀಡಾಗುತ್ತಿದ್ದೆ. ಹಾಗಾಗಿ ಅವಮಾನದಿಂದ ನಿಂತಿದ್ದೆ.

...ಮರೆಯಲಾಗದ ಘಟನೆಯಾಗಿ ನನ್ನಲ್ಲಿ ಉಳಿದಿದೆ. ಕನ್ನಡ ಮಾಧ್ಯಮದ ಶಿಕ್ಷಣ ಮಾತ್ರ ನಮ್ಮಲ್ಲಿ ಯೋಚಿಸುವ, ಚಿಂತಿಸುವ, ...ಶಿಯನ್ನು ಬೆಳೆಸುವ ಅಂತಃಕರಣವಾಗಬಲ್ಲದೇ ವಿನಃ ಇಂಗ್ಲಿಷ್ ಮಾಧ್ಯಮದ ಶಿಕ್ಷಣವಲ್ಲ. ಕನ್ನಡವಾಗಲಿ, ಇಂಗ್ಲಿಷ್ ಆಗಲಿ ಯಾವ ...ದ ಕಲಿಸಬೇಕೆಂದು ಬಹಳಷ್ಟು ಅರ್ಥಪೂರ್ಣ ಚರ್ಚೆಗಳಾಗಿದ್ದರೂ, ಈ ಎರಡೂ ಭಾಷೆಗಳನ್ನು ಮಕ್ಕಳಿಗೆ ಕಬ್ಬಿಣದ ಕಡಲೆಯಾಗದಂತೆ ...ಸಬೇಕು ಎಂಬುದರ ಬಗ್ಗೆ ತೀವ್ರವಾದ ಚರ್ಚೆಗಳಾಗದಿರುವುದು ವಿಪರ್ಯಾಸ.

-ಯೋಗೀಶ್ ಸೂರಪ್ಪ, ತುಮಕೂರು

ಲವ್ವು-ಛೀ ಛೀ ಛೀ...

ಬೆಚ್ಚನೆಯ ಹೃದಯ-ವ್ಹಾ ವ್ಹಾ ವ್ಹಾ...


ಇಂಗ್ಲಿಷ್ ಎಂಬ ಮಿಟುಕಲಾಡಿಯಿಂದ ನಾವು ಫಜೀತಿಗೊಳಗಾದದ್ದು ಅಥವಾ ಆ ಮಿಟುಕಲಾಡಿಯೇ **'irritation'** ಅನುಭವಿಸಿದ್ದೋ ಅನ್ನೋದು ಸ್ವಲ್ಪ ಕನಫ್ಯೂಸನ್ನೇ...

ಮೂರನೆಕ್ಕ ಓದುತ್ತಿದ್ದಾಗಲೇ ಇಂಗ್ಲಿಷ್ ನಮ್ಮನ್ನು [illegible] ಅಣ್ಣಂದಿರೆಲ್ಲ ಅವರ ಇಂಗ್ಲಿಷ್ ಮಾಸ್ತರು ಬರೆಸಿದ ಪ್ರಶ್ನೆ-ಉತ್ತರಗಳನ್ನು [illegible] (ಉರು ಹೊಡೆಯುತ್ತಿರುವುದನ್ನು) ನೋಡಿದಾಗ, [illegible] ಎಂದು ಹಲವಾರು ಬಾರಿ ನಾವು ಗೆಳೆಯರು [illegible] ಗಣಿತವನ್ನು ಗೆಳತಿಯನ್ನಾಗಿ ಮಾಡಿಕೊಂಡಿದ್ದ ನಮಗೆ, [illegible] 'ಸೀನಿಯರು' ಹುಡುಗರು ಬೇರೆ ಹೆದರಿಸ್ತಿದ್ದರು. [illegible] ಗಣಿತವನ್ನುವುದು ಇಂಗ್ಲಿಷ್ ಮುಂದೆ ಬಚ್ಚಾ ಎನ್ನುವ ಭಾವ [illegible] ಒಮ್ಮೊಮ್ಮೆ ಸಿಟ್ಟು ಬಂದಾಗ, 'ನಮ್ಮ ಕನ್ನಡಾ ಛಲ್ಲು... ಅದ್ಯಾಕಿಂಗ [illegible] ಐದನೆತ್ತ' ಎಂದು ಶಾಪ ಬಡುವ ಮಾತೂ ಬಂದಿದ್ದುಂಟು...

ಅದಿರಲಿ, ಆಗಲ್ಲ ನಮಗ 'ಲವ್ವು' ಅಂತಾಕ್ಷಣ ಕಣ್ಮುಂದ 'ಅದೇ' ಬರೋದು. ಬೆಳದುನಿಂತ ಜೋಳದ ಮಧ್ಯ, ತೋಟದ ಕರೆಂಟಿನ ಮನೆಯಲ್ಲಿ... [illegible] ಹಲವಾರು ಕಡೆ ಆ 'ಲವ್ವು' ಸೀನುಗಳನ್ನು ನೋಡಿಬಿಟ್ಟಿದ್ದ ನಮಗೆ 'ಲವ್' ಅಂದ್ರೆ ಅದೇ... ಅದೇ... ಹಳ್ಳಿಯಲ್ಲಿ ಬ್ಯಾಡರ ಮಂಜ-ಸಾವಂತ್ರಿಗಳೇನು ಕಮ್ಮಿ ಹೇಳಿ? 'ಲವ್ವು' ಎಂದರೆ ನಾವು 'ಅದೇ' ಎಂದು ತಿಳಿದಿದ್ದರಿಂದ, ಸಾರ್ವಜನಿಕವಾಗಿ 'ಲವ್' ಎಂಬ ಪದ ಬಳಸಲು ಹೆದರುತ್ತಿದ್ದವು. ನಂತರ 'ತುಂಟಾಟ', [illegible] ಮುಟ್ಟಾಟ'ಗಳನ್ನು ಒದ್ದಾಡಿದ್ದಾ 'ಪ್ರಬುದ್ಧ'ರಾದೆವನ್ನಿ.

ಅಂತೂ ಐದನೆತ್ತ ಬಂತು. ಮಿಟುಕಲಾಡಿ ಇಂಗ್ಲಿಷ್ ಸಹ [illegible] ದಕ್ಕಾ ಹೋಯ್ತು. ಧಾರವಾಡದಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ [illegible] ಓಣಿಯ ಪಟಾಣಿ ಹುಡುಗರು ಊರಿಗ ಬಂದಾಗ ಇಂಗ್ಲಿಷ್‌ನಲ್ಲಿ [illegible] ನಮ್ಮನ್ನೆಲ್ಲ ಬೆಪ್ಪುಗಳನ್ನಾಗಿ ಮಾಡುತ್ತಿದ್ದರು. ಅದಕ್ಕೆ ನಾವು ಕಂಡುಕೊಂಡ ಉಪಾಯವೇನು ಗೊತ್ತೆ? ನಮ್ಮ ಐದನೇ ಕ್ಲಾಸಿನ ಇಂಗ್ಲಿಷಿನ [illegible] ಸಾಲುಗಳನ್ನೋ, ಪ್ರಶ್ನೋತ್ತರದ ಸಾಲುಗಳನ್ನೋ ಹೇಳುವುದು. ನಾನೊಂದು ಸಾಲು ಹೇಳಿದರೆ, ನನ್ನ ಮಿತ್ರನೊಂದು ಸಾಲು ಹೇಳುವುದು. [illegible] ಇಂಗ್ಲಿಷ್ ಬೇಬಿಗಳ ತಾಯಂದಿರು ನಮ್ಮ ಈ ಇಂಗ್ಲಿಷ್ 'ಸಂಭಾಷಣೆ' [illegible] ಮೂಗಿನ ಮೇಲೆ ಬೆರಳು ಇಡೋರು!

ಆದರೂ ಈ 'ಲವ್ವಿ' ಇಂಗ್ಲಿಷ್ ಆಗಾಗ ಕಾಟ ಕೊಡ್ತಾನೇ ಇರುತ್ತೆ. ಮೊದಲೆಲ್ಲ ಕ್ಯಾರೆಕ್ಟರ್ ಎಂಬುದು ನಮ್ಮ ಬಾಯಲ್ಲಿ 'ಚ್ಯಾರೆಕ್ಟರ್' ಆಗಿರುತ್ತಿತ್ತು.




ಕಳೆದ ವರ್ಷ ಅರ್ಜೆಂಟಿನಲ್ಲಿದ್ದ ಕವಿತಾ ಲಂಕೇಶ್ ಒಂದು **synopsios** ಕೊಟ್ಟು "ಅನುವಾದ ಮಾಡಿಟ್ಟಿರು. ಆಮೇಲೆ ನೋಡ್ತೇನೆ" ಅಂದಿದ್ರು. ಅನುವಾದ ಮಾಡಿ ಅವರ ಟೇಬಲ್ ಮೇಲೆ ಇಟ್ಟಿದ್ದೆ. ಸಂಜೆ ಬಂದು ಅದನ್ನು ಓದಿದ ಅವರು ಹೊಟ್ಟೆಬಿದ್ದು ನಗುತ್ತಾ ಇದ್ದರು. 'ಏನ್ ಮೇಡಂ, ಚೆನ್ನಾಗಿಲ್ವಾ' ಎಂದೆ. 'ಎಲ್ಲಾ ಕರೆಕ್ಟಾಗಿದೆ. ಆದ್ರೆ ನಿನ್ನದು ನಿಜವಾಗಿಯೂ ಬೆಚ್ಚನೆಯ ಹೃದಯ ಕಣೋ' ಅಂದ್ರು... **'warm hearted'** ಎಂದಿದ್ದನ್ನು 'ಬೆಚ್ಚನೆಯ ಹೃದಯದವರು' ಎಂದು ಅನುವಾದ ಮಾಡಿಬಿಟ್ಟಿದ್ದೆ!

-ಪಿ.ಕೆ.ಮಲ್ಲನಗೌಡರ್, ತೋಟಗಂಟಿ (ಗದಗ)

...ಂಚಿನ ಎತ್ತರದ ಹುಡುಗರ ಹಿಂದೆ ...ತ್ತಿದ್ದೆ. ಅಂತೂಇಂತೂ ಶಿಕ್ಷಕರ ...ದಿಂದ ಹೈಸ್ಕೂಲಿಗೆ ಹೋದೆ. ...ಉಸಿರು ಹರಿಯಬಿಟ್ಟಂತಾಯ್ತು. ...ಸಾಗರದಂತಿರುವ ಜೂನಿಯರ್ ...ಪ್ರಶ್ನೆಯೂ ಇಲ್ಲ, ಉತ್ತರ ಹೇಳು... ಇಲ್ಲ, ಏಕೆಂದರೆ ನಾವು ಹಿಂದಿನ ...ಹುಡುಗರು. ಶಿಕ್ಷಕರ ಕಿರುಕುಳದಿಂದ ...ಎಂದುಕೊಳ್ಳುವ ಹೊತ್ತಿಗೆ ...ಸಿಯು ಪೂರ್ವ ಸಿದ್ಧತಾ ಪರೀಕ್ಷೆ ...ತು. ಏನೆಲ್ಲಾ ಕಂಠಪಾಠದ ...ಮೂಡಚೆರಡು ಅಂಕ ಬಂದು ...ಪ್ರಪಂಚವೆ ಕ್ರೂರವಾಗಿ ಕಂಡುಬಂತು. ...ಬರೆದು ಫೇಲಾಗಿ ಅವಮಾನ ...ಪ್ರಪಂಚಿತ ಬೀಧಿ ಮಾತ್ರ ತಗೊಂಡು ...ಹೊಂದು ಬೆಂಗಳೂರಿನ ಹೋಟೆಲಿಗೆ ...ಪಂದು ...ಕೊಳ್ಳುತ್ತಿದ್ದಾಗಲೇ ಫೇಲಾದವರ ...ಸಾರ್ವನ್ ಕ್ರಿಸಿತ್ತು ತಿದ್ದುವ

ಅನ್ನಕ್ಕೂ ಕುತ್ತು ತಂದ ಇಂಗ್ಲಿಷ್‌ನ್ನು ಶಪಿಸುತ್ತಾ ಕೈ ಹಿಸುಕಿಕೊಳ್ಳುತ್ತಾ ನಿಂತ ನಮಗೆ ಅವಮಾನ ಗ್ಯಾರಂಟಿ ಎಂದಿದ್ದೆವು. ಜಾನಪದ ವಿದ್ವಾಂಸರಾದ ಶ್ರೀ ಎಸ್.ಹುಚ್ಚಪ್ಪ ಮಾಸ್ತರ್ ನಮ್ಮನ್ನೆಲ್ಲ ಕರೆದೊಯ್ದು ಶ್ರೀ ರಾಜಪ್ಪ ಮಾಸ್ತರ್‌ರವರ ಟ್ಯೂಷನ್‌ಗೆ ಸೇರಿಸಿದರು. ಅದು ಹಾಸ್ಟಲ್ ಹುಡುಗರಿಗೆ ಉಚಿತ.

ಗುರುದ್ವಯರ ಕ್ರಮದಿಂದ ಕಾಲೇಜಿಗೆ ಕಾಲಿಟ್ಟೆ. ಅದೂ ಸಾಗರದ ಜೂನಿಯರ್ ಕಾಲೇಜ್. ಸಾವಿರಾರು ವಿದ್ಯಾರ್ಥಿಗಳು, ನೂರಾರು ಉಪನ್ಯಾಸಕರು. ವಿಮರ್ಶೆ, ವ್ಯಂಗ್ಯ ಸ್ವ-ಚಿಂತನೆ ಎಲ್ಲವೂ ಇದ್ದ ಉಪನ್ಯಾಸ ನಮಗೆ ಮಾತ್ರ ಕಾಡಿಸ್ತಿ



ಮಳೆ ಹೊಯ್ದಂತೆ ಭಾಸವಾಗುತಿತ್ತು. ಅಲ್ಲಲ್ಲಿ ಕಂಡು ಬರುವ, ಕೇಳಿಬರುವ ಕನ್ನಡ ಶಬ್ದಗಳು ಮರುಭೂಮಿಯಲ್ಲಿನ ಓಯಸಿಸ್‌ನಂತೆ. ಪಕ್ಕದ ಹುಡುಗರು ನಕ್ಕರೆ, ಅವರೊಂದಿಗೆ ನಾವು ನಗಬೇಕಾದ ಅನಿವಾರ್ಯತೆಯ ಅಳುಕಿನಲ್ಲಿ ಉತ್ತೀರ್ಣರಾಗಿ ಶಿಕ್ಷಕರ ತರಬೇತಿ ಪಡೆದು ಶಿಕ್ಷಕರಾದ ಮೇಲೆ ಇನ್ನು ಇಂಗ್ಲಿಷಿನ ಹಂಗೇ ಬೇಡ ಎಂದು ಇಷ್ಟವಾದ ಕನ್ನಡವನ್ನು ಕಲಿಸಿದರಾಯ್ತೆಂದು ತೀರ್ಮಾನಿಸುವ ಹೊತ್ತಿಗೆ ಕರ್ನಾಟಕ ಸರ್ಕಾರ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕೆಂಬ ಆದೇಶ ಕೊಟ್ಟಾಗ ಬೆನ್ನಿಗೆ ಬಿದ್ದ ಬೇತಾಳ ಇದು ಎನಿಸತೊಡಗಿತು. ಭಾಷಾಂತರ ಪದ್ಧತಿಯಲ್ಲಿ ಬೋಧಿಸಿಕೊಂಡು ಜೀವನ ನಡೆಸುತ್ತಿದ್ದ ನನಗೆ 1-4 ನೇ ತರಗತಿಯ ಇಂಗ್ಲಿಷ್ ಪಠ್ಯ ಕ್ರಮ ಇರುವ ಬಾಯಿಯ ಮೇಲೂ ಬರೆ ಎಳೆದಂತೆ ಆಗುತ್ತಿದೆ.

12 ವರ್ಷಗಳ ಸೇವೆ ಇದ್ದರೂ 2 ವರ್ಷಗಳ ಸೇವೆ ಸಲ್ಲಿಸಿದ ಶಿಕ್ಷಕರ ಬಳಿ ಪಾಠ ಕೇಳುವಾಗ ಸಂಕಟವಾದರೂ ಅನಿವಾರ್ಯ. ಏಕೆಂದರೆ ನಾಳೆ ಇಂಗ್ಲಿಷ್ ಬರದಿದ್ದವರು ಸ್ವಯಂ ನಿವೃತ್ತಿ ತಗೊಳ್ಳಿ ಎಂದುಬಿಟ್ಟರೆ! ಹೀಗೆ ಬಾಲ್ಯದಿಂದಲೂ ಬದುಕಿನುದ್ದಕ್ಕೂ ಬೆಂಬಿಡದೆ ಹೆದರಿಸುತ್ತಿರುವ ಇಂಗ್ಲಿಷ್ ನನ್ನನ್ನು ಕೀಳರಿಮೆಯಿಂದಲೇ ಬದುಕುವಂತೆ ಮಾಡುತ್ತಿದೆ. ಈಗಲೂ [illegible] ಇಂಗ್ಲಿಷ್ ಕ್ಲಾಸ್‌ಗೆ ಹೋಗಲು ಪ್ರೇರೇಪಿಸುತ್ತದೆ.

ಮಂಜಪ್ಪ. ದಿ


ಶಿಕ್ಷಕರು. [illegible]

ಈಚಿನ ಕನ್ನಡ ಸಾಹಿತ್ಯ ಟಿಪ್ಪಣಿಗಳು

ಕನ್ನಡ ಸಾಹಿತ್ಯದಲ್ಲಿ ಎದ್ದುಕಾಣುವ ಸಂಗತಿಯೆಂದರೆ, ಒಂದು ಬಗೆಯಲ್ಲಿ ಆಕ್ರಮಣಕ್ಕೆ ಒಳಗಾದ ಆತಂಕ; ನಮ್ಮ ಬದುಕಿನ ಮೌಲ್ಯಗಳು, ಬಿತ್ತುವ ಬೀಜಗಳು, ಭಾಷೆ ಮುಂತಾದವನ್ನು ತಳ್ಳಿ ಮತ್ತು ಘಾತದಿಂದ ಉಳಿಸಿ ಕೊಳ್ಳಬೇಕು ಎಂಬ ಆತ್ಮರಕ್ಷಕ ಮನೋಭಾವ. 'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ' 'ಚಿತ್ರಲೇಖೆವೆ ಯಾಕೆ ಕೂಡದು?' ಇಲ್ಲೆಲ್ಲಾ ಇರುವುದು ಇದೇ ಹಟ ಮತ್ತು ಆತಂಕ. ಕನ್ನಡ ಮಾಧ್ಯಮಕ್ಕಾಗಿ ಹೋರಾಟ, ಎಸ್‌ಇಜೆಡ್ ವಿರುದ್ಧದ ಹೋರಾಟ, ಕನ್ನಡ ರಕ್ಷಣಾ ವೇದಿಕೆಯ ಆಕ್ರೋಶಗಳು -ಈ ಆತಂಕದ ಹೊರ ಮತ್ತು ಒರಟು ರೂಪಗಳಂತೆ ಕಾಣುತ್ತವೆ. ಈ ಆತಂಕಗಳಿಗೆ, ಇಂಗ್ಲಿಷು, ಜಾಗತೀಕರಣ ಸಾಮ್ರಾಜ್ಯಶಾಹಿಯ ಒತ್ತುವರಿ, ಕೋಮುವಾದ ಹಿಂಸೆ, ಜನರ ವಲಸೆ, ರೈತರ ಸಾವು, ಮಧ್ಯಮವರ್ಗದ ಅವಕಾಶವಾದಿತನ, ಜನರ ಪ್ರತಿರೋಧ, ಮಂಕಾಗಿರುವ ಚಳವಳಿಗಳು, ಅವನ್ನು ಹತ್ತಿಕ್ಕುವ ಪ್ರಭುತ್ವ-ಎಂದೆಲ್ಲ ಪಟ್ಟಿ ಮಾಡಬಹುದು. ಆದರೆ ಇಷ್ಟೇ ಎದುರಾಳಿಗಳಲ್ಲ. ಗುರುತಿಸಲಾಗದ ಇನ್ನೂ ಬಹಳ ಇವೆ. ಇವೆಲ್ಲವೂ ಸೇರಿ ಆತಂಕಕ್ಕೆ ಕಾರಣವಾಗಿವೆ. ಆದ್ದರಿಂದ ಸಾಹಿತ್ಯಿಕ ಪ್ರವೃತ್ತಿ ಅಥವಾ ಒಲವುಗಳನ್ನು ನಿಜವಾಗಿ ನಿರ್ಧರಿಸುತ್ತಿರುವುದು ಸಾಹಿತ್ಯ ಜಗತ್ತಿನ ವಿದ್ಯಮಾನಗಳಲ್ಲ, ನಮ್ಮ ಬದುಕನ್ನು ಪ್ರಭಾವಿಸುತ್ತಿರುವ ರಾಜಕೀಯ ಸಾಮಾಜಿಕ ಆರ್ಥಿಕ ವಿದ್ಯಮಾನಗಳು. ಸಾಹಿತ್ಯವಾದರೂ ಇವನ್ನು ಕುರಿತು ನೇರವಾಗಿ ಹೇಳುವುದು ಕಡಿಮೆ. ಅದು ಎಲೆಯು ಅಲುಗುತ್ತಿದೆ ಎಂದು ಹೇಳುವ ಮೂಲಕ ಗಾಳಿಬೀಸುವುದನ್ನು ಸೂಚಿಸುವುದೇ ಹೆಚ್ಚು. 'ಆವರಣ' 'ಅನುದೇವಾ' 'ಶಿಖರಸೂರ್ಯ' 'ಅರಮನೆ' ಮುಂತಾದ ಕೃತಿಗಳಿಗೆ ಪರಿಸರದ ಒತ್ತಾಸೆಗಳು ಕಾರಣವಾಗಿವೆ. ನಿಜ. ಆದರೆ ಸಾಹಿತ್ಯ ಕೃತಿಗಳು ಕೇವಲ ಕಾರ್ಯ-ಕಾರಣ ಸಂಬಂಧವನ್ನು ಹೊಂದಿಲ್ಲ.

ವಿಶೇಷವೆಂದರೆ, ಸ್ವಂತಿಕೆ ಕಳೆದುಹೋಗುವ ಆತಂಕ ಸಮಾಜ ವಿಜ್ಞಾನಿಗಳಲ್ಲಿ ಅಷ್ಟಿಲ್ಲ, ವಿಜ್ಞಾನ ತಂತ್ರಜ್ಞಾನದವರಿಗಿಲ್ಲ, ವಾಣಿಜ್ಯ ಕ್ಷೇತ್ರದವರಿಗಿಲ್ಲ, ಶಕ್ತಿ ರಾಜಕಾರಣಕ್ಕಿಲ್ಲ, ಕೆಲಮಟ್ಟಿಗೆ 'ಸಾಮಾನ್ಯ' ಜನಕ್ಕೂ ಇಲ್ಲ. ಆದರೆ ಇದು ಕೆಲವು ಚಳವಳಿಗಾರರಲ್ಲಿ ಹಾಗೂ ಬರಹಗಾರರಲ್ಲಿದೆ. ಅದರಲ್ಲೂ ಹಿರಿಯ ತಲೆಮಾರಿನವರಲ್ಲಿ ಹೆಚ್ಚಾಗಿದೆ. ಇದು ಈ ಲೇಖಕರ ಅತಿಸೂಕ್ಷ್ಮತೆಯನ್ನು, ವ್ಯವಸ್ಥೆ ವಿರೋಧಿಸುವ ಅಥವಾ ಹೊಸ ಬದಲಾವಣೆಯನ್ನು ಗುಮಾನಿಸುವ ಗುಣವನ್ನು ಸೂಚಿಸುತ್ತಿದೆಯೊ ಅಥವಾ ಬದಲಾವಣೆಯನ್ನು ಸರಿಯಾಗಿ ಗ್ರಹಿಸಲಾಗದ ಮತ್ತು ಅದಕ್ಕೆ ಪ್ರತಿಕ್ರಿಯಿಸಲಾಗದ ಅಸಹಾಯಕತೆಯನ್ನು ಸೂಚಿಸುತ್ತದೆಯೊ? ಜನರ ಬಾಳಿನ ಮೇಲಣ ದಮನವು ವಾಸ್ತವಿಕ ಸತ್ಯವಾಗಿದೆ; ಸಮಸ್ಯೆಯೆಂದರೆ ಕನ್ನಡದಲ್ಲಿ ಅದನ್ನು ಪ್ರತಿರೋಧಿಸುವ ನುಡಿಗಟ್ಟು ಕ್ಲೀಷೆಯಾಗುತ್ತಿದೆ. ನುಡಿಗಟ್ಟು ಎಂದರೆ ಕೇವಲ ಭಾಷೆಯಲ್ಲ, ಆಲೋಚನ ಕ್ರಮ ಕೂಡ. ಇದು ಅಭಿವ್ಯಕ್ತಿಯ ಸಮಸ್ಯೆಯಲ್ಲ, ಒಟ್ಟು ರಾಜಕೀಯ ಆರ್ಥಿಕ ಸನ್ನಿವೇಶದ ಬಗ್ಗೆ ವ್ಯಾಪಕವಾಗಿ ಇರುವ ಸಮ್ಮತಿ ಮತ್ತು ನಿರಾಳತೆಗಳ ನಡುವೆ ಬರೆಯುವುದರ ಸಮಸ್ಯೆ ಕೂಡ.


ಈ ಆತಂಕಿತ ಮನೋಭಾವವು ಬಡುಗಡೆಯ ಚಡಪಡಿಕೆಗೂ 'ದೇಶೀಯ' ಎನ್ನಬಹುದಾದ ಜೀವನ ಲಯವೊಂದರ ಹುಡುಕಾಟಕ್ಕೂ ಕಾರಣವಾಗಿದೆ. ಮೂಲದ್ದೆನ್ನುವ ಜೀವನ ಲಯದ ಈ ಹುಡುಕಾಟವು ಏಕರೂಪಿಯಾಗಿಲ್ಲ, ಕಂಬಾರ ಅಥವಾ ರಾಘವೇಂದ್ರ ಪಾಟೀಲರಿಗಿಂತ ಲೋಕಾಪುರ, ಲಕ್ಷ್ಮೀಪತಿ ಕೋಲಾರ, ಕುಂವೀ, ಎನ್ಕೆ, ಹನುಮಂತಯ್ಯ ಮಾಡುವ ಹುಡುಕಾಟ ಭಿನ್ನವಾಗಿದೆ. ವಸಾಹತುಶಾಹಿಯ ಕೇಡುಗಳನ್ನು 'ಶಿಖರಸೂರ್ಯ' ಬಣ್ಣಿಸುತ್ತಿದ್ದರೆ, ಬ್ರಿಟಿಶ್ ಅಧಿಕಾರಿಯೊಬ್ಬ ತನ್ನ ಸಾಹಸ ಮತ್ತು ಉದಾರತೆಯಿಂದ ಜನರ ಸಾಂಸ್ಕೃತಿಕ ನಾಯಕನಾದ ಪರಿಯನ್ನು 'ಅರಮನೆ' ಬಣ್ಣಿಸುತ್ತಿದೆ. ಈ ಎರಡೂ ಕೃತಿಗಳೂ ಚರಿತ್ರೆ ಮತ್ತು ವರ್ತಮಾನವನ್ನು ಉತ್ಪ್ರೇಕ್ಷಿಸುತ್ತಿವೆ. ಸರಳೀಕರಿಸುತ್ತಿವೆ. ಅದು ಬೇರೆ ವಿಷಯ. ಆದರೆ ನಮ್ಮದೊಂದು ಸಂಸ್ಕೃತಿಯ ಲಯ ಕಳೆದುಹೋಗಿದೆ ಅದನ್ನು ಮರಳಿ ಪಡೆಯಬೇಕು ಎಂದು ತದೇಕ ಹುಡುಕುವಿಕೆ ಮಾತ್ರ ಕೃತಕವಾಗಿ ಕಾಣುತ್ತಿದೆ. ತೇಜಸ್ವಿ 'ಮಾಯಾಲೋಕ'ದಲ್ಲೂ ಹುಡುಕಾಟ ಮಾಡುತ್ತಾರೆ. ಆದರದು ಸಂಪ್ರದಾಯವಾದಿ ಸಮಾಜ ಆಕ್ರಮಣದಲ್ಲಿ ಕಳೆದುಕೊಂಡಿದ್ದರ ಹುಡುಕಾಟವಲ್ಲ, ಇದೇ ಸಮಾಜ ನಾಶಮಾಡದೆ ಹೇಗೋ ಉಳಿಸಿರುವಂತಹ ಚೈತನ್ಯದ ಹುಡುಕಾಟ; ನಿಸರ್ಗದ ಒಳಗಿರುವ ಅರಿಯಲಾಗದ ನಿಗೂಢಗಳ ಹುಟುಕಾಟ.



ಕತೆ-ಕಾದಂಬರಿ ಕಾವ್ಯಗಳ ಹಾಗೆ ಚಿಂತನೆ ವಿಮರ್ಶೆ ಸಂಶೋಧನೆಗಳಲ್ಲಿ ಇನ್ನೊಂದು ಬಗೆಯ ಶೋಧ ನಡೆದಿದೆ. ಮುಸ್ಲಿಂ ದಲಿತ ಮಹಿಳೆ ಬುಡಕಟ್ಟು ಗ್ರಾಮೀಣ ಜಾನಪದ ಅನುಭಾವಿ ಎಂಬ ನೆಲೆಗಳಿಗೆ ಹೋಗಿ ಅಲ್ಲಿರುವ ಚೈತನ್ಯವನ್ನು ಶೋಧಿಸಿ ವರ್ತಮಾನಕ್ಕೆ ಪಡೆದುಕೊಳ್ಳುವುದು ಹೇಗೆ ಎಂಬ ಜರೂರು ಇಲ್ಲಿದ್ದಂತಿದೆ. ಈ ನೆಲಮೂಲಕ್ಕೆ ಹೋಗುವುದು ಅನುಭವ ಲೋಕದ ಮತ್ತು ವಿಶಿಷ್ಟ ಸಂವೇದನೆಯ ಮಂಡನೆಯ ಮಟ್ಟಿಗೆ ಸಮಸ್ಯೆಯಲ್ಲ, ಈ ಪಯಣದಲ್ಲಿ ಸಣ್ಣ ಎಡಹಿಕೆಯೂ ಜಾತೀಯ ಮತೀಯ ಅಸ್ಮಿತೆಗಳಿಗೆ ಸಿಲುಕಿಸಿಬಿಡುವ ಅಪಾಯವಿದೆ. ಬಹುಶಃ ಈಗ ಮಹಿಳೆಯರನ್ನು ಬಿಟ್ಟರೆ, ದಲಿತ ಲೇಖಕರು ಮತ್ತು ಮುಸ್ಲಿಂ ಲೇಖಕರು ಒಟ್ಟು ಕೂತರೂ ಅರ್ಥಪೂರ್ಣವಾಗಿ ಕಾಣದ ಸನ್ನಿವೇಶವಿದೆ. ಕನ್ನಡ ಸಾಹಿತ್ಯದಲ್ಲಿ ಜಾತಿ ಧರ್ಮ ಪ್ರಾಂತ್ಯಗಳೂ ಸಾಂಸ್ಕೃತಿಕ ಹೆಸರಿನಲ್ಲಿ ನ್ಯಾಯಬದ್ಧತೆ ಪಡೆಯುವ ಸಾಧ್ಯತೆ ಕಡಿಮೆ. ಆದರೂ ಈ ತೂಗುಗತ್ತಿ ತಲೆಮೇಲಿದೆ.

ಸ್ಥಳೀಯ ಸಾಂಸ್ಕೃತಿಕ ಹುಟುಕಾಟಕ್ಕೆ ಆಧ್ಯಾತ್ಮಿಕ, ಅಲೌಕಿಕ ಸೆಳೆತಗಳ ಆಯಾಮವೂ ಇದೆ. ಈಚೆಗೆ ಕನ್ನಡದಲ್ಲಿ ಸೂಫಿ ಕತೆಗಳು ಹೆಚ್ಚು ಅನುವಾದಗೊಂಡವು. ಬೆಳಗೆರೆ ಕೃಷ್ಣಶಾಸ್ತ್ರಿಯವರು ಬರೆದ ಸ್ಥಳೀಯ ಯೋಗಿಯೊಬ್ಬರ ಜೀವನ ಚರಿತ್ರೆ 'ಯೇಗ್ದಾಗೆಲ್ಲಾ ಐತೆ' ಒಳ್ಳೆಯ ಸ್ವೀಕೃತಿ ಪಡೆಯಿತು. ಈ ಸೆಳೆತಗಳು ಜಗತ್ತನ್ನು ಗ್ರಹಿಸಲು ಮತ್ತು ಅನುಸಂಧಾನ ಮಾಡಲು 'ಪಾಶ್ಚಾತ್ಯ' ಆಧುನಿಕ ವೈಚಾರಿಕ ವಿಧಾನಗಳ ಸಾಲವು ಎಂಬುದನ್ನು ಸೂಚಿಸುತ್ತಿವೆಯೇ? ಕನ್ನಡದಲ್ಲಿ 'ಕುಸುಮಬಾಲೆ'ಯು "ಪೂರ್ವಿಕ ಮಲೆಮಾದೇಶ್ವರಂಗೆ ಅರ್ಪಿತ"ವಾದಾಗಿನಿಂದ ಅಥವಾ ಶಿವಪ್ರಕಾಶ್ ಅವರ 'ಸಮಗಾರ ಭೀಮವ್ವ'ನಿಂದಲೂ ಈ ಸೆಳೆತವಿದೆ. ಅದು ಬಳಿಕ 'ದಿವ್ಯ' 'ಚಕೋರಿ' 'ಶಿಖರಸೂರ್ಯ' 'ಬತ್ತೀಸರಾಗ' 'ತೇರು' ಮುಂತಾದ ಕೃತಿಗಳಲ್ಲಿ ಬೇರೆಬೇರೆ ತರಹ ಶೋಧನೆಗೆ ಒಳಗಾಯಿತು. ಆಧ್ಯಾತ್ಮಿಕ ಹುಡುಕಾಟದ ಹಂಬಲವು ಆಧುನಿಕತೆಯ ವಿರೋಧವಿಲ್ಲದೆ, ವೈಚಾರಿಕತೆ ಬಿಟ್ಟುಕೊಡದೆ ನಡೆದ ಕಡೆಯೆಲ್ಲ ಅರ್ಥಪೂರ್ಣವಾಗಿದೆ. ಉದಾ.ಗೆ, 'ಕುಸುಮಬಾಲೆ', ಶಿವಪ್ರಕಾಶರ 'ಸಮಗಾರ ಭೀಮವ್ವ' ಲಕ್ಷ್ಮೀಪತಿಯವರ 'ನೀಲಿತತ್ತಿ', ಕಂಬಾರರ 'ನವಿಲೆ ನವಿಲೆ' ರಾಘವೇಂದ್ರ ಪಾಟೀಲರ 'ತೇರು' ಮುಂತಾದ ಕಡೆ. ಆದರೆ ಅದು ಕಳೆದುಹೋದ(?) ಮೂಲ ಲಯದ ಹಳಹಳಿಕೆಯ ಹುಡುಕಾಟವಾದಾಗ, ವರ್ತಮಾನ ಸಮಾಜದ ನಿಷ್ಠುರ ವಿಮರ್ಶೆ ಕಳೆದುಕೊಂಡು ಭಾವನಾತ್ಮಕವಾದಾಗ, ಆಧುನಿಕತೆ, ವಿಜ್ಞಾನ, ವೈಚಾರಿಕತೆಗಳನ್ನು ಕೇವಲ ಕೇಡೆಂದು ನಿರಾಕರಿಸತೊಡಗಿದಾಗ, ಅಪ್ರಸ್ತುತವಾಗಿದೆ. ಕನ್ನಡದಲ್ಲಿ ಕೆಲವರು ಈ ಆಧ್ಯಾತ್ಮಿಕ ಹುಡುಕಾಟವನ್ನು ಕೊಂಚ ಜಾಸ್ತಿಯೇ ಮೈಮೇಲೆ ಎಳೆದುಕೊಂಡಂತೆ ತೋರುತ್ತದೆ. ಎಂತಲೇ ಮುಕುಂದೂರು ಸ್ವಾಮಿಯವರ 'ಪವಾಡ' ಪ್ರಸಂಗಗಳಿರುವ ಜೀವನ ಚರಿತ್ರೆ 'ಏಗ್ದಾಗೆಲ್ಲಾ ಐತೆ' ಓದುವಾಗ ಬಾರದ ಶಂಕೆ ಈ ಆಧುನಿಕ ಲೇಖಕರ ಅಲೌಕಿಕತೆಯ ಆವಾಹನೆಯ ಬರಹಗಳನ್ನು ಓದಿದಾಗ ಬರುವುದು.

ವಿಶೇಷವೆಂದರೆ, ಹಿರಿಯ ಲೇಖಕರನ್ನು ಕಂಗೆಡಿಸಿರುವ ಜಾಗತೀಕರಣ ಇತ್ಯಾದಿಗಳು ಎಷ್ಟೊ ದಲಿತ ಮತ್ತು ಮಹಿಳಾ ಲೇಖಕರಿಗೂ, ಹೊಸ ತಲೆಮಾರಿನ ಬರಹಗಾರರಿಗೂ, ಒಂದು ರಕ್ಕಸ ಅನಿಸಿಲ್ಲ. ಹಾಗೆಂದು ಅದನ್ನವರು ಕುರುಡಾಗಿ ಸಮರ್ಥಿಸುತ್ತಿಲ್ಲ. ಕಳೆದುಹೋದ ಮೂಲ ಲಯದ ಹುಡುಕಾಟವೂ ಅವರಿಗೆ ಮುಖ್ಯವೆನಿಸಿಲ್ಲ, ಅವರು ತಮ್ಮ ಬದುಕಿನ ಪರಿಸರದಲ್ಲಿ ಇರುವ ಮೂರ್ತ ಸಮಸ್ಯೆಗಳ ಜತೆ ಕಾದಾಟದಲ್ಲಿ ತೊಡಗಿದ್ದಾರೆ. ಈ ದಿಸೆಯಲ್ಲಿ ಮಹಿಳೆಯರ ಬರಹಕ್ಕೆ ಹೊಸ ನೆಗೆತ ಸಿಕ್ಕಿದೆ. ಅದು ಸಾಂಪ್ರದಾಯಿಕ ಸ್ತ್ರೀವಾದದ ಸೀಮಿತ ನೆಲೆಯಿಂದ ಮುಂದೆ ಬಂದಿದೆ. ಸ್ತ್ರೀವಾದ ಅನಗತ್ಯವೆಂತಲ್ಲ, ಅದಿನ್ನೂ ಬೇಕಿದೆ. ಆದರೆ ಸ್ತ್ರೀವಾದದ ಹಳೆಯ ಚೌಕಟ್ಟುಗಳನ್ನು ಬಿಟ್ಟು ಬರೆಯುವುದು ಅವರ ಸವಾಲಾಗಿದೆ. ವೈದೇಹಿ ಈ ನುಡಿಗಟ್ಟನ್ನು ಕೊಂಚ ಮುರಿದು ಬರೆದರು. ನಂತರ ಬಂದ ದು.ಸರಸ್ವತಿ, ನಾಗವೇಣಿ, ನೇಮಿಚಂದ್ರ, ಗೀತಾ ಮತ್ತು ವಿನಯಾ, ಲಲಿತಾ ಸಿದ್ಧಬಸವಯ್ಯ ಇದನ್ನು ಮತ್ತಷ್ಟು ಮುರಿದು ಹೊಸ ನುಡಿಗಟ್ಟಲ್ಲಿ ಬರೆಯಲು ಯತ್ನಿಸುತ್ತಿದ್ದಾರೆ. 'ಬದುಕು' ಕಾದಂಬರಿಯಲ್ಲಿ ಗೀತಾ, ಮಹಿಳೆಯ ಸಂವೇದನೆಯ ಜತೆಗೆ ಗ್ರಾಮೀಣ ತಳವರ್ಗದ ಬದುಕನ್ನು ಆಧರಿಸಿ ಮಾಡಿದ ಯತ್ನ ಮಹತ್ವದ್ದಾಗಿದೆ. 'ಸಣ್ಣ' ಎನ್ನಲಾಗುವ ಸಂಗತಿಗಳನ್ನು ಇಟ್ಟುಕೊಂಡು ಇಡೀ ಕರಾವಳಿಯ ಬದುಕಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ನಾಗವೇಣಿ ಬಹಳ ಸೂಕ್ಷ್ಮವಾಗಿ ಹಿಡಿದುಕೊಡುತ್ತಿದ್ದಾರೆ. ಅಡಿಗ, ಕಾರಂತ ಮತ್ತು ವೈದೇಹಿ ಕಾಣಿಸಲಾಗದ ಲೋಕಗಳನ್ನು ಕಾಣಿಸುತ್ತಿದ್ದಾರೆ. ಏಕಾಂಗಿಯಾಗಿ ಜಗತ್ತನ್ನೆಲ್ಲ ತಿರುಗಿ ಪ್ರವಾಸದ ಅನುಭವವನ್ನು ನೇಮಿಚಂದ್ರ ಪ್ರವಾಸ ಕಥನ ಮತ್ತು ಕಾದಂಬರಿಗಳಲ್ಲಿ, ಕೆಲವೊಮ್ಮೆ ಅವೆರಡನ್ನೂ ಬೆರೆಸಿದಂತೆ ಬರೆಯುತ್ತಿದ್ದಾರೆ. ಲತಾ ಸಿದ್ಧಬಸವಯ್ಯ ಪ್ರಬುದ್ಧವಾದ ಕಾವ್ಯ ರಚಿಸುತ್ತಿದ್ದಾರೆ.



■ ರಹಮತ್ ತರೀಕೆರೆ

ಬಿಕ್ಕಟ್ಟಿನಲ್ಲಿರುವ ಪ್ರಕಾರಗಳಲ್ಲಿ ಸಾಹಿತ್ಯ ವಿಮರ್ಶೆಯೂ ಒಂದೆಂದು ಕಾಣುತ್ತದೆ. ಕಾವ್ಯದಲ್ಲಿರುವಂತೆ ಅಲ್ಲಿ ಹೊಸಮುಖಗಳ ನುಗ್ಗು ಕಡಿಮೆ. ಇದಕ್ಕೆ ಕಾರಣವನ್ನು ವಿಚಾರಿಸಬೇಕಿದೆ. ಸಾಹಿತ್ಯ ವಿಮರ್ಶೆಯಲ್ಲಿ ವೃತ್ತಿಪರರಿದ್ದ ಕಾಲವಿತ್ತು, ಅದು ವಿಮರ್ಶೆಗೆ ಅತಿ ಸಾಹಿತ್ಯಕವಾಗುವ ಪರಿಮಿತಿಯನ್ನೂ ಒದಗಿಸಿತ್ತು, ಈಗ ಕೇವಲ ವಿಮರ್ಶಕರ ತಲೆಮಾರು ಕರಗುತ್ತಿದೆ. ಜಿಎಸ್. ಆಮೂರರು ನಮ್ಮ ದೊಡ್ಡ ಲೇಖಕರ ಮೇಲೆ ಬಹಳ ಶ್ರದ್ಧೆ ಮತ್ತು ವ್ಯಾಪಕ ಅಧ್ಯಯನದಿಂದ ಗ್ರಂಥಗಳನ್ನು ಪ್ರಕಟಿಸುತ್ತಿದ್ದಾರೆ. ಗೌರವದಿಂದ ನೆನೆಯಬೇಕಾದ ಕೆಲಸವದು. ಆದರೆ ಈ ಮಹತ್ವಾಕಾಂಕ್ಷಿ ಗ್ರಂಥಗಳು ಸಾಹಿತ್ಯದಲ್ಲಿ ಹೊಸ ಚರ್ಚೆಯನ್ನು ಎಷ್ಟರಮಟ್ಟಿಗೆ ಹುಟ್ಟಿಸಿವೆ ಎಂಬ ಪ್ರಶ್ನೆ ಎದುರಾಗುತ್ತದೆ. ಕನ್ನಡದ ವಿಮರ್ಶೆಗಿರುವ ಅನೇಕ ಇಕ್ಕಟ್ಟುಗಳಿಗೆ ಬಹುಶಃ ಮದ್ದೆಂದರೆ, ಬರಹ ಮಾಡುವ ಎಲ್ಲರೂ ವಿಮರ್ಶೆಯನ್ನೂ ಬರೆಯುವುದು. ಅದಕ್ಕಾಗಿ ಇರುವ ಒಂದು ತಜ್ಞರ ಕಲ್ಪನೆಯನ್ನು ನಾಶಮಾಡುವುದು. ಆಗ ವಿಮರ್ಶೆ ಹೊಸಹೊಸ ಭಾಷೆ ಮತ್ತು ಚಿಂತನೆಯಿಂದ ಬಹುತ್ವವನ್ನು ಪಡೆಯುತ್ತದೆ. ತೇಜಸ್ವಿಯವರು ತೀರಿಕೊಳ್ಳುವ ದಿನಗಳಲ್ಲಿ ಬರೆದ ಬಹಿರಂಗ ಪತ್ರವು, ಸಾಹಿತ್ಯ ವಿಮರ್ಶೆಗೆ ಕೊಟ್ಟ ಅಪಾರ ಒಳನೋಟಗಳು ದೊಡ್ಡದೊಡ್ಡ ವಿಮರ್ಶಾ ಗ್ರಂಥಗಳಲ್ಲಿ ಸಿಗುವುದಿಲ್ಲ ಎಂಬುದು ಇದನ್ನೇ ಸೂಚಿಸುತ್ತದೆ ತಾನೇ?

ಇಷ್ಟಕ್ಕೂ ಸಾಹಿತ್ಯ ವಿಮರ್ಶೆ ಈಗ ರೂಪಾಂತರ ಪ್ರಕ್ರಿಯೆಯಲ್ಲಿದೆ. ಡಿ.ಆರ್. ತಮ್ಮ ಕೊನೆಯ ದಿನಗಳಲ್ಲಿ ಅಲ್ಲಮನ ಮೇಲೆ ಬರೆದ ಗ್ರಂಥ ಇದರ ಸೂಚನೆಯಂತಿತ್ತು. ಈಗ ವಿಮರ್ಶೆಯ ಕೇಂದ್ರ, ಕೃತಿ ಅಥವಾ ಲೇಖಕರಲ್ಲ, 'ಸಂಸ್ಕೃತಿ'. ಸಾಹಿತ್ಯದ ಜತೆಗೆ ರಾಜಕಾರಣ, ಭಾಷೆ ಬದುಕು ಎಲ್ಲ ಎಳೆಗಳೂ ಸೇರಿಕೊಂಡು ಅದು ಕನ್ನಡ ಚಿಂತನೆಯಾಗುತ್ತಿದೆ. ಆದರೆ ಇದರಲ್ಲಿ ಕೃತಿಯ ಆಶಯ ನಿಲುವುಗಳ ಚರ್ಚೆಯೇ ಮುಖ್ಯವಾಗಿ ಅದರ ರೂಪವಿನ್ಯಾಸ ಮತ್ತು ಕಲೆಯ-ವ್ಯಸನವನ್ನಲ್ಲ-ಪ್ರಶ್ನೆಯನ್ನು ಪಕ್ಕಕ್ಕಿಟ್ಟಂತಿದೆ. ಇದರಿಂದ ಒಳ್ಳೆಯ ಮತ್ತು ಕೆಟ್ಟ ಬರಹವನ್ನು ಗುರುತಿಸುವ ತಾರತಮ್ಯ ಪ್ರಜ್ಞೆಯೇ ಕಾಣೆಯಾಗುತ್ತಿದೆ. ಇದು ಇನ್ನೊಂದು ಅತಿ. ಸಾಂಸ್ಕೃತಿಕ ವಿಶ್ಲೇಷಣೆ ಹೆಸರಲ್ಲಿ ಪ್ರಾಚೀನ ಕೃತಿಗಳನ್ನು, ಅಡಿಗರ ಕುವೆಂಪು ಮುಂತಾದ ಹಿರಿಯ ಲೇಖಕರ ಸಾಹಿತ್ಯವನ್ನೂ ಹೊಸತಲೆಮಾರಿನ ಮನಸ್ಸುಗಳು ಭಿನ್ನವಾಗಿ ನೋಡುವ ಯತ್ನಗಳು ನಡೆದಿದೆ. ಆದರೂ ಹಿರಿಯ ಬರಹಗಾರರನ್ನು ಕುರಿತ ಹೊಸತಲೆಮಾರಿನ ಪ್ರತಿಕ್ರಿಯೆಗಳಿನ್ನೂ ಸ್ಪಷ್ಟವಾಗಿಲ್ಲ. ಕೆಲವರು ಅವರನ್ನು ಓದುತ್ತಿದ್ದಾರೆಯೇ ಎಂಬ ಗುಮಾನಿ ಸಹ ಬರುತ್ತದೆ.

ವಸುಧೇಂದ್ರ ಅವರ ಪ್ರೆಶ್ ಆದ ಪ್ರಬಂಧಗಳ ಹೊರತಾಗಿಯೂ, ಒಟ್ಟಾರೆ ಸೊರಗಿದಂತೆ ಮಂಕಾಗಿ ತೋರುವ ಪ್ರಕಾರಗಳಲ್ಲಿ ಲಲಿತ ಪ್ರಬಂಧವೂ ಒಂದು. ಇದಕ್ಕೆ ಕಾರಣ, ಇದರಲ್ಲಿ ಹಿಂದಿನಂತೆ ದೊಡ್ಡ ಲೇಖಕರು ತೊಡಗಿಲ್ಲದಿರುವುದೊ, ಅಥವಾ ಇವನ್ನು ಬರೆಯುವ ಮನಃಸ್ಥಿತಿಯನ್ನು ಈಗಿನ ಸನ್ನಿವೇಶವು ಕಳೆದುಹಾಕಿದೆಯೊ ತಿಳಿಯುತ್ತಿಲ್ಲ. ಆದರೆ ಪ್ರಬಂಧದ ಪ್ರಕಾರದ ಇನ್ನೊಂದು ರೂಪವೇ ಆಗಿರುವ ಅಂಕಣಗಳೂ ಹುಲುಸಾದ ಬೆಳೆ ತೆಗೆಯುತ್ತಿವೆ. ಮಾಧ್ಯಮಗಳ ಒತ್ತಾಸೆ ಇದಕ್ಕೆ ಕಾರಣ. ಲಂಕೇಶರ ಟೀಕೆಟಿಪ್ಪಣಿಗಳು ಒಂದು ಪ್ರಕಾರವಾಗಿ ಇದಕ್ಕೆ ಮಾನ್ಯತೆ ತಂದುಕೊಟ್ಟವು. ನಂತರ ರವಿಬೆಳಗೆರೆಯವರ ಅಂಕಣಪುಸ್ತಕಗಳು ಜನಪ್ರಿಯವಾದವು. ಅನಂತಮೂರ್ತಿ, ನಾಗೇಶ್ ಹೆಗ್ಗಡೆ, ಜಾನಕಿ, ಶಿವಸುಂದರ್, ಡಿ.ಎಸ್. ನಾಗಭೂಷಣ, ತಿರುಮಲೇಶ್, ಹಳೆಮನೆ ಮುಂತಾದ ಹಿರಿಕಿರಿಯ ಲೇಖಕರ ಅಂಕಣಗಳು ಪತ್ರಿಕೆಯಲ್ಲಿ ಪ್ರಕಟವಾಗುತ್ತಿವೆ. ಆಗಾಗ್ಗೆ ಬರೆದರೂ ದಿನೇಶ್ ಅಮೀನ್‌ಮಟ್ಟು, ಜಿ. ರಾಜಶೇಖರ, ಕೆ. ಪಿ. ಸುರೇಶ್, ಫಣಿರಾಜ್ ಅವರ ಚಿಂತನೆಗಳು ಪ್ರಬುದ್ಧವಾಗಿವೆ. ಬಹುಶಃ ಅಂಕಣಗಳ ಉಪಯುಕ್ತತೆಗೆ ಕಾರಣ,. ಅವುಗಳ ವರ್ತಮಾನತೆ. ಆದರೆ ಅತಿವರ್ತಮಾನತೆಯು ಅವುಗಳ ಮಿತಿ. ಪ್ರಬಂಧವೂ, ಕತೆಯೂ, ಚಿಂತನೆಯೂ, ವಿಮರ್ಶೆಯೂ ಆಗಿರಬಹುದಾದಂತೆ ಇರುವ ಈ ಪ್ರಕಾರವು, ಈಗ ಕನ್ನಡದಲ್ಲಿ ಹೆಚ್ಚು ಓದುಗರನ್ನು ಪಡೆದಿದೆ. ಹುಸಿ ಆದರ್ಶವಿಟ್ಟುಕೊಂಡು ನಿಜವ ಕಾಣಲಾಗದೆ, ಆಗುತ್ತಿರುವುದೆಲ್ಲ ಕೆಡಕೆ ಎಂದು ರೋದಿಸದೆ, ವಾಸ್ತವವನ್ನು ನಿಷ್ಠುರವಾಗಿ ಚಿತ್ರಿಸುವ ಎಲ್ಲ ಬರಹಗಳು ಮನಸ್ಸನ್ನು ಆವರಿಸಿಕೊಳ್ಳುತ್ತಿವೆ.

ಕನ್ನಡದಲ್ಲಿ ಸಾಹಿತ್ಯದ ಸಾಂಪ್ರದಾಯಕ ವ್ಯಾಖ್ಯೆಯನ್ನು ಬದಲಿಸುವಂತಹ ಕೆಲವು ಚಲನೆಗಳು ಸಂಭವಿಸುತ್ತಿವೆ. ಅವುಗಳಲ್ಲಿ ಒಂದು, ವಿಭಿನ್ನ ಕ್ಷೇತ್ರದಲ್ಲಿ ಕೆಲಸ ಮಾಡುವವರು-ರಾಜಕಾರಣಿಗಳು ವೈದ್ಯರು ಐಟಿ ಇಂಜನಿಯರುಗಳು, ಮಾಧ್ಯಮದವರು, ರೈತರು- ಬರೆಯುತ್ತಿರುವುದು. ಅಕೆಡೆಮಿಕ್ ವಲಯದಲ್ಲಿ ಇವರ ಬರಹಗಳ ಮುಖ್ಯ ಚರ್ಚೆಗೆ ಬಾರದೆಯಿರಬಹುದು. ಆದರೆ ಈ ಬರಹಗಳು ಎಷ್ಟೊ ಖ್ಯಾತ ಲೇಖಕರ ಬರಹಕ್ಕಿಂತ ಉಪಯುಕ್ತವಾಗಿವೆ. ಸೃಜನಶೀಲ ಸೃಜನೇತರ ಎಂಬ ಕೃತಕಭೇದ ಬಿಟ್ಟು ನೋಡುವುದಾದರೆ, ಭಾಷೆಯನ್ನು ಬಳಸಿ ಹುಟ್ಟುತ್ತಿರುವ ಎಲ್ಲ ಜೀವಂತವಾದ ಸೃಜನಶೀಲವಾದ ಅಭಿವ್ಯಕ್ತಿಗಳನ್ನು ಸಾಹಿತ್ಯ ಎಂದು ಭಾವಿಸತೊಡಗಿದರೆ, ಸಾಹಿತ್ಯದ ಚರ್ಚೆ ಕೆಲವೇ ಪ್ರಕಾರ ಅಥವಾ ಲೇಖಕರಲ್ಲಿ ಸುತ್ತ ತಿರುಗುವುದು ತಪ್ಪುತ್ತದೆ. ಡಾ. ರಮಾನಂದ, ನಾಗಲೋಟಿಮಠ, ಸಿಜಿಕೆ, ವಸುಧೇಂದ್ರ, ಅಗ್ನಿ ಶ್ರೀಧರ್, ದಿನೇಶ್ ಅಮೀನ್‌ಮಟ್ಟು, ಶಿವಸುಂದರ್, ಇವರ ಬರಹಗಳು ಮುಖ್ಯವಾಗಿವೆ. (ಇಷ್ಟಕ್ಕೂ ಇಲ್ಲಿ ನಾಡಿನ ದೊಡ್ಡಸಂಖ್ಯೆಯ ಮೌಖಿಕ ಅಭಿವ್ಯಕ್ತಿಗಳನ್ನು ಹೊರಗಿಟ್ಟೆ ಮಾತಾಡುತ್ತಿರುವುದನ್ನು ಮರೆಯುವಂತಿಲ್ಲ) ದುರಂತವೆಂದರೆ ಈಗ ಹಿರಿಯ ಪ್ರಸಿದ್ಧ ಲೇಖಕರು ರಚಿಸಿದವು ಎಂದೊ, ಅವು ಪ್ರಶಸ್ತಿ ಪಡೆದವು ಎಂದೊ, ಸಾಮಾನ್ಯ ಕೃತಿಗಳ ಚರ್ಚೆಯಾಗುತ್ತದೆ. ಹೊಸ ಅನುಭವ ಹೊಸ ಸಂವೇದನೆ ಕೊಡುವ ಹೊಸತಲೆಮಾರಿನ ಲೇಖಕರ ಚರ್ಚೆ ಆಗುವುದಿಲ್ಲ, ಇದೊಂದು ಆತ್ಮವಂಚಕ ಸ್ಥಿತಿಯಾಗಿದೆ.

ಕನ್ನಡ ಓದುಗರ ಒಲವುಗಳು ಸಾಹಿತ್ಯಲೋಕದ ಬಗ್ಗೆ ಕೆಲವು ಕುತೂಹಲಕರ ಸಂಗತಿಗಳನ್ನು ತಿಳಿಸುತ್ತವೆ. ಪುಸ್ತಕ ಮಾರಾಟ ವರದಿಗಳ ಪ್ರಕಾರ ರವಿಬೆಳಗೆರೆ, ತೇಜಸ್ವಿ, ಭೈರಪ್ಪ ಅತಿಹೆಚ್ಚು ಬೇಡಿಕೆಯಿರುವ ಲೇಖಕರು. ಇದು ಶ್ರೇಷ್ಠತೆಯ ಮಾನದಂಡವಲ್ಲ ನಿಜ. ಸಂಘಪರಿವಾರವು ತನ್ನ ಕರಪತ್ರಗಳಂತೆ 'ಆವರಣ'ವನ್ನು ವ್ಯವಸ್ಥಿತವಾಗಿ ಹಂಚಿರುವುದು ಅದರ ಬಹುಮುದ್ರಣಗಳಿಗೆ ಕಾರಣವಾಗಿರಬಹುದು. ಆದರೂ ಭೈರಪ್ಪನವರ ಜನಪ್ರಿಯತೆ ಮೊದಲಿಂದಲೂ ಇದೆ. ಭೈರಪ್ಪ ಬೆಳಗೆರೆ, ತೇಜಸ್ವಿ ಏಕಕಾಲಕ್ಕೆ ಜನಪ್ರಿಯರಾಗಿರುವುದು ಕನ್ನಡ ಓದುಗ ಜಗತ್ತಿನ ಸಂಕೀರ್ಣ ಅವಸ್ಥೆಯಾಗಿದೆ. ಈ ಮೂವರ ಆಯ್ಕೆಯು ಕನ್ನಡ ಓದುಗರ ಅಭಿರುಚಿಯ ಸಂಕೇತ ಎನ್ನುವುದಾದರೆ, ಈ ಅಭಿರುಚಿಯನ್ನು ತಾತ್ವಿಕವಾಗಿ ಏನೆಂದು ವ್ಯಾಖ್ಯಾನಿಸಬಹುದು?

ಲೇಖಕರು ವೈಯಕ್ತಿಕ ಮಹತ್ವಾಕಾಂಕ್ಷೆಯಿಂದ ಬರೆದಿದ್ದನ್ನೆಲ್ಲ ಓದುಗರು ಮನ್ನಿಸುತ್ತಾರೆ ಎಂಬ ನಂಬಿಕೆ, ಮಹಾಕಾವ್ಯದ ವಿಷಯದಲ್ಲಿ ಒಡೆದುಹೋಗಿದೆ. ಕನ್ನಡ ವಿಮರ್ಶೆ ಗಂಭೀರವೆಂದು ಚರ್ಚೆ ಮಾಡುವ ಅನೇಕ ಕೃತಿಗಳನ್ನು ಬೈಪಾಸು ಮಾಡಿ ಓದುಗರು ತಮ್ಮದೇ ಆದ ಲೇಖಕರನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಚಲಾಯಿಸುತ್ತ ಬಂದಿದ್ದಾರೆ. ಹಾಗೆಂದು ಮಹಾಕಾವ್ಯಗಳು ಹುಟ್ಟುವುದು ನಿಂತಿಲ್ಲ, ಅವಕ್ಕೆ ದೊಡ್ಡ ಪ್ರಶಸ್ತಿಗಳೂ ಬರುತ್ತಿವೆ. ಆದರೆ ಅವನ್ನು ಯಾರು ಓದುತ್ತಾರೆ ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ. ಬಹುಶಃ

ಸಾಹಿತ್ಯವನ್ನು ಆಧುನಿಕ ಕಾಲದ ಆಕೋತ್ತರ ಮತ್ತು ...ಗಳನ್ನು ಹಿಡಿಯುವ ನುಡಿಗಟ್ಟಿಲ್ಲ, ಆದರೂ ಕತೆ, ...ಬರಿ, ಕಾವ್ಯ ಮುಂತಾದ 'ಪ್ರಧಾನ' ಪ್ರಕಾರಗಳಿಗೆ ...ನ ಮಹತ್ವವಿಲ್ಲ. ಇತರೆ ಪ್ರಕಾರಗಳಲ್ಲಿ ನಡೆದಿರುವ ...ವನ್ನು ನೋಡಲು ಒಂದು ತಡೆಯಾಗಿದೆ. ಕನ್ನಡದಲ್ಲಿ ... ಅತಿಹೆಚ್ಚು ಪ್ರಕಟವಾಗುತ್ತಿದೆ. ಆದರೆ ಅದಕ್ಕೆ ...ರಿಲ್ಲ ಎಂಬುದು ಇನ್ನೊಂದು ವೈರುಧ್ಯ. ಇದಕ್ಕೆ ...ಕಾವ್ಯವಲ್ಲದೆ ಬೇರೇನೂ ಬರೆಯಬೇಡಿ ಎಂದು ಕೆಲವರು ...ಮಾಡಿದಂತಿದೆ. ಇದು ಅನುಭವ ಚಿಂತನೆ ಪ್ರತಿಭೆಗಳು ...ರುವ ಹಲವು ಸಾಧ್ಯತೆಯನ್ನು ಸ್ವತಃ ಮುಚ್ಚಿಕೊಂಡಂತೆ. ... ಕನ್ನಡ ಸಾಹಿತ್ಯದ ಈ ಹೊತ್ತಿನ ಪ್ರಭಾವಶಾಲಿ ...ಪ್ಪು ಗದ್ಯ ಮತ್ತು ವೈಚಾರಿಕತೆ. ಎಂತಲೇ ವೈಚಾರಿಕ ...ಗಳು ಮತ್ತು ವಿಮರ್ಶೆಗಳು ಹೆಚ್ಚು ಓದುಗೊಳ್ಳುತ್ತಿವೆ. ...ಶ್ ಓದುಗರಿಗೆ 'ಯುಗಸಂಧ್ಯಾ' ಬದಲು ...ನಮಟ್ಟು ಅವರ ಪತ್ರಿಕಾ ಬರಹಗಳು ಮುಖ್ಯವೆನಿಸಿದರೆ ಅದು ಸರಿ



...ಮಾಧ್ಯಮಗಳು ಸಾಹಿತ್ಯದ ಚಲನಶೀಲತೆಗೆ ಕಾರಣವಾಗಿರುವಂತೆ, ಅದರ ...ವನ್ನೂ ನಿರ್ಧರಿಸುತ್ತಿವೆ. ಜಯಂತ್ ಎರಡು ದಶಕಗಳಿಂದ ಬರೆದ ...ದ ಸಿಗದ ಕೀರ್ತಿ ಮತ್ತು ಜನಪ್ರಿಯತೆ 'ಮುಂಗಾರು ಮಳೆ'ಯ ... ಹಾಡಿನಿಂದ ಸಿಕ್ಕಿಬಿಟ್ಟಿತು. ಶಕ್ತಿಶಾಲಿಯಾದ ಮಾಧ್ಯಮಗಳು ಒಡ್ಡುವ ...ಮತ್ತು ಬಹುಮಾನಗಳು ಹೊಸ ಲೇಖಕರಲ್ಲಿ ಸ್ಪರ್ಧಾತ್ಮಕತೆಯನ್ನು ... (ಈ ಬಹುಮಾನಗಳ ಆಮಿಷ ಸದ್ಯಕ್ಕೆ ಕತೆ ಕಾವ್ಯಗಳಿಗೆ ಸೀಮಿತವಾಗಿದೆ.) ...ಈ ಬಹುಮಾನಗಳು ಬರಹದ ಯಶಸ್ಸಿನ ಅಳತೆಗೋಲಾಗಿ ತಿಳಿದುಬಿಡುವ ...ವಿದೆ. ಒಂದೇ ಸಂಕಲನದಲ್ಲಿರುವ ಪ್ರಶಸ್ತಿ ಬಂದ ಕತೆಗಿಂತ ಬಾರದ ... ಮುಖ್ಯವೆನಿಸಬಹುದು. ಮಾಧ್ಯಮಗಳು ಈಚೆಗೆ ಅತ್ಯುತ್ತಮ ...ನ್ನು ಮತ್ತು ವ್ಯಕ್ತಿಗಳನ್ನು ಆರಿಸುವ ಕೆಲಸ ಮಾಡುತ್ತಿವೆ. ಈ ...ಗ್ ವಿಧಾನದ ಮೌಲ್ಯಮಾಪನದಲ್ಲಿ ಕೆಲವು ಪ್ರಯೋಜನಗಳಿರಬಹುದು. ... ಇದು ಸಾರ್ವಜನಿಕ ಬದುಕು ಮತ್ತು ಸಾಹಿತ್ಯದ ಬಹುತ್ವವನ್ನು ...ಸಿಬಿಡುವ ಗುಮಾನಿಯನ್ನು ಇರಿಸಿಕೊಳ್ಳಬೇಕಿದೆ.

ಭಾಷೆಯ ಬಳಕೆಯಲ್ಲಿ ಕನ್ನಡ ಸಾಹಿತ್ಯ ಹೊಸ ಪ್ರಯೋಗ ನಡೆದಿದೆ. ನಿರೂಪಣೆಗೂ ಆಡುಮಾತನ್ನೇ ಬಳಸುವ ಯತ್ನಗಳೂ ನಡೆದಿವೆ. ಬರಹದ ಭಾಷೆಗೂ ಆಡುವ ಭಾಷೆಗೂ ಇರುವ ಕಂದರಗಳು ಇಲ್ಲವಾಗಬೇಕೆಂದು ಯತ್ನಗಳೂ (ಡಿ.ಎನ್.ಶಂಕರಭಟ್ಟ) ನಡೆದಿವೆ. ಆದರೆ ಊರುಮನೆಯ ಆಡುಮಾತನ್ನು ಬಳಸುವುದೇ ಸಾಧನೆ ಎಂಬ ಗ್ರಹಿಕೆಯಿಂದ ಅನೇಕ ಗ್ರಾಮೀಣ ಭಾಗದ ಹೊಸ ಬರಹಗಾರರು, ಭಾಷೆಯನ್ನು ಅಭಿವ್ಯಕ್ತಿಗೆ ಸೃಜನಶೀಲವಾಗಿ ದುಡಿಸಿಕೊಳ್ಳುವ ಹೋರಾಟವನ್ನೆ ಮಾಡದೆ, ಗೊಂದಲ ಸೃಷ್ಟಿಸಿಕೊಂಡಂತಿದೆ. ಅಂತಹ ನಾಲ್ಕೈದು ಕಾದಂಬರಿಗಳು ಆಗಿಹೋದವು. ಮೊದಲ ಘಟ್ಟದಲ್ಲಿ ವಾಸ್ತವವಾದಿ ಕಥನಮಾರ್ಗದಲ್ಲಿ ಯಶಸ್ವಿಯಾಗಿ ಬರೆದ 40ರ ಹರೆಯದಲ್ಲಿರುವ ಅನೇಕ ಪ್ರತಿಭಾವಂತ ಬರಹಗಾರರು ಮೊದಲ ಸಂಕಲನದ ಯಶಸ್ಸನ್ನು ಮರಳಿ ತೋರಲು ಆಗುತ್ತಿಲ್ಲ. ಇದಕ್ಕೆ ಕಾರಣ ಹೊಸ ಕಾಲದ ಬದುಕನ್ನು ಹಿಡಿಯಲು ಹೊಸ ಭಾಷೆಯನ್ನು ಹುಟ್ಟಿಸಿಕೊಳ್ಳುವುದರಲ್ಲಿ ಎದುರಾಗಿರುವ ಬಿಕ್ಕಟ್ಟು ಅನಿಸುತ್ತದೆ. ಈ ಬಿಕ್ಕಟ್ಟು ಹಿರಿಯ ಲೇಖಕರಾದ ಅನಂತಮೂರ್ತಿ ಕುಂವಿ, ಕಂಬಾರ, ಜಿ.ನಾಯಕ, ಆಮೂರ, ಇವರಿಗೂ ಕಾಡಿದೆ. 'ಮಾಯಾಲೋಕ'ವು ತನ್ನೆಲ್ಲ ಅಪೂರ್ವ ಯಶಸ್ಸಿನ ನಡುವೆ ತೇಜಸ್ವಿಯವರ ಕಥನದ ಬಿಕ್ಕಟ್ಟನ್ನೂ ಸೂಚಿಸುತ್ತಿದೆ ಎಂದು ನನ್ನ ಅನಿಸಿಕೆ. ಅವರು ಭಾಷಿಕ ಕಥನಕ್ಕೆ ಚಿತ್ರಗಳ ನೆರವು ಪಡೆದುಕೊಳ್ಳುವುದು ಏನನ್ನು ಹೇಳುತ್ತಿದೆ? ಹಳೇ ನುಡಿಗಟ್ಟು ಮತ್ತು ಪ್ರಕಾರಗಳು ತೀವ್ರಗತಿಯಲ್ಲಿ ಬದಲುತ್ತಿರುವ ಲೋಕವನ್ನು ಹಿಡಿಯಲು ಸಾಲದಾಗಿವೆ. ಹೊಸ ನುಡಿಗಟ್ಟು ದೊರಕುತ್ತಿಲ್ಲ. (ಕೊನೆಯ ತನಕ ಹೊಸ ನುಡಿಗಟ್ಟನ್ನು ಶೋಧಿಸುತ್ತ ಹೋರಾಡುತ್ತ ಬರೆದವರಲ್ಲಿ ಕುರ್ತಕೋಟಿ, ಲಂಕೇಶ್ ಮತ್ತು ಡಿಆರ್ ಎಂದು ಕಾಣುತ್ತದೆ.) ಹೊಸತಲೆಮಾರಿನ ದಲಿತ ಲೇಖಕರ ಕಷ್ಟ ಇನ್ನೊಂದು ತೆರನಾಗಿದೆ. ದೇವನೂರು, ಸಿದ್ಧಲಿಂಗಯ್ಯ ಅವರಂತೆ ಬರೆಯುವ ಸವಾಲು ಇಲ್ಲದೆ ಇರಬಹುದು. ಆದರೆ 'ಅಲ್ಲೇ ಕುಂತಿರುವ' ದಲಿತ ಸಮುದಾಯ ಮತ್ತು ಮುಂದೆ ಹೋಗಿ, ಸಮುದಾಯ ಪ್ರಜ್ಞೆ ಬಿಟ್ಟುಕೊಡುತ್ತಿರುವ ಶಿಕ್ಷಿತ ದಲಿತ ಮಧ್ಯಮವರ್ಗದ ನಡುವಣ ಬಿಕ್ಕಟ್ಟುಗಳು ಅವರನ್ನು ಕಾಡಿಸಿದಂತಿವೆ. ಜನರ ನೋವಿನ ಚಿತ್ರಣವುಳ್ಳ ಕೃತಿಗಳು ಅಧಿಕಾರಸ್ಥರಿಗೆ ಅರ್ಪಣೆಯಾಗುವುದು ಅವರನ್ನು ದಿಕ್ಕೆಡಿಸಿರಬಹುದು. ಇಂತಹ ತಲ್ಲಣ, ದುಗುಡ ಮತ್ತು ಸ್ವವಿಮರ್ಶೆಗಳಲ್ಲಿ ಹೊಸ 'ದಲಿತ ಸಾಹಿತ್ಯ' ಒಡಮೂಡುತ್ತಿದೆ. ಕುಕ್ಕರಹಳ್ಳಿ ಎನ್ಕೆ ಬರೆಯುವುದನ್ನು ಹಾಗೆ 'ದಲಿತ' ಎನ್ನುವುದು ತಪ್ಪಾಗುತ್ತದೆ.

ಆದರೆ ಬಿಕ್ಕಟ್ಟುಗಳು ಹೊಸ ಹುಡುಕಾಟಕ್ಕೆ ಪ್ರೇರಣೆಗಳೂ ಹೌದು. 'ಮಾಯಾಲೋಕ' 'ಅರಮನೆ' 'ಸೂರ್ಯಶಿಕಾರಿ' 'ತೇರು' 'ಹುತ್ತ' 'ಒಂದು ಬದಿಕಡಲು' ಎಲ್ಲವೂ ಹೊಸ ಹುಡುಕಾಟದ ಫಳಗಳು. ಪ್ರಕಾರಗಳಾಚೆ ಅಥವಾ ಪ್ರಕಾರಗಳನ್ನು ಬೆರೆಸಿ ಬರೆಯುವ ಯತ್ನಗಳು ಈಗ ಜರುಗುತ್ತಿದೆ. ಸಾಹಿತ್ಯದಲ್ಲಿ ಪ್ರಕಾರಗಳು ಉಲ್ಲಂಘನೆಗೆಂದೇ ಕೊರೆದ ಗೆರೆಗಳು. ಆದರೂ ಈಚಿನ ಕಾದಂಬರಿಗಳಲ್ಲಿ ಪ್ರಯೋಗಶೀಲತೆ ಮತ್ತು ಮಹತ್ವಾಕಾಂಕ್ಷೆಗಳು ಎದ್ದುಕಾಣುವಂತೆ, ತೀವ್ರವಾಗಿ ಕಲಕುವ ಅನುಭವವು ಕಡಿಮೆಯಾಗುತ್ತಿದೆ. ಅವನ್ನು ಯಾರು ಓದುತ್ತಿದ್ದಾರೆ ಓದಿದವರು ಏನನ್ನು ಪಡೆದಿದ್ದಾರೆ ಎಂಬ ಪ್ರಶ್ನೆಗಳು ಸದ್ಯಕ್ಕೆ ರದ್ದುಗೊಂಡಂತಿವೆ. ಆದರೂ ಮಹಾಕಾವ್ಯದಂತೆ ಸೂಕ್ಷ್ಮತೆಯನ್ನೂ ಆತ್ಮವಿಮರ್ಶೆಯನ್ನೂ ಕಳೆದುಕೊಂಡಿರದ, ಕತೆ ಕಾದಂಬರಿ ಚಿಂತನೆ ಪ್ರಕಾರಗಳು, ಮಹತ್ವವಾದುದನ್ನು ಕೊಡುವ ತ್ರಾಣವುಳ್ಳವು.

ಕೆಲವು ಹಿರಿಯ ಲೇಖಕರು ಲೋಕಾಭಿರಾಮವಾಗಿಯೊ, ಕೃತಕ ದುಗುಡದಿಂದಲೊ, ಕಾಲಜ್ಞಾನದ ಶೈಲಿಯಲ್ಲಿ ಕನ್ನಡ ಸಾಹಿತ್ಯವು ನಿಂತನೀರಾಗಿದೆ, ದೊಡ್ಡ ಪ್ರತಿಭೆಗಳು ಕಾಣಿಸುತ್ತಿಲ್ಲ ಇತ್ಯಾದಿ ಹೇಳಿಕೆಗಳನ್ನು ಹೊರಡಿಸುವುದುಂಟು. ಹೆಚ್ಚಿನವರ ವಿಷಾದಯೋಗಕ್ಕೆ ಕಾರಣ, ಅವರು ಹೊಸತಲೆಮಾರಿನ ಬರಹಗಾರರನ್ನು ಶ್ರದ್ಧೆಯಿಟ್ಟು ಪ್ರಾಮಾಣಿಕವಾಗಿ ಓದಿಲ್ಲದಿರುವುದು. ಕನ್ನಡದಲ್ಲಿ ದೊಡ್ಡಸಂಖ್ಯೆಯ ಹೊಸ ತಲೆಮಾರಿನ ಲೇಖಕರು ಹಲವು ಬಿಕ್ಕಟ್ಟಿನಲ್ಲಿದ್ದರೂ, ಗಂಭೀರವಾಗಿ ಉತ್ಸುಕತೆಯಿಂದ ಶ್ರದ್ಧೆಯಿಂದ ಸಂವೇದನಶೀಲವಾದ ಗದ್ಯ-ಪದ್ಯಗಳಲ್ಲಿ ಬರಹ ಸೃಷ್ಟಿಸುತ್ತಿದ್ದಾರೆ. ಸುತ್ತಣ ವಿದ್ಯಮಾನಗಳ ಜತೆ ಕುತೂಹಲ, ಎಚ್ಚರಿಕೆ ನಿಷ್ಠುರತೆಯಲ್ಲಿ ಅನುಸಂಧಾನ ಮಾಡುತ್ತ ಬರೆಯುತ್ತಿದ್ದಾರೆ. ತೀರ ಈಚೆಗೆ ಓದಿದ ರಾಜೀವ ನಾಯಕರ 'ಮಣ್ಣಿನದೋಣಿ' ಇಂತಹ ಪ್ರಾಮಾಣಿಕ ಕತೆ. ಈ ಅರ್ಥದಲ್ಲಿ ಕನ್ನಡ ಸಾಹಿತ್ಯದಲ್ಲಿ ಒಂದು ನಿಲುವು ಒಂದು ಮನಸ್ಸು ಎಂಬುದಿಲ್ಲ, ಹಲವು ಇವೆ. ಸಂತೋಷದ ಸಂಗತಿಯೆಂದರೆ, ಹೊಸತಲೆಮಾರಿನ ಬರಹಗಾರರಲ್ಲಿ ಯಾರೂ ಕೋಮುವಾದಿಗಳಿಲ್ಲ; ಮೂಲಭೂತವಾದಿಗಳಿಲ್ಲ. ಎಷ್ಟೋ ಹಿರಿಯ ಲೇಖಕರಲ್ಲಿ, ಮುಖ್ಯವಾಗಿ ಪತ್ರಿಕಾ ವರದಿಗಾರರಲ್ಲಿ ಕಾಣುವ ಮತೀಯ ವಿದ್ವೇಷ, ಸರಳೀಕರಣ ಅವಸರ ಅಸೂಕ್ಷ್ಮತೆಗಳೂ ಅವರಲ್ಲಿಲ್ಲ. ನಾಗವೇಣಿ, ಜಾನಕಿ, ತುರುವೀಹಾಳು, ನೇಮಿಚಂದ್ರ, ವಸುಧೇಂದ್ರ, ಎನ್ಕೆ ಹನುಮಂತಯ್ಯ, ವಿಸಾಜಿ, ರಾಜೀವ ನಾಯಕ, ಮಂಜುನಾಥ್, ಸಾಲಿ, ಅರುಣ್, ವಿನಯಾ, ಪೀರಬಾಶಾ, ಆರಿಫ್, ಸುಬ್ಬು- ಇವರೆಲ್ಲ ಅತ್ಯುತ್ತಮವಾದುದನ್ನು ಬರೆಯುತ್ತಿದ್ದಾರೆ. ಆತಂಕ, ಅಸ್ಪಷ್ಟತೆ, ಹುಡುಕಾಟ, ಉಮೇದುಗಳೆಲ್ಲ ಸೇರಿದಂತಹ ಒಂದು ಸಂಕೀರ್ಣ ಸನ್ನಿವೇಶದಲ್ಲಿ ಕನ್ನಡ ಸಾಹಿತ್ಯ ಒಂದು ಜೀವಂತ ಹೊರಳಿಕೆಯನ್ನು ಪಡೆಯಲು ಯತ್ನಿಸುತ್ತಿದೆ. ಏನಾದರೂ ಹೊಸತಾದುದು ದೊಡ್ಡದಾದುದು ಹುಟ್ಟಿದರೆ ಅದು ಈ ಹೊಸ ತಲೆಮಾರಿಂದಲೇ ಅನಿಸುತ್ತಿದೆ. ಇದಕ್ಕಾಗಿ ಪಂಥಗಳ ಹಂಗನ್ನು ಬಿಟ್ಟು, ಹೊಸ ಚಳುವಳಿಯೊಂದು ಇನ್ನೂ ಕಾಣಿಸಿಕೊಂಡಿಲ್ಲ ಎಂಬ ಕೊರಗನ್ನು ಬಿಟ್ಟು ಕಾಯಬೇಕು ಅಷ್ಟೆ.

...ರಿಯ ಲೇಖಕರನ್ನು ಕಂಗೆಡಿಸಿರುವ ಜಾಗತೀಕರಣ ಇತ್ಯಾದಿಗಳು ...ಷ್ಟೊ ದಲಿತ ಮತ್ತು ಮಹಿಳಾ ಲೇಖಕರಿಗೂ, ಹೊಸತಲೆಮಾರಿನ ...ರೆಹಗಾರರಿಗೂ, ಒಂದು ರಕ್ಕಸ ಅನಿಸಿಲ್ಲ. ಹಾಗೆಂದು ಅದನ್ನವರು ...ರುಡಾಗಿ ಸಮರ್ಥಿಸುತ್ತಲಿಲ್ಲ. ಕಳೆದುಹೋದ ಮೂಲಲಯದ ...ಡುಕಾಟವೂ ಅವರಿಗೆ ಮುಖ್ಯವೆನಿಸಿಲ್ಲ. ಅವರು ತಮ್ಮ ಬದುಕಿನ ...ರಿಸರದಲ್ಲಿ ಇರುವ ಮೂರ್ತ ಸಮಸ್ಯೆಗಳ ಜತೆ ಕಾದಾಟದಲ್ಲಿ ...ಡಗಿದ್ದಾರೆ. ಈ ದಿಸೆಯಲ್ಲಿ ಮಹಿಳೆಯರ ಬರೆಹಕ್ಕೆ ಹೊಸ ...ಗತ ಸಿಕ್ಕಿದೆ. ಅದು ಸಾಂಪ್ರದಾಯಿಕ ಸ್ತ್ರೀವಾದದ ಸೀಮಿತ ...ಲೆಯಿಂದ ಮುಂದೆ ಬಂದಿದೆ. ಸ್ತ್ರೀವಾದ ಅನಗತ್ಯವೆಂತಲ್ಲ, ಅದಿನ್ನೂ ...ಕಿದೆ. ಆದರೆ ಸ್ತ್ರೀವಾದದ ಹಳೆಯ ಚೌಕಟ್ಟುಗಳನ್ನು ಬಿಟ್ಟು ...ರೆಯುವುದು ಅವರ ಸವಾಲಾಗಿದೆ.

...ಲಂಕೇಶ್, ಡಿಆರ್ ಮತ್ತು ತೇಜಸ್ವಿಯವರ ನಿರ್ಗಮನದ ಬಳಿಕ, ಕದನದ ...ಸಪ್ಪೆಗಟ್ಟಿದ್ದರೂ, ಸಾಹಿತ್ಯದ ವಾತಾವರಣ ಸಾಕಷ್ಟು ವಾಗ್ವಾದಗಳಿಂದ ... 'ಗೋವಿನಹಾಡು' 'ಅನುದೇವಾ' 'ಆವರಣ' 'ಸಾಹಿತ್ಯ ಸಮ್ಮೇಳನ' ... ಚರ್ಚೆಗಳು ದೊಡ್ಡ ಪ್ರಮಾಣದಲ್ಲಿ ನಡೆದವು. ಈ ವಾಗ್ವಾದಗಳನ್ನು ...ವಲ್ಲಿ ಮಾಧ್ಯಮಗಳ ಅಸ್ತಿತ್ವದ ಪ್ರಶ್ನೆಯೂ ಇತ್ತು. ಈ ವಾಗ್ವಾದಗಳಲ್ಲಿ ...ಸಂಗತಿಗಳೆಂದರೆ- 1. ಶಕ್ತಿ ರಾಜಕಾರಣದ ಒತ್ತಾಸೆ ಮತ್ತು ಮತೀಯವಾದಿ ...ಗಳು ಸಾಹಿತ್ಯಿಕ ವಾಗ್ವಾದದಲ್ಲಿ ಧುಮುಕಿ ಅವಕ್ಕೆ ತಮಗೆ ಬೇಕಾದ ... ಮತ್ತು ಉಪಸಂಹಾರವನ್ನು ಕೊಡುತ್ತಿರುವುದು. 'ಆವರಣ' ...ದೇವಾ' ಕುರಿತ ಚರ್ಚೆಗಳು ಒಂದು ಹಂತದಲ್ಲಿ ಕೆಳಮಟ್ಟಕ್ಕೆ ಹೋಗಲು ...ಮಗಳ ಪಾತ್ರವೂ ಇತ್ತು. 2. ಉರಿವ ಘಟನೆಗಳಿಗೂ ಅನೇಕ ಲೇಖಕರು ...ಮೌನ ಅಥವಾ ನಿರ್ಲಿಪ್ತ ತೋರುವುದು. ಒಬ್ಬ ದೊಡ್ಡ ಲೇಖಕನಿಗೆ ...ರಾಜಕಾರಣಿ 'ನಾಯಿ' ಎಂದರೆ, ಅದು ಆ ಲೇಖಕ ವೈಯಕ್ತಿಕವಾಗಿ ...ಸಿಕೊಳ್ಳಬೇಕಾದ ವಿಷಯವಾಗುವುದಾದರೆ ಏನು ಮಾಡಬೇಕು? ... ದಲಿತರ ಮಹಿಳೆಯರ ಮುಸ್ಲಿಮರ ಸಮಸ್ಯೆಗಳನ್ನು ಅವರವರೆ ...ರಿಸಿಕೊಳ್ಳಲಿ ಎಂಬ ಸಾಮಾಜಿಕ ನಿರ್ಲಿಪ್ತ ಮನೋಭಾವದ ...ಮುಮರಿಕೆಯಂತಿದೆ. ಮಾರುಕಟ್ಟೆ ಅರ್ಥಶಾಸ್ತ್ರದ ಪರಿಸರವು ಸ್ವಕೇಂದ್ರಿತ ...ಯನ್ನು ಪಡೆಯುತ್ತಿದೆ ಎಂದು ಕಾಣುತ್ತದೆ. ಇಷ್ಟರ ನಡುವೆಯೂ ... ವಿಷಯಗಳಿಗೆ ಪ್ರತಿಕ್ರಿಯಿಸುತ್ತ ಅನೇಕರ 'ಬಾಯಿಗೆ ಬಿದ್ದು' ವಾಗ್ವಾದ ...ವನ್ನು ಅನಂತಮೂರ್ತಿ ಮುಂತಾದವರು ಜೀವಂತವಿಟ್ಟಿದ್ದಾರೆ. ಸಾಂಸ್ಕೃತಿಕ ...ದ ಆತ್ಮಸಾಕ್ಷಿಯಂತಿರುವ ಜಿ.ರಾಜಶೇಖರ, ನಿಷ್ಠುರವಾದ ಮುಜುಗರದ ...ನ್ನು ಎತ್ತುತ್ತಿದ್ದಾರೆ. ಆಲ್ಮಾಸ್ ಸುದಿಸಿರಿ ಮತ್ತು ಉಡುಪಿ ಸಾಹಿತ್ಯ ...ನಗಳ ಬಗ್ಗೆ ಅವರು ಪ್ರಶ್ನೆ ಎತ್ತಿದರು. ನಾಡಿಗೆ ಸೇರಿದ ಸಂಪತ್ತನ್ನು ...ಗಿ ಒಲ್ಲೈಸುವ ರಾಜಕಾರಣಿಗಳ ಸಹಕಾರದಿಂದ ಕೊಳ್ಳೆಹೊಡೆಯುತ್ತಿರುವ ...ರು ಮತ್ತು ಉದ್ಯಮಿಗಳು ಪ್ರಾಯೋಜಿಸುವ ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ...ಕರು ವಿಮರ್ಶೆಯಿಲ್ಲದೆ ಭಾಗವಹಿಸಿ ಅವಕ್ಕೆ ನ್ಯಾಯಬದ್ಧತೆ ...ಕೊಡುತ್ತಿರುವುದು ನಮ್ಮ ಕಾಲದ ಒಂದು ವೈರುಧ್ಯವಾಗಿದೆ. ಮಠಗಳು, ...ಗಳು ಮತ್ತು ಪ್ರಭುತ್ವಗಳು ದೇವಾಲಯಗಳನ್ನು ಮಾತ್ರವಲ್ಲ ಸಾಂಸ್ಕೃತಿಕ ...ನ್ನೂ ತಮ್ಮ ಬೆಳೆಪಿಗಾಗಿ ಬಳಸಿಕೊಳ್ಳುತ್ತಿವೆ. ಇದು ಬರಹಗಾರರ ...ಗೆ ಕವಿಯುತ್ತಿರುವ ಮಂಕೊ, ಜನ ಸೇರುವ ಕಡೆ ನಾವು ಹೋಗಿ ...ಬೇಕು ಎಂಬ ಈ ವೈರುಧ್ಯಗಳ ಉದಾರತೆಯೊ ತಿಳಿಯದಾಗಿದೆ. ... ನಾವು ಬಹಳ ದುಬಾರಿ ಎಂದು ಈಗ ಹೊಳೆಯುತ್ತಿದೆ.



ವಿನಾಶಕಾದಿದೆ ಆ ನಮಾಝ್ ನಿರ್ವಹಿಸುವವನಿಗೆ
ಅವರು ತೋರಿಕೆಯ ಕೆಲಸ ಮಾಡುತ್ತಾರೆ ಮತ್ತು
ಬಡವರಿಗೆ ಊಟ ಕೊಡಲು, ಜನರಿಗೆ ಅವಶ್ಯಕ ವಸ್ತು
ಕೊಡಲು ಹಿಂದೇಟು ಹಾಕುತ್ತಾರೆ
-ಕುರ್‌ಆನ್ ('ಅಲ್‌ಮಾಊನ್' ಅಧ್ಯಾಯ)

ಹೌದು, ನಾನೊಬ್ಬ ಜಿಹಾದಿ!

ನಮಾಝಿಗೆಂದು ಮಸೀದಿಯೆಡೆಗೆ
ಧಾವಿಸುತ್ತಿರುವವರು ನನ್ನನ್ನು ಕೈಬೀಸಿ ಕರೆಯುತ್ತಿದ್ದಾರೆ
ದೇವರನ್ನು ಮುಖಾಮುಖಿಯಾಗುವ ಧೈರ್ಯ ಸಾಲದೆ
ನಾನು ಅವಮಾನದಿಂದ ಮುಖಮುಚ್ಚಿಕೊಂಡಿದ್ದೇನೆ

ಹಸಿದ ಮಗುವೊಂದು ನನ್ನ
ಕಣ್ಣ ಆಳವನ್ನು ಕಲಕಿದೆ;
ತನ್ನ ದೃಷ್ಟಿಯ
ಗರುಡ ಪಾತಾಳವನ್ನಿಳಿಸಿ.....
ಅಯ್ಯೋ..... ಈಗಷ್ಟೇ ಉಂಡು ಬಂದೆ
ತಲೆ ತಗ್ಗಿಸಿದ್ದೇನೆ ಅದರ ಮುಂದೆ!

ಆ ಮಗುವನ್ನು ಮರೆತು
ಉಂಡ ಅನ್ನದ ತುತ್ತು
ನನ್ನ ರಕ್ತದ ಕಣಕಣಗಳನ್ನೂ ಕಳಂಕಗೊಳಿಸಿದೆ
ಈ ಅಶುದ್ಧಿಯನ್ನು ತೊಳೆಯುವಷ್ಟು ನೀರು
ಮಸೀದಿಯ ಕೊಳದಲ್ಲಿದೆಯೆ?

ಏಕದೇವನ ಮುಂದೆ
ಪಾಲುದಾರಿಕೆಯನ್ನು ಬೇಡುತ್ತಿರುವ
ಶಬ್ದ, ಅಕ್ಷರಗಳ ವಿಗ್ರಹಗಳನ್ನು
ಮುರಿದು ಮುಂದೆ ಹೋಗಬೇಕಾಗಿದೆ
ಅದು ನನ್ನಿಂದ ಸಾಧ್ಯವಿದೆಯೇ?

ನನ್ನ ಮುಂದೆ ಸತ್ಯ ಧಗಧಗಿಸುತ್ತಿದೆ
ದೇವರೆ... ನಿನ್ನ ಪ್ರಾರ್ಥನೆಯ ಸಾಲುಗಳನ್ನು
ಮುರಿದು ಆ ಬೆಂಕಿಯ ಕುಲುಮೆಗಿಕ್ಕಿ
ಕರಗಿಸ ಹೊರಟಿದ್ದೇನೆ
ಸಾಧ್ಯವಾದರೆ ಆ ಅಗ್ನಿಧಾರೆಯನ್ನು ನೇಗಿಲುಗಳಾಗಿಸಿ
ನನ್ನ ಮರುಭೂಮಿಯಂತಹ ಎದೆಯನ್ನು ಉಳುತ್ತೇನೆ
ಸಬಲಗಳಾಗಿಸಿ ನನ್ನೊಳಗಿನ ಬಂಡೆಯನ್ನು ಸೀಳುತ್ತೇನೆ
ಹನಿ ನೀರಿನೆಡೆಗೆ ದಾರಿ ಕೊರೆಯುತ್ತೇನೆ
......ಅಗತ್ಯ ಬಿದ್ದರೆ ಖಡ್ಗವನ್ನಾಗಿಸಿ
ಧರಿಸಿಕೊಳ್ಳುತ್ತೇನೆ
ಮತ್ತು ಅದನ್ನು ಮೊದಲು
ನನ್ನ ವಿರುದ್ಧವೇ ಬಳಸುತ್ತೇನೆ!

ಹೌದು, ನಿಮ್ಮ ಅನುಮಾನ ಸರಿ.
ನಾನೊಬ್ಬ ಜಿಹಾದಿ.....!
ಮೊದಲು ನನ್ನ ವಿರುದ್ಧ
ನೆನಪಿರಲಿ, ಗೆದ್ದರೆ... ನಿಮ್ಮ ವಿರುದ್ಧ!!

■ ಬಿ.ಎಂ. ಬಶೀರ್

ಅನಿಸುತಿದೆ ಯಾಕೋ ಇಂದು ಪೂಜಾಳೆ ಯಾಕೆಂದು...

ಇಂದು ಪೂಜಾ ಗಾಂಧಿ ಅಲ್ಲೂ, ಇಲ್ಲೂ, ಎಲ್ಲೆಲ್ಲೂ ಸಲ್ಲುವ ನಾಯಕಿಯಾಗಿ ಬೆಳೆದುನಿಂತಿದ್ದಾಳೆ. ಅಷ್ಟೇ ಅಲ್ಲ, ಈಕೆ ರೂಪದರ್ಶಿಯಾಗಿ ಕೂಡಾ ಸಿಕ್ಕಾಪಟ್ಟೆ ಬೇಡಿಕೆಯಲ್ಲಿದ್ದಾಳೆ. ಕನ್ನಡದ ನಾಯಕಿಯರಾದ ಪ್ರೇಮಾ, ಸುಧಾರಾಣಿ, ತಾರಾ ಮೊದಲಾದವರಿಗೆ ಸಿಗುತ್ತಿದ್ದ ಬ್ರಾಂಡ್ ಅಂಬಾಸಿಡರ್ ಪಟ್ಟ ಇಂದು ಈಕೆಗೆ ದೊರಕುತ್ತಿದೆ. ಇದು ಅಷ್ಟೇನೂ ಸುಂದರಿಯಲ್ಲದ ಹುಡುಗಿಯೊಬ್ಬಳ ವೃತ್ತಿಜೀವನದ ಯಶಸ್ಸಿನ ಒಂದು ಗ್ರಾಫ್.





ಮಹಿಳಾ ದಿನಾಚರಣೆಯ ದಿನವೇ ಪಿ.ಲಂಕೇಶ್ ಮೇಷ್ಟ್ರು ಹುಟ್ಟಿದ್ದಕ್ಕೋ ಏನೋ, ಅವರಿಗೆ ಮಹಿಳೆಯರೆಂದರೆ ಅಚ್ಚುಮೆಚ್ಚು. ಹಾಗಂತ ಅವರು ಸೌಂದರ್ಯ, ಆಡಂಬರ, ಬಿನ್ನಾಣಕ್ಕೆ ಮಣೆ ಹಾಕುತ್ತಿರಲಿಲ್ಲ. ಉದಾಹರಣೆಗೆ ಕನ್ನಡ ಚಿತ್ರರಂಗದಲ್ಲಿ ಮೇಷ್ಟ್ರು ಅನೇಕ ತಾರಾ ಮಣಿಗಳ ಜೊತೆ ಒಡನಾಟ ಇಟ್ಟುಕೊಂಡಿದ್ದರು. ಆರಂಭದ ದಿನಗಳಲ್ಲಿ ವಿಮಲಾ ನಾಯ್ಡು ಎಂಬ 'ಅಂಚಿಕಡ್ಡಿ ಊರ್ವಶಿ' ಅವರ ಫೇವರಿಟ್ ಆಗಿದ್ದರು. ಆನಂತರ ಜಯಮಾಲಾ ಆ ಸ್ಥಾನವನ್ನು ಅಲಂಕರಿಸಿದರು. ಅದೇ ಸಂದರ್ಭದಲ್ಲಿ ಕನ್ನಡ ಚಿತ್ರರಂಗದ ತಂಗಿ ಎನಿಸಿಕೊಂಡಿದ್ದ ತಾರಾ ಕೂಡಾ ಮೇಷ್ಟ್ರಿಗೆ ಆಪ್ತರಾಗಿದ್ದರು. ಮತ್ತೊಂದೆಡೆ ಮೇಷ್ಟ್ರಿಗೆ ರತ್ನಮಾಲಾ ಪ್ರಕಾಶ್ ಅವರ ಕಂಠವೆಂದರೆ ಪ್ರಾಣವಾಗಿತ್ತು.

ಇದರಲ್ಲಿ ಒಂದು ವಿಶೇಷವೆಂದರೆ, ಅವರಿಗೆ ಎಂದೂ ಪರಭಾಷಾ ತಾರೆಯರ ಬಗ್ಗೆ ಆಕರ್ಷಣೆಯಿರಲಿಲ್ಲ. ಕನ್ನಡದಲ್ಲೇ ಪ್ರತಿಭೆಯಿದೆ, ಕನ್ನಡದ ಕಲಾವಿದರೇ ಬೆಳೆಯಬೇಕು ಎಂಬಿತ್ಯಾದಿ ನಂಬಿಕೆಗಳು ಅವರದ್ದಾಗಿತ್ತು. ಹೀಗಾಗಿ ಅವರ ಜಮಾನಾದಲ್ಲಿ ಗೀತಾ, ಅಂಬಿಕಾ, ಸುಮಲತಾ ಮೊದಲಾದ ಪರಭಾಷಾ ಬೆಡಗಿಯರು ಲೈಮ್‌ಲೈಟಿನಲ್ಲಿದ್ದರೂ ಮೇಷ್ಟ್ರಿಗೆ ಮಾತ್ರ ನಮ್ಮ ಮನೆಯಂಗಳದಲ್ಲಿ ಅರಳಿದ ಕುಸುಮಗಳೇ ಅಚ್ಚುಮೆಚ್ಚಾಗಿದ್ದವು. ಈಗ ಮೇಷ್ಟ್ರು ಮತ್ತು ಅವರ ನೆಚ್ಚಿನ ಕನ್ನಡತಿ ನಾಯಕಿಯರ ಬಗ್ಗೆ ನೆನಪಿಸಿಕೊಳ್ಳುತ್ತಿರುವುದಕ್ಕೆ ಒಂದು ಕಾರಣವೂ ಇದೆ.

ಅದೇನೆಂದರೆ ಕನ್ನಡ ಚಿತ್ರರಂಗದಲ್ಲಿ ಈಗ ಕನ್ನಡದ ನಾಯಕಿಯರೇ ಕಾಣಸಿಗದಿರುವುದು. ಕಳೆದ ವರ್ಷ ರಮ್ಯಾ ಮತ್ತು ರಕ್ಷಿತಾ ಎಂಬ ಅಪ್ಪಟ ಕನ್ನಡತಿಯರು ಭಾರೀ ಸುದ್ದಿಯಲ್ಲಿದ್ದರು. ಅವರಿಬ್ಬರ ನಡುವಿನ ಕೋಳಿ ಜಗಳ ಪತ್ರಕರ್ತರಿಗೆ ಪುಕ್ಕಟೆ ಮನರಂಜನೆ ನೀಡುತ್ತಿತ್ತು. ಅತ್ಯಂತ ಮಾಡ್ ಆಗಿ ಕಾಣಿಸಿಕೊಳ್ಳಬೇಕೆಂಬ ಅವರಿಬ್ಬರ ನಡುವಿನ ಪೈಪೋಟಿಯೇ ವಿಚಿತ್ರವಾಗಿತ್ತು. ಏನೇ ಆದರೂ, ಅವರಿಬ್ಬರೂ ಪ್ರತಿಭಾವಂತರೂ ಹೌದು. ಸ್ವಲ್ಪ ಸಮಯದ ಮಟ್ಟಿಗೆ ಪ್ರೇಕ್ಷಕರ ಎದೆ ಝಲ್ ಎನಿಸುವ ಥರ ಕುಣಿದು ಕುಪ್ಪಳಿಸಿದ್ದೂ ಹೌದು.

ಈಗ ರಕ್ಷಿತಾ ಮದುವೆಯಾಗಿ ಕೂಲಾಗಿ ಮನೆಯಲ್ಲಿದ್ದಾಳೆ. ರಕ್ಷಿತಾ ಇಲ್ಲ ಅಂದಮೇಲೆ ನನಗೆ ಯಾರೂ ಪೈಪೋಟಿಯೇ ಇಲ್ಲ ಎಂಬ ಮನೋಭಾವದಲ್ಲಿರುವ ರಮ್ಯಾ ತಮಿಳು ಮತ್ತು ತೆಲುಗು ಚಿತ್ರಗಳಲ್ಲಿ ಅವಕಾಶಕ್ಕಾಗಿ ಕಾಲಹರಣ ಮಾಡುತ್ತಿದ್ದಾಳೆ. ಇಂತಹ ಸಂದರ್ಭದಲ್ಲಿ ಕನ್ನಡ ಚಿತ್ರರಂಗದಲ್ಲಿ ನಾಯಕಿಯರ ಸ್ಥಾನವನ್ನು ಸಮರ್ಪಕವಾಗಿ ತುಂಬಿಸಿರುವವರು ಪಂಜಾಬಿನ ಪೂಜಾ ಗಾಂಧಿ ಮತ್ತು ಮುಂಬೈನ ಜೆನ್ನಿಫರ್ ಕೊತ್ವಾಲ್.

ಇವರಿಬ್ಬರ ಮೊದಲ ಚಿತ್ರದ ಸಂದರ್ಭದಲ್ಲೇ ಗಾಂಧಿನಗರದವರು ಏನು ಹೇಳಿದ್ದರು ಗೊತ್ತಾ? 'ಗಣೇಶ್ ಜೊತೆಗೆ ರಮ್ಯಾ ನಟಿಸಿದರೆ ಈ ಚಿತ್ರ ಸೂಪರ್ ಹಿಟ್ ಆಗುತ್ತೆ. ಇವರ ನಾಯಕಿಯೇ ಈ ಚಿತ್ರಕ್ಕೆ ಮೈನಸ್ ಪಾಯಿಂಟ್' ಎಂದು 'ಮುಂಗಾರು ಮಳೆ' ಬಿಡುಗಡೆಯಾಗುವಾಗ ಗಾಂಧಿನಗರದವರೆಲ್ಲಾ ತಮ್ಮ ಒಪೀನಿಯನ್ ನೀಡಿದ್ದರು.

ಆದರೆ ಎರಡು ವರ್ಷಗಳ ನಂತರ ಅದೇ ಜನ ಅದೇ 'ಮೈನಸ್ ಪಾಯಿಂಟ್' ಪೂಜಾ ಗಾಂಧಿ ಕಾಲ್‌ಶೀಟ್‌ಗಾಗಿ ಆಕೆಯ ಸುತ್ತ ಓಡಾಡುತ್ತಿದ್ದಾರೆ. '...ಮಳೆ'ಯಲ್ಲಿ ನಟಿಸಿದ ನಂತರ ಈಕೆ ಪಂಜಾಬಿಗೆ ವಾಪಾಸು ಹೋಗಲೇ ಇಲ್ಲ. ಅದರ ಬದಲಿಗೆ ಪಂಜಾಬಿನಿಂದ ತನ್ನ ತಾಯಿ ಮತ್ತು ತಂಗಿಯನ್ನು ಗಾಂಧಿನಗರಕ್ಕೆ ಕರೆಸಿಕೊಂಡಿದ್ದಾಳೆ. ಸದ್ಯಕ್ಕೆ ಈಕೆಯ ತಂಗಿ ರಾಧಿಕಾ ಗಾಂಧಿ ಎರಡು ಚಿತ್ರಗಳಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾಳೆ.

ಅಷ್ಟೇ ಅಲ್ಲ, ಇವತ್ತಿನ ದಿನ ಪೂಜಾ ಗಾಂಧಿಯನ್ನು ಅದೃಷ್ಟದ ಹಕ್ಕಿ ಎಂದು ಎಲ್ಲರೂ ನಂಬಿದ್ದಾರೆ. ಹೀಗಾಗಿ ಆಕೆ ನಾಯಕಿಯಾಗಿ ನಟಿಸಲು ಸಾಧ್ಯವಾಗದಿದ್ದರೂ ಕನಿಷ್ಠ ಒಂದು ಹಾಡಿನಲ್ಲಾದರೂ ಕಾಣಿಸಿಕೊಳ್ಳಲಿ ಎಂದು ಬೇಡುತ್ತಿದ್ದಾರೆ. ಹೀಗೆ ದೂರದ ಪಂಜಾಬಿನ ಈ ಬೆಡಗಿ ಈಗ ಕನ್ನಡದ ನಂ.1 ಸ್ಥಾನವನ್ನು ಅಲಂಕರಿಸಿದ್ದಾಳೆ. ಮಾತ್ರವಲ್ಲ, ಹಳಬರಿಗೂ, ಹೊಸಬರಿಗೂ, ಇನ್ನೂ ಮೀಸೆ ಚಿಗುರದ ಯುವ ನಾಯಕರಿಗೂ ಈಕೆಯೇ ನಾಯಕಿ!

ಗಣೇಶ್‌ಗೆ ನಾಯಕಿಯಾದ ನಂತರ ಈಕೆ ಕಾಣಿಸಿಕೊಂಡಿದ್ದು ಜಗ್ಗೇಶ್ ಜೊತೆ ಒಂದು ಅತಿಥಿ ಪಾತ್ರದಲ್ಲಿ. ಆನಂತರ ಜಗ್ಗೇಶ್‌ಗೆ ಫುಲ್‌ಟೈಂ ನಾಯಕಿಯಾಗಿಯೂ ನಟಿಸಿದಳು. ಇದಾದ ನಂತರ ಮತ್ತೆ ಗಣೇಶ್ ಜೊತೆ 'ಕೃಷ್ಣ'ದಲ್ಲಿ ನಾಯಕಿಯಾದಳು. ಈ ಮಧ್ಯೆ ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಜೊತೆ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡ 'ಮಿಲನ' ಚಿತ್ರ ಬಾಕ್ಸಾಫೀಸಿನಲ್ಲಿ ಜಯಭೇರಿ ಬಾರಿಸಿದೆ. ಈಕೆಯ ಜನಪ್ರಿಯತೆ ಎಷ್ಟಿದೆಯೆಂದರೆ, ಕ್ರೇಜಿ ಸ್ಟಾರ್ ರವಿಚಂದ್ರನ್ ನಟಿಸುತ್ತಿರುವ 'ಟಾಟಾ ಬಿರ್ಲಾ' ಚಿತ್ರದಲ್ಲೂ ಈಕೆಯೇ ನಾಯಕಿ. ಚಿಗುರು ಮೀಸೆಯ ತರುಣ್ ಜೊತೆ ಈಕೆ 'ಹನಿ ಹನಿ' ಚಿತ್ರದಲ್ಲಿ ಕುಣಿದು ಕುಪ್ಪಳಿಸಿದಳು. ಈಗ ಅಜಯ್ ಜೊತೆ ''ತಾಜ್ ಮಹಲ್'ನಲ್ಲಿ ಕಾಣಿಸಿಕೊಳ್ಳುತ್ತಿದ್ದಾಳೆ.

ಅಂದರೆ, ಇಂದು ಪೂಜಾ ಗಾಂಧಿ ಅಲ್ಲೂ, ಇಲ್ಲೂ, ಎಲ್ಲೆಲ್ಲೂ ಸಲ್ಲುವ ನಾಯಕಿಯಾಗಿ ಬೆಳೆದು ನಿಂತಿದ್ದಾಳೆ. ಅಷ್ಟೇ ಅಲ್ಲ, ಈಕೆ ರೂಪದರ್ಶಿಯಾಗಿ ಕೂಡಾ ಸಿಕ್ಕಾಪಟ್ಟೆ ಬೇಡಿಕೆಯಲ್ಲಿದ್ದಾಳೆ. ಕನ್ನಡದ ನಾಯಕಿಯರಾದ ಪ್ರೇಮಾ, ಸುಧಾರಾಣಿ, ತಾರಾ ಮೊದಲಾದವರಿಗೆ ಸಿಗುತ್ತಿದ್ದ ಬ್ರಾಂಡ್ ಅಂಬಾಸಿಡರ್ ಪಟ್ಟ ಇಂದು ಈಕೆಗೆ ದೊರಕುತ್ತಿದೆ.

ಇದು ಅಷ್ಟೇನೂ ಸುಂದರಿಯಲ್ಲದ ಹುಡುಗಿಯೊಬ್ಬಳ ವೃತ್ತಿಜೀವನದ ಯಶಸ್ಸಿನ ಒಂದು ಗ್ರಾಫ್.

ಈಗ ನಮ್ಮ ಪ್ರಶ್ನೆ ಏನೆಂದರೆ, ಕನ್ನಡದ ಹುಡುಗಿಯರಿಗೆ ಇಂತಹ ಬೃಹತ್ ಬ್ರೇಕ್ ಯಾಕೆ ಸಿಗುವುದಿಲ್ಲ? ಅದು ನಾಯಕಿಯರ ತಪ್ಪಾ? ಅಥವಾ ನಮ್ಮ ನಿರ್ದೇಶಕರದ್ದಾ? ಅಥವಾ ಪ್ರೇಕ್ಷಕರ ಅಭಿರುಚಿ ಪರಭಾಷಾ ತಾರೆಯರ ಕಡೆಗೆ ವಾಲಿದೆಯಾ?

ಹಿಂದೊಂದು ಕಾಲವಿತ್ತು. ಆಗ ಕಾಲೇಜಿಗೆ ಹೋಗುವ ತರುಣಿಯರು ಆ ಸಂದರ್ಭದ ನಾಯಕಿಯ ಜೊತೆಗೇ ತಮ್ಮನ್ನು ಸಮೀಕರಿಸಿಕೊಳ್ಳುತ್ತಿದ್ದರು. ಎಷ್ಟೋ ಜನ ಆಂಟಿಯಂದಿರು ಈಗಲೂ ಕೂಡಾ ನಾವೆಲ್ಲಾ ಜಯಂತಿ ಜಮಾನಾದವರು, ಕಲ್ಪನಾ ಕಾಲದವರು ಎಂದು ತಮ್ಮನ್ನು ಐಡೆಂಟಿಫೈ ಮಾಡಿಕೊಳ್ಳುತ್ತಾರೆ.






ನಮ್ಮ ದುರಾದೃಷ್ಟಕ್ಕೆ ಈಗಿನ ಪೀಳಿಗೆಯ ಹುಡುಗಿಯರಿಗೆ ಈ ರೀತಿ ಸಮೀಕರಿಸಿಕೊಳ್ಳಲು ಕನ್ನಡದ ನಾಯಕಿಯರೇ ಸಿಗುತ್ತಿಲ್ಲ. ಅವರೆಲ್ಲ ದೂರದ ಪೂಜಾ ಮತ್ತು ಜನ್ನಿಫರ್ ಜೊತೆಗೆ ತಮ್ಮನ್ನು ಗುರುತಿಸಿಕೊಳ್ಳಬೇಕಾಗಿದೆ. ಈ ನಾಯಕಿಯರು ಹೇಳಿದ ಪ್ರಾಡಕ್ಟ್‌ಗಳನ್ನೇ ನಮ್ಮವರು ಮಾರುಕಟ್ಟೆಯಲ್ಲಿ ಖರೀದಿಸುತ್ತಿದ್ದಾರೆ.

ನಾವೆಲ್ಲಾ ಸರೋಜಾದೇವಿಯನ್ನು ಕಿತ್ತೂರು ರಾಣಿ ಚೆನ್ನಮ್ಮ ಪಾತ್ರದಲ್ಲಿ ನೋಡಿ ರೋಮಾಂಚನಗೊಂಡವರು. ಅಭಿನಯ ಶಾರದೆ ಜಯಂತಿ ಎಂದಾಕ್ಷಣ ನಮ್ಮ ಕಣ್ಣೆದುರು ಕಾಣಿಸಿಕೊಳ್ಳುವುದು ಒನಕೆ ಓಬವ್ವ. ಭಾರತಿ ಎಂದಾಕ್ಷಣ ಬಂಗಾರದ ಮನುಷ್ಯ ಚಿತ್ರದ ಹಳ್ಳಿಯ ಪ್ರೀತಿಯ ಮಡದಿ. ಮಂಜುಳಾ ಎಂಬ ಬಿಂಕದ ಸಿಂಗಾರಿ, ಆರತಿ ನಮ್ಮೆಲ್ಲರ ರಂಗನಾಯಕಿ. ಕಲ್ಪನಾ ಎಂದೆಂದಿಗೂ ಮಿನುಗುತಾರೆಯಾಗಿಯೇ ಉಳಿದಿದ್ದಾಳೆ. ಹೀಗೆ.... ಕನ್ನಡದ ನಾಯಕಿಯರಿಗೆ ಒಂದೊಂದು ಇತಿಹಾಸವಿದೆ, ಒಂದೊಂದು ಬಣ್ಣವಿದೆ. ಇದು ಪ್ರೇಮಾ, ಸುಧಾರಾಣಿ, ಭವ್ಯ, ತಾರಾ, ಜಯಮಾಲಾ.... ಇವರೆಲ್ಲರಿಗೂ ಅನ್ವಯಿಸುತ್ತದೆ.

ಹಾಗೆ ನೋಡಿದರೆ ನಮ್ಮ ಕನ್ನಡದ ನಾಯಕಿಯರ ಪರಾಕ್ರಮಕ್ಕೆ ಬ್ರೇಕ್ ಹಾಕಿದ ತಾರೆ ಎಂದರೆ ಮಾಲಾಶ್ರೀ. ಈಕೆಯ ಆಗಮನ ಒಂದು ರೀತಿಯ ಸುಂಟರಗಾಳಿಯನ್ನೇ ಸೃಷ್ಟಿಸಿತು. ಸುಮಾರು ಆರು ವರ್ಷಗಳ ಕಾಲ ಈಕೆ ಕನ್ನಡ ಚಿತ್ರರಂಗದಲ್ಲಿ ರಾಜ್ಯಭಾರ ನಡೆಸಿದಳು. ಈ ಸಂದರ್ಭದಲ್ಲಿ ಬರೀ ನಾಯಕಿಯರಷ್ಟೇ ಅಲ್ಲ, ಕನ್ನಡ ಚಿತ್ರರಂಗದ ನಾಯಕರು ಕೂಡಾ ಆಕೆಯ ಗ್ಲಾಮರ್ ಮತ್ತು ಜನಪ್ರಿಯತೆಯ ಎದುರು ತರಗೆಲೆಯಂತೆ ಉರುಳಿಹೋಗಿದ್ದರು. ಆದರೂ ಆಕೆ ಕರ್ನಾಟಕದ ಸೊಸೆಯಾಗಿ ಇಲ್ಲೇ ಉಳಿದುಕೊಂಡಿರುವುದರಿಂದ ಆಕೆಯನ್ನು ನಮ್ಮವಳೆಂದೇ ಸಮಾಧಾನ ಪಡಬಹುದು. ಅದಾದ ನಂತರ ಈಗ ಈ ಗಾಂಧಿ.....

ಆದರೆ ಈಗ ನಂ. 1 ಸ್ಥಾನದಲ್ಲಿರುವ ಪೂಜಾ ಗಾಂಧಿ ನಮ್ಮ ಕನ್ನಡದ ಹುಡುಗಿಯರಿಗೆ ಯಾವ ರೀತಿಯಲ್ಲಿ ಆದರ್ಶವಾಗುತ್ತಾಳೆ, ಸ್ಫೂರ್ತಿಯಾಗುತ್ತಾಳೆ ಎಂಬುದು ಅರ್ಥವಾಗುತ್ತಿಲ್ಲ. ಅಂದರೆ ಕನ್ನಡದಲ್ಲಿ ನಾಯಕಿಯರಿಲ್ಲ; ನಮ್ಮವರಿಗೆ ಪ್ರತಿಭೆಯಿಲ್ಲ ಅಥವಾ ನಮ್ಮವರು ಹೀರೋಯಿನ್ ಮೆಟೀರಿಯಲ್ ಅಲ್ಲ ಎಂದು ತೀರ್ಮಾನಕ್ಕೆ ಬರುವುದು ಕಷ್ಟವಾಗುತ್ತದೆ. ಕನ್ನಡದ ಹುಡುಗಿಯರು ಇನ್ನಷ್ಟು ಹೆಚ್ಚು ಲೈಂ ಲೈಟಿಗೆ ಬರಲು ಸಂಬಂಧಪಟ್ಟವರೆಲ್ಲಾ ಸಹಕರಿಸಬೇಕಾಗಿದೆ.

ಮೇಷ್ಟ್ರ ಹುಟ್ಟುಹಬ್ಬ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಈ ವಿಷಯ ಹೀಗೇ ಸುಮ್ಮನೆ... ಅಷ್ಟೇ... ■



ರಾಜ್‌ಕುಮಾರ್ ನಿಧನ ಹೊಂದಿ ಬರುವ 24ಕ್ಕೆ ಎರಡು ವರ್ಷಗಳೇ ಕಳೆದುಹೋಗುತ್ತಿವೆ. ...ಗೂ ಕನ್ನಡ ಚಿತ್ರರಂಗದ ಸ್ಫೂರ್ತಿಯಾಗಿ ...ರುವ ರಾಜ್‌ಕುಮಾರರ ಪ್ರತಿಭೆ, ಸರಳತನ, ...ಮೇಲಿನ ಪ್ರೀತಿ, ಕಾಳಜಿ, ಅವರ ಮಾನವೀಯ ...ಗಳನ್ನೂ ಇವತ್ತಿಗೂ ಅನ್ವಯಿಸುತ್ತದೆ. ಆ ...ದಾಗಿ ಅವರ ಸ್ಥಾನವನ್ನು ಇನ್ನೆಂದಿಗೂ ...ಲೂ ಪಡೆಯಲಾಗುವುದಿಲ್ಲ ಬಿಡಿ.


...ಜೀವನದ ಬಗ್ಗೆ, ಚಿತ್ರಗಳ ಬಗ್ಗೆ, ಅವರ ... ಬಗ್ಗೆ ಯಾರಿಗೆ ಗೊತ್ತಿಲ್ಲ? ಆದರೂ ...ಮಾರರ ವ್ಯಕ್ತಿತ್ವದ ಮತ್ತೊಂದು ಮುಖವನ್ನು, ... ಜನರಿಗೆ ಗೊತ್ತಿಲ್ಲದ ಒಂದು ಮುಖ್ಯ ...ನ್ನೂ ವಿವರಿಸುವ ಲೇಖನವನ್ನು ಇಲ್ಲಿ ...ವೆ.

...ಮ್ಮೆ ಅಮಿತಾಭ್ ಬಚ್ಚನ್ ಬೆಂಗಳೂರಿನಲ್ಲಿ ...ತ್ರದ ಚಿತ್ರೀಕರಣದಲ್ಲಿ ಅಪಘಾತಕ್ಕೀಡಾಗಿದ್ದು ... ಗೊತ್ತೇ ಇದೆ. ಆಗ ಭಾರತದಾದ್ಯಂತ ... ಚರ್ಚ್, ಮಸೀದಿಗಳಲ್ಲಿ ಅಭಿಮಾನಿಗಳು ...ಪೂಜೆ, ಪ್ರಾರ್ಥನೆಗಳನ್ನು ನೆರವೇರಿಸಿದ್ದರು. ...ಧಾನಿ ಇಂದಿರಾ ಗಾಂಧಿ ಕೂಡ ತಮ್ಮ ...ಪ್ರವಾಸವನ್ನು ಮೊಟಕುಗೊಳಿಸಿ ನೇರವಾಗಿ ...ಇದ್ದ ಆಸ್ಪತ್ರೆಗೆ ಬಂದಿದ್ದರು.

ಕರ್ನಾಟಕದಲ್ಲಿ ಅಮಿತಾಭ್ ಬಚ್ಚನ್ ಅವರ ಅಭಿಮಾನಿಯಾಗಿದ್ದ ರಾಜ್‌ಕುಮಾರ್ ಆ ...ಲ್ಲಿ ಏನು ಮಾಡಿದರು ಗೊತ್ತೇ? ಅಮಿತಾಭ್ ...ಬೇಗ ಅನಾರೋಗ್ಯದಿಂದ ಸುಧಾರಿಸಿಕೊಂಡು ...ಸಂತಾಗಬೇಕು ಎಂದು ತಮ್ಮ ಕುಲದೈವ ...ಬದಿನ ನಂಜುಂಡೇಶ್ವರನಿಗೆ ಹರಕೆ ಹೊತ್ತು ...ರು. ಆ ಪ್ರಕಾರ ಅವರು ಒಂದು ದಿನ ತನ್ನ ...ಬಾಲಕನೊಂದಿಗೆ ನೇರವಾಗಿ ನಂಜನಗೂಡಿಗೆ ...ಉರುಳು ಸೇವೆಯನ್ನು ಮಾಡಿದರಂತೆ. ಅದು ...ಕುಟುಂಬದ ಸದಸ್ಯರಿಗೂ ಗೊತ್ತಾಗಿದ್ದು ಚಾಲಕ ...ಹೇಳಿದ ನಂತರ.

...ರಣವಾಗಿ ಕೇಳಿಕೊಂಡ ಕೆಲಸ ಕಾರ್ಯ ಆದ ...ಹರಕೆ ತೀರಿಸುವುದು ವಾಡಿಕೆ. ಆದರೆ ಹಾಗೆ ...ದು ದೇವರಿಗೆ ಆಮಿಷ ತೋರಿಸಿದಂತೆ ... ರಾಜ್‌ರ ಭಾವವಾಗಿತ್ತು. ಆದ್ದರಿಂದಲೇ ...ಸುಧಾರಿಸಿಕೊಳ್ಳುವ ಮೊದಲೇ ಡಾ. ರಾಜ್ ...ಸೇವೆಯನ್ನು ಮಾಡಿಬಂದರಂತೆ. ಆಮೇಲೆ ...ಆಸ್ಪತ್ರೆಯಿಂದ ಬಿಡುಗಡೆಯಾದ ನಂತರವೂ ...ಮ್ಮೆ ಹೋಗಿ ಉರುಳು ಸೇವೆಯನ್ನು ...ರಂತೆ.

...ಲ್ಲ ಯಾಕೆ? ಎಂದು ಅವರ ಕುಟುಂಬದ ... ಕೇಳಿದಾಗ ರಾಜ್ ನೀಡಿದ ಉತ್ತರ ಏನು ... "ಆತ ನಮ್ಮ ಕಲಾವಿದ ಕುಟುಂಬದ ಸದಸ್ಯ. ...ಲ್ಲ, ಬೆಂಗಳೂರಿಗೆ ಬಂದಾಗ ಈ ಒಂದು ...ನೆ ನಡೆದುಹೋಗಿದೆ. ಹೀಗಾಗಿ ನಮ್ಮ ... ಕೆಟ್ಟ ಹೆಸರು ಬರಬಾರದಲ್ಲವೇ? ಅಷ್ಟೇ ...ನಾನು ಆತನ ಮಹಾನ್ ಅಭಿಮಾನಿ. ಈ ...ದ ನಾನು ಉರುಳುಸೇವೆಯನ್ನು ಮಾಡಿದೆ. ...ಕುಬಿಟ್ಟು ಈ ವಿಷಯವನ್ನು ಎಲ್ಲೂ ಬಹಿರಂಗ ...ಡಿ. ಇದರಿಂದ ನನಗೆ ಯಾವುದೇ ಪ್ರಚಾರ ...ಲ್ಲ" ಎಂದು ಕುಟುಂಬದವರ ಬಳಿ ತಾಕೀತು ...ರಂತೆ. ಇದೇನಿದ್ದರೂ ತಮ್ಮ ಮತ್ತು ದೇವರ ...ಸಂಬಂಧ ಎಂದು ತತ್ವಜ್ಞಾನಿಯಂತೆ ಹೇಳಿದರಂತೆ.



ರಾಜ್

ಮಿತ್ರ ಪ್ರೇಮ V/s ಮಣ್ಣಿನ ಋಣ


ಒಬ್ಬ ನಟ ಮತ್ತೊಬ್ಬ ನಟನಿಗಾಗಿ ಇಂತಹ ಉರುಳು ಸೇವೆ ಮಾಡಿದ್ದು ನೋಡಿ ಮನೆಯವರಿಗೆಲ್ಲಾ ಆಶ್ಚರ್ಯವಾಗಿತ್ತಂತೆ. ಇಷ್ಟಾಗಿಯೂ ಡಾ. ರಾಜ್ ಮತ್ತು ಬಚ್ಚನ್ ಕುಟುಂಬದ ನಡುವೆ ಅಂತಹ ಅನ್ಯೋನ್ಯವಾದ ಸಂಬಂಧಗಳೇನೂ ಇರಲಿಲ್ಲ, ಆದರೂ ಆ ಮನುಷ್ಯ ಮತ್ತೊಬ್ಬ ಕಲಾವಿದನಿಗಾಗಿ ಎಷ್ಟೊಂದು ಕಾಳಜಿ ತೋರಿಸುತ್ತಿದ್ದರು ಎಂಬುದನ್ನು ಇದು ತೋರಿಸುತ್ತದೆ.

ಕೊನೆಗೆ ಈ ವಿಷಯ ಹಿರಿಯ ನಟ ಶಿವರಾಮಣ್ಣನ ಸಹೋದರ ಬಚ್ಚನ್ ಅವರ ಅನೇಕ ಚಿತ್ರಗಳನ್ನು ನಿರ್ದೇಶಿಸಿದ ಎಸ್. ರಾಮನಾಥನ್ ಕಿವಿಗೆ ಹೇಗೋ ಬಿತ್ತು, ಅವರು ಈ ವಿಷಯವನ್ನು ಬಚ್ಚನ್ ಅವರಿಗೆ ತಿಳಿಸಿದರು. ಆ ಕೂಡಲೇ ಸಂತೋಷದಿಂದ ಬಚ್ಚನ್ ಫೋನ್ ಮಾಡಿ ಅಣ್ಣಾವ್ರಿಗೆ ಥ್ಯಾಂಕ್ಸ್ ಹೇಳಿದರಂತೆ.

ಇದಾದ ಹಲವು ವರ್ಷಗಳ ನಂತರ ಅಮಿತಾಭ್ ಬಚ್ಚನ್ ನೇತೃತ್ವದಲ್ಲಿ, ಬೆಂಗಳೂರಿನಲ್ಲಿ ವಿಶ್ವಸುಂದರಿ ಸ್ಪರ್ಧೆ ಏರ್ಪಾಡಾಗಿತ್ತು, ವಿಶ್ವಾದ್ಯಂತ ಇನ್ನೂರ ನಲವತ್ತಕ್ಕೂ ಹೆಚ್ಚು ದೇಶಗಳಿಗೆ ಆ ಕಾರ್ಯಕ್ರಮ ನೇರಪ್ರಸಾರವಾಗಿತ್ತು, ಇಂತಹ ಅದ್ದೂರಿ ಕಾರ್ಯಕ್ರಮದ ದೀಪವನ್ನು ಬೆಳಗಿಸಬೇಕೆಂದು ಅಮಿತಾಭ್ ಬಚ್ಚನ್ ಸ್ವತಃ ಬೆಂಗಳೂರಿಗೆ ಬಂದು ಡಾ. ರಾಜ್‌ಕುಮಾರ್ ಅವರನ್ನು ಕೇಳಿಕೊಂಡರಂತೆ.

ಆರಂಭದಲ್ಲಿ ಡಾ. ರಾಜ್ ಈ ಆಹ್ವಾನವನ್ನು ಪ್ರೀತಿಯ ಗೆಳೆಯ ನೀಡಿದ ಎಂಬ ಕಾರಣಕ್ಕಾಗಿ ಒಪ್ಪಿಕೊಂಡಿದ್ದರು. ಆದರೆ ದ್ವಿತೀಯ ಬಾರಿ ಅಮಿತಾಭ್ ಬಚ್ಚನ್ ಮತ್ತೊಮ್ಮೆ ಅಣ್ಣಾವ್ರ ಮನೆಗೆ ಬಂದಾಗ ಅಣ್ಣಾವ್ರ ವರ್ತನೆಯೇ ಬದಲಾಗಿತ್ತಂತೆ. ಕಾರ್ಯಕ್ರಮದ ಉದ್ಘಾಟನೆಯ ಬಗ್ಗೆ ಬಚ್ಚನ್ ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡದ ಅಣ್ಣಾವ್ರು ಬೇರೆ ವಿಷಯಗಳ ಬಗ್ಗೆ ಮಾತನಾಡಿದ್ದರಂತೆ. ಉದಾಹರಣೆಗೆ, ಬಚ್ಚನ್ "ನೀವೇ ದೀಪ ಬೆಳಗಿಸಬೇಕು" ಎಂದರೆ ರಾಜ್ ಅದಕ್ಕೆ ಉತ್ತರವಾಗಿ "ಕಾಫಿ ಚೆನ್ನಾಗಿದ್ಯಾ? ಸಕ್ಕರೆ ಬೇಕಾ?" ಇತ್ಯಾದಿಯಾಗಿ ಮಾತನಾಡಿದರಂತೆ. ರಾಜ್ ಮಾತಿನ ಧಾಟಿ ನೋಡಿ ಅಮಿತಾಬ್ ಬಚ್ಚನ್ ಅವರ ಮಹಾನ್ ಅಭಿಮಾನಿಗಳಾದ ಶಿವಣ್ಣ, ರಾಘು, ಪುನೀತ್‌ಗೆ ಆಶ್ಚರ್ಯವಾಯಿತಂತೆ.

ಕೊನೆಗೆ ಅಮಿತಾಬ್ ಬಚ್ಚನ್ ಅದೇನೇನೋ ಮಾತಾಡಿ ಮುಂಬೈಗೆ ವಾಪಸಾದರು. ಆತ ಮನೆಯಿಂದ ಹೊರ ಹೋದ ತಕ್ಷಣ ಮಕ್ಕಳೆಲ್ಲಾ ತಮ್ಮ ಅಪ್ಪಾಜಿಯನ್ನು ಮುತ್ತಿಗೆ ಹಾಕಿದರಂತೆ. "ಅಪ್ಪಾಜಿ, ನೀವು ಯಾಕೆ ಬಚ್ಚನ್ ಜೊತೆ ಈ ರೀತಿ ಏನೇನೋ ಮಾತನಾಡಿದಿರಿ?" ಎಂದು ಪ್ರಶ್ನಿಸಿದರಂತೆ.



ಆಗ ಡಾ. ರಾಜ್ ಹೇಳಿದ್ದೇನು ಗೊತ್ತಾ? "ನೋಡು ಕಂದಾ.... ಇಲ್ಲಿ ಕರ್ನಾಟಕದಲ್ಲಿ ವಿಶ್ವಸುಂದರಿ ಸ್ಪರ್ಧೆಯ ಬಗ್ಗೆ ಜನ ಪ್ರತಿಭಟಿಸುತ್ತಿದ್ದಾರೆ. ಮುಖ್ಯವಾಗಿ ರೈತರಿಗೆ ಕುಡಿಯಲು ನೀರಿಲ್ಲದೆ ಅವರೆಲ್ಲ ಪರದಾಡುತ್ತಿದ್ದಾರೆ. ಮಹಿಳಾ ಸಂಘಟನೆಗಳೂ ವಿರೋಧ ವ್ಯಕ್ತಪಡಿಸುತ್ತಿವೆ. ಇಂತಹ ಸಂದರ್ಭದಲ್ಲಿ ನಾನು ಆ ಸಮಾರಂಭಕ್ಕೆ ಹೋಗಿ ದೀಪಬೆಳಗಿಸುವುದು ಸರಿ ಅಲ್ಲ ಅನ್ನಿಸುತ್ತಿದೆ. ನಮ್ಮ ಕನ್ನಡಿಗರ ಮನೆಮನೆಗಳಲ್ಲಿ ಸಂತೋಷ, ಸಂಭ್ರಮ ಇಲ್ಲದಿದ್ದಾಗ ನಾನ್ಯಾಕೆ ಆ ಸಮಾರಂಭದಲ್ಲಿ ಭಾಗವಹಿಸಲಿ?" ಎಂದು ಉತ್ತರಿಸಿದರಂತೆ.

ಅಪ್ಪಾಜಿಯವರ ಈ ಉತ್ತರದಿಂದ ಮನೆಯವರಿಗೆಲ್ಲಾ ಬೇಸರವಾಗಿತ್ತಂತೆ. ಸ್ವತಃ ಅಮಿತಾಭ್ ಮನೆಗೆ ಬಂದು ಆಹ್ವಾನಿಸಿದ್ದರೂ ಅದನ್ನು ನಿರಾಕರಿಸಿದ್ದು ಅವರಿಗೆ ಅವಮಾನ ಮಾಡಿದಂತೆ ಅನಿಸಿತ್ತಂತೆ.

ಆ ಪ್ರಕರಣವನ್ನು ನೆನಪಿನಲ್ಲಿಟ್ಟುಕೊಂಡಿರುವ ರಾಘವೇಂದ್ರ ರಾಜ್‌ಕುಮಾರ್ ಹೇಳುವಂತೆ "ನಮಗೆ ಏನು ಆಸೆ ಇತ್ತು ಗೊತ್ತಾ? ನಮ್ಮ ಅಪ್ಪಾಜಿಯನ್ನು ಪ್ರಪಂಚದ 400 ದೇಶಗಳಲ್ಲಿ ಜನ ನೋಡುತ್ತಿದ್ದರಲ್ಲವೇ? ಅದೂ ನೇರ ಪ್ರಸಾರ ಕಾರ್ಯಕ್ರಮದಲ್ಲಿ? ಅಂತಹ ಅವಕಾಶವನ್ನು ನಮ್ಮ ತಂದೆ ಕಳೆದುಕೊಳ್ಳಬಾರದು ಎಂಬುದು ಮಕ್ಕಳಾದ ನಮ್ಮ ಆಸೆಯಾಗಿತ್ತು."

ಇದರ ಬಗ್ಗೆ ಮಕ್ಕಳೆಲ್ಲ ಅಪ್ಪಾಜಿ ಬಳಿ ಪ್ರಸ್ತಾಪಿಸಿದರಂತೆ. "ಅಪ್ಪಾಜಿ, ಈ ಕಾರ್ಯಕ್ರಮವನ್ನು ಪ್ರಪಂಚದಾದ್ಯಂತ ಇನ್ನೂರಕ್ಕೂ ಹೆಚ್ಚು ದೇಶಗಳಿಗೆ ನೇರ ಪ್ರಸಾರ ಮಾಡಲಿದ್ದಾರೆ. ಅಲ್ಲೆಲ್ಲಾ ಜನರು ಇದನ್ನು ನೋಡುತ್ತಾರೆ. ಅಲ್ಲಿಯ ಜನರ ಪ್ರೀತಿ ವಿಶ್ವಾಸಕ್ಕೂ ನೀನು ಪಾತ್ರವಾಗುತ್ತೀಯ" ಎಂದು ಹುರಿದುಂಬಿಸಿದರಂತೆ.

ಆದರೆ ಅದಕ್ಕೆಲ್ಲ ನಿರ್ಲಿಪ್ತರಾಗಿಯೇ ಉತ್ತರಿಸಿದ ರಾಜ್ "ನೋಡು ಕಂದಾ, ಚಿಕ್ಕಪುಟ್ಟ ಕನ್ನಡಿಗರ ಪ್ರೀತಿಯನ್ನು ಜೀರ್ಣಿಸಿಕೊಳ್ಳಲೇ ಈ ನಿನ್ನ ಅಪ್ಪಾಜಿಯಿಂದ ಆಗುತ್ತಿಲ್ಲ, ಇನ್ನು ಪ್ರಪಂಚದಾದ್ಯಂತ ಜನರ ಪ್ರೀತಿ ನನಗ್ಯಾಕೆ ಬೇಕು? ನನಗೆ ಕನ್ನಡಿಗರ ಪ್ರೀತಿಯೊಂದಿದ್ದರೆ ಸಾಕು" ಎಂದು ಹೇಳಿ ಮಕ್ಕಳ ಬಾಯಿ ಮುಚ್ಚಿಸಿದರಂತೆ.

ಕೊನೆಗೆ ಬಚ್ಚನ್ ಪಾಲಿಗೆ ಇದೊಂದು ಪ್ರತಿಷ್ಠೆಯ ಪ್ರಶ್ನೆಯಾಯಿತು. ಡಾ. ರಾಜ್‌ಕುಮಾರ್ ದೀಪ ಬೆಳಗಿಸಲು ಬರುತ್ತಿಲ್ಲ ಎಂಬ ವಿಷಯ ಬಹಿರಂಗವಾದರೆ ಅದು ಕರ್ನಾಟಕಕ್ಕೆ ರಾಂಗ್ ಸಿಗ್ನಲ್ ನೀಡಿದಂತೆ ಎಂಬುದು ಅವರಿಗೂ ಗೊತ್ತಿತ್ತು, ಆ ಕಾರಣಕ್ಕಾಗಿ ರಾಜ್‌ಕುಮಾರ್ ಮೇಲೆ ರಾಜಕೀಯವಾಗಿ ಹಲವಾರು ಸ್ನೇಹಿತರ ಮುಖಾಂತರ ಒತ್ತಡವನ್ನು ಹೇರಿದರಂತೆ. ಆದರೆ ಇಂತಹ ಯಾವುದೇ ಒತ್ತಡ, ಆಮಿಷಗಳಿಗೆ ಬಲಿಯಾಗದ ಡಾ. ರಾಜ್ ತನ್ನ ನಿಲುವನ್ನು ಬದಲಾಯಿಸಲೇ ಇಲ್ಲ.

ಕೊನೆಗೆ ವಿಶ್ವಸುಂದರಿ ಸ್ಪರ್ಧೆಯ ದಿನಾಂಕ ಹತ್ತಿರವಾಗುತ್ತಿದ್ದಂತೇ ಡಾ. ರಾಜ್ ಮನೆಯಲ್ಲಿ ಯಾರಿಗೂ ತಿಳಿಸದೇ ತನ್ನ ಸಹೋದರ ವರದಪ್ಪನ ಜೊತೆ ಗಾಜನೂರಿನಲ್ಲಿನ ತಮ್ಮ ತೋಟದ ಮನೆಗೆ ತೆರಳಿ ಅಲ್ಲಿ ತಮ್ಮ ತಾಯಿಯ ಸಮಾಧಿಯ ಬಳಿ ಕಾಲ ಕಳೆದರು.

ಈ ಪ್ರಕರಣದಲ್ಲಿ ರಾಜ್‌ಕುಮಾರ್ ಅವರ ವ್ಯಕ್ತಿತ್ವದ ಎರಡು ಅಪರೂಪದ ಆಯಾಮಗಳನ್ನು ನೋಡಬಹುದು. ಮೊದಲನೆಯದು ತನ್ನಂತಹ ಒಬ್ಬ ಕಲಾವಿದ ಅನಾರೋಗ್ಯದಿಂದ ಬಳಲುತ್ತಿದ್ದಾಗ ಆತನಿಗಾಗಿ ದೇವರಿಗೆ ಉರುಳು ಸೇವೆ ಮಾಡುವ ಮೂಲಕ ಮಾನವೀಯ ಮೌಲ್ಯವನ್ನು ಎತ್ತಿಹಿಡಿದ ಸಂಗತಿ. ಆದರೆ ಅದೇ ಗೆಳೆಯ ವ್ಯಾಪಾರೀ ದೃಷ್ಟಿಯನ್ನು ತೋರಿ ತನ್ನ ಸಮಾರಂಭಕ್ಕೆ ಕರೆದಾಗ ಅದನ್ನು ನಯವಾಗಿ ತಿರಸ್ಕರಿಸಿ ರಾಜ್ಯದ ಜನತೆಯ ನೋವಿನಲ್ಲಿ ಪರೋಕ್ಷವಾಗಿ ಭಾಗಿಯಾಗುವ ಮುಖಾಂತರ ಮಣ್ಣಿನ ಋಣವನ್ನು ತೀರಿಸಿದ್ದು.

ಇದು ಡಾ. ರಾಜ್ ವ್ಯಕ್ತಿತ್ವದ ಈ ಒಂದು ತುಣುಕಷ್ಟೇ.....

■ ಶೆಣೈ

ಅಭಿವೃದ್ಧಿ ಯೋಜನೆ....

(1ನೇ ಪುಟದಿಂದ)

...ಬೆಳವಣಿಗೆಗಳೂ ಕಾಣಬೇಕು. ಮುಸ್ಲಿಂ ...ಮತವಾದಕ್ಕೆ ಇಸ್ಲಾಮಿಕ್ ರಾಷ್ಟ್ರಗಳಲ್ಲೇ ... ಇದೆ ಎಂಬುದನ್ನು ಗಮನಿಸುವುದು ...ವಾಗಿ ಬಹಳ ದೊಡ್ಡ ಅಗತ್ಯ. ಮುಸ್ಲಿಂ ...ಮತವಾದದಿಂದ ಮುಸ್ಲಿಮರಿಗೇ ತೊಂದರೆ ... ನಮಗೂ ಅರ್ಥವಾದರೆ ನಾವೆಲ್ಲರೂ ...ಪಡಬೇಕಿರುವ ಶಾಂತಿಯ ನೆಲೆ ಯಾವುದು ... ಸ್ಪಷ್ಟವಾಗುತ್ತದೆ.

... ನಾವು ಮಾಡುತ್ತಿರುವ ರಾಜಕಾರಣ ಇಂಥ ...ಗಳನ್ನು ಕಳೆದುಕೊಂಡ ಓಟ್ ಬ್ಯಾಂಕ್ ... ಹಿಂದೂಗಳ ಓಟುಗಳು ಜಾತಿಗಳಲ್ಲಿ ... ಹೋಗದೇ ಇರಲಿ ಎಂದು 'ಹಿಂದುತ್ವ' ... ಪ್ರಯೋಗಿಸುತ್ತದೆ. ಇದಕ್ಕೆ ಪ್ರಬಲ ವಿರೋಧ ... ರಾಜಕಾರಣ ಮುಸ್ಲಿಮ್ ಮತಗಳ ಒಡೆಯ ...ಉಳಿಸಿಕೊಳ್ಳುವ ಉದ್ದೇಶಕ್ಕೆ ಸೀಮಿತವಾಗಿ ಬಿಡುತ್ತದೆ. ಹೀಗೆ ಧ್ರುವೀಕೃತಗೊಂಡ ವಾತಾವರಣದಲ್ಲಿ ಜನರು ಒಂದು ಬಗೆಯ ಮಂಕಿನಲ್ಲಿ ಮತ ಚಲಾಯಿಸುತ್ತಾರೆ.

ಮೋದಿಯಿಂದ ಗುಜರಾತ್ ಅಭಿವೃದ್ಧಿ ಹೊಂದಿತು ಎಂದು ಗುಜರಾತ್‌ನ ಮಧ್ಯಮ ವರ್ಗ ನಂಬಿದೆ. ಈ ಬಗೆಯ ಒಂದು ಅಭಿವೃದ್ಧಿಯನ್ನು ಮೋದಿ ಸಾಧಿಸಿಯೂ ಇರಬಹುದು. ಈ ಅಭಿವೃದ್ಧಿ ಎನ್ನುವ ವಿಷಯ ಬಹಳ ಸಂಕೀರ್ಣವಾದುದು. ಬೆಂಗಳೂರ ನ್ನಷ್ಟೇ ನೋಡಿದರೆ ಕರ್ನಾಟಕದ ಅಭಿವೃದ್ಧಿಯಾಗಿದೆ ಎನ್ನಬಹುದು. ಬೆಂಗಳೂರಿನ ಹತ್ತಿರದ ಹಳ್ಳಿಗೆ ಹೋದರೆ ಚಿತ್ರ ಬೇರೆಯೇ ಇರುತ್ತದೆ. ಮೋದಿಯ ಸರಕಾರದ ಬಗ್ಗೆ ಈ ಬಗೆಯ ಒಂದು ವಿಶ್ಲೇಷಣೆ ನಡೆಯಬೇಕು. ಆದರೆ ಕಣ್ಣಿಗೆ ಕಾಣುವ ಆಗಿನ ಅಭಿವೃದ್ಧಿಯನ್ನು ಅವನು ಸಾಧಿಸಿ ಮಧ್ಯಮ ವರ್ಗ ವನ್ನು ಮೆಚ್ಚಿಸಿದಂತೆ ಕಾಣಿಸುತ್ತದೆ.

ಗುಜರಾತಿಗಳು ವ್ಯಾಪಾರದಲ್ಲಿ ಬಹಳ ನಿಪುಣರು. ಆಧುನಿಕ ಅಭಿವೃದ್ಧಿಯನ್ನು ತಮಗೆ ಬೇಕಿರುವಂತೆ ಬಳಸಿಕೊಳ್ಳಲು ಅವರಿಗೆ ತಿಳಿದಿದೆ. ಮೋದಿ ಇದನ್ನು ಅರಿತೇ 'ಅಭಿವೃದ್ಧಿಗೆ' ಗಮನ ಹರಿಸಿದಂತೆ ಇದೆ. ಅಭಿವೃದ್ಧಿಯ ಜತೆಗೇ ಮೋದಿ ಪ್ರತಿಪಾದಿಸುವ ಸಿದ್ಧಾಂತ ವನ್ನೂ ಒಪ್ಪಿಕೊಳ್ಳುತ್ತಿರುವುದು ಹಿಟ್ಲರ್ ಕಾಲದ ಜರ್ಮನಿಯನ್ನು ನೆನಪಿಸುತ್ತದೆ.



ಮೊದಲನೇ ಮಹಾಯುದ್ಧದ ನಂತರದ ಜರ್ಮನಿಯಲ್ಲಿ ಒಂದು ಪ್ಯಾಕ್ ಸಿಗರೇಟ್ ಖರೀದಿಸಲು ಗೋಣಿಚೀಲದಲ್ಲಿ ಹಣ ತುಂಬಿಕೊಂಡು ಹೋಗ ಬೇಕಿತ್ತು, ಈ ಅವಧಿಯಲ್ಲಿ ಹಿಟ್ಲರ್ 'ಪ್ರಜಾಪ್ರಭುತ್ವಾತ್ಮಕ'ವಾಗಿಯೇ ಅಧಿಕಾರಕ್ಕೆ ಬಂದ. ಅಭಿವೃದ್ಧಿಯನ್ನು ಆರಂಭಿಸಿದ. ಇಡೀ ದೇಶದಲ್ಲಿ 'ಸೌಹಾರ್ದ'ವನ್ನು ಉಂಟುಮಾಡಿದ. ಆಮೇಲೆ ಯಹೂದ್ಯರನ್ನು ಜರ್ಮನಿಯ ವೈರಿಗಳು ಎಂದು ಪ್ರತಿಪಾದಿಸಿ ಅವರನ್ನು ಕೊಲ್ಲಲು ಆರಂಭಿಸಿದ. ಇಂಥ ಹಿಟ್ಲರ್ ಸಸ್ಯಾಹಾರಿಯೂ, ದಕ್ಷನೂ ಆಗಿದ್ದ.

ಇವನ್ನೆಲ್ಲಾ ಗಮನದಲ್ಲಿ ಇಟ್ಟುಕೊಂಡು ಚರಿತ್ರೆ ಮರುಕಳಿಸದಂತೆ ನೋಡಿಕೊಳ್ಳಬೇಕು. ಬಹುಶಃ ನಮ್ಮಲ್ಲಿ ಅದು ಮರುಕಳಿಸಲಾರದೇನೋ. ನಮ್ಮದು ಎಷ್ಟು ದೊಡ್ಡ ದೇಶವೆಂದರೆ ಒಂದು ಊರಿನ ಸಂಸ್ಕೃತಿ ಮತ್ತೊಂದು ಊರಿನಲ್ಲಿ ಇರುವುದಿಲ್ಲ. ಬಿಜೆಪಿ ಎಲ್ಲ ಕಡೆಯೂ ಗುಜರಾತ್‌ನಲ್ಲಿ ಬೆಳೆದಂತೆಯೇ ಬೆಳೆಯುತ್ತದೆ ಎಂದು ಹೇಳಲು ಸಾಧ್ಯವಿಲ್ಲ, ಆದರೆ ಮೋದಿ ಒಂದು ರಾಜಕೀಯ ಆದರ್ಶವಾಗುತ್ತಿರುವುದು ನನಗೆ ಭಯ ಹುಟ್ಟಿಸುತ್ತಿದೆ. ■

R B P LANKESH, Kannada Weekly Price Rs. 12/- 19-3-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.

ಲಂಕೇಶ್ ಚಿತ್ರ ಪ್ರಶಸ್ತಿ ವಿಜೇತ
ಟಿಂಗ್ಯ

ಅತ್ಯುತ್ತಮ ಚೊಚ್ಚಲ ನಿರ್ದೇಶನಕ್ಕೆ ಕವಿತಾ ಲಂಕೇಶ್ ನೀಡುವ ಪ್ರತಿಷ್ಠಿತ ರಾಷ್ಟ್ರೀಯ 'ಲಂಕೇಶ್ ಚಿತ್ರ ಪ್ರಶಸ್ತಿ'ಯನ್ನು ಈ ಬಾರಿ ಮರಾಠಿ ಚಿತ್ರ 'ಟಂಗ್ಯ'ದ ನಿರ್ದೇಶಕ ಮಂಗೇಶ್ ಹಾಡಾವಲೆ ಪಡೆದಿದ್ದಾರೆ. ಭಾರತದ ರೈತಾಪಿ ಸಮುದಾಯ ಈಗ ಎದುರಿಸುತ್ತಿರುವ ಬಿಕ್ಕಟ್ಟಿನ ಹಿನ್ನೆಲೆ ಹೊಂದಿರುವ ಈ ಚಿತ್ರದ ಬಗೆಗಿನ ಲೇಖನ ಇಲ್ಲಿದೆ....



ದೀಪು
ತೀರ್ಪುಗಾರ ಮಂಡಳಿಯ ಸದಸ್ಯ ಮತ್ತು ಮಲಯಾಳಂನ ಖ್ಯಾತ ಛಾಯಾಗ್ರಾಹಕ ಮತ್ತು ಲೇಖಕ

ಪ್ರತಿ ಬಾರಿ 'ಲಂಕೇಶ್ ಚಿತ್ರ ಪ್ರಶಸ್ತಿ'ಗೆ ಆಯ್ಕೆಯಾಗುವ ನಿರ್ದೇಶಕ ಎಲ್ಲಾ ತೀರ್ಪುಗಾರರ ಪ್ರಥಮ ಆಯ್ಕೆಯೇನೂ ಆಗಿರುವುದಿಲ್ಲ. ಆದರೆ 'ಟಂಗ್ಯ' ಚಿತ್ರದ ನಿರ್ದೇಶಕ ಮಂಗೇಶ್ ಹಡಾವಲೆಯವರು ಮಾತ್ರ ಈ ಸಾಲಿನ ತೀರ್ಪುಗಾರರೆಲ್ಲರ ಸರ್ವಸಮ್ಮತ ಆಯ್ಕೆಯಾಗಿದ್ದಾರೆ. ಚಿತ್ರವನ್ನು ವೀಕ್ಷಿಸಿದ ನಂತರ ನನಗೆ 'ಬೈಸಿಕಲ್ ತೀವ್ಸ್' ನಂತ ಸಾರ್ವಕಾಲಿಕ ಶ್ರೇಷ್ಠ ಚಿತ್ರಗಳಿಗೆ ಕಥೆ ಬರೆದಿದ್ದ ಸೀಜರ್ ಜೆವಾತ್ತಿನಿಯವರು, ಜೀವನದ ಕಲಾತ್ಮಕ ಅಭಿವ್ಯಕ್ತಿಯ ಬಗ್ಗೆ ಆಡಿದ ಮಾತೊಂದು ನೆನಪಿಗೆ ಬಂದಿತು. "ಜೀವನವನ್ನು ಕಥೆಗಳಲ್ಲಿ ಆವಿಷ್ಕರಿಸಲಾಗುವುದಿಲ್ಲ. ಜೀವನವೆಂಬುದು ಮತ್ತೊಂದು ವಿಷಯವೇ ಆಗಿದ್ದು ಸಹನೆಯಿಂದ ಕೂಡಿದ ಮತ್ತು ನಿರಂತರವಾದ ಶೋಧ ನಡೆಸಿದ್ದರೆ ಕ್ಷಣಮಾತ್ರದಲ್ಲಿ ಜೀವನವೆಂದರೇನೆಂಬುದು ಗೊತ್ತಾಗುತ್ತದೆ."

'ಟಂಗ್ಯ' ಚಿತ್ರವು ಇಂದು ಭಾರತದ ರೈತಾಪಿ ಎದುರಿಸುತ್ತಿರುವ ಬಿಕ್ಕಟ್ಟಿನ ಹಿನ್ನೆಲೆಯನ್ನು ಇಟ್ಟುಕೊಂಡು ಸಣ್ಣ ರೈತನ ಬದುಕಿನ ಕಠೋರ ವಾಸ್ತವತೆಗಳನ್ನು, ಭಾವನಾತ್ಮಕ ಸಂಬಂಧಗಳನ್ನು ಅತ್ಯದ್ಭುತವಾಗಿ ಚಿತ್ರಿಸುತ್ತದೆ. ಟಂಗ್ಯ ಎಂಬ ಪುಟ್ಟ ಬಾಲಕನ ಲೋಕದ ಮೂಲಕ ರೈತಾಪಿಯ ಬಿಕ್ಕಟ್ಟನ್ನು ಅದರ ಎಲ್ಲಾ ಸಂಕೀರ್ಣತೆ ಮತ್ತು ಸೂಕ್ಷ್ಮತೆಗಳೊಂದಿಗೆ ವೀಕ್ಷಕರ ಹೃದಯ ಮತ್ತು ಮೆದುಳು ಎರಡನ್ನು ತಟ್ಟುವಂತೆ ಚಿತ್ರವು ಅನಾವರಣಗೊಳಿಸುತ್ತದೆ.

ಆದ್ದರಿಂದಲೇ ಈ ಚಿತ್ರವನ್ನು ಕಳೆದ ಕೆಲವು ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಂಡು ಪ್ರಾಣ ತೆತ್ತ ರೈತರಿಗೆ ಅರ್ಪಿಸಲಾಗಿದೆ. ಇಂದು ಮಹಾರಾಷ್ಟ್ರ ಮಾತ್ರವಲ್ಲ ಭಾರತದ ಗ್ರಾಮೀಣ ಪರಿಸ್ಥಿತಿಯ ಬಗ್ಗೆ ಚಿತ್ರಿಸುವ ಯಾರೇ ಆದರೂ ಕಣ್ಣಿಗೆ ರಾಚುವಂತಿರುವ ಸಣ್ಣ ಮತ್ತು ಅತಿಸಣ್ಣ ರೈತರ ಹತಾಶ ಬದುಕಿನ ಕುರಿತು, ಅವರನ್ನು ಸಾಲದ ಶೂಲಕ್ಕೆ ದೂಡಿರುವ ಕೃಷಿ ಬಿಕ್ಕಟ್ಟಿನ ಕುರಿತು, ಬದುಕುಳಿಯಬೇಕಾದ ಅನಿವಾರ್ಯತೆಗಳು ಮನುಷ್ಯ ಸಹಜ ಭಾವನೆಗಳಿಗೆ, ಅನುಕಂಪಗಳಿಗೆ ಅವಕಾಶ ಕೊಡದೇ ಕಲ್ಲಾಗಿಸುತ್ತಿರುವುದರ ಕುರಿತು, ಅದರ ನಡುವೆಯೂ ಜೀವನಪ್ರೀತಿಯನ್ನು ಉಳಿಸಿಕೊಳ್ಳಲು ಮತ್ತು ಅದನ್ನು ಭವಿಷ್ಯ ಜೀವನದ ಒರತೆಯನ್ನಾಗಿ ಉಳಿಸಿಕೊಳ್ಳಲು ರೈತಾಪಿ ನಡೆಸುತ್ತಿರುವ ಸಂಘರ್ಷವನ್ನು ದಾಖಲಿಸದೇ ಇರಲು ಸಾಧ್ಯವೇ ಇಲ್ಲ.

ಸೂಕ್ಷ್ಮ ಮತ್ತು ಪ್ರತಿಭಾವಂತ ನಿರ್ದೇಶಕರಾದ ಮಂಗೇಶ್ ಹಡಾವಲೆಯವರು ಅದನ್ನು ಟಂಗ್ಯದಲ್ಲಿ ಡಾಕ್ಯುಮೆಂಟರಿ ಚಿತ್ರಗಳಲ್ಲಿನ ವಾಸ್ತವತೆ ಮತ್ತು ಸೃಜನಶೀಲ ಚಿತ್ರಗಳಲ್ಲಿರುವ ಭಾವನಾತ್ಮಕತೆ ಎರಡನ್ನೂ ಬೆರೆಸಿ ಹೃದಯ ದ್ರವಿಸುವಂತೆ ಚಿತ್ರಿಸಿದ್ದಾರೆ. ಟಂಗ್ಯ ಮಹಾರಾಷ್ಟ್ರದ (ಪ್ರಾಯಶಃ ಪುಣೆಯ ಆಜೂಬಾಜಿನಲ್ಲಿರುವ) ಹಳ್ಳಿಯೊಂದರಲ್ಲಿ ತನ್ನ ಸಣ್ಣ ಹೊಲದಲ್ಲಿ ಆಲೂ ಬೆಳೆಯುವ ಪ್ರಯಾಸದಲ್ಲಿರುವ ರೈತ ಕಾರಭಾರಿ ಮತ್ತು ಅಂಜನಾಳ ಎರಡನೇ ಮಗ. ಹೊಲದಲ್ಲಿ ಕೆಲಸ ಮಾಡಲು ಅವರ ಬಳಿ ಎರಡು ದನಗಳಿರುತ್ತವೆ. ದೊಡ್ಡದು ದೊಡ್ಡ ಮಗನ ಅಚ್ಚುಮೆಚ್ಚಾದರೆ ತಾನು ಹುಟ್ಟುವ ಎರಡು ತಿಂಗಳು ಮುಂಚೆ ಹುಟ್ಟಿದ ಕರು ಚತಂಗ್ಯ ಟಂಗ್ಯನ ಅಚ್ಚುಮೆಚ್ಚು. ದಿನ್ನೆಯ ಮೇಲಿನ ಅವರ ಮನೆಯ ಪಕ್ಕದಲ್ಲಿರುವ ಮುಸ್ಲಿಂ ಕುಟುಂಬದ ಯಾಕೂಬನ ಮಗಳು ರಷೀದ ಮತ್ತು ಟಂಗ್ಯ ಪ್ರಾಣ ಸ್ನೇಹಿತರು. ಇಬ್ಬರ ಕುಟುಂಬದಲ್ಲೂ ಬಡತನವಿದ್ದರೂ ಪ್ರೀತಿಗೆ ಕೊರತೆಯಿಲ್ಲ. ಆದರೂ ಇವರಿಬ್ಬರ ಬಾಲಿಶ ಲೋಕಕ್ಕೆ ಅರ್ಥವಾಗದ ದೊಡ್ಡವರ ನಡವಳಿಕೆಗಳ ಬಗೆಗೆ ಅವರು ಹಂಚಿಕೊಳ್ಳುವ ಮುಗ್ಧ ವಿಮರ್ಶೆ ಗಳು ಅವರಿಬ್ಬರ ಸ್ನೇಹವನ್ನೂ ಹೆಚ್ಚಿಸುತ್ತಿರುತ್ತದೆ.

ಚಿತ್ರ ಪ್ರಾರಂಭವಾಗುವುದೇ ಒಂದು ವರ್ಷದ ಕೆಳಗೆ ಚಿರತೆ ಕಡವಲು ಮಾಡಿದ ಖಿಡ್ಡಾದಲ್ಲಿ ಚತಂಗ್ಯ ಅಚಾನಕ್ ಬಿದ್ದು ಕಾಲು ಮುರಿದುಕೊಳ್ಳುವ ಮೂಲಕ. ಆದರೆ ಮುರಿದಿದ್ದು ಉಳುವ ದನದ ಕಾಲಾದ್ದರಿಂದ ಅದನ್ನೇ ಆಧರಿಸಿದ್ದ ಕಾರಭಾರಿ ಕುಟುಂಬದ ಕಾಲು ಮುರಿದಂತಾಗುತ್ತದೆ. ಈಗಾಗಲೇ ಕಳೆದ ವರ್ಷ ಊರ ಬಡ್ಡಿ ವ್ಯಾಪಾರಿ ಸಾಹುಕಾರ್ ತಾತ್ಯನ ಹತ್ತಿರ ಮಾಡಿದ ಸಾಲಕ್ಕೆ ಬಡ್ಡಿಯನ್ನೂ ಕಟ್ಟುವ ಪರಿಸ್ಥಿತಿಯಿರದ ಕಾರಭಾರಿ ಕುಟುಂಬಕ್ಕೆ ಚತಂಗ್ಯನ ಕಾಲು ಮುರಿದದ್ದು ದೊಡ್ಡ ಹೊಡೆತವೇ ಆಗುತ್ತದೆ. ಈ ಬಾರಿ ತನ್ನ ಸಣ್ಣ ಹೊಲದಲ್ಲಿ ಆಲೂ ಬೆಳೆದು ಒಂದಷ್ಟು ದುಡ್ಡು ಗಳಿಸಿ ಸಾಲದಿಂದ ಮುಕ್ತವಾಗಬೇಕೆಂಬುದು ಕಾರಭಾರಿಯ ಯೋಜನೆ. ಅದಕ್ಕಾಗಿ ಹೆಚ್ಚಿನ ದುಡ್ಡು ತೆತ್ತು ಆಲೂಬೀಜಗಡ್ಡೆಯನ್ನು ಖರೀದಿ ಮಾಡಿರುತ್ತಾನೆ. ಈಗ ಕೃಷಿ ಮಾಡುವುದು ತಡವಾದಷ್ಟೂ ಆಲೂ ಮೊಳಕೆ ಕಟ್ಟಿ ಬೆಳೆಯಲು ನಾಲಾಯಕ್ಕಾಗುವ ಪರಿಸ್ಥಿತಿ ಇರುತ್ತದೆ. ಮತ್ತೊಂದೆಡೆ ಚತಂಗ್ಯ ಸುಧಾರಿಸದೆ ನೇಗಿಲೂ ಹೂಡಲೂ ಆಗದ ಪರಿಸ್ಥಿತಿ. ಹೀಗೆ ಭಾರತದ ಸಣ್ಣ ರೈತರ ಪರಿಸ್ಥಿತಿ ಹೇಗೆ ಒಂದು ಸಣ್ಣ ಹೊಡೆತವನ್ನು ಎದುರಿಸಲಾಗದಷ್ಟು ಸೂಕ್ಷ್ಮವಾಗಿದೆ ಎಂಬುದನ್ನು ನಿರ್ದೇಶಕರು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಅಂತಿಮವಾಗಿ ಮನೆ ನಡೆಸಬೇಕೆಂದರೆ ಅನಿವಾರ್ಯವಾಗಿ ಚತಂಗ್ಯನನ್ನು ಮಾರಿ ಬೇರೊಂದು ದನವನ್ನು ಕೊಳ್ಳಲೇಬೇಕೆಂಬ ತೀರ್ಮಾನಕ್ಕೆ ಕಾರಭಾರಿ ಬರುತ್ತಾನೆ. ಆದರೆ ಕುಂಟು ದನವನ್ನು ಕೊಳ್ಳುವವರು ಯಾರು? ಬಹಳ ದುಃಖ ಮತ್ತು ಅನಿವಾರ್ಯತೆಯಿಂದ ಕಾರಭಾರಿ ಚತಂಗ್ಯನನ್ನು ತುರ್ತಾಗಿ ಕಸಾಯಿಖಾನೆಗೆ ಮಾರುವ ನಿರ್ಧಾರಕ್ಕೆ ಬರುತ್ತಾನೆ.

ನೀಗಿಸಲಾಗದ ಆರ್ಥಿಕ ಸಂಕಷ್ಟಗಳು ಮತ್ತು ಬಡ್ಡಿ ಸಾಲ, ಬೆಳೆ ನಾಶದಂತಹ ವಾಸ್ತವಿಕ ಆರ್ಥಿಕ ಬಿಕ್ಕಟ್ಟುಗಳು ಹೇಗೆ ಅತ್ಯಂತ ಹೃದಯವಂತ ಮನುಷ್ಯರನ್ನು ನಿಧಾನವಾಗಿ ಕಟುವಾದ ನಿರ್ಣಯಗಳನ್ನು ತೆಗೆದುಕೊಳ್ಳುವಷ್ಟು ಕಲ್ಲಾಗುವಂತೆ, ಅತ್ಯಂತ ಹೃದಯಹೀನರಾಗುವಂತೆ ಮಾಡುತ್ತದೆ ಎಂಬ ಹೃದಯವಿದ್ರಾವಕ ಬೆಳವಣಿಗೆಯನ್ನು ಮಂಗೇಶರು ಯಾವುದೇ ಮೆಲೋಡ್ರಾಮ ಅಥವಾ ಉತ್ಪ್ರೇಕ್ಷೆಯಿಲ್ಲದೆ ಆದರೆ ಅತ್ಯಂತ ಹೃದಯಸ್ಪರ್ಶಿಯಾಗಿ ಚಿತ್ರಿಸುತ್ತಾರೆ. ಟಂಗ್ಯ ಮತ್ತು ಚತಂಗ್ಯರ ಸಂಬಂಧ ಪ್ರಾಣಿ ಮತ್ತು ಮನುಷ್ಯರ ಸಂಬಂಧವಲ್ಲವೇ ಅಲ್ಲ. ಟಂಗ್ಯನ ಲೋಕದಲ್ಲಿ ಅವನ ಅಮ್ಮನನ್ನು ಬಿಟ್ಟರೆ ಅತ್ಯಂತ ಆಪ್ತವಾದ ಸಂಬಂಧ ರಷೀದಳದು ಮತ್ತು ಚತಂಗ್ಯನದ್ದೇ. ಅದೇ ಸಮಯದಲ್ಲಿ ರಶೀದಳನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವ ಅವಳಜ್ಜಿ ರಾತ್ರಿ ಬಯಲಿಗೆ ಹೋಗಿ ಬರುವಾಗ ಎಡವಿಬಿದ್ದು ಬೆನ್ನು ಮುರಿದುಕೊಳ್ಳುತ್ತಾಳೆ. ಅವರ ಮನೆಯವರು ವೈದ್ಯರನ್ನು ಕರೆಸಿ ಅಜ್ಜಿಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿರುವುದನ್ನು ನೋಡಿದ ಟಂಗ್ಯನಿಗೆ ಚತಂಗ್ಯನನ್ನು ಹಾಗೆ ಉಳಿಸಿಕೊಳ್ಳುವ ಪ್ರಯತ್ನ ಪಡದೆ ಕಸಾಯಿಖಾನೆಗೆ ಮಾರುತ್ತಿರುವುದೇಕೆ ಎಂಬ ಪ್ರಶ್ನೆ ತೀವ್ರವಾಗಿ ಕಾಡುತ್ತದೆ. ವೈದ್ಯರಿಗೆ ತೋರಿಸಲಾಗದೆ ಇರುವುದಕ್ಕೆ ಬಡತನ ಕಾರಣವೆಂಬುದನ್ನು ಅರಿಯದ ಟಂಗ್ಯ ತಾನೇ ದೂರದೂರಿಗೆ ಹೋಗಿ ಪಶುವೈದ್ಯ ಸಹಾಯಕನನ್ನು ಕರೆತರುತ್ತಾನೆ. ಆದರೆ ಅವರು ಸಹ ಚತಂಗ್ಯ ಸುಧಾರಿಸಲು ಸಾಧ್ಯವೇ ಇಲ್ಲವೆಂದು ಕೈಚೆಲ್ಲುತ್ತಾರೆ. ಇದು ಟಂಗ್ಯನನ್ನು ಮತ್ತಷ್ಟು ಹತಾಶೆಗೆ ದೂಡುತ್ತದೆ. ರಷೀದಳ ವಯಸ್ಸಾದ ಅಜ್ಜಿಯನ್ನು ಕಸಾಯಿಖಾನೆಗೆ ಮಾರುತ್ತಿಲ್ಲವಾದರೆ ಚತಂಗ್ಯನನ್ನು ಮಾರಬಾರದು ಎಂದು ಹಠ ಹಿಡಿಯುತ್ತಾನೆ. ಟಂಗ್ಯನ ಈ ಹಠ ಕಾರಭಾಗೆಯ ಅಸಹಾಯಕತೆಯನ್ನು, ಸಹ ಹೃದಯವಂತಿಕೆಯನ್ನು ಕಳೆದುಕೊಳ್ಳುತ್ತಿರುವುದನ್ನು ಎದುರಿಗೆ ನಿಂತಂತಾಗಿ ಎದುರಿಗಿರುವ ಕಠೋರ ವಾಸ್ತವವನ್ನು ಒಮ್ಮೆಗೆ ಅಳುವಂತೆ, ಸಿಡಿಮಿಡಿಗೊಳ್ಳುವಂತೆ, ಹಿಂದಿನ ವಾರವಷ್ಟೇ ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡ ಅದೇ ಹಳ್ಳಿಯ ರೈತ ಪಾಂಡುವಿನ ದಾರಿ ಏಕೆ ಹಿಡಿಯಬಾರದು ಎಂದು ಯೋಚಿಸುವಂತೆ ಮಾಡುತ್ತದೆ.

ಈ ಅಸಹಾಯಕತೆಯೇ ಟಂಗ್ಯನ ಮೇಲೆ ಮತ್ತು ಎಂದಿಗೂ ಕೈಯೆತ್ತದ ತನ್ನ ಪ್ರೀತಿ ಪಾತ್ರ ಹೆಂಡತಿಯ ಮೇಲೆ ಕೈಮಾಡುವಂತೆ ಮಾಡುತ್ತದೆ. ಅಂದು ಅರ್ಧರಾತ್ರಿಯಲ್ಲಿ ಒಬ್ಬನೇ ಎದ್ದು ಮನೆ ಹೊರಗೆ ತಲೆ ಮೇಲೆ ಕೈಹೊತ್ತು ಕುಳಿತುಕೊಳ್ಳುವ ಚಿತ್ರ ಇಂದು ಆತ್ಮಹತ್ಯೆಯ ಹೊಸ್ತಿಲಲ್ಲಿ ನಿಂತಿರುವ ಭಾರತದ ಎಲ್ಲಾ ಸಣ್ಣ ರೈತರ ಬದುಕಿನ ಹತಾಶೆಗೆ ಪ್ರಾತಿನಿಧಿಕವಾಗಿದೆ ಎಂದೆನಿಸುತ್ತದೆ. ರೈತಾಪಿಯ ಕೃಷಿ ಬಿಕ್ಕಟ್ಟು ಮನೆ ಯಜಮಾನನನ್ನು ತನ್ನವರಿಂದಲೂ ಏಕಾಂಗಿಗೊಳಿಸುವ ಇಂಥ ಅತ್ಯಂತ ಹತಾಶ ಸನ್ನಿವೇಶಗಳಲ್ಲೇ ಕರ್ನಾಟಕದಲ್ಲೂ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದನ್ನು ನಮ್ಮಂತ ಹಲವರು ಮಾಡಿರುವ ಅಧ್ಯಯನದಲ್ಲೂ ಕಂಡುಕೊಂಡಿದ್ದೇವೆ.



ಮಂಗೇಶ್ ಹಾಡಾವಲೆ

ಚತಂಗ್ಯನನ್ನು ಬದುಕಿಸಬೇಕೆಂದರೆ ಪಕ್ಕದೂರಿನ ದನದ ಸಂತೆ ಮುಂದೂಡಬೇಕು. ರಷೀದಳ ಅಜ್ಜಿ ಸತ್ತರೆ ದನದ ಸಂತೆ ಮುಂದೂಡಬಹುದೆಂಬ ಆಲೋಚನೆ ಟಂಗ್ಯನ ತಲೆಯಲ್ಲಿ ಮೂಡುತ್ತದೆ. ಆದರೆ ಚಿತ್ರದ ಅಂತ್ಯದಲ್ಲಿ ರಷೀದಳಿಗೆ ಆಪ್ತಳಾದ ಅವರಜ್ಜಿಯೂ ಉಳಿಯುವುದಿಲ್ಲ, ಅದೇರೀತಿ ಚತಂಗ್ಯನನ್ನು ಟಂಗ್ಯ ಉಳಿಸಿಕೊಳ್ಳಲೂ ಆಗುವುದಿಲ್ಲ. ಇದು ಬಾಲಕನೊಬ್ಬನ ಅತಾರ್ಕಿಕ ಯೋಚನೆಯಾದರೂ ಅದರ ಮೂಲಕ ರೈತ ಬದುಕಿನ ಮತ್ತೊಂದು ಹತಾಶ ಆಯಾಮವನ್ನೂ ಚಿತ್ರ ತೆರೆದಿಡುತ್ತದೆ. ಒಂದು ಆಪ್ತ ಸಂಬಂಧವನ್ನು ಉಳಿಸಿಕೊಳ್ಳ ಬೇಕೆಂದರೆ ಮತ್ತೊಂದನ್ನು ತ್ಯಾಗ ಮಾಡಬೇಕಿರುವ ಮತ್ತು ಆ ಪ್ರಯತ್ನದಲ್ಲಿ ಎರಡನ್ನೂ ಕಳೆದುಕೊಳ್ಳುವ ರೈತರ ಪರಿಸ್ಥಿತಿಗೆ ಟಂಗ್ಯನ ಯೋಚನೆ ಸಂಕೇತವಾಗುತ್ತದೆ. ನಂತರ ಕಾರಭಾರಿಯ ಹಸು ದನವೊಂದಕ್ಕೆ ಜನನ ನೀಡುವುದು ಮತ್ತು ಅದಕ್ಕೆ ಟಂಗ್ಯ ಚತಂಗ್ಯನೆಂದು ಹೆಸರಿಟ್ಟು ಹಳೆಯ ನೆನಪಿನ ಆಧಾರದಲ್ಲಿ ಹೊಸ ಸಂಬಂಧವನ್ನು ಕಟ್ಟಿಕೊಳ್ಳುವುದರ ಮೂಲಕ ಚಿತ್ರ ಮುಕ್ತಾಯವಾಗುತ್ತದೆ.

ಮಂಗೇಶ ಹಡಾವಲೆಯವರ ನಿರೂಪಣಾ ಶೈಲಿಯ ಮತ್ತೊಂದು ಉತ್ತಮ ಅಂಶವೆಂದರೆ ಚಿತ್ರದ ಹಲವಾರು ಪಾತ್ರಗಳ ಚಿತ್ರಣದಲ್ಲಿ ವಾಸ್ತವವನ್ನು ವೈಭವೀಕರಿಸುವ ಅಥವಾ ರೋಚಕವಾಗಿ ಚಿತ್ರಿಸುವ ಯಾವುದೇ ಪ್ರಲೋಭನೆಗಳಿಗೆ ಒಳಗಾಗದಿರುವುದು. ಉದಾಹರಣೆಗೆ ಇತರ ಹಿಂದಿ ಮತ್ತು ಅಥವಾ ಕಮರ್ಷಿಯಲ್ ಚಿತ್ರಗಳಲ್ಲಾದರೆ ಪಾಂಡುವಿನ ಆತ್ಮಹತ್ಯೆಗೆ ಮತ್ತು ಪರೋಕ್ಷವಾಗಿ ಕಾರಭಾರಿಯ ಪರಿಸ್ಥಿತಿಗೆ ಕಾರಣವಾದ ಬಡ್ಡಿ ವ್ಯಾಪಾರಿಯನ್ನು ಟಿಪಿಕಲ್ ವಿಲನ್‌ನಂತೆ ಚಿತ್ರಿಸುತ್ತಿದ್ದರು. ಆದರೆ ಈ ಚಿತ್ರದಲ್ಲಿ ಬಡ್ಡಿ ವ್ಯಾಪಾರಿ ಕಾಣಿಸಿಕೊಳ್ಳುವುದು ಒಂದೇ ಒಂದು ಸಾರಿ. ಆದರೆ ಇದೀ ಚಿತ್ರದುದ್ದಕ್ಕೂ ಆತ ನೋಡುಗರ ಮನಸ್ಸಿನಲ್ಲಿ ನಿಂತುಬಿಟ್ಟಿರುತ್ತಾನೆ. ಎರಡನೆಯದಾಗಿ ಆತ್ಮಹತ್ಯೆಯ ಚಿತ್ರಣ. ಆತ್ಮಹತ್ಯೆಗಳನ್ನು ಲೈವ್ ಟೆಲಿಕಾಸ್ಟ್ ಮಾಡುವ ಈ ಯುಗದಲ್ಲಿ ಸಾವು ಎಂಬುದು ಮಾಧ್ಯಮಗಳಿಗೆ ಒಂದು ಸುದ್ದಿ ಸಂಭ್ರಮದ ವಿಷಯವಾಗಿಬಿಟ್ಟಿದೆ. ಕಮರ್ಷಿಯಲ್ ಸಿನಿಮಾ ಮತ್ತು ಟಿವಿ ಚಾನೆಲ್‌ಗಳು ಆತ್ಮಹತ್ಯೆಯ ಹೊಸ ಪದ್ಧತಿಗಳನ್ನು ಬಿಂಬಿಸಲು ಹೆಚ್ಚು ಗಮನ ನೀಡಬಹುದೇನೋ! ಟಿವಿ ಮತ್ತು ಸಿನಿಮಾಗಳು ಯಾವಾಗಲೂ ವಾಸ್ತವವನ್ನು ಹಿನ್ನೆಲೆಯಾಗಿರಿಸಿಕೊಂಡು ಅದರ ಸುತ್ತ ರೋಚಕವಾದ ಕಥಾನಕವನ್ನು ಕಟ್ಟಲು ಯತ್ನಿಸುತ್ತಿರುತ್ತವೆಯೇ ಹೊರತು ಅದರ ಹಿನ್ನೆಲೆಯನ್ನು ಅನ್ವೇಷಿಸಲು ಪ್ರಯತ್ನವನ್ನೇ ಪಡುವುದಿಲ್ಲ. ಆದ್ದರಿಂದ ಇಂದು ಸಮಾಜಮುಖಿ ಚಿತ್ರ ನಿರ್ಮಾಪಕರ ಮುಂದಿರುವ ಸವಾಲೆಂದರೆ ಕಲ್ಪನೆಯನ್ನು ವಾಸ್ತವವೆಂದು ಚಿತ್ರಿಸುವ ಬದಲಿಗೆ ಕಣ್ಣೆದುರಿಗೆ ಇರುವ ವಾಸ್ತವವನ್ನು ಪ್ರಭಾವಶಾಲಿಯಾಗಿ ಚಿತ್ರಿಸುವುದಲ್ಲವೇ? ಇಲ್ಲಿಯೇ ಮಂಗೇಶರ ಯಶಸ್ಸು ಎದ್ದು ಕಾಣುತ್ತದೆ. ಅವರು ತಮ್ಮ ಚೊಚ್ಚಲ ಚಿತ್ರದಲ್ಲಿ ಅತ್ಯಂತ ಯಶಸ್ವಿಯಾಗಿ ವಾಸ್ತವ ಮತ್ತು ಕಲೆ, ಸಾಕ್ಷ್ಯ ಚಿತ್ರ ಮತ್ತು ಸೃಜನಶೀಲ ಕೃತಿ, ಸಾಮಾಜಿಕ ಹಾಗೂ ವ್ಯಕ್ತಿಗತ ಆಯಾಮಗಳ ದ್ವಂದ್ವಗಳನ್ನು ನಿಭಾಯಿಸಿದ್ದಾರೆ.

ಕಾರಭಾರಿ ಈ ದೇಶದ ಎಲ್ಲಾ ಸಣ್ಣ ರೈತರ ಪ್ರತಿನಿಧಿಯಾಗಿ ನಮ್ಮ ಮನಸ್ಸಿನಲ್ಲಿ ಉಳಿಯುತ್ತಾನೆ. ಚಿತ್ರದ ಪ್ರತಿ ಫ್ರೇಮೂ ಸಹ ವಾಸ್ತವತೆಯ ನೈಜ ಚಿತ್ರಣವನ್ನು ನಮ್ಮ ಮುಂದಿಡುತ್ತದೆ. ಒಂದು ಚಿತ್ರದ ಗುಣಮಟ್ಟವನ್ನು ಆ ಚಿತ್ರದ ಕಲಾತ್ಮಕ ಗುಣಗಳು ಮತ್ತು ನಿರ್ದೇಶಕನ ದೃಷ್ಟಿಕೋನ ಇವೆರಡನ್ನು ಇಟ್ಟುಕೊಂಡು ಮಾತ್ರ ನಿರ್ಣಯಿಸಲಾಗದು. ಅದರ ಜೊತೆಗೆ ಆ ಪಾತ್ರಗಳು ಯಾವ ಸಾಮಾಜಿಕ ಮತ್ತು ರಾಜಕೀಯ ಸಂದರ್ಭದಲ್ಲಿ ನೆಲೆಗೊಂಡಿವೆ ಎಂಬುದನ್ನೂ ಸಹ ಅಥೆಂಟಿಕ್ ಆಗಿ ಚಿತ್ರಿಸಬೇಕಾಗುತ್ತದೆ. ಈ ಚಿತ್ರದಲ್ಲಿ ಎಲ್ಲಾ ಪಾತ್ರಗಳು ತಮ್ಮ ರಾಜಕೀಯ ಮತ್ತು ಸಾಮಾಜಿಕ ನೆಲೆಗಟ್ಟಿನಲ್ಲಿ ಬಲವಾಗಿ ಬೇರೂರಿವೆಯಲ್ಲದೆ ಅವರ ಭಾವನಾತ್ಮಕ ಲೋಕವೂ ಅದರಿಂದಲೇ ರೂಪುಗೊಳ್ಳುವುದನ್ನು ಮಂಗೇಶ ಹಡಾವಲೆ ಮನಒಪ್ಪುವಂತೆ ಚಿತ್ರಿಸುತ್ತಾರೆ.



ಚಿತ್ರದಲ್ಲಿ ಮತ್ತೊಂದು ಖುಷಿ ಕೊಡುವ ಅಂಶವೆಂದರೆ ಗ್ರಾಮೀಣ ಪ್ರದೇಶದಲ್ಲಿ ಸಹಜವಾಗಿ ಬೆರೆತು ಹೋಗಿರುವ ಹಿಂದೂ-ಮುಸ್ಲಿಂ ಬಾಂಧವ್ಯಗಳು ಅಷ್ಟೇ ಸಹಜವಾಗಿ ಚಿತ್ರದಲ್ಲೂ ಮೂಡಿಬಂದಿರುವುದು. ಹೆಸರೊಂದನ್ನು ಬಿಟ್ಟರೆ ಬೇರ್ಪಡಿಸಲಾಗದ ಅವಿನಾಭಾವ ಸಂಬಂಧಗಳನ್ನು ಟಂಗ್ಯಾ ಮತ್ತು ರಷೀದಳ ಸ್ನೇಹ ಸೂಚಿಸುತ್ತದೆ. ರಷೀದಳ ಅಜ್ಜಿ ಸತ್ತಾಗ ಧರ್ಮಭೇದವಿಲ್ಲದೆ ಇದೀ ಹಳ್ಳಿಯು ನೆರೆಯುವುದು, ಚತಂಗಯ್ಯನ ಕಾಲು ಸರಿಯಾಗಲೆಂದು ರಷೀದಳ ಅಜ್ಜಿ ಖುದಾನಲ್ಲಿ ಪ್ರಾರ್ಥನೆ ಮಾಡುವುದು ಬಡವರ ಬದುಕಿನಲ್ಲಿ ಧರ್ಮಗಳಿಗೆ ಬೇರೆಯದೇ ಆದ ಅಲೌಕಿಕ ಅರ್ಥವಿದೆ ಎಂಬುದನ್ನು ಸೂಚಿಸುತ್ತದೆ.

ವಿಶೇಷವಾಗಿ ಪ್ರಸ್ತಾಪಿಸಬೇಕಿರುವ ಮತ್ತೊಂದು ಅಂಶ ಅಭಿನಯದ್ದು. 'ತಾರೆ ಜಮೀನ್ ಪರ್' ಚಿತ್ರದಲ್ಲಿ ನಟಿಸಿರುವ ಬಾಲಕ ದರ್ಶೀಲ್‌ನ ಅಭಿನಯ ಎಲ್ಲರ ಮೆಚ್ಚುಗೆಗೆ ಸಹಜವಾಗಿಯೇ ಪಾತ್ರವಾಗಿದೆ. ಆದರೆ ಈ ಚಿತ್ರದಲ್ಲಿ ಟಂಗ್ಯನ ಪಾತ್ರ ಮಾಡಿರುವ ಶರದ್ ಗೋಯೆಕರ್ ಮತ್ತು ರಷೀದಳ ಪಾತ್ರವನ್ನು ನಿರ್ವಹಿಸಿರುವ ಬಾಲ ನಟಿ ದರ್ಶೀಲ್‌ಗಿಂತ ಯಾವ ರೀತಿಯಿಂದಲೂ ಕಡಿಮೆ ಇಲ್ಲದ ಪ್ರತಿಭೆಯುಳ್ಳವರು. ಅಷ್ಟು ಮಾತ್ರವಲ್ಲ, ಚಿತ್ರದ ಎಲ್ಲಾ ಪಾತ್ರಧಾರಿಗಳು ಪೈಪೋಟಿಯಲ್ಲಿ ನಟಿಸಿದ್ದಾರೆ, ಅಲ್ಲ, ಪಾತ್ರಗಳೇ ಆಗಿ ಜೀವಿಸಿದ್ದಾರೆ. ಕ್ಯಾಮೆರಾ, ಚಿತ್ರಕತೆ, ಎಡಿಟಿಂಗ್ ಹಾಗೂ ಶಬ್ದ ಗ್ರಹಣ ಎಲ್ಲವೂ ಅದ್ಭುತವಾಗಿ ಮೇಳೈಸಿದೆ.

ಚಿತ್ರ ನಿರ್ಮಾಣದಲ್ಲಿ ವಾಸ್ತವತೆ ಮತ್ತು ಕಲ್ಪನೆ, ಕಲಾ ಸೌಂದರ್ಯ ಮತ್ತು ಸತ್ಯನಿಷ್ಠೆ ಇವುಗಳನ್ನು ಅನಗತ್ಯ ಮತ್ತು ಬಗೆಹರಿಯಲಾಗದ ವೈರುಧ್ಯಗಳನ್ನಾಗಿ ಭಾವಿಸಲಾಗುತ್ತದೆ. ಆದರೆ ಒಬ್ಬ ಸೃಜನಶೀಲ ನಿರ್ದೇಶಕ ಇವುಗಳ ನಡುವೆ ಅನುಸಂಧಾನವನ್ನು ಮಾಡಿಕೊಳ್ಳುತ್ತಾ ಹೊಸ ಹೊಸ ಸಾಧ್ಯತೆಗಳನ್ನು ಅನ್ವೇಷಿಸುತ್ತಲೇ ಇರುತ್ತಾನೆ. ಈ ಹಳೆಯ ಪ್ರಶ್ನೆಗೆ 'ಟಂಗ್ಯ' ಒಂದು ಹೊಚ್ಚ ಹೊಸ ಮತ್ತು ಯಶಸ್ವೀ ಉತ್ತರ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44